# ವೇದಾಗಮಗಳು ಮತ್ತು ಶಿವಶರಣರು

**ಸಂಪುಟ-೨**

ಸಂಪಾದಕರು

**ಡಾ. ಎಂ. ಶಿವಕುಮಾರ ಸ್ವಾಮಿ**

**ವೀರಶೈವ ಅನುಸಂಧಾನ ಸಂಸ್ಥಾನ**

'ನಾವೀನ್ಯ' 365/ಸಿ, 5ನೇ 'ಎ' ಮುಖ್ಯರಸ್ತೆ, ರಂಕೋ ಬಡಾವಣೆ,
ವಿಜಯನಗರ 2ನೇ ಹಂತ, ಬೆಂಗಳೂರು – 560 040

ವೀರಶೈವ ಅನುಸಂಧಾನ ಸಂಸ್ಥಾನ ಕಿರಣ-೧೧

# ವೇದಾಗಮಗಳು ಮತ್ತು ಶಿವಶರಣರು

ಸಂಪುಟ-೨

ಸಂಪಾದಕರು

ಡಾ॥ ಎಂ. ಶಿವಕುಮಾರ ಸ್ವಾಮಿ

ಪ್ರಕಾಶಕರು

ವೀರಶೈವ ಅನುಸಂಧಾನ ಸಂಸ್ಥಾನ

'ನಾವೀನ್ಯ', ೩೬೫/ಸಿ, ೫ನೇ 'ಎ' ಮುಖ್ಯರಸ್ತೆ

ರೆಂಕೋ ಬಡಾವಣೆ, ವಿಜಯನಗರ ೨ನೇ ಹಂತ

ಬೆಂಗಳೂರು-೫೬೦ ೦೪೦

*VEDAGAMAGALU MATTHU SHIVASHARANARU (Volume-II) : Edited by : Dr. M. Sivakumara Swamy, Professor of Sanskrit (Retd.), Bangalore University, Res: No.88, 4th Cross, Diagonal Road, 8th Main Road, R.P.C. Layout, Vijayanagar 2nd Stage, Bangalore-40. Published by : Veerashaiva Anusandhana Samsthana, 'Naavinya', 365/C, 5th 'A' Main Road, Remco Layout, Vijayanagar 2nd Stage, Bangalore-40 ✆ : 3302537*

*Pages : X+150*

*© Veerashaiva Anusandhana Samsthana*

*First Impression : December 2003*

*Price : Rs. 100/-*

*DTP by:*
***Varshini Graphics**, Bangalore-40* ✆ : 3402575

*Printed at:*
***Sneha Printers***
*No. 114, 4th Cross, B.C.C. Layout, Attiguppe*
*Vijayanagar 2nd Stage, Bangalore-40* ✆ : 3392814
*E-Mail-snehaprinters1@rediffmail.com*
*karthikenterprisesin@yahoo.com*

ಶ್ರೀ ಜಗದ್ಗುರು ವಿಶ್ವಾರಾಧ್ಯಃ ಪ್ರಸೀದತು

**ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ**
**ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು**
**ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ**

## ಆಶೀರ್ವಚನ

ಶಿವಾಗಮಗಳು ಮತ್ತು ಶಿವಶರಣರು ಎಂಬ ವಿಷಯದ ಮೇಲೆ ಈಗ ಎರಡು ವಿಚಾರ ಸಂಕಿರಣಗಳು ನಡೆದವು. ಮೊದಲನೆಯ ವಿಚಾರ ಸಂಕಿರಣವು ಹಿಂದಿನ ವರ್ಷ ಬೆಂಗಳೂರಿನಲ್ಲಿ ನಡೆಯಿತು. ಆ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳು ಈಗಾಗಲೇ ಮೊದಲನೆ ಸಂಪುಟದ ರೂಪದಲ್ಲಿ ಪ್ರಕಟವಾಗಿವೆ.

ಈ ವರ್ಷ ಜುಲೈನಲ್ಲಿ ಬಾಗಲಕೋಟೆಯಲ್ಲಿ ಶ್ರೀ.ಬಸವೇಶ್ವರ ವಿದ್ಯಾವರ್ಧಕ ಸಂಘದ ಸಹಯೋಗದಿಂದ ಎರಡನೇ ವಿಚಾರ ಸಂಕಿರಣವು ನಡೆದು ಅದರಲ್ಲಿ ಮಂಡಿಸಲ್ಪಟ್ಟ ಪ್ರಬಂಧಗಳು ಎರಡನೇ ಸಂಪುಟದ ರೂಪದಲ್ಲಿ ಹೊರಬರುತ್ತಿರುವುದು ಸನ್ನಿಧಿಗೆ ಆನಂದವನ್ನುಂಟು ಮಾಡಿದೆ.

ಇನ್ನೊಂದು ಆನಂದದ ವಿಷಯವೆಂದರೆ ಈ ವಿಷಯದ ಎರಡನೆ ವಿಚಾರ ಸಂಕಿರಣಗಳಲ್ಲಿಯೂ ಕೂಡ ವಿಷಯಗಳನ್ನು ಮಂಡಿಸಿದ ವಿದ್ವಾಂಸರು ಮತ್ತು ಚರ್ಚೆಯಲ್ಲಿ ಪಾಲ್ಗೊಂಡ ವಿದ್ವಾಂಸರು ಮತ್ತು ಇತರ ಸಭಾಸದರು, ಎಲ್ಲರೂ ತೋರಿದ ಉತ್ಸಾಹ, ವಿಷಯಗಳನ್ನು ಆಳವಾಗಿ ತಿಳಿದುಕೊಳ್ಳಬೇಕು ಎಂಬ ಗಾಢ ಆಸಕ್ತಿ ಮತ್ತು ಒಬ್ಬರನ್ನೊಬ್ಬರು ಸೌಹಾರ್ದದಿಂದ ಕಂಡು ವಿಚಾರ ವಿನಿಮಯ ಮಾಡಿಕೊಂಡ ಸಹೃದಯತೆಗಳು ಎದ್ದು ಕಾಣುವಂತಿದ್ದುದು. ಹೊಸತೊಂದು ಅಭ್ಯಾಸದ ಮತ್ತು ವಿಚಾರದ ತಿರುವನ್ನು ಈ ವಿಚಾರ ಸಂಕಿರಣ ಮೂಡಿಸಿತೆಂಬ ತೃಪ್ತಿ ಮತ್ತು ವೀರಶೈವ ಸಾಹಿತ್ಯ ಕ್ಷೇತ್ರದಲ್ಲಿ ವೇದಗಳು, ಶೈವಾಗಮಗಳು, ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನಗಳನ್ನು ತೌಲನಿಕವಾಗಿ ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿದಂತೆಲ್ಲಾ ಸಮಾಜದಲ್ಲಿ ಸುಳಿದಾಡುತ್ತಿರುವ ತಪ್ಪು ಕಲ್ಪನೆಗಳು ದೂರಾಗಿ ಸಮನ್ವಯದ ದೃಷ್ಟಿ ಮೂಡುವ ಭರವಸೆ ಹೆಚ್ಚುತ್ತಿರುವುದರ ವಿಶ್ವಾಸಗಳು ನಮ್ಮ ಹೃದಯದಲ್ಲಿ ಆನಂದದ ಅಲೆಗಳನ್ನು ಎಬ್ಬಿಸುತ್ತಿವೆ.

ಈ ಗ್ರಂಥದಲ್ಲಿ ಬಂದಿರುವ ಪ್ರಬಂಧಗಳನ್ನು ವಿಚಾರ ಸಂಕಿರಣದಲ್ಲಿ ಮಂಡಿಸುವುದಲ್ಲದೆ ಅವುಗಳನ್ನು ಬರೆದು ಕೊಟ್ಟ ವಿದ್ವಾಂಸರಿಗೂ, ಇದರ ಸಂಪಾದಕರಾದ ಡಾ|| ಎಂ. ಶಿವಕುಮಾರ ಸ್ವಾಮಿಯವರಿಗೂ, ಇದರ ಪ್ರಕಟನೆಗೆ ಆರ್ಥಿಕ ನೆರವಿತ್ತ ಬಾಗಲಕೋಟೆಯ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಎಲ್ಲಾ ಪದಾಧಿಕಾರಿಗಳಿಗೂ, ಪೋಷಕ ಮಂಡಲಿಯ ಪದಾಧಿಕಾರಿಗಳಿಗೂ ಹಾಗೂ ಸಂಪಾದಕ ಮಂಡಲಿಯ ಸದಸ್ಯರುಗಳಿಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರು ಅನಂತ ಮಂಗಲ ಪರಂಪರೆಯನ್ನುಂಟುಮಾಡಲೆಂದು ಆಶೀರ್ವದಿಸಲಾಗಿದೆ.

ವಾಚಕರು ಈ ಗ್ರಂಥವನ್ನು ಅಭ್ಯಸಿಸಿ ತಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸಿ ಕೊಳ್ಳುವವರಾಗಲಿ ಎಂಬುದಾಗಿ ಆಶೀರ್ವದಿಸಿ ಈ ಆಶೀರ್ವಚನಕ್ಕೆ ವಿರಾಮ ಕೊಡುತ್ತಿದ್ದೇವೆ.

ಇತಾಶಿಷಃ

# ಮುನ್ನುಡಿ

"ವೇದಾಗಮಗಳು ಮತ್ತು ಶಿವಶರಣರು" ಎಂಬ ವಿಷಯದ ಮೇಲೆ ಹಿಂದಿನ ವರ್ಷ ಆಗಷ್ಟ್ ತಿಂಗಳಲ್ಲಿ ಒಂದು ವಿಚಾರ ಸಂಕಿರಣವು ಬೆಂಗಳೂರಿನಲ್ಲಿ ನಡೆಯಿತು. ಅದರ ಮುಖ್ಯ ಉದ್ದೇಶ, ಶಿವಶರಣರು ವೇದಾಗಮಗಳನ್ನು ವಿರೋಧಿಸುತ್ತಾರೆ ಎಂಬ ತಪ್ಪುಕಲ್ಪನೆಯನ್ನು ದೂರಮಾಡಿ, ಅವರು ವಿರೋಧಿಸುವುದು ಕೇವಲ ವೇದದಲ್ಲಿನ ಕರ್ಮಕಾಂಡದ ಹಿಂಸಾದಿಕರ್ಮಗಳನ್ನು ಮತ್ತು ಶೈವಾಗಮಗಳ ಕೆಲವು ಭಾಗಗಳಲ್ಲಿ ಬರುವ ಕಂದಾಚಾರದ ಅಂಶಗಳನ್ನು ಎಂಬುದನ್ನು ತೋರಿಸಿ, ವೇದಸಂಹಿತೆಗಳು ಮತ್ತು ಉಪನಿಷತ್ತುಗಳಲ್ಲಿ ಬರುವ ರುದ್ರ-ಶಿವಪರಿಕಲ್ಪನೆ ಹಾಗೂ ತತ್ತ್ವವಿಚಾರಗಳ ಮತ್ತು ಶೈವಾಗಮಗಳಲ್ಲಿನ ವೀರಶೈವಕ್ಕೆ ಸಂಬಂಧಪಟ್ಟ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಪರಿಕಲ್ಪನೆಗಳ ಪ್ರಭಾವದ ಪರಿಪಾಕವಾಗಿ ಮೂಡಿಬಂದ ಅನುಭವಗಳನ್ನು ತಮ್ಮ ವಚನಗಳ ಮೂಲಕ ಹಂಚಿಕೊಂಡಿದ್ದಾರೆ ಎಂಬುದನ್ನು ವ್ಯಕ್ತಗೊಳಿಸುವುದೇ ಆಗಿತ್ತು. ಬಸವಾದಿ ಶರಣರು ತಮ್ಮ ವಚನಗಳಲ್ಲಿ ಉಲ್ಲೇಖಿಸಿದ ವೇದಾಗಮಗಳ ಉಕ್ತಿಗಳು ಅವರ ಅನುಭವದ ಮೂಲಸ್ಫೂರ್ತಿಯನ್ನು ಅನಾವರಣಗೊಳಿಸುತ್ತವೆ.

ಆ ವಿಚಾರ ಸಂಕಿರಣ ಮುಂದುವರೆದ ಭಾಗವಾಗಿ ಇನ್ನೂ ಕೆಲವು ಶರಣರ ವಚನಗಳ ಮೇಲೆ ವೇದಾಗಮಗಳ ಪ್ರಭಾವವು ಎಷ್ಟು ಆಗಿದೆಯೆಂಬುದನ್ನು ತೋರಿಸಲು ಈ ವರ್ಷ ಬಾಗಲಕೋಟೆಯಲ್ಲಿ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಸಂಯುಕ್ತಾಶ್ರಯದಲ್ಲಿ ಜುಲೈ ೨೬ ಮತ್ತು ೨೭ರಂದು ನಡೆಸಿದ ಅದೇ ವಿಷಯದ ಮೇಲಿನ ವಿಚಾರ ಸಂಕಿರಣದ ಮೂಲಕ ಅದೇ ಉದ್ದೇಶವನ್ನು ಇನ್ನಷ್ಟು ವ್ಯಾಪಕವಾಗಿ ಸಾಧಿಸುವ ಪ್ರಯತ್ನವನ್ನು ಮಾಡಲಾಯಿತು. ಶ್ರೀಮತ್ಕಾಶೀ ಜ್ಞಾನ ಸಿಂಹಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯ ಮತ್ತು ಷ||ಬ್ರ|| ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಚರಂತಿಮಠ, ಕೆರೂರು, ಶ್ರೀ ಮ.ನಿ.ಪ್ರ. ಅನ್ನದಾನೀಶ್ವರ ಸ್ವಾಮಿಗಳು, ಸಂಸ್ಥಾನ ಮಠ, ಮುಂಡರಗಿ, ಡಾ|| ಎಸ್. ವಿದ್ಯಾಶಂಕರ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಶ್ರೀ ನಿ.ಪ್ರ.ಸ್ವ. ಸಂಗನ ಬಸವಸ್ವಾಮಿಗಳು, ಕೊಟ್ಟೂರು, ಶ್ರೀ ನಿ.ಪ್ರ.ಸ್ವ. ಪಂಚಮ ಶಿವಲಿಂಗೇಶ್ವರ ಸ್ವಾಮಿಗಳು, ಸಂಸ್ಥಾನ ಮಠ, ನಿಡುಸೋಸಿ,

ಶ್ರೀ ವೀರಣ್ಣ ಚರಂತಿಮಠ, ಕಾರ್ಯಾಧ್ಯಕ್ಷರು, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ಇವರ ವಿವಿಧ ಗೋಷ್ಠಿಗಳ ಘನ ಅಧ್ಯಕ್ಷತೆಯಲ್ಲಿ ವಿಷಯಗಳ ಮಂಡನೆ ಮತ್ತು ಚರ್ಚೆಗಳು ವಿದ್ವತ್ಪೂರ್ಣವಾಗಿ ನಡೆದವು. ಆ ಗೋಷ್ಠಿಯಲ್ಲಿ ಮಂಡಿಸಿ ಚರ್ಚಿಸಲಾದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಗ್ರಹವೇ **"ವೇದಾಗಮಗಳು ಮತ್ತು ಶಿವಶರಣರು"** ಸಂಪುಟ-೨ ಎಂಬ ಈ ಪುಸ್ತಕ.

ಈ ಪುಸ್ತಕದ ಆರಂಭದಲ್ಲಿ ಶ್ರೀ ಕಾಶೀ ಜಗದ್ಗುರುಗಳು ಉದ್ಘಾಟನೆ, ವಿವಿಧ ಗೋಷ್ಠಿಗಳು ಮತ್ತು ಸಮಾರೋಪ ಸಮಾರಂಭಗಳಲ್ಲಿ ಸಾನ್ನಿಧ್ಯವಹಿಸಿ, ಎರಡೂ ದಿನ ಕಾರ್ಯಕ್ರಮದ ಮುಕ್ತಾಯದಲ್ಲಿ ನೀಡಿದ ಆಶೀರ್ವಚನಗಳಲ್ಲಿ ಮೂಡಿಬಂದ ಮಾರ್ಗದರ್ಶನವನ್ನು ಸಂಗ್ರಹಿಸಿ ಕೊಡಲಾಗಿದೆ. ಅದರಲ್ಲಿ ಶ್ರೀ ಜಗದ್ಗುರುಗಳು ವಿವಿಧ ಪ್ರಬಂಧಗಳಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳ ಬಗ್ಗೆ ಮತ್ತು ಚರ್ಚೆಯಲ್ಲಿ ಉದ್ಭೂತವಾದ ಶಂಕೆ-ಸಮಾಧಾನಗಳ ಬಗ್ಗೆ ವಿಮರ್ಶಾತ್ಮಕವಾದ ಅವಲೋಕನವನ್ನು ಮಾಡಿ ಹೇಗೆ ಅವುಗಳ ಬಗ್ಗೆ ಶಾಸ್ತ್ರೀಯ ದೃಷ್ಟಿಯಿಂದ ಮತ್ತು ಆಚರಣೆಯ ದೃಷ್ಟಿಯಿಂದ ಸಮತೋಲನದ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂಬುದನ್ನು ತೋರಿಸಿದ್ದಾರೆ.

ಮೊದಲನೆಯದಾಗಿ **ವೇದಾಗಮಗಳು ಮತ್ತು ಚನ್ನಬಸವಣ್ಣನವರು** ಎಂಬ ನಾನು ಮಂಡಿಸಿದ ಪ್ರಬಂಧವು ಅದೇ ವಿಷಯದ ಮೇಲಿನ ಎರಡನೆಯ ಪ್ರಬಂಧ. ಹಿಂದಿನ ವರ್ಷ ಡಾ|| ವಿದ್ಯಾಶಂಕರ ಅವರು ಬೆಂಗಳೂರಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಅದೇ ವಿಷಯವನ್ನು ಕುರಿತು ಒಂದು ಪ್ರಬಂಧವನ್ನು ಮಂಡಿಸಿದ್ದರು. ಅದು ಸಂಪುಟ-೧ರಲ್ಲಿ ಮುದ್ರಿತವಾಗಿದೆ. ಚನ್ನಬಸವಣ್ಣನವರ ವಿಷಯ ವಿಸ್ತಾರ ಒಂದೆರಡು ಲೇಖನದಲ್ಲಿ ಪೂರ್ಣವಾಗುವಂತಹದಲ್ಲವಾದರೂ, ಕೆಲವು ಅಂಶಗಳನ್ನು ಡಾ|| ವಿದ್ಯಾಶಂಕರ ಅವರು ತಮ್ಮ ಪ್ರಬಂಧದಲ್ಲಿ ಹಿಂದಿನ ವರ್ಷ ಮಂಡಿಸಿದ್ದರು, ಇನ್ನೂ ಕೆಲವು ಅಂಶಗಳನ್ನು ನನ್ನ ಪ್ರಬಂಧದಲ್ಲಿ ಈ ವರ್ಷ ಮಂಡಿಸಿದ್ದೇನೆ. ವೇದಗಳ ಸಂಹಿತೆಗಳು ಹಾಗೂ ಉಪನಿಷತ್ತುಗಳು ಮತ್ತು ಶೈವಾಗಮಗಳು ಹೇಗೆ ಚನ್ನಬಸವಣ್ಣನವರಿಗೆ ಕರತಲಾಮಲಕವಾಗಿದ್ದವು ಮತ್ತು ಹೇಗೆ ಅವರ ಬಹುಮಟ್ಟಿನ ವಚನಗಳು ವೇದಾಗಮಗಳ ಪಡಿಯಚ್ಚುಗಳಾಗಿವೆ ಎಂಬುದನ್ನು ಸ್ಪಷ್ಟಪಡಿಸಲು ನಾನು ಪ್ರಯತ್ನಿಸಿದ್ದೇನೆ.

ಎರಡನೆಯ ಪ್ರಬಂಧ ಡಾ|| ಸಿ.ಯು. ಉಮಾದೇವಿ ಅವರ **ವೇದಾಗಮಗಳು ಮತ್ತು ಅಕ್ಕಮಹಾದೇವಿ** ಎಂಬುದು. ಅದರಲ್ಲಿ ಭಾರತೀಯ ಸಂಸ್ಕೃತಿಯ ಮೂಲ ಸಾಹಿತ್ಯ ಸಂಪತ್ತಾದ ವೇದಾಗಮಗಳು ಹೇಗೆ ಶರಣರೆಲ್ಲರ ಮೇಲೆ ಪ್ರಭಾವ ಬೀರಿದಂತೆ ಅಕ್ಕಮಹಾದೇವಿಯವರ ಮೇಲೂ ಪ್ರಭಾವ ಬೀರಿವೆ ಎಂಬುದನ್ನು ಸಾಧಾರವಾಗಿ ಸೋದಾಹರಣವಾಗಿ ತೋರಿಸಿದ್ದಾರೆ. ಷಟ್‌ಸ್ಥಲಗಳ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ದೀಕ್ಷೆ,

ಅಷ್ಟಾವರಣ, ಪಂಚಾಚಾರ ಮುಂತಾದವುಗಳ ವಿಷಯ ಮತ್ತು ಮಹತ್ತ್ವಗಳನ್ನು ಬಿಂಬಿಸಿ ಆಚಾರದಲ್ಲಿ ಅವುಗಳನ್ನು ಅನ್ವಯ ಮಾಡಿಕೊಳ್ಳಲು ವೇದಾಗಮಗಳ ಪ್ರಮಾಣಗಳನ್ನು ಉಲ್ಲೇಖಿಸಿ ಅಕ್ಕಮಹಾದೇವಿಯವರು ನೀಡಿದ ಮಾರ್ಗದರ್ಶನವು ಹೇಗೆ ಸರ್ವರಿಗೂ ಮಾನ್ಯವಾಗಿದೆ ಎಂಬುದು ಅದರಲ್ಲಿ ವ್ಯಕ್ತವಾಗಿದೆ. ಅಕ್ಕಮಹಾದೇವಿಯವರ ಒಂದು ವಚನದಲ್ಲಿ ಬರುವ ಪುರಾತನರ ಉಲ್ಲೇಖ ಪಂಚಾಚಾರ್ಯರನ್ನು ಕುರಿತದ್ದೆಂದು ಸಾಧಾರವಾಗಿ ಸಾಧಿಸಿದ್ದಾರೆ.

ಮೂರನೆಯದು ಡಾ।। ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಮಂಡಿಸಿದ **ವೇದಾಗಮಗಳು ಮತ್ತು ಹಡಪದ ಅಪ್ಪಣ್ಣನವರು** ಎಂಬ ಪ್ರಬಂಧ. ಅದರಲ್ಲಿ ಶರಣರು ವೇದಾಗಮ ವಿರೋಧಿಗಳಲ್ಲ, ಅರಿತು ಅವುಗಳ ಪರಿಶೋಧಕರು; ಅವರು ಅಂದಿನ ಸಮಾಜದ ಸ್ವಾಸ್ಥ್ಯಕ್ಕೆ ಸರಿಯೆನಿಸಿದ ಅಂಶವನ್ನು ತೆಗೆದು ಅಂಗೀಕರಿಸಿ ಅದನ್ನು ಸಮಾಜಕ್ಕೆ ನೀಡಿದರು; ಅವರ ಸ್ವಾನುಭವವೇ ಶೋಧಕವಾಗಿತ್ತು, ಎಂಬ ಹಿನ್ನೆಲೆಯಲ್ಲಿ ಹಡಪದ ಅಪ್ಪಣ್ಣನವರ ವಚನಗಳಲ್ಲಿ ಬರುವ ವೇದಾಗಮಗಳ ಪ್ರಭಾವವನ್ನು ಗುರುತಿಸುವ ಪ್ರಯತ್ನವಿದೆ. ಅಪ್ಪಣ್ಣನವರ ವಚನಗಳನ್ನು ವೇದಾಗಮ ಪ್ರಾಮಾಣ್ಯವನ್ನು ಅಂಗೀಕರಿಸುವ ವಚನಗಳು, ವೇದಾಗಮಗಳ ಉಕ್ತಿಗಳನ್ನು ಉದ್ಧರಿಸಿರುವ ವಚನಗಳು ಮತ್ತು ವೇದಾಗಮೋಕ್ತಿಗಳ ಭಾವವನ್ನು ಪ್ರಕಟಪಡಿಸುವ ವಚನಗಳು ಎಂದು ಮೂರು ಭಾಗ ಮಾಡಿ ವಿಷಯವನ್ನು ನಿರೂಪಿಸಲಾಗಿದೆ.

ನಾಲ್ಕನೆಯದು ಡಾ।। ಸಿ. ಶಿವಕುಮಾರ ಸ್ವಾಮಿಗಳು ಮಂಡಿಸಿದ **ವೇದಾಗಮಗಳು ಮತ್ತು ಪ್ರಸಾದಿ ಭೋಗಣ್ಣ** ಎಂಬ ಪ್ರಬಂಧ. ಅದರಲ್ಲಿ ಕೂಡ ಮೊದಲನೆಯದಾಗಿ ಶರಣರು ವೇದಾಗಮೋಪನಿಷತ್ತುಗಳ ವಾಕ್ಯಗಳನ್ನು ಮೂಲರೂಪದಲ್ಲಿ (ಸಂಸ್ಕೃತದಲ್ಲಿ) ತಮ್ಮ ಅಭಿಪ್ರಾಯದ ಸಮರ್ಥನೆಗೆ ಬಳಸಿಕೊಂಡಿರುವರು ಮತ್ತು ಎರಡನೆಯದಾಗಿ ವೇದಾಗಮಗಳ ಸಾರವನ್ನು ಕನ್ನಡ ಭಾಷೆಯಲ್ಲಿ ಹೇಳಿರುವರು ಎಂಬ ಸಾಮಾನ್ಯ ಹಿನ್ನೆಲೆಯನ್ನು ನಿರ್ಮಿಸಿ, ಪ್ರಸಾದಿ ಭೋಗಣ್ಣನ ವಚನಗಳ ಮೇಲೆ ವೇದಾಗಮಗಳ ಪ್ರಭಾವ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ತೋರಿಸಲಾಗಿದೆ. ವೀರಶೈವದ ಲಕ್ಷಣ, ಶಿವದೀಕ್ಷೆ, ಪಂಚಸೂತ್ರ ಘಟಿತ ಲಿಂಗ, ಷಡಕ್ಷರ ಮಂತ್ರ, ಅಕ್ಷಮಾಲೆ ಲಕ್ಷಣ ಇಷ್ಟಲಿಂಗ, ಲಿಂಗಾಂಗಸಂಯೋಗ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ವಚನಗಳಲ್ಲಿ ಪ್ರಸಾದಿ ಭೋಗಣ್ಣನವರು ಹೇಗೆ ವೇದಾಗಮಗಳ ಉಲ್ಲೇಖ ಮತ್ತು ಅವುಗಳ ಉಕ್ತಿಗಳ ಭಾವಾನುವಾದಗಳನ್ನು ನಿರ್ವಹಿಸಿದ್ದಾರೆ ಎಂಬುದು ಈ ಪ್ರಬಂಧದಿಂದ ಸ್ಪಷ್ಟವಾಗುತ್ತದೆ.

ಐದನೆಯದಾಗಿ ಡಾ।। ಎಸ್.ಎಂ. ವೃಷಭೇಂದ್ರಸ್ವಾಮಿಗಳು ಮಂಡಿಸಿದ **ನಿಜಾನಂದ ಪ್ರಸಾದಿ ಚಂದಿಮರಸರ ವಚನಗಳಲ್ಲಿ ವೇದಾಗಮ ಪ್ರಸಕ್ತಿ** ಎಂಬ

# ವಿಷಯಾನುಕ್ರಮಣಿಕೆ


ಶ್ರೀಮತ್ಕಾಶೀ ಜಗದ್ಗುರುಗಳಿಂದ ಆಶೀರ್ವಚನ

ಮುನ್ನುಡಿ

ಶ್ರೀಮತ್ಕಾಶೀ ಜಗದ್ಗುರುಗಳಿಂದ ಗೋಷ್ಠಿಯಲ್ಲಿ ಮಾರ್ಗದರ್ಶನ ೧

೧. ವೇದಾಗಮಗಳು ಮತ್ತು ಚನ್ನಬಸವಣ್ಣನವರು-೨ ೧೫
-ಡಾ|| ಎಂ. ಶಿವಕುಮಾರ ಸ್ವಾಮಿ

೨. ವೇದಾಗಮಗಳು ಮತ್ತು ಅಕ್ಕಮಹಾದೇವಿ ೫೯
-ಡಾ|| ಸಿ.ಯು. ಉಮಾದೇವಿ

೩. ವೇದಾಗಮಗಳು ಮತ್ತು ಹಡಪದ ಅಪ್ಪಣ್ಣನವರು ೭೯
-ಡಾ|| ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

೪. ವೇದಾಗಮಗಳು ಮತ್ತು ಪ್ರಸಾದಿ ಭೋಗಣ್ಣ ೯೨
-ಡಾ|| ಸಿ. ಶಿವಕುಮಾರಸ್ವಾಮಿ

೫. ನಿಜಾನಂದ ಪ್ರಸಾದಿ ಚಂದಿಮರಸರ ವಚನಗಳಲ್ಲಿ ವೇದಾಗಮ ಪ್ರಸಕ್ತಿ ೧೦೯
-ಡಾ|| ಎಸ್.ಎಂ. ವೃಷಭೇಂದ್ರಸ್ವಾಮಿ

೬. ವೇದಾಗಮಗಳು-ಸಕಳೇಶ ಮಾದರಸ ಮತ್ತು ಮಡಿವಾಳ ಮಾಚಿದೇವ ೧೨೫
-ಡಾ|| ಕೆ.ವ್ಹಿ ಜುಕ್ತಿಮಠ ಸ್ವಾಮೀಜಿ

೭. ವೇದಾಗಮಗಳು ಮತ್ತು ಹಾವಿನಹಾಳ ಕಲ್ಲಯ್ಯ ೧೪೦
-ಡಾ|| ಬಿ.ಆರ್. ಹಿರೇಮಠ

೮. ನಮ್ಮ ಲೇಖಕರು ೧೫೦

ಬಾಗಲಕೋಟೆಯ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ನಡೆಸಿದ
'ವೇದಾಗಮಗಳು-ಶಿವಶರಣರು' -ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭ.

ಬಾಗಲಕೋಟೆಯಲ್ಲಿ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ನಡೆಸಿದ
'ವೇದಾಗಮಗಳು-ಶಿವಶರಣರು' -ವಿಚಾರ ಸಂಕಿರಣದ ಸಮಾರೋಪ ಸಮಾರಂಭ.

ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಂದ

# ಗೋಷ್ಠಿಯಲ್ಲಿ ಮಾರ್ಗದರ್ಶನ

-೧-

ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾದ ವೀರಣ್ಣ ಚರಂತೀಮಠ್‌ರವರೆ, ಹಾಗೂ ಗೌರವ ಪ್ರಧಾನ ಕಾರ್ಯದರ್ಶಿಗಳಾದ ವೀರಣ್ಣ ಹಲಕುರ್ಕಿಯವರೆ, ಸಂಘದ ಇನ್ನಿತರ ಸಮಸ್ತ ಸದಸ್ಯರೇ, ಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ ವಿದ್ವಾಂಸರೇ, ಈ ದಿನದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ನಿರೂಪಕರೆ ಹಾಗೂ ತಾಯಂದಿರೆ, ಬಾಗಲಕೋಟೆಯ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಹಾಗೂ ಬೆಂಗಳೂರಿನ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಂಗ ಸಂಸ್ಥೆಯಾದ ವೀರಶೈವ ಅನುಸಂಧಾನ ಸಂಸ್ಥಾನದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಈ ವಿಚಾರ ಗೋಷ್ಠಿಯಲ್ಲಿ ಮೊದಲನೆಯ ದಿನದ ಕಾರ್ಯಕ್ರಮ ಈಗ ಮುಕ್ತಾಯದ ಹಂತದಲ್ಲಿದೆ.

ಸಾಮಾನ್ಯವಾಗಿ ಬಹಳಷ್ಟು ಜನರ ಮನಸ್ಸಲ್ಲಿ ಇಷ್ಟು ಚರ್ಚೆಗಳನ್ನು ಕೇಳಿದ ಮೇಲೂ ಕೂಡ ಶಿವಶರಣರ ಮೇಲೆ ಈ ವೇದಾಗಮಗಳ ಪ್ರಭಾವ ಆಗಿತ್ತೋ ಹೇಗೆ ಎನ್ನುವ ಪ್ರಶ್ನಾರ್ಥಕ ಚಿಹ್ನೆ ಕಾಡುತ್ತಾ ಇದೆ. ಮುಖ್ಯವಾಗಿ ಪ್ರಕ್ಷಿಪ್ತ ಅನ್ನುವ ಶಬ್ದ ಬಳಕೆಯಾಗ್ತಾ ಇದೆ. ಇಡೀ ವಚನ ಸಾಹಿತ್ಯದ ತುಂಬ ಎಲ್ಲವನ್ನು ಕೂಡ ಪ್ರಕ್ಷಿಪ್ತ ಎನ್ನಲು ಆಗುವುದಿಲ್ಲ. ಎಲ್ಲಾದರೂ ಕೆಲವರು ಕೆಲವೊಂದು ಪ್ರಕ್ಷೇಪ ಮಾಡಿರಬಹುದೇ ಹೊರತಾಗಿ ಎಲ್ಲಾ ಕಡೆ ಪ್ರಕ್ಷೇಪ ಮಾಡಲು ಆಗುವುದಿಲ್ಲ. ಆಯಾಯ ವಚನಗಳಲ್ಲಿ ಬಂದಿರುರಂತಹ ಸಂಸ್ಕೃತ ಸೂಕ್ತಿಗಳನ್ನು ಆಯಾಯ ವಚನಕಾರರೇ ಉಲ್ಲೇಖಿಸಿದ್ದಾರೆಂದು ನಂಬಿಕೊಂಡು ವಿಚಾರ ಗೋಷ್ಠಿಯನ್ನು ನಡೆಸಬೇಕು. ಮುಖ್ಯವಾಗಿ ಈ ಕೆಲಸ ಎಂಥದ್ದು ಎಂದರೆ, ಒಂದು ಪರಿಪಕ್ವವಾದ ಹಣ್ಣಿನಿಂದ ತುಂಬಿರುವಂತಹ ಮರವನ್ನು ನೋಡಿ, ಆ ಹಣ್ಣುಗಳಿಗೆ, ಹಣ್ಣುಗಳಿಂದ ತುಂಬಿರುವ ಟೊಂಗೆಗಳಿಗೆ, ಆ ಟೊಂಗೆಗಳನ್ನು ಹೊತ್ತಿರುವಂಥ ಬೊಡ್ಡೆಗೆ ಸತ್ವವನ್ನು ಒದಗಿಸುವಂತಹದು ಯಾವುದು ಎಂದು ಹುಡುಕುವಂತಹದು. ಹಾಗೆಯೇ ಈ ವಚನಗಳನ್ನು ಗಮನಿಸಿ ನಾವು ವೇದ ಆಗಮಗಳ ಪರ್ಯಂತ ಹೋಗುವಂತಹ ಕೆಲಸ ಅಂದರೆ ವ್ಯಕ್ತವಾಗಿರುವಂಥದ್ದನ್ನು ನೋಡಿ

ಅವ್ಯಕ್ತವನ್ನು ಶೋಧಿಸುವಂತಹ ದೊಡ್ಡ ಕೆಲಸ. ಇದು ಎಂಥ ಸಾಹಸ ಅಂದ್ರೆ, ಕೇಳಿ. ಗಂಗೋತ್ರಿಯಿಂದ ಗಂಗಾ ಸಾಗರಕ್ಕೆ ಬರೋದು ಬಹಳ ಸರಳವಾಗಿರುವಂತಹದು. ಆದರೆ ಗಂಗಾ ಸಾಗರದಲ್ಲಿ ಸೇರುವ ಈ ಗಂಗೆ ಎಲ್ಲಿಂದ ಬಂತು ಎನ್ನುವುದನ್ನು, ಅದರ ಮೂಲವನ್ನು ಹುಡುಕಿಕೊಂಡು ಹೋಗಬೇಕಾಗುತ್ತೆ. ಗಂಗಾ ಸಾಗರದಿಂದ ಗಂಗೋತ್ರಿಯವರೆಗೆ ಹೋಗುವಂತಹ ಯಾತ್ರೆ ಎಷ್ಟು ಕಠಿಣವೋ ಅಷ್ಟೇ ಕಠಿಣವಾಗಿರುವಂತದು ಈ ಕಾರ್ಯ. ಈ ಕಾರ್ಯದಲ್ಲಿ ಸಂಸ್ಕೃತದ ಶ್ರೇಷ್ಠ ವಿದ್ವಾಂಸರು ಹಾಗೂ ಕನ್ನಡ ಭಾಷೆಯ ಶ್ರೇಷ್ಠ ವಿದ್ವಾಂಸರು ಬಹಳಷ್ಟು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಿ ಈ ಪ್ರಬಂಧಗಳನ್ನು ಮಂಡಿಸುವುದನ್ನು ನೋಡಿದರೆ- "ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಮ್" ಎಂಬುದು ಜ್ಞಾಪಕಕ್ಕೆ ಬರುತ್ತೆ. "ಶತಂ ವದ ಏಕಂ ಮಾ ಲಿಖ, ಮಾ ಲಿಖ" (ನೂರು ಮಾತನಾಡು ಒಂದು ವಾಕ್ಯವನ್ನು ಬರೀ ಬೇಡ) ಎಂಬ ಉಕ್ತಿ ಇದೆ. ಒಂದು ನೂರು ಮಾತುಗಳನ್ನು ಆಡುವುದು ಬಹಳ ಸರಳ, ಆದರೆ ಮಾತುಗಳನ್ನೇ ಲಿಪಿಬದ್ಧ ಮಾಡಿ ತಜ್ಞರ ಮುಂದೆ ಇಡುವ ಪ್ರಸಂಗ ಬಂದಾಗ ಬಹಳ ಕಷ್ಟ. ಇಂದು ನಾಲ್ಕು ಜನ ವಿದ್ವಾಂಸರು ಪ್ರಬಂಧವನ್ನು ಮಂಡಿಸಿದ್ದಾರೆ. ನಿಜವಾಗಿ ಬಹಳಷ್ಟು ಪರಿಶ್ರಮಿಸಿ ಈ ಸಮಾಜದ ಮುಂದೆ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಇಟ್ಟಿದಾರೆ, ಎಂಬುದನ್ನು ನಾವೆಲ್ಲರು ಕೂಡ ಪ್ರಾಂಜಲವಾದ ಮನಸ್ಸಿನಿಂದ ಒಪ್ಪಿಕೊಳ್ಳಬೇಕಾಗುತ್ತದೆ.

ಮುಖ್ಯವಾದ ವಿಚಾರವೆಂದರೆ, ವೀರಶೈವ ಸಾಹಿತ್ಯದೊಳಗೆ ಬರುವಂತಹ ಯಾವುದನ್ನು ನಾವು "ಶಿವ" ಎಂದು ಕರೆಯುತ್ತಾ ಇದ್ದೇವೆ, ಯಾವುದನ್ನು ನಾವು "ಲಿಂಗ" ಎಂದು ಕರೆಯುತ್ತಾ ಇದ್ದೇವೆ, ಅದು ಬಹಳಷ್ಟು ಮುಖ್ಯವಾದಂತಹದ್ದು. ಈಗಾಗಲೇ ನಮ್ಮ ಎಲ್ಲಾ ವಿದ್ವಾಂಸರು ಹೇಳಿದಂತೆ ವೇದ ಮತ್ತು ಆಗಮಗಳಲ್ಲಿ ಒಂದು ವ್ಯತ್ಯಾಸ ಇದೆ. ವೇದವಾಗಲಿ ಅಥವಾ ವೇದಾಂತವಾಗಲಿ ಒಂದು ಮೂಲ ತತ್ತ್ವವನ್ನು "ಬ್ರಹ್ಮ" ಎಂದು ಕರೆಯುತ್ತಾರೆ. ಆದರೆ ಆಗಮ ಸಾಹಿತ್ಯ ಅದಕ್ಕೆ "ಲಿಂಗ" ಅಥವಾ "ಸ್ಥಲ" ಎಂಬ ಶಬ್ದವನ್ನು ಪ್ರಯೋಗ ಮಾಡುತ್ತದೆ. ಸಾಹಿತ್ಯ ಸಂಸ್ಕೃತದ್ದಿರಬಹುದು ಅಥವಾ ಕನ್ನಡದ್ದೆ ಇರಬಹುದು ಅಥವಾ ಇನ್ನಿತರ ಯಾವುದೇ ಪ್ರಾಂತೀಯ ಭಾಷೆಗಳದ್ದೇ ಇರಬಹುದು, "ಲಿಂಗ", "ಶಿವ", "ಸ್ಥಲ" ಎನ್ನುವ ಶಬ್ದಗಳನ್ನು ಬಳಸಿದರೆ ಅದೆಲ್ಲಾ ಆಗಮದಿಂದಲೇ ಬಂದಂತಹ ಮಾತೆಂದು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಶ್ರೀಮನ್ನಿಜಗುಣ ಶಿವಯೋಗಿಗಳು ಕೂಡ ಎಷ್ಟು ವೇದಾಂತದಲ್ಲಿ ಪರಿಣತರಾಗಿದ್ದರೋ, ಅಷ್ಟೇ ವೀರಶೈವ ಸಿದ್ಧಾಂತದಲ್ಲಿ ಕೂಡ ಅಧಿಕಾರವನ್ನು ಸಂಪಾದನೆ ಮಾಡಿಕೊಂಡಿದ್ದರು. ಅವರೊಂದು ಮಾತನ್ನು ಹೇಳಿದ್ದಾರೆ. "ಅವಮತದವರರಿವರು ಜಗದಾದಿ ಲಿಂಗವನು ಆಗಮವನುಳಿದು" ಎಂದು. ಇಂದು ಯಾರೇ ಆದರೂ ಕೂಡ ಲಿಂಗ ತತ್ತ್ವವನ್ನು ತಿಳಿದುಕೊಳ್ಳಬೇಕು ಎನ್ನುವ ವಿಚಾರ ಬಂದರೆ, ಆಗಮ ಸಾಹಿತ್ಯವನ್ನು ಬಿಟ್ಟು ನಾವು ಲಿಂಗತತ್ತ್ವವನ್ನು ತಿಳಿದುಕೊಳ್ಳುತ್ತೇವೆ

ಅಂದರೆ ಅದು ಎಂದಿಗೂ ಸಾಧ್ಯವಿಲ್ಲ, ಎನ್ನುವ ಸ್ಪಷ್ಟವಾದ ಮಾತನ್ನು ನಿಜಗುಣರು ಹೇಳಿದ್ದಾರೆ. ಲಿಂಗತತ್ತ್ವವನ್ನು ಆರಾಧನೆ ಮಾಡುವಂತಹವರು, ಲಿಂಗವನ್ನು ಪೂಜೆ ಮಾಡುವಂತಹವರು ತಮ್ಮ ಪ್ರತಿಯೊಂದು ದಾರ್ಶನಿಕ ಸಿದ್ಧಾಂತಕ್ಕಾಗಲಿ ಅಥವಾ ತಮ್ಮ ಪ್ರತಿಯೊಂದು ಧರ್ಮಾಚರಣೆಗಳಿಗಾಗಲಿ, ಆಗಮಗಳೇ ಮೂಲ ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಡಾ|| ಸಿದ್ಧರಾಮ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮಿಗಳು ಹೇಳಿದಂತೆ, ಆಗಮವು ನಮ್ಮ ಮೂಲ ಪ್ರಮಾಣವಾಗಿದ್ದರೂ, ಆಗಮಕ್ಕೆ ವಿರೋಧವಲ್ಲದ ವೇದಭಾಗವನ್ನು ಕೂಡ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ಮಾತನ್ನು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಕೂಡ ಶಿವಯೋಗಿ ಶಿವಾಚಾರ್ಯರು ಶ್ರೀಸಿದ್ಧಾಂತಶಿಖಾಮಣಿಯೆಂಬ ಹೆಸರನ್ನು ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ "ಶ್ರೀವೇದಾಗಮವೀರಶೈವಸರಣೀಮ್" ಎಂಬ ಮಾತನ್ನು ಹೇಳಿ, ತಾವು ಈ ಗ್ರಂಥವನ್ನು ಬರೆಯುವಾಗ ವೇದ, ಆಗಮಗಳನ್ನು ಅನುಸರಿಸಿದ್ದೇವೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಿರುವಾಗ ನಾವ್ಯಾರೂ ಈ ವೇದಾಗಮಗಳು ನಮಗೆ ಆಕರಗಳು ಅಹುದೋ ಅಲ್ಲವೋ ಎಂದು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ನಾವೆಲ್ಲರೂ ಕೂಡ ಅವುಗಳನ್ನು ನಮ್ಮ ಆಕರಗಳೆಂದು ಕಣ್ಣುಮುಚ್ಚಿ ಅವಶ್ಯವಾಗಿ ಒಪ್ಪಿಕೊಳ್ಳಲೇಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಸ ಬಯಸುತ್ತೇವೆ.

ಹಾವಿನಹಾಳ ಕಲ್ಲಯ್ಯನ ಬಗ್ಗೆ ಡಾ|| ಹಿರೇಮಠರವರು ತಮ್ಮ ನಿರೂಪಣೆಯನ್ನು ಮಾಡಿದರು. ಅದರಲ್ಲಿ ಕಲ್ಲಯ್ಯನವರು ಒಂದು ನಾಯಿಯ ಮುಖಾಂತರ ವೇದವನ್ನು ಓದಿಸಿದರು, ಎನ್ನುವ ಪವಾಡವನ್ನು ಕೇಳಿದೆವು. ಮಹಾರಾಷ್ಟ್ರದ ಜ್ಞಾನೇಶ್ವರರು ಕೋಣದ ಮುಖದಿಂದ ವೇದವನ್ನು ಓದಿಸಿದ ಪವಾಡವೇ ಜಗತ್ಪ್ರಸಿದ್ಧವಾಗಿದೆ. ಹಾವಿನಹಾಳ ಕಲ್ಲಯ್ಯನವರು ನಾಯಿಯ ಮುಖಾಂತರ ವೇದವನ್ನು ಓದಿಸಿದರು ಎನ್ನುವುದು ಗೊತ್ತಾದ ಬಳಿಕ ಬಹಳಷ್ಟು ಜ್ಞಾನೋದಯವಾಯಿತು. ಅಂತಹ ವಿಚಾರಗಳನ್ನು ನಾವು ಇಂತಹ ಗೋಷ್ಠಿಗಳಲ್ಲಿ ಸೇರಿಕೊಂಡಾಗ ಪರಸ್ಪರವಾಗಿ ವಿನಿಮಯ ಮಾಡಿಕೊಳ್ಳಲು ಸಾಧ್ಯ. ಇದರಲ್ಲಿ ಮುಖ್ಯವಾಗಿ ಅಪ್ಪಣ್ಣನ ಬಗ್ಗೆ ಒಂದು ವಿಚಾರ ಬಂದಿತು. ಒಬ್ಬರು ತಾಯಂದಿರು ಸ್ಪಷ್ಟಪಡಿಸಲು ಕೇಳಿದರು- ಕಲ್ಲಯ್ಯನವರು ಮಾಡುತಿದ್ದಂತಹ ಕೆಲಸದ ಬಗ್ಗೆ ಆತನೇನಾದರೂ ತಮ್ಮ ವಚನದಲ್ಲಿ ಉಲ್ಲೇಖ ಮಾಡಿದ್ದಾನೆಯೇ ಎಂದು. ಡಾ|| ವಿದ್ಯಾಶಂಕರ ಅವರು ಹೇಳಿದ ವಿಚಾರ ಗಣನೀಯ. ಈಗಾಗಲೆ ಸಾಕಷ್ಟು ಜಾತಿ ಜಾತಿಗಳ ಗಲಭೆಗಳ, ಗೊಂದಲಗಳ ಸಂದರ್ಭದಲ್ಲಿ ಶರಣರು ಕೂಡ ಜಾತಿಸೂಚಕವಾದ ಶಬ್ದವನ್ನು ಪ್ರಯೋಗ ಮಾಡಿ ಅವರ ಹೆಸರನ್ನು ಹೇಳೋದು ಸರಿಯೇ ಎಂದು ಅವರು ಪ್ರಶ್ನೆಯನ್ನು ಮಾಡಿದ್ದಾರೆ. ಜಾತಿಸೂಚಕ ಎನ್ನುವುದಕ್ಕಿಂತ ಕಾಯಕ ಸೂಚಕವಾಗಿರುವಂತಹ ಶಬ್ದ ಎಂದು ದೃಷ್ಟಿಯಲ್ಲಿ ತೆಗೆದುಕೊಂಡಾಗ ತಪ್ಪಿಲ್ಲ. ಕಾಯಕಗಳೇ ಇಂದು ಜಾತಿಗಳಾಗಿ ಪರಿವರ್ತನೆಯಾಗಿವೆ. ಯಾವುದಕ್ಕೆ ಶರಣರು ಕಾಯಕ ಎಂದು ಕರೆಯುತ್ತಿದ್ದರೋ ಅದನ್ನು ಜಾತಿಯೆಂದು ಪರಿಗಣಿಸಿಕೊಂಡು

ಬರುತ್ತಿದ್ದೇವೆ. ಬಸವಣ್ಣನವರು ತಮ್ಮ ಕಾಲದಲ್ಲಿ ಶರಣರಿಗೆ ಪ್ರಯೋಗ ಮಾಡಿರುವಂತಹ ಕಾಯಕ ವಾಚಕ ಶಬ್ದಗಳು ಜಾತಿಸೂಚಕ ಎನ್ನುವ ಭಾವನೆ ಬಹಳ ಜನರಲ್ಲಿ ಆಗಲೇ ಬಂದಿತ್ತೆಂದು ತಿಳಿಯುತ್ತದೆ. ಅದನ್ನು ದೂರ ಮಾಡುವ ಸಲುವಾಗಿ ಬಸವಣ್ಣನವರು ಒಂದು ವಚನವನ್ನು ಹೇಳಿದ್ದಾರೆ- "ಕಾಸಿ ಕಂಬಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ" ಎಂಬ ವಚನದಲ್ಲಿ ಬಡಿಗ, ಕಂಬಾರ, ಹಾರುವ ಪದಗಳು ಅವರು ಮಾಡುವ ಉದ್ಯೋಗಗಳ ಪ್ರತೀಕಗಳೇ ಹೊರತು ಜಾತಿಸೂಚಕಗಳಲ್ಲ ಎಂದು ಹೇಳಿದ್ದಾರೆ. ಶಬ್ದವನ್ನು ಪ್ರಯೋಗ ಮಾಡುವ ಕಾಲಕ್ಕೆ ಜಾತಿಸೂಚಕವಾಗಿ ಯಾರಿಗೂ ಪದಗಳನ್ನು ಬಳಸಬಾರದು ಎಂದು ಅಂದೇ ಬಸವಣ್ಣನವರು ಹೇಳಿದರೂ ಕೂಡ ಇಂದಿಗೂ ಕೂಡ ಆ ಶಬ್ದಗಳನ್ನು ಬಳಸಿಕೊಂಡು ಬರುತ್ತಿದ್ದೇವೆ. ಇದರಿಂದ ಆಗಿರುವ ದುರದೃಷ್ಟ ಸಂಗತಿಯೇನೆಂದರೆ ಸರ್ವರಿಗೂ ಮಾನ್ಯರಾಗಿರುವಂತಹ ಶರಣರು ಇವತ್ತು ಕೇವಲ ಆ ಜಾತಿಗೆ ಸೀಮಿತವಾಗುತ್ತಾ ಇದ್ದಾರೆ ಹೊರತು ಇಡೀ ವೀರಶೈವ ಸಮಾಜದಲ್ಲಿ ಅವರ ಬಗ್ಗೆ ಪೂಜ್ಯತೆಯ ಭಾವನೆ ಮರೆಯಾಗುತ್ತಾ ಇದೆ. ಅದಕ್ಕೆ ನಾವು ರಂಭಾಪುರೀ ಮಹಾಪೀಠದ ಸಮನ್ವಯ ಸಭೆಯಲ್ಲಿ ಸಂದೇಶವನ್ನು ಕೊಟ್ಟಿದ್ದೆವು. ಇಲ್ಲಿಯವರೆಗೆ ನಾವು ಶರಣರಿಗೆ ಹಡಪದ, ಮಾದರ, ಡೋಹರ ಎನ್ನುವ ಶಬ್ದಗಳನ್ನು ಬಳಸುತ್ತಾ ಬಂದಿದ್ದೇವಲ್ಲ, ಅವುಗಳನ್ನು ಇನ್ನು ಮೇಲೆ ಬಳಸುವುದನ್ನು ಬಿಟ್ಟು ಕೇವಲ ಕಕ್ಕಯ್ಯ, ಚೆನ್ನಯ್ಯ ಎಂಬ ಪದಗಳನ್ನೇ ಬಳಸುತ್ತಾ ಹೋದರೆ ಇನ್ನು ಇಪ್ಪತ್ತು ವರ್ಷಗಳ ಅನಂತರ ಅವರು ಯಾವ ಜಾತಿಯೆನ್ನುವುದು ಮರೆತು, ಅವರೆಲ್ಲರು ನಮ್ಮವರು ಎನ್ನುವ ಭಾವನೆ ಬರಲು ಸಾಧ್ಯವಾಗುತ್ತದೆ, ಎಂದು ವಿಚಾರವನ್ನು ತಿಳಿಸಲು ಇಚ್ಛಿಸುತ್ತೇವೆ.

ಇನ್ನು ಪಾದೋದಕದ ಬಗ್ಗೆ ಕೆಲವು ವಿಚಾರಗಳು ಬಂದವು. ಜಂಗಮರ ಪಾದೋದಕವನ್ನು ಲಿಂಗಕ್ಕೆ ಮಜ್ಜನ ಮಾಡಿ ತೆಗೆದುಕೊಳ್ಳಬಹುದೇ? -ಎಂಬ ಪ್ರಶ್ನೆ ಬಂತು. ಅದಕ್ಕೆ ಡಾ।। ಸಿದ್ಧರಾಮ ಶಿವಾಚಾರ್ಯರು ಉತ್ತರವನ್ನು ಕೊಟ್ಟಿದ್ದಾರೆ. ಒಂದು ಶಾಸ್ತ್ರ ಎಂದು ಮತ್ತೊಂದು ರೂಢಿ ಎಂದು ಇರುತ್ತವೆ. ಅದು ಶಾಸ್ತ್ರದಿಂದ ಬಂದಿದ್ದರೂ ಕೂಡ ಕೆಲವು ಸಾರಿ ಶಾಸ್ತ್ರಕ್ಕೆ ಸಂಬಂಧವಿಲ್ಲದಂತಹ ರೂಢಿ ಇದ್ದಾಗ ಅಲ್ಲಿ ಶಾಸ್ತ್ರಕ್ಕಿಂತಲೂ ರೂಢಿಯೇ ಶ್ರೇಷ್ಠ. "ಶಾಸ್ತ್ರಾದ್ ರೂಢಿರ್ಬಲೀಯಸೀ" ಎಂಬ ಉಕ್ತಿ ಇದೆ. ನಮ್ಮಲ್ಲಿ ಏನೇ ವಿಚಾರ ಬಂದರೂ ಏನು ಪರಂಪರಾಗತವಾಗಿರುವಂತಹ ರೂಢಿಯಿದೆಯೋ ಅದರಲ್ಲಿ ಒಂದು ತತ್ತ್ವಾರ್ಥವಿದೆ ಎಂದು ತಿಳಿದುಕೊಂಡು, ನಾವು ಮಾಡುವಂತಹ ಆಚಾರದ ಬಗ್ಗೆ, ಸ್ವೀಕಾರ ಮಾಡುವಂತಹ ಪಾದೋದಕ ಪ್ರಸಾದಗಳ ಬಗ್ಗೆ ಅದರಂತೆ ಅನುಸರಿಸಬೇಕು. ಅದು ಬಿಟ್ಟು ಏನಾದರೂ ಸಂಶಯಗಳನ್ನು ಉದ್ಭವ ಮಾಡುವುದಾದರೆ, ಮೊದಲೇ ಜನರಿಗೆ ಗೊತ್ತಿಲ್ಲ, ಸಂಶಯ ಹುಟ್ಟಿಸಿದರೆ, ಅದು ಇಲ್ಲ ಇದು ಇಲ್ಲ ಎಂಬ ದೃಷ್ಟಿಯಿಂದ "ಅತೋ ಭ್ರಷ್ಟ ತತೋ ಭ್ರಷ್ಟ" ಎನ್ನುವ

ಸನ್ನಿವೇಶ ಬರುತ್ತದೆ. ಆದ್ದರಿಂದ ಇಂತಹ ವಾದಗ್ರಸ್ತವಾದ ವಿಷಯಗಳನ್ನು ಸಾಧ್ಯವಾದ ಮಟ್ಟಿಗೆ ಸಾರ್ವಜನಿಕವಾಗಿ ಚರ್ಚಿಸುವುದಕ್ಕಿಂತಲೂ ಅಂತರಂಗವಾಗಿರುವಂತಹ ಗೋಷ್ಠಿಗಳಲ್ಲಿ ಚರ್ಚಿಸೋದು ಬಹಳ ಸೂಕ್ತ ಎಂದು ನಮಗೆ ಅನ್ನಿಸುತ್ತದೆ.

ಡಾ।। ವಿದ್ಯಾಶಂಕರ ಅವರು ಪ್ರಸಾದಿ ಭೋಗಣ್ಣನ ಬಗ್ಗೆ ಒಂದು ಮಾತು ಹೇಳಿದರು. ಭೋಗಣ್ಣ ಅವರಿಗೆ ವಿಶೇಷಣವಾಗಿ ಬಂದಿರುವ "ಪ್ರಸಾದಿ" ಎನ್ನುವ ಶಬ್ದ, ಪ್ರಸಾದವನ್ನು ವಿತರಣೆ ಮಾಡುವ ಕಾಯಕವನ್ನು ಸೂಚನೆ ಮಾಡದೆ ಆತನು ಪ್ರಸಾದಿ ಸ್ಥಲದಲ್ಲಿರುವಂತಹ ಸಿದ್ಧಿಯನ್ನು ತೋರಿಸುತ್ತದೆ ಎಂದು ಹೇಳಿದರು. ಒಂದು ವೇಳೆ ಅದನ್ನು ಒಪ್ಪಿದ್ದಾದರೆ ಆತ ಪ್ರಸಾದಿ ಸ್ಥಲದಲ್ಲಿದ್ದ, ಮುಂದೆ ಆತನ ಪ್ರಗತಿ ಆಯಿತೇ ಎಂದು ಹೇಳುವುದು ಕಷ್ಟವಾಗುತ್ತದೆ. ಈಗ ನಾವು ಹನ್ನೆರಡನೆಯ ಶತಮಾನದ ಎಲ್ಲಾ ಮಹಾತ್ಮರಿಗೆ ಶರಣರು ಅಂತ ಕರೆಯುತ್ತಿದ್ದೇವೆ. ಇಲ್ಲಿ ಶರಣ ಅನ್ನುವಂತ ಪದಕ್ಕೆ ಶರಣ ಸ್ಥಲದಲ್ಲಿ ಇರುವಂತಹ ವ್ಯಕ್ತಿ ಎಂಬ ಅರ್ಥವನ್ನು ಮಾಡಿಕೊಂಡರೆ ಅವರೆಲ್ಲಾ ಐಕ್ಯಸ್ಥಲಕ್ಕೆ ಮುಟ್ಟಲೇ ಇಲ್ಲವೋ ಏನೋ ಎಂಬ ಸಂಶಯ ಕೂಡ ಬರಲು ಸಾಧ್ಯವಾಗುತ್ತದೆ. ಅವರು ಐಕ್ಯಸ್ಥಲವನ್ನು ಮುಟ್ಟಿಯೂ ಕೂಡ ಲೋಕಕಲ್ಯಾಣಾರ್ಥವಾಗಿ ಶರಣರ ಜೀವನವನ್ನು ಸಾಗಿಸುತ್ತಾ ಲೋಕಕ್ಕೆ ಮಾರ್ಗದರ್ಶನವನ್ನು ಮಾಡಿದರು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ "ಪ್ರಸಾದಿ" ಭೋಗಣ್ಣ ಎಂದರೆ ಆತ ಪ್ರಸಾದಿ ಸ್ಥಲದಲ್ಲಿ ಇದ್ದು ಕೂಡ, ಪ್ರಸಾದವನ್ನು ಕೊಡುವಂತ ಕಾಯಕವನ್ನು ಮಾಡುತ್ತಿರಬಹುದು.

ಬಸವಾದಿ ಶರಣರು ವೇದಗಳ ನಿಂದೆ ಮಾಡ್ತಾರೆ ಎಂಬ ವಿಷಯ ಬಂದಿತು. ಅವರು ವೇದದ ನಿಂದೆ ಮಾಡ್ತಾರೆ ಅಂದ್ರೆ ವೇದ ನಿಂದಿಸುವುದೇ ಅವರ ಉದ್ದೇಶ ಅಲ್ಲ, ಆದರೆ ವೇದದಲ್ಲಿ ಬರುವಂತಹ ಲೋಕವಿರೋಧಿ ಆಚರಣೆಗಳನ್ನು ಅವರು ಅಲ್ಲಗಳೆದರು ಎನ್ನುವುದನ್ನು ನಾವೆಲ್ಲರೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಶ್ರೀಮತಿ ಉಮಾದೇವಿಯವರು ಪುರಾತನರು ಎಂಬ ಅಕ್ಕಮಹಾದೇವಿ ಬಳಸಿರುವ ಪದಕ್ಕೆ ಪಂಚಾಚಾರ್ಯ ಎಂದು ಹೇಳಿದ್ದಾರೆ. ಡಾ।। ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಅಕ್ಕಮಹಾದೇವಿ ವಚನದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕೆ ಡಾ।। ವಿದ್ಯಾಶಂಕರರವರು ಆಕ್ಷೇಪ ಮಾಡಿ ಅಲ್ಲಿ ಬಂದಿರುವುದು ಪಂಚಾಚಾರ್ಯರ ಉಲ್ಲೇಖ ಅಲ್ಲ ಎಂದು ಹೇಳಿದರು. ಒಂದು ವಿಚಾರವೇನೆಂದರೆ, ಸಾರ್ವತ್ರಿಕವಾಗಿ ನಾವೆಲ್ಲರೂ ಲಿಂಗೋದ್ಭವರೆ? ನಾವೆಲ್ಲರು ಕೊನೆಗೆ ಲಿಂಗೈಕ್ಯವಾಗುವವರೆ? ಅದಕ್ಕೆ ಲಿಂಗೋದ್ಭವ ಎನ್ನುವ ಪದ ಪಂಚಾಚಾರ್ಯರಿಗೇ ಮೀಸಲಿಲ್ಲ, ಎಲ್ಲರಿಗೂ ಸಂಬಂಧ ಪಡುವಂತಾಹದ್ದು, ಎಂದು ಬಹಳ ಜನರಲ್ಲಿ ಭಾವನೆಯಿದೆ. ಆದರೆ ಇಲ್ಲಿ ಸರ್ವೇಸಾಮಾನ್ಯ ಹುಟ್ಟಿದ ವ್ಯಕ್ತಿಯನ್ನು ಉದ್ದೇಶಿಸಿ ಅಕ್ಕಮಹಾದೇವಿ ಬರದಿದ್ರೆ, ಆ ಮಾತು ಬೇರೆ ಆಗಬಹುದಿತ್ತು. ಆಕೆ ತನ್ನ ವಚನದಲ್ಲಿ ಹೇಳ್ತಾ ಇದ್ದಾರೆ: "ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ ಇಂಗಿತವನೇನೆಂದು

ಬೆಸಗೊಂಬಿರಯ್ಯ" "ಅವರ ನಡೆಯೇ ಆಗಮ ಅವರ ನುಡಿಯೇ ವೇದ ಅವರ ಲೋಕದ ಮಾನವರೆಂದೆನ್ನಬಹುದೇ" ಎಂದು. "ಲಿಂಗೋದ್ಭವ" ಎಂದರೆ ಲಿಂಗದಿಂದ ಉದಿಸಿದವರು ಎಂದರ್ಥ.

ನಾವು ತಾಯಿಯ ಗರ್ಭದಲ್ಲಿ ಎಂಟು ತಿಂಗಳ ಶಿಶುವಿದ್ದಾಗ ತಾಯಿ ಗರ್ಭಕ್ಕೆ ಲಿಂಗವನ್ನು ಕಟ್ಟಿದರೆ ನಾವು ಹುಟ್ಟುವಾಗ ಲಿಂಗವನ್ನು ತೆಗೆದುಕೊಂಡು ಹುಟ್ಟುತ್ತೇವೆ. ನಾವು ಲಿಂಗೋದ್ಭವರು ಎಂದು ಹೇಳಲಾಗದು. ನಾವು ಲಿಂಗ ತೆಗೆದುಕೊಂಡು ಹುಟ್ಟಿದವರೆ ಹೊರತಾಗಿ ನಾವು ಲಿಂಗೋದ್ಭವರಲ್ಲಾ ಎಂದು ತಿಳಿದುಕೊಳ್ಳಬೇಕು. ಸರ್ವೇಸಾಮಾನ್ಯವಾಗಿ ಹುಟ್ಟಿಬಂದ ಪ್ರತಿ ಒಬ್ಬರು "ಲಿಂಗಸಹಸಂಜಾತರು", ಲಿಂಗವನ್ನು ಕಟ್ಟಿಕೊಂಡೇ ಭೂಮಿಗೆ ಬಂದವರು. ಹೀಗೆ ಇಲ್ಲಿ ಲಿಂಗೋದ್ಭವವೆಂದರೆ ಪಂಚಾಚಾರ್ಯರೇ ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

-೨-

ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾದ ವೀರಣ್ಣ ಚರಂತೀಮಠ್‌ರವರೆ, ಹಾಗೂ ಗೌರವ ಪ್ರಧಾನ ಕಾರ್ಯದರ್ಶಿಗಳಾದ ವೀರಣ್ಣ ಹಲಕುರ್ಕಿಯವರೆ, ಸಂಘದ ಇನ್ನಿತರ ಸಮಸ್ತ ಸದಸ್ಯರೇ, ಪ್ರಬಂಧಗಳನ್ನು ಮಂಡಿಸಿದ ವಿದ್ವಾಂಸರೇ, ಈ ದಿನದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ನಿರೂಪಕರೆ ಹಾಗೂ ತಾಯಂದಿರೆ, ಬಾಗಲಕೋಟೆಯ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಹಾಗೂ ಬೆಂಗಳೂರಿನ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಂಗ ಸಂಸ್ಥೆಯಾದ ವೀರಶೈವ ಅನುಸಂಧಾನ ಸಂಸ್ಥಾನದ ಸಂಯುಕ್ತ ಆಶ್ರಯದಲ್ಲಿ ನಡೆದುಕೊಂಡು ಬಂದಿರುವ ಎರಡು ದಿನಗಳ ಈ ವಿಚಾರ ಗೋಷ್ಠಿಯಲ್ಲಿ ಎರಡನೆಯ ದಿನದ ಕಾರ್ಯಕ್ರಮ ಈಗ ಮುಕ್ತಾಯದ ಹಂತದಲ್ಲಿದೆ.

ವಿದ್ವಾಂಸರ ಮನಸ್ಸಿನಲ್ಲಿ ಒಂದು ಹೊಸ ಅಭ್ಯಾಸದ ತಿರುವನ್ನು ಮೂಡಿಸಿರುವುದರ ಜೊತೆಗೆ ಇದು ಜನಸಾಮಾನ್ಯರಲ್ಲಿಯೂ ಕೂಡ ಒಂದು ಜಿಜ್ಞಾಸಾಭಾವನೆಯನ್ನು ಕೆರಳಿಸಿರುವುದು. ಇಲ್ಲಿ ಕುಳಿತಿರುವಂಥ ಜನಸಾಮಾನ್ಯರೂ ಕೂಡ ಪ್ರಶ್ನೆ ಮಾಡಿದನ್ನು ನೋಡಿದಾಗ, ಅಥವಾ ಈ ಗೋಷ್ಠಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದಾಗ ಬಹಳಷ್ಟು ಸಂತೋಷವಾಗುತ್ತಿದೆ. ಯಾವುದೇ ಕಾರ್ಯವನ್ನು ನಾವು ಮಾಡಬೇಕಾದಾಗ ಅದರ ಪ್ರತಿಫಲ ಏನಾಗುತ್ತೇ ಅನ್ನೋದನ್ನ ವಿಚಾರ ಮಾಡಿಕೊಂಡು, ಉತ್ತಮವಾದ ಪ್ರತಿಫಲದ ಪ್ರಾಪ್ತಿಗಾಗಿ ನಾವು ಕಾರ್ಯವನ್ನು ಮಾಡಬೇಕು. ಸಮಾಜದಲ್ಲಿರುವಂತಹ ದ್ವೈತ ಬುದ್ಧಿಯನ್ನು ದೂರಮಾಡಿ, ಶಿವಾಗಮ ಸಾಹಿತ್ಯವೇ ಇರಬಹುದು, ಆಚಾರ್ಯ ಸಾಹಿತ್ಯವೇ ಇರಬಹುದು, ಶಿವಶರಣರ ವಚನ ವಾಙ್ಮಯವೇ ಇರಬಹುದು, ಇವೆಲ್ಲವುಗಳನ್ನು ಸಮನ್ವಯ ದೃಷ್ಟಿಯಿಂದ ನೋಡುವಂಥ ಒಂದು ಹೊಸ ಪ್ರವೃತ್ತಿ, ಹೊಸ ಚಿಂತನೆಯ ಪರಂಪರೆ ಸಮಾಜದಲ್ಲಿ ಬೆಳೆಯಬೇಕೆನ್ನುವುದೇ ಇಂತಹ

ಗೋಷ್ಠಿಗಳನ್ನು ನಡೆಸುವುದರ ಮುಖ್ಯ ಉದ್ದೇಶ. ಅದು ಎರಡು ವರ್ಷಗಳಿಂದ ಸಫಲವಾಗುತ್ತಾ ಇರುವುದರಿಂದ ನಮ್ಮ ಎಲ್ಲಾ ಸದಸ್ಯರುಗಳು ಬಹಳ ಉತ್ಸಾಹದಿಂದ ಕಾರ್ಯವನ್ನು ಮಾಡಿಕೊಂಡು ಬರುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ಒಂದು ಮುಖ್ಯವಾದ ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇವೆ. ವೀರಶೈವ ಸಿದ್ಧಾಂತ ಅಥವಾ ಸಾಹಿತ್ಯ ಅದು ಯಾವುದೇ ಭಾಷೆಯಲ್ಲಿರಲಿ, ಅದು ಸಂಸ್ಕೃತದಲ್ಲೇ ಇರಲಿ, ಕನ್ನಡ, ಮರಾಠಿ, ತೆಲುಗು ಅಥವಾ ತಮಿಳು, ಹೀಗೆ ಯಾವುದೇ ಭಾಷೆಯಲ್ಲಿರಲಿ, ಭಾಷೆ ಬಗ್ಗೆ ಲಕ್ಷ್ಯಗೊಡದೆ, ಅದೆಲ್ಲವೂ ಕೂಡ ನಮ್ಮದೆನ್ನುವಂಥ, ಅಪ್ಪಿಕೊಳ್ಳುವಂಥ ಒಂದು ಸ್ವಭಾವವನ್ನು ಇವತ್ತು ನಾವೆಲ್ಲರೂ ಕೂಡ ಅವಶ್ಯವಾಗಿ ರೂಢಿಸಿಕೊಳ್ಳಬೇಕಾಗಿದೆ.

ಸೊಲ್ಲಾಪುರದಲ್ಲಿ ಸ್ವಲ್ಪ ಹಿಂದೆ ನಡೆದ ಒಂದು ಘಟನೆ ನಿಮಗೆಲ್ಲಾ ಆಶ್ಚರ್ಯವನ್ನುಂಟುಮಾಡುತ್ತದೆ. ಲಾತೂರ್ ನಗರದಲ್ಲಿ ಡಾ॥ ಚಂದ್ರಕಾಂತ್ ದೇವಳಗಾಂವಕರ್ ಅನ್ನುವಂಥ ಒಬ್ಬ ಬ್ರಾಹ್ಮಣ ವಿದ್ವಾಂಸರು ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಮಾಡಬೇಕೆನ್ನುವ ವಿಚಾರ ಬಂದಾಗ ಆರಿಸಿಕೊಂಡಿರುವಂಥ ಗ್ರಂಥ ಯಾವುದು ಅಂದ್ರೆ, ಮಹಾರಾಷ್ಟ್ರದವರಾದ ಮನ್ಮಥಸ್ವಾಮಿ ಅವರ 'ಪರಮ ರಹಸ್ಯ' ಎನ್ನುವುದು. ವೀರಶೈವ ಸಂತ ಕವಿಯಾದ ಮನ್ಮಥ ಸ್ವಾಮಿಯ ಚರಿತ್ರ ಹಾಗೂ ಅವರ ಸಮಸ್ತ ಸಾಹಿತ್ಯದ ಒಂದು ಸಂಶೋಧನಾತ್ಮಕವಾದ ವಿಷಯವನ್ನು ತೆಗೆದುಕೊಂಡು ಅವರು ಪಿಎಚ್.ಡಿ. ಪ್ರಬಂಧವನ್ನ ಬರೆಯಲಿಕ್ಕೆ ಪ್ರವೃತ್ತರಾದಾಗ ಅವರಿಗೆ ಮಾರ್ಗದರ್ಶನ ಮಾಡಿದವರು ವಿಶ್ವವಿದ್ಯಾನಿಲಯದ ಮರಾಠಿ ವಿಭಾಗದ ಅಧ್ಯಕ್ಷರಾದ ಇಸ್ಲಾಂ ಸಮಾಜದ ಡಾ॥ ಪಠಾಣ. ಗ್ರಂಥ ವೀರಶೈವ ಧರ್ಮದ್ದು. ಪ್ರಬಂಧವನ್ನು ಬರೆಯುವವರು ಬ್ರಾಹ್ಮಣರು, ಅದಕ್ಕೆ ಮಾರ್ಗದರ್ಶನ ಮಾಡತಕ್ಕಂತವರು ಇಸ್ಲಾಂ ಧರ್ಮದವರು. ಜ್ಞಾನವನ್ನು ಪಡೆಯಬೇಕಾದರೆ ಈ ಜಾತಿಧರ್ಮಗಳು ಅಡ್ಡ ಬರುವುದಿಲ್ಲ ಅನ್ನುವುದಕ್ಕೆ ಇದೊಂದು ಜ್ವಲಂತವಾದ ಉದಾಹರಣೆ. ಡಾ॥ ದೇವಳಗಾಂವಕರ್ ಇಪ್ಪತ್ತೇಳು ವರ್ಷದ ಹಿಂದೆಯೇ ಪಿಎಚ್.ಡಿ. ಪದವಿಯನ್ನು ಆ ಗ್ರಂಥದ ಮೇಲೆ ಪಡೆದುಕೊಂಡಿದ್ದರೂ ಕೂಡ, ಆ ಗ್ರಂಥ ಇನ್ನೂವರೆಗೆ ಪ್ರಕಟವಾಗದೇ ಉಳಿದಿತ್ತು. ಕಳೆದ ವರ್ಷ ಶ್ರಾವಣ ಮಾಸದಲ್ಲಿ ನಮ್ಮ ಅನುಷ್ಠಾನ ಕಾರ್ಯಕ್ರಮ ಲಾತೂರ್‌ನಲ್ಲಿ ನಡೆದಾಗ ನಮ್ಮನ್ನು ಬಂದು ಭೆಟ್ಟಿಯಾದರು. "ಮನ್ಮಥಸ್ವಾಮಿಯ ಬಗ್ಗೆ ೨೭ ವರ್ಷದ ಹಿಂದೆಯೇ ಪಿಎಚ್.ಡಿ. ಪದವಿ ಪಡೆದುಕೊಂಡಿದ್ದೇನೆ. ಆದರೆ ಆ ಗ್ರಂಥ ನನ್ನ ಜೀವಿತ ಕಾಲದಲ್ಲಿ ಪುಸ್ತಕ ರೂಪವಾಗುತ್ತೋ ಇಲ್ಲೋ ಅನ್ನುವಂಥ ಚಿಂತೆಯಲ್ಲಿ ನಾನು ಕಾಲ ಕಳೆಯುತ್ತಿದ್ದೇನೆ" ಎಂದರು. ನಾವು ಆ ಮೊದಲೇ ಒಂದು ವಿಚಾರವನ್ನು ಮಹಾರಾಷ್ಟ್ರದಲ್ಲಿ ಪ್ರಕಟ ಮಾಡಿದ್ದೆವು. ಮರಾಠಿ ವೀರಶೈವ ಸಾಹಿತ್ಯದ ಮೇಲೆ ಯಾವುದೇ ವಿದ್ವಾಂಸರು ಯಾವುದೇ ವಿಶ್ವವಿದ್ಯಾನಿಲಯದಿಂದ ಪ್ರಬಂಧವನ್ನು ಮಂಡಿಸಿ ಪಿಎಚ್.ಡಿ.ಯನ್ನು ಪಡೆದಿದ್ದರೆ, ಆ ಗ್ರಂಥವನ್ನು ಪ್ರಕಟ ಮಾಡುವ ಜವಾಬ್ದಾರಿಯನ್ನು ನಾವು ಪೀಠದಿಂದ ವಹಿಸುತ್ತೇವೆ

ಎಂದು ಹೇಳಿದ್ದೆವು. ಅದೇ ಮಾತನ್ನ ಅವರಿಗೆ ಹೇಳಿ, ಆ ಗ್ರಂಥವನ್ನು ತೆಗೆದುಕೊಂಡು ಪ್ರಕಟಮಾಡಿ ಮೊನ್ನೆ ಸೊಲ್ಲಾಪುರದಲ್ಲಿ ೨೦ನೇ ತಾರೀಖಿನ ದಿವಸ ಬಿಡುಗಡೆ ಮಾಡಿ ಅವರಿಗೆ ಸನ್ಮಾನವನ್ನು ಮಾಡಿದಾಗ ಅವರು ಹೇಳಿದ ಸುಂದರವಾದ ಮಾತು: "ನನ್ನ ಜೀವನದೊಳಗೆ ಇದು ಮೊದಲನೇ ಆನಂದ, ಇದು ನನ್ನ ಕಡೇ ಆನಂದ" ಎಂದು.

ಇನ್ನು ಮುಖ್ಯವಾಗಿ ವೇದಾಗಮಗಳು ಹಾಗೂ ಶಿವಶರಣರು ಎನ್ನುವ ವಿಚಾರವಾಗಿ ನಡೆದ ಗೋಷ್ಠಿಯ ಎರಡನೆ ದಿನವಾದ ಇಂದು ಡಾ।। ಎಂ. ಶಿವಕುಮಾರ ಸ್ವಾಮಿಗಳವರು ಮತ್ತು ಡಾ।। ಎಸ್.ಎಂ. ವೃಷಭೇಂದ್ರ ಸ್ವಾಮಿಗಳವರು ಬಹಳಷ್ಟು ಸಮರ್ಥವಾಗಿ ತಮ್ಮ ವಿಷಯಗಳನ್ನು ಪ್ರತಿಪಾದನೆ ಮಾಡಿದ್ದಾರೆ. ಪ್ರತಿಪಾದನೆ ಮಾಡುವಂಥ ಸಂದರ್ಭದಲ್ಲಿ ಯಾವ ಶರಣರ ಮೇಲೆ ಎಷ್ಟರಮಟ್ಟಿಗೆ ಈ ವೇದಾಗಮಗಳು ಪ್ರಭಾವವನ್ನು ಬೀರಿವೆ ಅನ್ನುವುದನ್ನು. ಬಹಳಷ್ಟು ಸಮರ್ಥವಾಗಿ ಹೇಳಿದ್ದಾರೆ. ನೆನ್ನೆ ನಾವು ಒಂದು ಮಾತನ್ನು ಹೇಳಿದ್ದೆವು. ಶಿವಶರಣರ ಮೇಲೆ ಶೈವಾಗಮ ಮತ್ತು ವೇದಗಳ ಪ್ರಭಾವ ಆಗಿದೆ ಎಂದರೆ ಅವರ ಯೋಗ್ಯತೆ ಕಡಿಮೆ ಆಗಲಿಲ್ಲ. ನಾವು ಮೊದಲು ತಿಳಿದುಕೊಳ್ಳಬೇಕು. ಯಾಕೆಂದರೆ ವೇದಗಳಾಗಲೀ ಶಿವಾಗಮಗಳಾಗಲಿ ಇವು ಸಾಕ್ಷಾತ್ ಶಿವನ ಅನುಭವಗಳಾಗಿರುವದರಿಂದ, ಶಿವನ ಅನುಭವವನ್ನು ಶಿವಶರಣರು ಆಧಾರವಾಗಿ ತೆಗೆದುಕೊಂಡಾಗ, ಅವರ ಅನುಭವ ಇನ್ನೂ ಹೆಚ್ಚಲಿಕ್ಕೆ ಕಾರಣವಾಗುತ್ತೆಯೇ ಹೊರತು ಅವರ ವ್ಯಕ್ತಿತ್ವಕ್ಕೆ ಯಾವುದೇ ತರಹದ ಕುಂದು ತರುವುದಿಲ್ಲ ಎಂಬ ಒಂದು ಸ್ಪಷ್ಟವಾದ ವಿಚಾರವನ್ನ ನಾವೆಲ್ಲರೂ ತಿಳಿದುಕೊಳ್ಳಬೇಕು. ಎಲ್ಲರಿಗೂ ಅವರ ಬಗ್ಗೆ ಆದರ ಗೌರವಗಳು ಮೂಡಲಿಕ್ಕೆ ಸಾಧ್ಯವಾಗುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ನಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವಂತ ಸಾಕಷ್ಟು ಗ್ರಂಥಗಳಿವೆ. ಸಾಕಷ್ಟು ಪ್ರಸಿದ್ಧವಾಗಿರುವ ಶ್ಲೋಕಗಳನ್ನು ಬಳಸಿಕೊಂಡು, ಅವುಗಳನ್ನು ತಮ್ಮ ಅನುಭವಗಳ ಒರೆಗೆ ಹಚ್ಚಿ ಅನುಭವಿಸಿ ಹೇಳಿರುವಂಥ ಶರಣರ ಕನ್ನಡದ ವಚನಗಳು ಕೂಡ ಕಡಿಮೆ ಪ್ರಭಾವ ಬೀರಿರುವವು ಎಂದು ಹೇಳಲಾಗುವುದಿಲ್ಲ. ಸಂಸ್ಕೃತ ಗ್ರಂಥಗಳನ್ನೇ ಆಧರಿಸಿ ನಾವು ಪ್ರವಚನಗಳನ್ನು ಮಾಡಿದರೂ, ಆ ಪ್ರವಚನ ಪ್ರಭಾವೀ ಆಗಬೇಕಾದರೆ 'ಶಿವಶರಣರ ವಚನ'ಗಳನ್ನೂ ನಾವು ಎಷ್ಟೋ ಕಡೆ ಬಳಸುತ್ತಿದ್ದೇವೆ. ಕೆಲವೊಂದು ನಿಮಗೆಲ್ಲಾ ಪರಿಚಯವಿರತಕ್ಕಂಥ ವಚನಗಳಲ್ಲೆ ಎಷ್ಟೊಂದು ಪ್ರತಿಪಾದನಾ ಪ್ರಭಾವವಿದೆ ಎನ್ನುವುದನ್ನು ನೋಡಬಹುದು. ಉದಾಹರಣೆಗೆ ಅಕ್ಕಮಹಾದೇವಿಯ ಒಂದು ವಚನ ಹೀಗಿದೆ: "ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು, ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು, ಅಗಸ ನೀರೊಳಗಿದ್ದು ಬಾಯಾರಿ ಸತ್ತಂತೆ, ತಮ್ಮೊಳಗಿದ್ದ ಮಹಾಘನವನು ಅರಿಯದೇ ಕೆಟ್ಟರಯ್ಯ ಚೆನ್ನಮಲ್ಲಿಕಾರ್ಜುನ". ಇಷ್ಟು ಸರಳವಾಗಿರುವ ಈ ವಚನ ಎಷ್ಟು ಸತ್ವಶಾಲಿ ಎಂದರೆ, ಬಹುಶಃ ಯಾವ ಸಂಸ್ಕೃತ ಶ್ಲೋಕದ ಪ್ರತಿಪಾದನೆಯೂ ಇದನ್ನು ಮೀರಿಸಲಾರದು. ಅದೇ ರೀತಿಯಾಗಿ ಶಿವಧ್ಯಾನ, ಶಿವಚಿಂತನೆ ಇಲ್ಲದ ಶರಣನು "ಸಗಣಿಗೆ ಸಾವಿರ ಹುಳವಿದ್ದಂತೆ, ಇದ್ದರೇನು ಶಿವ

ಶಿವಾ, ಸತ್ತರೇನು ಶಿವ ಶಿವಾ" ಎಂಬ ವಚನವನ್ನು ಕೇಳಿದಾಗ ಅದು ಎಷ್ಟೊಂದು ಪ್ರಭಾವಶಾಲಿ ಎಂಬುದು ಗೊತ್ತಾಗುತ್ತದೆ. ಅದರಲ್ಲಿ ವಚನಕಾರರ ಸಂಪೂರ್ಣವಾದ ಅನುಭವವು ತುಂಬಿ ತುಳುಕುತ್ತಿದೆ ಎಂಬುದರ ಅರಿವು ನಮಗಾಗುತ್ತದೆ. ಇನ್ನು ಪ್ರಭುದೇವರದೊಂದು ವಚನ ಇದೆ: "ಒಲೆಯಲಟ್ಟುಂಬರಲ್ಲದೆ ತಲೆಯಲಟ್ಟುಂಬರಿಲ್ಲ, ಒಲೆಯಲಟ್ಟುಂಬೊಡೆ ಹೊಗೆಯಾಸೆ, ಹಗೆಯಾಸೆ, ತಲೆಯಲಟ್ಟುಂಬೊಡೆ ಹೊಗೆಯಿಲ್ಲ, ಹಗೆಯಿಲ್ಲ, ಗುಹೇಶ್ವರ ಲಿಂಗ." ಇಂಥಾ ವಚನಗಳನ್ನು ನೋಡಿದಾಗ ನಿಜವಾಗಿ ವಚನ ಸಾಹಿತ್ಯವೂ ಕೂಡ ಬಹಳಷ್ಟು ಸಾರಗರ್ಭಿತವಾಗಿದೆ ಅನ್ನುವುದರ ಬಗ್ಗೆ ಎರಡು ಮಾತಿಲ್ಲ.

ಸಂಸ್ಕೃತವನ್ನ ಕಲಿತ ಮಾತ್ರಕ್ಕೆ ನಮಗೆ ಸಂಪೂರ್ಣ ಸಾಹಿತ್ಯದ ಪರಿಜ್ಞಾನ ಆಯ್ತು ಎಂದು ಹೇಳಲು ಬರುವುದಿಲ್ಲ. ಕೇವಲ ಕನ್ನಡವನ್ನೇ ಓದಿದ ಮಾತ್ರಕ್ಕೆ ನಾವು ಪರಿಪೂರ್ಣವಾಗಿ ತಿಳಿದುಕೊಂಡೆವು ಎನ್ನಲು ಬರುವುದಿಲ್ಲ. ಆದ್ದರಿಂದ ಶಿವನ ಅನುಭವವೇ ಆಗಿರುತಕ್ಕಂತ ವೇದಾಗಮಗಳನ್ನು ಆಧಾರವಾಗಿಟ್ಟುಕೊಂಡಿರುವ ಶ್ರೀಸಿದ್ಧಾಂತಶಿಖಾಮಣಿಯನ್ನು, ಆಮೇಲೆ ಬರತಕ್ಕಂತ ಶರಣರ ವಚನಗಳನ್ನು, ಕಾಲ ಹಿಂದೆ ಮುಂದೆ ಯಾವುದೇ ಇರಬಹುದು, ಮೊದಲಿರಬಹುದು, ಆಮೇಲಿರಬಹುದು, ಕಾಲದ ಬಗ್ಗೆ ಅಷ್ಟು ವಿಚಾರ ಮಾಡದೆ ಅನುಭವದ ಹೋಲಿಕೆಯನ್ನು ಮಾಡಿ ನೋಡಿದಾಗ ನಿಜವಾಗಿಯೂ ಕೂಡ ಅವನ ಅನುಭವ, ಶಿವಾಚಾರ್ಯರ ಅನುಭವ ಹಾಗೂ ಶಿವಶರಣರ ಅನುಭವಗಳಲ್ಲಿ ಯಾವ ವ್ಯತ್ಯಾಸವೂ ಕೂಡ ಕಂಡುಬರುವುದಿಲ್ಲ. ಏಕೆಂದರೆ ಅನುಭವ ಅನ್ನುವುದು ಎಲ್ಲರಿಗೂ ಸಮಾನವಾಗೇನೇ ಬರುತ್ತದೆ. ನಾವು ನಿದ್ದೆ ಮಾಡಿದಾಗ ಆ ನಿದ್ರೆಯ ಆನಂದದ ಅನುಭವ ರಾಜನಿಗೂ ಬರುತ್ತದೆ. ಅದೇ ರೀತಿ ಒಂದು ಹೆಂಟೆಯ ಮೇಲೆ ಮಲಗಿರುವ ರಂಕನಿಗೂ ಬರುತ್ತದೆ. ಆ ಆನಂದದಲ್ಲಿ ಯಾವ ವ್ಯತ್ಯಾಸವೂ ಕೂಡ ಇರುವುದು ಸಾಧ್ಯವಿಲ್ಲ. ಅನುಭವಗಳನ್ನು ಅಭಿವ್ಯಕ್ತಿ ಮಾಡಬೇಕಾದಾಗ, ಕೆಲವರು ಸಂಸ್ಕೃತ ಭಾಷೆಯಲ್ಲಿ ಮಾಡಿರಬಹುದು, ಕೆಲವರು ಕನ್ನಡ ಭಾಷೆಯಲ್ಲಿ ಮಾಡಿರಬಹುದು. ಇನ್ನು ಬೇರೆ ಬೇರೆ ಪ್ರಾಂತಗಳಲ್ಲಿ ತಮಿಳು, ತೆಲುಗು, ಮರಾಠಿ, ಹಿಂದಿ -ಹೀಗೆ ಬೇರೆ ಬೇರೆ ಭಾಷೆಯಲ್ಲಿ ಮಾಡಿರಬಹುದು.

ಸಾಮಾನ್ಯವಾಗಿ ಕರ್ನಾಟಕದ ವೀರಶೈವರು ತಮ್ಮ ಭಾಷೆ ಅಂದರೆ ಕನ್ನಡ ಎಂದು ಹೇಳುವುದಕ್ಕೆ ಆರಂಭ ಮಾಡಿದ್ದಾರೆ. ಆದರೆ ಕರ್ನಾಟಕದ ಭಾಷೆ ಯಾವುದು ಅಂದ್ರೆ, ಕನ್ನಡ ಎಂದು ಹೇಳಬಹುದು, ಮಹಾರಾಷ್ಟ್ರದ ಭಾಷೆ ಮರಾಠಿ ಅಂತ ಹೇಳಬಹುದು. ಆದರೆ ಧರ್ಮದ ಬಗ್ಗೆ ಹೇಳಬೇಕಾದರೆ ಧರ್ಮ ಒಂದು ಭಾಷೆಗೆ ಸೀಮಿತವಾಗಿಲ್ಲ. ಆ ಧರ್ಮವನ್ನು ಅನೇಕ ಭಾಷೆಗಳಲ್ಲಿ ಅನೇಕ ಜನರು ಅಭಿವ್ಯಕ್ತ ಮಾಡುತ್ತಿರುವಾಗ, ನಾವು ಒಂದೇ ಭಾಷೆಗೆ ಅಂಟಿಕೊಂಡು ಉಳಿದ ಭಾಷೆಗಳನ್ನು ತಿರಸ್ಕಾರ ಮಾಡುವುದಾಗಲಿ ಅಥವಾ ಅವುಗಳ ಬಗ್ಗೆ ಹೇಯ ಭಾವನೆಯನ್ನು ತಾಳುವುದಾಗಲಿ ಸರಿಯಲ್ಲ. ಹಾಗೆ ಮಾಡಿದರೆ ನಾವು ನಮ್ಮ ಜ್ಞಾನದ ಬಾಗಿಲನ್ನು

ನಾವೇ ಮುಚ್ಚಿಕೊಂಡಂತಾಗುತ್ತದೆ. ಆದ್ದರಿಂದ ಯಾವುದೇ ಭಾಷೆಯಿಂದ ಬಂದರೂ ಕೂಡ ಆ ಜ್ಞಾನವನ್ನು ನಾವು ಸ್ವಾಗತ ಮಾಡಿದಾಗ ನಮ್ಮ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ.

ಇಷ್ಟನ್ನು ಈ ಸಂದರ್ಭದಲ್ಲಿ ತಿಳಿಯಪಡಿಸಿದ್ದೇವೆ. ಬೆಳಿಗ್ಗೆ ಅನೇಕ ಚರ್ಚೆಗಳನ್ನು ನಾವೆಲ್ಲಾ ಮಾಡಿದ್ದೇವೆ. ನಮ್ಮ ವಿದ್ವಾಂಸರು ಪ್ರಬಂಧವನ್ನು ಮಂಡಿಸಿ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಸಭೆಯಲ್ಲಿ ಕುಳಿತಿರುವಂಥ ಇತರ ಪಂಡಿತರೂ ಕೂಡ ಎದ್ದು ಉತ್ತರವನ್ನು ಕೊಟ್ಟಿರುವುದನ್ನೂ ಕೂಡ ನಾವೆಲ್ಲಾ ಗಮನಿಸಿದ್ದೇವೆ. ನಾವು ಎಷ್ಟೇ ಕಲಿತಿದ್ದರೂ ಕೂಡ ನಮ್ಮ ಜ್ಞಾನದ ಬಗ್ಗೆ ಅಹಂಕಾರವನ್ನ ಪಟ್ಟುಕೊಳ್ಳದೆ ತಿಳಿದವರಿಂದ ತಿಳಿದುಕೊಳ್ಳುವ ಸದ್ಭಾವನೆಯನ್ನು, ತಿಳಿದಿರುವುದನ್ನು ತಿಳಿಯದೇ ಇರುವವರಿಗೆ ತಿಳಿಸುವಂಥ ತಾಳ್ಮೆಯ ಉದಾರ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ನಾವು ಈ ವಿನಿಮಯದಿಂದ ಸಮಾಜದಲ್ಲಿ ಸಂತುಲನೆಯನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗುತ್ತದೆ.

ಈ ದಿಸೆಯಲ್ಲಿ ಒಂದು ವಿಚಾರ ಬಂತು, ಡಾ|| ಎಸ್.ಎಂ. ವೃಷಭೇಂದ್ರ ಸ್ವಾಮಿಯವರು ತಮ್ಮ ಪ್ರಬಂಧವನ್ನು ಮಂಡಿಸುವಾಗ ಒಂದು ವಿಚಾರವನ್ನು ಹೇಳಿದರು. ವೀರಶೈವ ಸಿದ್ಧಾಂತವನ್ನು ತತ್ವಜ್ಞಾನವನ್ನು ತಿಳಿದುಕೊಳ್ಳಲು ಈಗ ಬಹಳ ಜನ ಬರುತ್ತಾ ಇದ್ದಾರೆ. ಅವರು ಪರಂಪರಾಗತವಾಗಿರುವ ಧರ್ಮದ ಆಚರಣೆಯನ್ನು ಮಾಡಿ ತಿಳಿದುಕೊಳ್ಳಬಹುದೋ ಅಥವಾ ಮಾಡಲಾರದೆಯೇ ತಿಳಿದುಕೊಳ್ಳಲು ಬರುತ್ತದೋ? ಎಂಬ ವಿಚಾರವನ್ನು ಜಿಜ್ಞಾಸೆಗಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಇಲ್ಲಿ ಪರಂಪರಾಗತವಾಗಿ ಇರತಕ್ಕಂಥ ಶಿವ-ಜೀವರ ಐಕ್ಯವನ್ನು ಭೋದಿಸುವಂಥ ಜ್ಞಾನವನ್ನು ಪಡೆಯುವುದೇ ಮನುಷ್ಯ ಜೀವನದ ಮುಖ್ಯವಾಗಿರುವ ಗುರಿ. ನಾವು ಜೀವರಾಗಿ ದುಃಖವನ್ನು ಅನುಭವಿಸುವುದಕ್ಕಿಂತಲೂ ಶಿವಸ್ವರೂಪಿಗಳಾಗಿ ಆನಂದವನ್ನು ಅನುಭವಿಸಬೇಕು, ಎಂಬ ಚಿಂತನೆಯನ್ನು ಸಾಮಾನ್ಯವಾಗಿ ಎಲ್ಲಾ ದಾರ್ಶನಿಕರುಗಳು ಮಾಡಿದ್ದಾರೆ. ಅದಕ್ಕೆ ನಾವು ಮುಕ್ತಿ, ಕೈವಲ್ಯ, ನಿರ್ವಾಣ ಎಂದು ಕರೆಯುತ್ತೇವೆ. ಈ ಮುಕ್ತಿ, ಕೈವಲ್ಯ, ನಿರ್ವಾಣವನ್ನು ಹೇಳುವಂತಹ ಸಿದ್ಧಾಂತಗಳು ಬೇಕಾದಷ್ಟಿವೆ. ಆದರೆ ಪ್ರತಿಯೊಬ್ಬರೂ ಅದನ್ನ ಪಡೆಯಬೇಕಾದರೆ ಲಿಂಗವನ್ನು ಕಟ್ಟಿಕೊಂಡೇ ಪಡೆಯಬೇಕು ಎಂದು ಹೇಳುವುದಕ್ಕೆ ಆಗುವುದಿಲ್ಲ, ಅವರವರ ಸಿದ್ಧಾಂತಕ್ಕನುಸಾರವಾಗಿ ಪಡೆಯಬಹುದು. ಆದರೆ ವೀರಶೈವ ಸಿದ್ಧಾಂತಕ್ಕನುಸಾರವಾಗಿ ಅದನ್ನು ಪಡೆಯಬೇಕಾದಾಗ ನಾವು ಸಂಪ್ರದಾಯಕ್ಕೆ ಬದ್ಧರಾಗಿ ಅವುಗಳನ್ನು ಇಟ್ಟುಕೊಳ್ಳಲೇಬೇಕು ಎಂಬ ಕಟ್ಟಾಚಾರವನ್ನು ನಮ್ಮ ಧರ್ಮದಲ್ಲಿ ಹೇಳಿಕೊಂಡು ಬರುತ್ತಿದ್ದೇವೆ. ಸಾಮಾನ್ಯವಾಗಿ ನಾವು ದೀಕ್ಷಾ ಮಾಡುವ ಕಾಲಕ್ಕೆ ಪ್ರತಿಯೊಬ್ಬರ ಕಡೆಯಿಂದ ಒಂದು ಪ್ರತಿಜ್ಞೆಯನ್ನು ಮಾಡಿಸಿಕೊಳ್ಳುತ್ತೇವೆ. ಅದು ಏನು ಎಂದರೆ, "ಎಲ್ಲಿವರೆಗೆ ನನ್ನ ದೇಹದೊಳಗೆ ಪ್ರಾಣವಿದೆ, ಅಲ್ಲಿವರೆಗೆ ಈ ಇಷ್ಟಲಿಂಗ ಪೂಜಾ ರೂಪವಾದ ನಿತ್ಯಕರ್ಮವನ್ನು ನಾನು ತಪ್ಪದೆ ಮಾಡುತ್ತೇನೆ" ಅನ್ನುವ

ಪ್ರತಿಜ್ಞೆಯನ್ನು ಮಾಡಿಸಿಕೊಂಡು ಅವರಿಗೆ ನಾವು ಲಿಂಗದೀಕ್ಷೆಯನ್ನು ಕೊಟ್ಟು ಮಂತ್ರೋಪದೇಶವನ್ನು ಮಾಡುತ್ತೇವೆ. ನಾವು ಸ್ವತಃ ಲಿಂಗರೂಪವಾಗುವುದೇ ಲಿಂಗಪೂಜೆಯ ಮುಖ್ಯವಾದ ಉದ್ದೇಶ. ಲಿಂಗಪೂಜೆಯನ್ನು ಮಾಡುತ್ತಾ ಮಾಡುತ್ತಾ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಸ್ಥಿತಿಯವರೆಗೆ ಸಾಧನೆ ಮಾಡುತ್ತಾ ಹೋಗಿ ಇದೇ ಜನ್ಮದಲ್ಲಿ ಅರವತ್ತನೆಯ ವಯಸ್ಸಿಗೋ ಅಥವಾ ಎಪ್ಪತ್ತನೆಯ ವಯಸ್ಸಿಗೋ ಆ ಐಕ್ಯಸ್ಥಿತಿಯನ್ನು ಅನುಭವಿಸಿದರೆ ಜೀವನದ ಪ್ರಯೋಜನವು ಪ್ರಾಪ್ತವಾಗುತ್ತದೆ. ಈ ಪ್ರಯೋಜನ ಪ್ರಾಪ್ತಿಯಾದ ಮೇಲೆ ಮತ್ತೆ ನಿತ್ಯಕರ್ಮವಾದ ಇಷ್ಟಲಿಂಗಪೂಜೆಯನ್ನು ಮಾಡಬೇಕೋ ಅಥವಾ ಬೇಡವೋ ಎಂಬ ಒಂದು ಪ್ರಶ್ನೆ ನಮ್ಮ ಎದುರಿಗೆ ನಿಲ್ಲುತ್ತದೆ. ಅದಕ್ಕೆ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಸ್ಪಷ್ಟವಾಗಿ ಉತ್ತರ ಹೇಳಿದ್ದಾರೆ. "ಜ್ಞಾನಾಮೃತೇನ ತೃಪ್ತೋऽಪಿ ಯೋಗೀ ಧರ್ಮಂ ನ ಸಂತ್ಯಜೇತ್" ಎಂದು. ನೀವು ಶಿವೈಕ್ಯದ ಬೋಧರೂಪದ ಆನಂದ, ತೃಪ್ತಿಯನ್ನು ಪಡೆದಿದ್ದರೂ ಕೂಡ ಧರ್ಮವನ್ನು ಬಿಡಬಾರದು. ಧರ್ಮ ಎಂದರೆ 'ಧರ್ಮೋ ಲಿಂಗಾರ್ಚನಾತ್ಮಕಃ' ಎಂದು ಶ್ರೀ ರೇಣುಕರೇ ಅಪ್ಪಣೆ ಕೊಡಿಸಿದ್ದಾರೆ. "ಲಿಂಗವನ್ನು ಪೂಜಿಸುವುದೇ ಧರ್ಮ" ಎಂದು ಹೇಳಿದ್ದಾರೆ. ಆದ್ದರಿಂದ ಲಿಂಗಪೂಜಾ ಮಹಾವ್ರತವನ್ನು ನಮ್ಮ ದೇಹದಲ್ಲಿ ಪ್ರಾಣ ಇರುವವರೆಗೆ ಬಿಡಕೂಡದು ಎಂಬ ಮಾತನ್ನು ಹೇಳುತ್ತಾರೆ. ಸಾಮಾನ್ಯವಾಗಿ ಮೀಮಾಂಸಾ ಶಾಸ್ತ್ರದಲ್ಲಿ ಅನಾವೃಷ್ಟಿಯಾದಾಗ ಮಳೆಗಾಗಿ 'ಕಾರೀರ' ಎಂಬ ಯಾಗವನ್ನು ಮಾಡಬೇಕು ಎಂದು ಹೇಳಿದೆ. ಅದು ಅನೇಕ ದಿನಗಳವರೆಗೆ ನಡೆಯುವಂತಹ ಯಜ್ಞ, ಮಳೆ ಸಕಾಲಕ್ಕೆ ಬರಬೇಕೆನ್ನುವ ಸಂಕಲ್ಪ ಮಾಡಿ ನಾವು ಒಂದು ತಿಂಗಳವರೆಗೆ ಯಜ್ಞ ಮಾಡುವುದಿದ್ದರೆ, ಹದಿನೈದನೇ ದಿನಕ್ಕೆ ಸಾಕಷ್ಟು ಚೆನ್ನಾಗಿ ಮಳೆಯಾಗಿ, ಹೊಳೆ, ಹಳ್ಳ, ಕೆರೆ ಎಲ್ಲಾ ತುಂಬಿ ತುಳುಕುತ್ತವೆ. ಆಗ ಆ ಯಜ್ಞವನ್ನು ಮುಂದೆ ಮಾಡಬೇಕೋ ಅಥವಾ ಮಾಡಬಾರದೋ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಅಲ್ಲಿ ಏನು ಉತ್ತರ ಕೊಟ್ಟಿದ್ದಾರೆಂದರೆ- "ಮಳೆಯ ಪ್ರಾಪ್ತಿಗಾಗಿ ಯಜ್ಞ ಮಾಡಿದ್ದೇವೆ, ಮಳೆ ಬಂದಿದೆ, ಮಳೆ ಪ್ರಾಪ್ತಿಯಾದರೂ ಕೂಡ ಸಂಕಲ್ಪದ ಪೂರ್ತಿಗಾಗಿ ಅದನ್ನು ಸಂಪೂರ್ಣ ಮಾಡಲೇಬೇಕು" ಎಂದು. ಮಳೆಯ ಪ್ರಾಪ್ತಿಗಾಗಿ ಯಜ್ಞವನ್ನು ಮಾಡಿದ್ದರೂ ಹದಿನೈದು ದಿನಗಳಲ್ಲಿ ಮಳೆ ಬಂದಿದ್ದರೂ ಕೂಡ, ಒಂದು ತಿಂಗಳು ಯಜ್ಞ ಮಾಡುವುದಾಗಿ ಸಂಕಲ್ಪ ಮಾಡಿದ್ದರಿಂದ ಒಂದು ತಿಂಗಳ ಕಾಲ ಯಜ್ಞವನ್ನು ಮಾಡಲೇಬೇಕು. ಹಾಗೆ ಶಿವ-ಜೀವೈಕ್ಯದ ಪ್ರಾಪ್ತಿಗಾಗಿ ಶಿವಪೂಜೆಯನ್ನು ಮಾಡುತ್ತೇನೆ ಎಂದು ಸಂಕಲ್ಪ ಮಾಡಿಕೊಂಡು ಈ ಪೂಜಾ ಆರಂಭ ಮಾಡಿದ ಮೇಲೆ, ನಮಗಿನ್ನೂ ಆಯುಷ್ಯ ಇದ್ದಾಗಲೇ ಈ ತತ್ವಜ್ಞಾನ ಪ್ರಾಪ್ತಿಯಾದರೂ ಕೂಡ, ಅದನ್ನು ಮಾಡಬೇಕೋ ಬಿಡಬೇಕೋ ಅನ್ನುವ ಪ್ರಶ್ನೆ ಬಂದಾಗ, ಸಂಕಲ್ಪದ ಪೂರ್ತಿಗಾಗಿ ಮಾಡಲೇಬೇಕೆನ್ನುವುದು ಒಂದು ವಿಚಾರ. ಎರಡನೇ ವಿಚಾರ ಏನೆಂದರೆ ಲೋಕಸಂಗ್ರಹಕ್ಕಾಗಿಯಾದರೂ ಲಿಂಗಪೂಜೆಯನ್ನು ಮಾಡಬೇಕು ಎನ್ನುವುದು. ಒಂದು ವೇಳೆ ದೊಡ್ಡ ದೊಡ್ಡವರು,

ಜ್ಞಾನಿಗಳಾದವರು ಲಿಂಗವನ್ನು ಕಟ್ಟಿಕೊಳ್ಳದೆ ತಿರುಗಾಡಿದರೆ ಏನೂ ತಿಳಿಯದ ಸಾಮಾನ್ಯ ಜನರು ಏನು ವಿಚಾರ ಮಾಡುತ್ತಾರೆಂದರೆ, ಅಂಥವರೇ ಲಿಂಗ ಕಟ್ಟಿಲ್ಲ ಎಂದ ಮೇಲೆ ನಾವ್ಯಾಕೆ ಕಟ್ಟಬೇಕು? ಲಿಂಗಪೂಜೆ ಏಕೆ ಮಾಡಬೇಕು? ಎಂದು. ಅಂತಹ ನಾಸ್ತಿಕ ಭಾವನೆ ಮೂಡಬಾರದು ಎಂಬ ಕಾರಣಕ್ಕಾಗಿ ಲಿಂಗಪೂಜೆಯನ್ನು ಮಾಡಬೇಕು. ಹೊಸದಾಗಿ ಏನೂ ಫಲಪ್ರಾಪ್ತಿಯಿಲ್ಲದಿದ್ದರೂ ಕೂಡ ಲೋಕಸಂಗ್ರಹಕ್ಕಾಗಿ, ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡುವುದಕ್ಕಾಗಿ, ಅವಶ್ಯವಾಗಿ ಲಿಂಗಪೂಜೆಯನ್ನು ಮಾಡಲೇಬೇಕು. ಬ್ರಹ್ಮಸೂತ್ರದ ಮೇಲೆ ಶ್ರೀಕರಭಾಷ್ಯವನ್ನು ಬರೆದಿರುವ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರಕ್ಕೆ ಭಾಷ್ಯವನ್ನು ಬರೆಯುವಂತಹ ಸಮಯದಲ್ಲಿ ಹೇಳಿದ್ದು ಬಹಳ ಮುಖ್ಯ. "ಅಥ" ಎಂದರೆ ಅನಂತರ, ಯಾವುದರ ಅನಂತರ ಬ್ರಹ್ಮ ಜಿಜ್ಞಾಸೆಯನ್ನು ಮಾಡಲು ಅಧಿಕಾರ ಎಂದು ಕೇಳಿದರೆ, ಬೇರೆ ಬೇರೆ ಸಿದ್ಧಾಂತದವರು ವಿವೇಕ, ವೈರಾಗ್ಯ, ಸಮಾಧಿ ಷಟ್ಕಸಂಪತ್ತಿ, ಮುಮುಕ್ಷುತಾ ಎಂಬ "ಸಾಧನಚತುಷ್ಟಯಸಂಪತ್ತ್ಯನಂತರಂ ಬ್ರಹ್ಮಜಿಜ್ಞಾಸಾ ಕರ್ತವ್ಯಾ" ಎಂದು ಅರ್ಥವನ್ನು ಬರೆಯುತ್ತಾರೆ. ಆದರೆ ಶ್ರೀಪತಿ ಪಂಡಿತಾರಾಧ್ಯರು ಅಷ್ಟನ್ನೇ ಬರೆಯದೆ ಇನ್ನೂ ಪೂರ್ವಭಾವಿಯಾಗಿ ಅಷ್ಟಾವರಣ ಸಂಪನ್ನರಾಗಿ ಪಂಚಾಚಾರ ಪರಾಯಣರಾಗಿ, ಅನಂತರ ವಿವೇಕ ವೈರಾಗ್ಯದ ಗುಣಗಳನ್ನು ಪಡೆದುಕೊಂಡು ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆನ್ನುತ್ತಾರೆ. ಕೇವಲ ವಿವೇಕ, ವೈರಾಗ್ಯ, ಕ್ಷಮಾ, ದಮಾದಿ ಷಟ್‌ಕಸಂಪತ್ತಿ, ಮುಮುಕ್ಷುತಾ ಇದ್ದ ಮಾತ್ರಕ್ಕೇನೆ ನಾವು ಲಿಂಗಾಂಗಸಾಮರಸ್ಯದ ಅಧಿಕಾರವನ್ನು ಪಡೆಯಲಾಗುವುದಿಲ್ಲ, ಗುರುವಿನಿಂದ ದೀಕ್ಷೆ ಪಡೆದು ಅಷ್ಟಾವರಣ ಸಂಪನ್ನನಾಗಿರಲೇ ಬೇಕೆನ್ನುವದನ್ನು ನಮ್ಮ ಭಾಷ್ಯಕಾರರು ಪ್ರತಿಪಾದನೆ ಮಾಡಿರುವರು. ಆದ್ದರಿಂದ ವೀರಶೈವರಾಗಿ ಲಿಂಗವನ್ನು ಧರಿಸದೆ ಲಿಂಗಾಂಗ ಸಾಮರಸ್ಯವನ್ನು ಪಡೆಯಲು ಸಾಧ್ಯವಿಲ್ಲ ಎಂಬ ಶಾಸ್ತ್ರೀಯವಾಗಿರುವ ವಿಚಾರವನ್ನ ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇವೆ.

ಈ ಕಾರ್ಯಕ್ರಮದಲ್ಲಿ ಇಂದು ಪ್ರಾತಃಕಾಲ ಕೊಟ್ಟೂರಿನ ಜಗದ್ಗುರು ಸಂಗನಬಸವ ಸ್ವಾಮೀಜಿಯವರು ಕೂಡ ಪಾಲ್ಗೊಂಡು ಬಹಳಷ್ಟು ಸುಂದರವಾದ ವಿಚಾರಗಳನ್ನು ಹೇಳಿದ್ದಾರೆ. ಬಹಳಷ್ಟು ಜನರು ವೀರಶೈವನೇ ಬೇರೆ ಲಿಂಗಾಯತನೇ ಬೇರೆ ಎಂಬ ವಿಚಾರವನ್ನು, ಅಥವ ವೀರಶೈವ ಎಂಬ ಪದವನ್ನು ತೆಗೆದುಹಾಕಿ ಲಿಂಗಾಯತ ಅನ್ನುವುದನ್ನು ಬಳಸುತ್ತಾ ಹೋಗಿ ಎಂಬ ವಿಚಾರವನ್ನು ಕೆಲವರು ಹೇಳುತ್ತಿದ್ದಾರೆ. ಅದಕ್ಕೆ ಹೇಳಬೇಕೆಂದರೆ ವಿವಾದಾಸ್ಪದವಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕಿಂತಲೂ ಸಂವಾದಾತ್ಮಕವಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬರಬೇಕು ಎಂಬ ಮಾತನ್ನು ಹೇಳಬೇಕು. ಒಂದು ವಿಚಾರವನ್ನು ಎಲ್ಲರಿಗೂ ಮಾನ್ಯವಾಗುವ ರೀತಿ ನಾವು ಹೇಳುವುದೇನು ಅಂದರೆ, ಸಾಮಾನ್ಯವಾಗಿ ಧರ್ಮ, ಸಾಹಿತ್ಯ, ಸಂಸ್ಕೃತಿ ಮತ್ತು ಸಿದ್ಧಾಂತ

ಶಬ್ದಗಳನ್ನು ನಾವು ಬಳಸುವ ಕಾಲಕ್ಕೆ ಬೇರೆ ಬೇರೆ ಪದಗಳೆಂದು ಅವುಗಳನ್ನು ಬಳಸದೆ ಧರ್ಮ ಎಂದರೆ ವೀರಶೈವ ಧರ್ಮ ಅಥವಾ ಲಿಂಗಾಯತ ಧರ್ಮ ಎನ್ನಬೇಕು. ವೀರಶೈವ ಲಿಂಗಾಯತ ಧರ್ಮ ಎನ್ನಬಹುದು. ಸಾಹಿತ್ಯ ಎಂದು ಬಳಸುವ ಪ್ರಸಂಗ ಬಂದಾಗ ವೀರಶೈವ ಲಿಂಗಾಯತ ಸಾಹಿತ್ಯ ಎಂದು ಬಳಸಬೇಕೇ ಹೊರತಾಗಿ ಇದು ಆಚಾರ್ಯ ಸಾಹಿತ್ಯ, ಇದು ಶರಣ ಸಾಹಿತ್ಯ ಎಂದು ಬಳಸಲಿಕ್ಕೆ ಹೋಗಬಾರದು. ಆಗ ಒಂದು ಏಕಮತಕ್ಕೆ ನಾವು ಬರಲು ಸಾಧ್ಯವಾಗುತ್ತದೆ. ಇನ್ನು ಸಂಸ್ಕೃತಿ ಎಂದು ಬಳಸುವ ಕಾಲಕ್ಕೆ ವೀರಶೈವ ಲಿಂಗಾಯತ ಸಂಸ್ಕೃತಿ ಎಂದು ಬಳಸಬೇಕೇ ಹೊರತು, ಇದು ಆಚಾರ್ಯ ಸಂಸ್ಕೃತಿ, ಇದು ಶರಣ ಸಂಸ್ಕೃತಿ ಎಂದು ಬಳಸಬಾರದು. ಇನ್ನು ಸಿದ್ಧಾಂತ ಎಂದು ಹೇಳುವ ಕಾಲಕ್ಕೂ ಸಹ ನಾವು ವೀರಶೈವ ಲಿಂಗಾಯತ ಸಿದ್ಧಾಂತ ಎಂದೇ ಬಳಸಬೇಕು. ಇದು ಆಚಾರ್ಯ ಸಿದ್ಧಾಂತ, ಇದು ಶರಣ ಸಿದ್ಧಾಂತ ಎಂದು ಬಳಸುತ್ತಾ ಹೋಗಬಾರದು. ವ್ಯಕ್ತಿ ಪ್ರತಿಷ್ಠೆಯನ್ನು ಬಳಸುತ್ತಾ ಹೋದರೆ, ತತ್ವನಿಷ್ಠೆ ಎಂಬುದು ಕಡಿಮೆಯಾಗುತ್ತಾ ಹೋಗುತ್ತದೆ. ಅದಕ್ಕೆ ಮೊದಲನೇ ಅಡಿಪಾಯ ಏನು ಅಂದರೆ, ಇಂದು ಆಚಾರ್ಯರಾಗಲಿ, ವಿರಕ್ತ ಸ್ವಾಮಿಗಳಾಗಲಿ ಅಥವ ಶರಣ ಸಂಪ್ರದಾಯದ ಯಾವುದೇ ಸ್ವಾಮಿಗಳಾಗಲಿ, ವೀರಶೈವ ಮಠಾಧಿಪತಿಗಳಾಗಲಿ, ಧರ್ಮ, ಸಾಹಿತ್ಯ, ಸಂಸ್ಕೃತಿ ಮತ್ತು ಸಿದ್ಧಾಂತಗಳನ್ನು ಹೇಳುವ ಕಾಲಕ್ಕೆ ಅದರಲ್ಲಿ ವೀರಶೈವ ಲಿಂಗಾಯತ ಪದವನ್ನು ಬಿಟ್ಟು ಬೇರೆ ಪದಗಳನ್ನು ಬಳಸದೇ ಇರುವಂತಹದು ಮೊದಲನೇ ಹೆಜ್ಜೆ. ಆಮೇಲೆ ಮುಂದಿನ ಹೆಜ್ಜೆ ಇಡಲಿಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ನಮ್ಮ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿಯವರು ಎಲ್ಲಾ ತಮ್ಮ ಪಂಗಡದ ಸ್ವಾಮೀಜಿಯವರಿಗೆ ಈ ವಿಷಯವನ್ನ ಹೇಳಲಿ. ಪಂಗಡ ಎಂದರೆ ನಿಮ್ಮದು ಬೇರೆ ನಮ್ಮದು ಬೇರೆ ಎಂಬ ಅರ್ಥವಲ್ಲ, ಆದರೆ, ನಾವು ನಮ್ಮ ಶಿವಾಚಾರ್ಯ ಜನಗಳಿಗೆ ಹೇಳುತ್ತಾ ಬರುತ್ತಾ ಇದ್ದೇವೆ. ನೀವೂ ಕೂಡ ವಿರಕ್ತ ಸ್ವಾಮೀಜಿಯವರಿಗೆ ಹೇಳಿ. ಎಲ್ಲಾದರೂ ಪದಗಳನ್ನು ಬಳಸುವ ಸಂದರ್ಭದಲ್ಲಿ ನಾವು ಶರಣ ಧರ್ಮ, ಶರಣ ಸಂಸ್ಕೃತಿ, ಶರಣ ಸಾಹಿತ್ಯ ಇವೆಲ್ಲಾ ಬಳಸುತ್ತಾ ಇರುವುದರಿಂದ, ಹಾಗಾದರೆ ಆಚಾರ್ಯರು ಎಲ್ಲಿ ಹೋದರು ಎಂಬ ಪ್ರಶ್ನೆ ಏಳುತ್ತದೆ. ಆದ್ದರಿಂದ ಶರಣನೂ ಬೇಡ, ಆಚಾರ್ಯನೂ ಬೇಡ. ವೀರಶೈವ ಎನ್ನುವಂಥ ಸಮಗ್ರ ಪದವನ್ನು ಬಳಸಿದರೆ ಅದರಲ್ಲಿ ಶರಣನೂ ಬರುತ್ತಾನೆ, ಆಚಾರ್ಯನೂ ಬರುತ್ತಾನೆ, ಶಿವನೂ ಬರುತ್ತಾನೆ, ಎಲ್ಲರೂ ಬರುತ್ತಾರೆ. ಅದಕ್ಕೆ ಇದೊಂದು ಮೊದಲನೇ ಹೆಜ್ಜೆಯನ್ನು ನಾವು ಈಗಲೇ ಇಡುವುದು ಸೂಕ್ತ ಎಂದು ನಾವು ಹೇಳುತ್ತೇವೆ.

ಈ ಎರಡು ದಿನಗಳ ಗೋಷ್ಠಿಯಲ್ಲಿ ತಮ್ಮ ಕಾರ್ಯಗಳು ಎಷ್ಟೇ ಇದ್ದರೂ, ಗೋಷ್ಠಿ ನಡೆಸುವುದು, ಚರ್ಚೆ ಮಾಡುವುದು ಕೂಡ ನಮ್ಮದೇ ಕರ್ತವ್ಯ ಎನ್ನುವ ದೃಷ್ಟಿಯಲ್ಲಿ ಅನೇಕ ಹಿರಿಯ ವಿದ್ವಾಂಸರು ಪಾಲ್ಗೊಂಡಿದ್ದಾರೆ. ಪರಡ್ಡಿಯವರು, ಪಂಚಾಕ್ಷರಿ ಹಿರೇಮಠರು, ಸೌದತ್ತಿಮಠ ಅವರು, ಕೋ.ರಂ. ಬಸವರಾಜರು ನಿಬಂಧ ಇಲ್ಲದಿದ್ದರೂ

ಕೂಡ, ನಿತ್ಯ ಚರ್ಚೆಯಲ್ಲಿ ಪಾಲ್ಗೊಂಡು ಬಹಳ ವಿಚಾರಪೂರ್ಣವಾದ ಪ್ರಶ್ನೆಗಳನ್ನು ಕೇಳಿ ಈ ಗೋಷ್ಠಿಗೆ ದೊಡ್ಡ ಮಹತ್ವ ಬರುವಂತೆ ಮಾಡಿದ್ದಾರೆ. ಏನೂ ಪ್ರಶ್ನೇನೇ ಕೇಳದಿದ್ದರೆ, ಅದು ಪ್ರವಚನ ಕೇಳಿ ಹೋದಂತೆ ಆಗುತ್ತದೆ. ಸಮರ್ಪಕವಾದ ಅನೇಕ ಪ್ರಶ್ನೆಗಳನ್ನು ನಮ್ಮ ವಿದ್ವಾಂಸರು ಮಾಡಿದ್ದಾರೆ. ಉತ್ತರವನ್ನು ಎಲ್ಲರೂ ಸೇರಿ ಹುಡುಕುವ ಪ್ರಯತ್ನ ಮಾಡಿದ್ದಾರೆ.

ಬಾಗಲಕೋಟೆಯಲ್ಲಿ ನಡೆದಿರುವ ಈ ವಿಚಾರಗೋಷ್ಠಿ ಈ ಭಾಗದ ಜನರಲ್ಲಿ ಹೊಸ ವಿಚಾರಕ್ರಾಂತಿ ಮೂಡಿಸಿದೆ. ಅದಕ್ಕೆ ಇನ್ನು ಮುಂದೆ ಯಾವುದೇ ವಚನ ಗ್ರಂಥಗಳನ್ನು ಓದುವಾಗ ಅಲ್ಲಿ ಬರುವ ಪ್ರಮಾಣ ಶ್ಲೋಕಗಳನ್ನು ಅವಲೋಕನ ಮಾಡಿದರೆ ಹೇಗೆ ಶರಣರು ಅತ್ಯಂತ ಆದರದಿಂದ ಸರಳ ರೂಪದಿಂದ ಅವುಗಳನ್ನು ಬಳಸಿಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. ಪರಡ್ಡಿಯವರು ಒಂದು ಮಾತು ಹೇಳಿದರು. ಬಹಳಷ್ಟು ಶ್ಲೋಕಗಳನ್ನು (ಸುಮಾರು ೧೯-೨೦) ಒಂದೇ ವಚನದಲ್ಲಿ ಸೇರಿಸಿದ್ದನ್ನು ನೋಡಿದಾಗ ಅವು ಪ್ರಕ್ಷಿಪ್ತವಾಗಿರಬಹುದೇ ಎಂದು ಅವರು ಸಂದೇಹ ವ್ಯಕ್ತ ಮಾಡಿದರು. ಸಂದೇಹದ ಪರಿಹಾರ ಹೇಗೆ ಆಗಬೇಕೆಂದರೆ ಆ ವಚನಗಳು ಸಿಗುವಂತಹ ಬೇರೆ ಬೇರೆ ಎಷ್ಟು ಕಟ್ಟುಗಳು ಸಿಗುತ್ತವೆಯೋ, ಅವೆಲ್ಲವನ್ನು ಮುಂದೆ ಇಟ್ಟುಕೊಂಡು ಎಲ್ಲಾ ವಚನಗಳಲ್ಲಿ ಇದ್ದುದೇ ಆಗಿದ್ದರೆ ಅವು ಅವರು ಉಲ್ಲೇಖಿಸಿದ್ದೇ ಎಂದು ಒಪ್ಪಿಕೊಳ್ಳಬೇಕು. ಒಂದರಲ್ಲಿ ಇದ್ದು ಳರಲ್ಲಿ ಇಲ್ಲದಿದ್ದರೆ, ಅಂದರೆ ಹೆಚ್ಚಿನ ಸಂಖ್ಯೆಯ ಗ್ರಂಥಗಳಲ್ಲಿ ಇಲ್ಲದಿದ್ದರೆ, ಪ್ರಕ್ಷಿಪ್ತ ಎಂದು ಸಂಪಾದನ ಶೈಲಿಯಲ್ಲಿ ನಿರ್ಣಯ ಮಾಡಬೇಕೇ ಹೊರತು ಅದನ್ನು ಹಾಗೇ ಹೇಳಬಾರದು. ಈ ಪ್ರಕ್ಷಿಪ್ತದ ವಿಚಾರಗಳು ಇತ್ತೀಚಿನ ದಿನಮಾನಗಳಲ್ಲಿ ಬಹಳಷ್ಟು ಜನರಲ್ಲಿ ಬರ್‍ತಾ ಇದೆ. ಬಹಳಷ್ಟು ಜನರಲ್ಲಿ ಕಿತ್ತು ಹಾಕುವ ಮತ್ತು ಸೇರಿಸುವ ಪದ್ಧತಿ ಬೆಳೆಯುತ್ತಿದೆ. ಸ್ವಲ್ಪ ಹಳೇ ಕಾಲಕ್ಕೆ ನಾವು ಹೋದರೆ, ಹಿಂದಿನವರು ಬಹಳಷ್ಟು ಪ್ರಾಮಾಣಿಕವಾಗಿ ಪ್ರತಿಲಿಪಿ ಮಾಡುತ್ತಿದ್ದುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಆಗಿನ ಕಾಲಕ್ಕೆ ಮುದ್ರಣ ಸೌಕರ್ಯವಿರಲಿಲ್ಲ. ಆದರೂ ಗ್ರಂಥಗಳನ್ನು ಯಥಾವತ್ತಾಗಿ ಬರೆದು ಕೊಡುವುದೇ ಒಂದು ದೊಡ್ಡ ಪುಣ್ಯ ಎನ್ನುವಂತಹ ಭಾವನೆಯಿಂದ ಬರೆಯುತ್ತಿದ್ದರು.

ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರನ್ನು ಮೊದಲು ಮಾಡಿಕೊಂಡು ಕಾರ್ಯಾಧ್ಯಕ್ಷರನ್ನು ಮೊದಲು ಮಾಡಿಕೊಂಡು, ಎಲ್ಲಾ ಸದಸ್ಯರೂ ಕೂಡ, ಪ್ರತಿಯೊಂದು ಕಾರ್ಯದಲ್ಲಿ ಬಹಳ ಹಿಗ್ಗಿನಿಂದ ಪಾಲ್ಗೊಂಡು ನಮ್ಮ ಅನುಸಂಧಾನ ಸಂಸ್ಥಾನಕ್ಕೆ, ಬಹಳ ದೊಡ್ಡ ಜವಾಬ್ದಾರಿ ಕಾರ್ಯಕ್ರಮಕ್ಕೆ ಸಹಕರಿಸಿದ್ದಾರೆ. ಅವರಿಗೆ ಎಲ್ಲರಿಗೂ ಮಹಾಪೀಠದ ವತಿಯಿಂದ ಮಂಗಳಾಶೀರ್ವಾದವನ್ನು ಮಾಡುತ್ತಿದ್ದೇವೆ.

ಸ ಸ

# ೧. ವೇದಾಗಮಗಳು ಮತ್ತು ಚನ್ನಬಸವಣ್ಣನವರು-೨

-ಡಾ|| ಎಂ. ಶಿವಕುಮಾರ ಸ್ವಾಮಿ

ಚನ್ನಬಸವಣ್ಣನವರ ವಚನಗಳನ್ನು ಅಧ್ಯಯನ ಮಾಡಿದಾಗ ನಮಗೆ ಮೊದಲು ಎದ್ದುಕಾಣುವ ಅಂಶವೆಂದರೆ ಅವರ ತಲಸ್ಪರ್ಶಿಯಾದ ಶಾಸ್ತ್ರಜ್ಞಾನ. ಅವರ ವಚನಗಳಲ್ಲಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆಗೆ ವಿಶೇಷ ಪ್ರಾಧಾನ್ಯವನ್ನು ಕಾಣಬಹುದು. ವಚನಕಾರರಲ್ಲಿ ಅವರನ್ನು 'ಷಟ್‌ಸ್ಥಲಧೀರ' 'ಷಟ್‌ಸ್ಥಲೋದ್ಧಾರಕ'ರೆಂಬ ಬಿರುದುಗಳಿಂದ ಗುರುತಿಸುವುದುಂಟು. ಷಟ್‌ಸ್ಥಲ ಸಿದ್ಧಾಂತದ ಅಂಗವಾಗಿಯೇ ಬರುವ ಅಷ್ಟಾವರಣಗಳು ಮತ್ತು ಪಂಚಾಚಾರಗಳ ಬಗ್ಗೆ ಅವರ ವಚನಗಳು ಶಾಸ್ತ್ರಗರ್ಭಿತವಾಗಿರುವುದರೊಂದಿಗೆ ಸ್ವಾನುಭವದಿಂದ ಪುಷ್ಟವಾದ ವಿಚಾರವನ್ನೂ ಒಳಗೊಂಡಿವೆ. ಅವರಿಗೆ ವೇದಾಗಮಗಳು ಕರತಲಾಮಲಕವಾಗಿರುವಂತೆ ಕಂಡುಬರುತ್ತದೆ. ವೇದಗಳ ಸಂಹಿತೆಗಳು ಮತ್ತು ವೇದಾಂತವೆಂದು ಕರೆಯಲಾಗುವ ಉಪನಿಷತ್ತುಗಳನ್ನು ತಾವು ಪ್ರತಿಪಾದಿಸುವ ವೀರಶೈವ ತತ್ತ್ವವಿಚಾರದ ಸಮರ್ಥನೆಗಾಗಿ ಉದಾಹರಿಸಿದ್ದಾರೆ. ಶೈವಾಗಮಗಳ ಪ್ರಮಾಣ ಶ್ಲೋಕಗಳಂತೂ ಅವರ ವಚನಗಳಲ್ಲಿ ಹೇರಳವಾಗಿ ಬಂದಿವೆ. ಅವರ ವಚನಗಳಲ್ಲಿ ಹೆಚ್ಚಿನವು ಶೈವಾಗಮಗಳಿಂದ ಭಟ್ಟಿಯಿಳಿಸಿದ ಪಡಿಯಚ್ಚುಗಳಂತೆ ಕಂಡುಬರುತ್ತವೆ. ಒಟ್ಟಿನಲ್ಲಿ ಅವರ ವಚನಗಳ ಮೇಲೆ ವೇದಾಗಮಗಳ ಪ್ರಭಾವವು ದಟ್ಟವಾಗಿದೆ. ಅದರ ವಿಶೇಷ ಅಧ್ಯಯನವು ಅತ್ಯಂತ ಆವಶ್ಯಕವಾಗಿದೆ. ಪ್ರಸ್ತುತ ಲೇಖನದಲ್ಲಿ ಕೆಲವು ಪ್ರಮುಖ ಅಂಶಗಳನ್ನು ಮಾತ್ರ ಪ್ರತಿಪಾದಿಸಲಾಗಿದೆ.

**ವೇದಗಳ ಪ್ರಭಾವ**

ವೇದಗಳ ಪ್ರಭಾವವನ್ನು ಕೆಳಗಿನ ಸಂದರ್ಭಗಳಲ್ಲಿ ಗುರುತಿಸಬಹುದು:

೧. ಪರಮಾತ್ಮನು ಲೋಕಗಳನ್ನು ಸೃಷ್ಟಿಸಿದ. ರುದ್ರಾದಿಗಳು ಪರಮಾತ್ಮನ ಮುಖ ಮುಂತಾದವುಗಳಿಂದ ಜನಿಸಿದರು ಎಂದು ವರ್ಣಿಸಿರುವ ಕೆಳಗೆ ಕೊಟ್ಟ ವಚನವನ್ನು ನೋಡಿರಿ:

ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ, ಜಂಘೆಯಲ್ಲಿ ಅಜಜನನವು
ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯ ಜನನವು
ಮುಖದಲಗ್ನಿ, ಪ್ರಾಣದಲ್ಲಿ ವಾಯು, ನಾಭಿಯಲ್ಲಿ ಅಂತರಿಕ್ಷ ಜನನವು

ಶಿರದಲುದಯ ತೆತ್ತೀಸಕೋಟಿ ದೇವತೆಗಳು.
ಪಾದತಳದಲ್ಲಿ ಭೂಮಿ ಜನನವು, ಶ್ರೋತ್ರದಲ್ಲಿ ದಶದಿಕ್ಕುಗಳು
ಇವೆಲ್ಲವನ್ನು ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಿತಮಹಿಮನು.
ಬ್ರಾಹ್ಮಣೋಽಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ।
ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ॥
ಚಂದ್ರಮಾ ಮನಸೋ ಜಾತಃ ಚಕ್ಷೋಃ ಸೂರ್ಯೋ ಅಜಾಯತ।
ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ॥
ನಾಭ್ಯಾ ಆಸೀದಂತರಿಕ್ಷಂ ಶಿರ್ಷ್ಣೋ ದ್ಯೌಃ ಸಮವರ್ತತ।
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ ತಥಾಲೋಕಾನಕಲ್ಪಯನ್॥

ಇಂತೆಂದುದಾಗಿ,

ಸಾಸಿರ ಶಿರ, ಸಾಸಿರ ಕಣ್ಣು ಸಾಸಿರ ಕೈ, ಸಾಸಿರ ಪಾದ,
ಸಾಸಿರ ಸನ್ನಿಹಿತ ನಮ್ಮ ಕೂಡಲ ಚನ್ನಸಂಗಯ್ಯ[೧]

ಇಲ್ಲಿ ಉಲ್ಲೇಖಿಸಲ್ಪಟ್ಟ ಮಂತ್ರಗಳು ಋಗ್ವೇದದ ಪುರುಷಸೂಕ್ತದಿಂದ[೨] ಉದಾಹರಿಸಲ್ಪಟ್ಟಿವೆ. ಮುಖದಿಂದ ಬ್ರಾಹ್ಮಣ, ಬಾಹುವಿನಿಂದ ರಾಜನ್ಯ(ಕ್ಷತ್ರಿಯ), ತೊಡೆಗಳಿಂದ ವೈಶ್ಯ ಮತ್ತು ಪಾದಗಳಿಂದ ಶೂದ್ರನು ಜನಿಸಿದನು ಎಂದು ಪುರುಷಸೂಕ್ತದ ಮಂತ್ರದಲ್ಲಿ ಹೇಳಿದೆ. ಅದನ್ನೇ ಚನ್ನಬಸವಣ್ಣನವರು ಮುಖದಿಂದ ರುದ್ರನು, ಬಾಹುವಿನಿಂದ ವಿಷ್ಣುವು, ತೊಡೆಗಳಿಂದ ಬ್ರಹ್ಮನು ಮತ್ತು ಪಾದಗಳಿಂದ ಇಂದ್ರನು ಹುಟ್ಟಿದರು ಎಂದು ಹೇಳಿ ರುದ್ರನು ಬ್ರಾಹ್ಮಣ, ವಿಷ್ಣುವು ಕ್ಷತ್ರಿಯ, ಬ್ರಹ್ಮನು ವೈಶ್ಯ ಮತ್ತು ಇಂದ್ರನು ಶೂದ್ರನೆಂಬ ವಿಚಾರವನ್ನು ವ್ಯಕ್ತಗೊಳಿಸಿದ್ದಾರೆ. ಚಂದ್ರನು ಮನಸ್ಸಿನಿಂದ, ಸೂರ್ಯನು ಚಕ್ಷುಷ್‌ನಿಂದ, ಮುಖದಿಂದ ಅಗ್ನಿ, ವಾಯು ಪ್ರಾಣದಿಂದ, ನಾಭಿಯಿಂದ ಅಂತರಿಕ್ಷ, ಇವು ಪುರುಷಸೂಕ್ತದಲ್ಲಿ ಬಂದ ವಿಷಯಗಳಿಗೆ ಸಂವಾದಿಯಾಗಿವೆ. ಶಿರಸ್ಸಿನಿಂದ ದ್ಯುಲೋಕ ಉತ್ಪನ್ನವಾಯಿತು (ಶಿರ್ಷ್ಣೋಃ ದ್ಯೌಃ ಸಮವರ್ತತ) ಎಂದು ಪುರುಷಸೂಕ್ತದಲ್ಲಿ ಬಂದಿದ್ದರೆ ಚನ್ನಬಸವಣ್ಣನವರು 'ಶಿರದಲುದಯ ತೆತ್ತೀಸಕೋಟಿ ದೇವತಾದಿಗಳು' ಎಂದು ಹೇಳಿದ್ದಾರೆ. 'ಪಾದತಳದಲ್ಲಿ ಭೂಮಿ ಜನನವು, ಶ್ರೋತ್ರದಲ್ಲಿ ದಶದಿಕ್ಕುಗಳು' ಎಂಬ ಅಂಶಗಳೂ ಪುರುಷಸೂಕ್ತದ ಅಂಶಗಳಿಗೆ ಸಂವಾದಿಯಾಗಿವೆ. 'ಸಾಸಿರ ಶಿರ' ಮುಂತಾದ ಮಾತುಗಳು ಪುರುಷಸೂಕ್ತದ "ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್"[೩] ಎಂಬ ವಾಕ್ಯಗಳಿಗೆ ಸಂವಾದಿಯಾಗಿವೆ.

---

೧. ಚನ್ನಬಸವಣ್ಣನವರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧, ವಚನ ಸಂಖ್ಯೆ ೮.

೨. ಋಗ್ವೇದ, ೧೦.೯೦. ೧೨-೧೪.

೩. ಅದೇ, ೧೦.೯೦.೧

೨. ಪ್ರಾಣಲಿಂಗಿಸ್ಥಲದಲ್ಲಿ ಯೋಗದ ಪ್ರಕ್ರಿಯೆಯನ್ನು ವರ್ಣಿಸುವ ಸಂದರ್ಭದಲ್ಲಿ[೪] ಭ್ರೂಮಧ್ಯದ (ಎರಡು ಹುಬ್ಬುಗಳ ಮಧ್ಯಭಾಗ) ಎರಡು ದಲ ಕಮಲದ ಮೇಲೆ ಇರುವ ಜೀವಾತ್ಮ-ಪರಮಾತ್ಮರ ಸಂಬಂಧ ರಹಸ್ಯವನ್ನು ತಿಳಿಸಲು ಮೂಲತಃ ಋಗ್ವೇದದ ಮಂತ್ರವಾಗಿದ್ದು ಉಪನಿಷತ್ತುಗಳಲ್ಲಿ ಬರುವ ಈ ಮಂತ್ರವನ್ನು ಚನ್ನಬಸವಣ್ಣನವರು ಉಲ್ಲೇಖಿಸಿದ್ದಾರೆ:

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋಽಭಿಚಾಕಶೀತಿ॥[೫]

ಎರಡು ಹಕ್ಕಿಗಳು, ಅವಳಿಗಳು, ಮಿತ್ರರು, ಒಂದೇ ಮರವನ್ನು ಆಶ್ರಯಿಸಿವೆ. ಅವುಗಳಲ್ಲಿ ಒಂದು ರುಚಿಯಾದ ಪಿಪ್ಪಲ (ಅರಳಿ ಮರದ) ಹಣ್ಣನ್ನು ಸವಿಯುತ್ತಾ ಇದೆ. ಇನ್ನೊಂದು ಏನನ್ನೂ ಸವಿಯದೆ ವೀಕ್ಷಿಸುತ್ತಾ ಇದೆ.

೩. ಅದೇ ಪ್ರಾಣಲಿಂಗಿಸ್ಥಲದ ಒಂದು ವಚನದಲ್ಲಿ[೬] ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳ ಸ್ಥಾನ, ಮಹಾಭೂತ, ವಕ್ತ್ರ, ಪೂಜಾರಿ, ತೇಜ, ಲಿಂಗ ಮತ್ತು ಬೀಜಾಕ್ಷರಗಳ ವಿವರಗಳನ್ನು ಕೊಟ್ಟು, ಚನ್ನಬಸವಣ್ಣನವರು ಬ್ರಹ್ಮರಂಧ್ರದಲ್ಲಿನ ಬ್ರಹ್ಮಚಕ್ರ, ಅದಕ್ಕೆ ಸಂಬಂಧಿಸಿದ ಚಂದ್ರನೆಂಬ ಮಹಾಭೂತ, ಲಿಂಗವಕ್ತ್ರ, ಪರಮೇಶ್ವರನೆಂಬ ಪೂಜಾರಿ, ಮಹಾಜ್ಯೋತಿರ್ವರ್ಣದ ತೇಜ, ಬಾಲ ಅನಂತಕೋಟಿ ಸೂರ್ಯಪ್ರಕಾಶ, ನಿರಾಮಯಲಿಂಗ, ಪ್ರಣವವೆಂಬ ಬೀಜಾಕ್ಷರ ಇತ್ಯಾದಿ ವಿವರಗಳಿಗೆ ಸಂವಾದಿಯಾಗಿ ಈ ಮಂತ್ರವನ್ನು ಉಲ್ಲೇಖಿಸಿದ್ದಾರೆ:

ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ
ವಿಶ್ವತೋಬಾಹುರುತ ವಿಶ್ವತಃಪಾತ್।
ಸಂಬಾಹುಭ್ಯಾಂ ಧಮತಿ ಸ ಪತತ್ರೈಃ
ದ್ಯಾವಾಭೂಮೀ ಜನಯನ್ ದೇವ ಏಕಃ॥[೭]

ಎಲ್ಲೆಡೆಯೂ ಕಣ್ಣು, ಎಲ್ಲೆಡೆಯೂ ಮುಖ, ಎಲ್ಲೆಡೆಯೂ ಬಾಹು, ಎಲ್ಲೆಡೆಯೂ ಪಾದವುಳ್ಳ ಪರಮಾತ್ಮನು ತನ್ನ ಬಾಹುಗಳಿಂದ ಮನುಷ್ಯರು ಮುಂತಾದವರನ್ನು ಸಂಯೋಜಿಸುತ್ತಾನೆ, ಪಾದಗಳಿಂದ ಸಂಯೋಜಿಸುತ್ತಾನೆ. ಏಕಮೇವಾದ್ವಿತೀಯನಾದ ಆ ದೇವನು ಭೂಮಿ-ಆಕಾಶಗಳನ್ನು ನಿರ್ಮಿಸಿದನು. ಇದನ್ನೇ ಚನ್ನಬಸವಣ್ಣನವರು 'ಗುರುವಿನ ಬೆಳಗು' ಎಂದು ಕರೆದು ಗುರುವಿನ ಕೃಪೆಯಿಂದ ದೊರೆತ ಜ್ಞಾನವೆಂದು

---

೪. ನೋಡಿ- ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೧೦೪೦

೫. ಋಗ್ವೇದ, ೧.೧೬೪.೨೦; ಮುಂಡಕೋಪನಿಷತ್, ೩.೧.೧; ಶ್ವೇತಾಶ್ವತರೋಪನಿಷತ್, ೪.೬.

೬. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೧೦೬೮.

೭. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೧೪೩೫.

ಸೂಚಿಸುತ್ತಾರೆ. ಅದನ್ನು ಸಾಕ್ಷಾತ್ಕರಿಸುವುದೇ ಯೋಗದ ಗುರಿಯೆಂದು ಈ ವಚನದ ತಾತ್ಪರ್ಯ.

೪. ಐಕ್ಯಸ್ಥಲದ ಒಂದು ವಚನದಲ್ಲಿ[೮] ಲಿಂಗದೇವನ ಮಹಿಮೆಯನ್ನು ಶ್ರುತಿಗಳು ಕಾಣಲರಿಯವು ಎಂಬುದನ್ನು ಶ್ರುತಿಯೊಂದು ಹೇಳಿದ ಪರಿಯನ್ನು ತಿಳಿಸಿದ್ದಾರೆ:

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ।
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ॥[೯]

ಅಲ್ಲಿಗೆ ತಲುಪಲಾಗದೆ ಮನಸ್ಸಿನೊಂದಿಗೆ ಮಾತೂ ಹಿಂದಿರುಗುತ್ತದೆ. ಬ್ರಹ್ಮಾನಂದವನ್ನು ತಿಳಿದವನು ಯಾವುದಕ್ಕೂ ಹೆದರುವುದಿಲ್ಲ. ಅದನ್ನೇ ಚನ್ನಬಸವಣ್ಣನವರು 'ತುದಿಪದಾರ್ಥ'ವೆಂದು ಕರೆದು ಅದಕ್ಕೆ 'ಪರವಿಲ್ಲ'ವೆಂದು ಕೂಡಲಚನ್ನಸಂಗನ ನಿಲವನ್ನು ಸೂಚಿಸಿದ್ದಾರೆ.

೫. ಮಾಹೇಶ್ವರ ಸ್ಥಲದ ವಚನವೊಂದರಲ್ಲಿ[೧೦] ಶಿವನಲ್ಲದೆ ಮತ್ತೆ ದೈವವಿಲ್ಲೆಂಬುದು ವೇದ ಎಂದು ಹೇಳಿ ಚನ್ನಬಸವಣ್ಣನವರು ಅದನ್ನು ಸಮರ್ಥಿಸಲು ಋಗ್ವೇದದ ಮಂತ್ರವೊಂದನ್ನು ಉಲ್ಲೇಖಿಸಿದ್ದಾರೆ. ಅದು ಹೀಗಿದೆ:

ಆ ವೋ ರಾಜಾನಮಧ್ವರಸ್ಯ ರುದ್ರಂ ಹೋತಾರಂ ಸತ್ಯಂ ಯಜುಷಂ ರೋದಸ್ಯೋಃ।
ಅಗ್ನಿಂ ಪುರಾ ತನಯಿತ್ನೋರಚಿತ್ತಾತ್ ಹಿರಣ್ಯರೂಪಮವಸೇ ಶೃಣುಧ್ವಮ್॥[೧೧]

೬. ಪ್ರಸಾದಿಸ್ಥಲದ ಒಂದು ವಚನದಲ್ಲಿ[೧೧(ಅ)] 'ನಿತ್ಯಲಿಂಗಾರ್ಚನೆಯ ಮಾಡಬಲ್ಲಾತನೇ ಶೀಲವಂತನಯ್ಯ. ಅವನ ಶ್ರೀಪಾದವನು ಹಸ್ತವನೆತ್ತಿ ಹೊಗಳುತಿರ್ದವು ವೇದಂಗಳು' ಎಂದು ಹೇಳಿ ಈ ಮಂತ್ರವನ್ನು ಚನ್ನಬಸವಣ್ಣನವರು ಉಲ್ಲೇಖಿಸಿದ್ದಾರೆ:

ಓಂ ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ।
ಅಯಂ ಮೇ ವಿಶ್ವಭೇಷಜಃ ಅಯಂ ಶಿವಾಭಿಮರ್ಶನಃ॥[೧೧(ಆ)]
ಅಯಂ ಮಾತಾ ಅಯಂ ಪಿತಾ.....॥[೧೧(ಇ)]

---

೮. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೧೪೩೫.

೯. ತೈತ್ತಿರೀಯೋಪನಿಷತ್, ೨.೯.

೧೦. ಚನ್ನಬಸವಣ್ಣನವರ ವಚನಗಳು, ಹೆಚ್ಚಿನ ವಚನ ಸಂಖ್ಯೆ ೧೩.

೧೧. ಋಗ್ವೇದ, ೪.೩.೧.

೧೧(ಅ). ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೫೭೬.

೧೧(ಆ). ಋಗ್ವೇದ, ೧೦.೬೦.೧೨.

೧೧(ಇ). ಅದೇ, ೧೦.೬೦.೭.

ಅಯಂ ಭಗವಾನ್=ಈ ಲಿಂಗರೂಪ ಸದಾಶಿವನು, ಮೇ ಹಸ್ತಃ=ನನ್ನ ಹಸ್ತದಲ್ಲಿ ವಿರಾಜಮಾನನಾಗಿದ್ದಾನೆ. ಅಯಂ=ಈ ಲಿಂಗವು, ಮೇ=ನನಗೆ, ಭಗವತ್ತರಃ= ಸರ್ವೋತ್ಕೃಷ್ಟವಾದ ಐಶ್ವರ್ಯವನ್ನು ಕೊಡುವವನು. ಅಯಂ=ನನ್ನ ಕೈಯಲ್ಲಿ ವಿರಾಜಿಸುತ್ತಿರುವ ಲಿಂಗವು, ಮೇ=ನನಗೆ, ವಿಶ್ವಭೇಷಜಃ=ಸಂಪೂರ್ಣ ಭವರೋಗದ ಔಷಧ. ಅಯಂ=ಅದೇ, ಶಿವಾಭಿಮರ್ಶನಃ=ಎಲ್ಲಾ ಮಂಗಲಗಳನ್ನು ಉಂಟು ಮಾಡುವಂತಹನು. ಅಯಂ=ಅದೇ, ಮಾತಾ=ತಾಯಿಯಂತೆ ವಾತ್ಸಲ್ಯಯುಕ್ತ, ಅಯಂ=ಅದೇ, ಪಿತಾ=ತಂದೆಯಂತೆ ರಕ್ಷಿಸುವದು. ಈ ವೇದ ಪ್ರಮಾಣದಿಂದ ಲಿಂಗಾರ್ಚನೆ ಮಾಡುವವನೇ 'ಸಂಬಂದಿಯೆನಿಸಿಕೊಳಬಲ್ಲನಯ್ಯಾ' ಎಂಬುದರ ಸಮರ್ಥನೆಯಿದೆ. ಈ ಮಂತ್ರವನ್ನು ವೀರಶೈವ ಪರಂಪರೆಯಲ್ಲಿ ಲಿಂಗಧಾರಣೆಯ ವೇದ ಮೂಲತ್ವವನ್ನು ಸಮರ್ಥಿಸಲು ಉಲ್ಲೇಖಿಸಲಾಗುತ್ತದೆ.

**ಚನ್ನಬಸವಣ್ಣನವರು ಮತ್ತು ಶೈವಾಗಮಗಳು:**

ಚನ್ನಬಸವಣ್ಣನವರು ಶೈವಾಗಮಗಳನ್ನು ಆಳವಾಗಿ ಅಧ್ಯಯನ ಮಾಡಿದವರು. ಈ ವಿಷಯ ಅವರ ವಚನಗಳಿಂದ ಸಿದ್ಧವಾಗುತ್ತದೆ. ಪ್ರಸ್ತುತ ಕೆಲವು ಪ್ರಮುಖ ಸಂದರ್ಭಗಳನ್ನು ಉಲ್ಲೇಖಿಸಿ ಆ ವಿಷಯವನ್ನು ವಿಶದೀಕರಿಸಲಾಗುವುದು. ಷಟ್‌ಸ್ಥಲ ಮಾರ್ಗ, ಅದರಲ್ಲಿಯೇ ಬರುವ ಅಷ್ಟಾವರಣ ಮತ್ತು ಪಂಚಾಚಾರಗಳ ವಿಷಯಕ್ಕೆ ಹಾಗೂ ವೀರಶೈವ ತತ್ತ್ವ ವಿಚಾರಕ್ಕೆ ಸಂಬಂಧಿಸಿದ ಚನ್ನಬಸವಣ್ಣನವರ ವಚನಗಳಲ್ಲಿ ಶೈವಾಗಮಗಳ ಪ್ರಭಾವ ಎಷ್ಟು ದಟ್ಟವಾಗಿದೆ ಎಂಬುದನ್ನು ತೋರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

**೧. ವೀರಶೈವ ದೀಕ್ಷೆ**

ವೀರಶೈವ ದೀಕ್ಷೆಗೆ ಅರ್ಥವತ್ತಾದ ನಿಷ್ಪತ್ತಿಯನ್ನು ಶೈವಾಗಮಗಳು ಕೊಟ್ಟಿವೆ:

**ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಮ್।**
**ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ॥**[೧೨]

**ದೀಯತೇ ಲಿಂಗಸಂಬಂಧಃ ಕ್ಷೀಯತೇ ಕರ್ಮಸಂಚಯಃ।**
**ದೀಯತೇ ಕ್ಷೀಯತೇ ಸಾಕ್ಷಾತ್ ಯಯಾ ದೀಕ್ಷೇತಿ ಕಥ್ಯತೇ॥**[೧೩]

ಲಿಂಗಸಂಬಂಧವನ್ನು ನೀಡಲಾಗುತ್ತದೆ (ದೀಯತೇ) ಆಣವ-ಮಾಯೀಯ-ಕಾರ್ಮಿಕವೆಂಬ ಮೂರು ಮಲಗಳು ನಾಶಗೊಳಿಸಲ್ಪಡುತ್ತವೆ (ಕ್ಷೀಯತೇ). ಹೀಗೆ 'ದೀಯತೇ' (ನೀಡಲ್ಪಡುತ್ತದೆ) ಮತ್ತು 'ಕ್ಷೀಯತೇ' (ನಾಶಗೊಳಿಸಲ್ಪಡುತ್ತದೆ) ಎಂಬ

---

೧೨. ಕಾರಣಾಗಮ, ಉತ್ತರ ಭಾಗ, ಕ್ರಿಯಾಪಾದ, ೧.೧೨.

೧೩. ಸೂಕ್ಷ್ಮಾಗಮ, ಉತ್ತರ ಭಾಗ, ಕ್ರಿಯಾಪಾದ, ೮.೧೧.

ಕಾರಣದಿಂದ ಈ ಸಂಸ್ಕಾರಕ್ಕೆ 'ದೀಕ್ಷಾ' ಎಂದು ಸಾರ್ಥಕ ನಾಮಧೇಯ. ಮೇಲೆ ಕೊಟ್ಟ ಎರಡು ಆಗಮ ಪ್ರಮಾಣಗಳಲ್ಲಿ ಮೊದಲನೆಯದನ್ನು ಚನ್ನಬಸವಣ್ಣನವರು ಹೀಗೆ ಉಲ್ಲೇಖಿಸಿದ್ದಾರೆ:

ದೀಯತೇ ಜ್ಞಾನಸಂಬಂಧಃ ಕ್ಷೀಯತೇ ಚ ಮಲತ್ರಯಮ್।
ದೀಯತೇ ಕ್ಷೀಯತೇ ಯೇನ ಸಾ ದೀಕ್ಷೇತಿ ನಿಗದ್ಯತೇ॥[೧೪]

('ಲಿಂಗಸಂಬಂಧಃ' ಎಂಬುದಕ್ಕೆ 'ಜ್ಞಾನಸಂಬಂಧ' ಎಂದು ಮತ್ತು 'ಯಸ್ಮಾತ್' ಎಂಬುದಕ್ಕೆ ಬದಲಾಗಿ 'ಯೇನ' ಎಂದು ಪಾಠಾಂತರಗಳಿವೆ). 'ಯಾವ ಕುಲವಾದಡೇನು ದೇವನೊಲಿದಾತನೆ ಕುಲಜ' ಎಂಬ ಮಾತಿಗೆ ಸಮರ್ಥನೆಯಾಗಿ ಇದು ಬಂದಿದೆ.

## ೨. ದೀಕ್ಷಾ ಪ್ರಕಾರಗಳು

ದೀಕ್ಷೆಯು ಮೂರು ವಿಧ- ವೇಧಾದೀಕ್ಷೆ, ಮಂತ್ರದೀಕ್ಷೆ ಮತ್ತು ಕ್ರಿಯಾದೀಕ್ಷೆ ಎಂದು ಕಾರಣಾಗಮವು ಅದನ್ನು ಹೇಳುತ್ತದೆ:

ಸಾ ದೀಕ್ಷಾ ಪರಮಾ ಶೈವೀ ತ್ರಿಧಾ ಭವತಿ ನಿರ್ಮಲಾ।
ಏಕಾ ವೇಧಾತ್ಮಿಕಾ ಸಾಕ್ಷಾದನ್ಯಾ ಮಂತ್ರಾತ್ಮಿಕಾ ಮತಾ॥
ಕ್ರಿಯಾತ್ಮಿಕಾ ಪರಾ ಕಾಚಿದೇವಮೇವ ತ್ರಿಧಾ ಭವೇತ್॥[೧೫]

ಈ ಮೂರೂ ದೀಕ್ಷೆಗಳ ಸ್ವರೂಪವನ್ನು ಹೀಗೆ ವಿವರಿಸಲಾಗಿದೆ:

ಹಸ್ತಮಸ್ತಕಸಂಯೋಗಾದ್ ದೃಷ್ಟೇರ್ವೇಧೇತಿ ಕೀರ್ತ್ಯತೇ।
ಗುರುಣೋದೀರಿತಾ ಕರ್ಣೇ ಸಾ ಹಿ ಮಂತ್ರಾತ್ಮಿಕಾ ಭವೇತ್॥
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್॥[೧೬]

ಗುರುವಿನ ಅನುಗ್ರಹ ಹಸ್ತವು ಶಿಷ್ಯನ ಮಸ್ತಕದೊಂದಿಗೆ ಸಂಯೋಗ ಹೊಂದಿ ಕೃಪಾಕಟಾಕ್ಷ ಬೀರಿ ಶಿವಭಾವವನ್ನು ಶಿಷ್ಯನಲ್ಲಿ ಸಮಾವೇಶಗೊಳಿಸುವುದು ವೇಧಾದೀಕ್ಷೆ. ಗುರುವು ಶಿಷ್ಯನ ಕಿವಿಯಲ್ಲಿ ಪಂಚಾಕ್ಷರೀ (ಓಂಕಾರದೊಂದಿಗೆ ಷಡಕ್ಷರೀ) ಮಂತ್ರವನ್ನು ಉಪದೇಶ ಮಾಡುವುದು ಮಂತ್ರೀ ದೀಕ್ಷೆ. ಕುಂಡ-ಮಂಡಲಾದಿಗಳನ್ನು ರಚಿಸಿ ಕಲಶಗಳನ್ನು ಸ್ಥಾಪನೆ ಮಾಡಿ ಸಂಸ್ಕಾರಕ್ಕೊಳಗಾದ ಲಿಂಗವನ್ನು ಶಿಷ್ಯನ ಕೈಯಲ್ಲಿ ಗುರುವು ನೀಡುವುದೇ ಕ್ರಿಯಾದೀಕ್ಷೆ.

---

೧೪. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೫೮೪.

೧೫. ಕಾರಣಾಗಮ, ಉತ್ತರ ಭಾಗ, ಕ್ರಿಯಾಪಾದ ೧.೧೩; ಶ್ರೀ ಸಿದ್ಧಾಂತ ಶಿಖಾಮಣಿ, ೬.೧೨ನ್ನೂ ನೋಡಿರಿ.

೧೬. ಕಾರಣಾಗಮ, ಉತ್ತರ ಭಾಗ, ಕ್ರಿಯಾಪಾದ, ೧.೧೪; ಶ್ರೀ ಸಿದ್ಧಾಂತ ಶಿಖಾಮಣಿ, ೬.೧೩-೧೫ನ್ನೂ ನೋಡಿರಿ.

ಇವುಗಳಲ್ಲಿ ಒಂದೊಂದೂ ಏಳೇಳು ದೀಕ್ಷಾಸಂಸ್ಕಾರಗಳ ಸಮುದಾಯ. ವೇಧಾದೀಕ್ಷೆಯಲ್ಲಿ ಸಮಯ ದೀಕ್ಷೆ, ನಿಃಸಂಸಾರ ದೀಕ್ಷೆ, ನಿರ್ವಾಣ ದೀಕ್ಷೆ, ತತ್ತ್ವದೀಕ್ಷೆ, ಅಧ್ಯಾತ್ಮದೀಕ್ಷೆ, ತತ್ತ್ವ ವಿಶೋಧಿನೀ ದೀಕ್ಷೆ ಮತ್ತು ತತ್ತ್ವಭೋದ ದೀಕ್ಷೆಯೆಂದು ಏಳು ವಿಧ. ಮಂತ್ರದೀಕ್ಷೆಯಲ್ಲಿ ಏಕಾಗ್ರಮತಿ ದೀಕ್ಷೆ, ದೃಢವ್ರತ ದೀಕ್ಷೆ, ಪಂಚೇಂದ್ರಿಯಾರ್ಪಣ ದೀಕ್ಷೆ, ಅಹಿಂಸಾದೀಕ್ಷೆ, ಲಿಂಗನಿಷ್ಠಾದೀಕ್ಷೆ, ಲಿಂಗಮನೋಲಯ ದೀಕ್ಷೆ ಮತ್ತು ಸದ್ಯೋಮುಕ್ತಿ ದೀಕ್ಷೆಯೆಂದು ಏಳು ಪ್ರಕಾರ. ಕ್ರಿಯಾದೀಕ್ಷೆಯಲ್ಲಿ ಆಜ್ಞಾದೀಕ್ಷೆ, ಉಪಮಾದೀಕ್ಷೆ, ಕಲಶಾಭಿಷೇಕ ದೀಕ್ಷೆ, ಸ್ವಸ್ತಿಕಾರೋಹಣ ದೀಕ್ಷೆ, ಭೂತಿಪಟ್ಟ ದೀಕ್ಷೆ, ಆಯತ್ತ ದೀಕ್ಷೆ ಮತ್ತು ಸ್ವಾಯತ್ತ ದೀಕ್ಷೆಯೆಂದು ಏಳು ವಿಧ.[೧೭] ಈ ಮೂರು, ವೇಧಾ-ಮಾಂತ್ರೀ-ಕ್ರಿಯಾದೀಕ್ಷೆಗಳು ಕಾರಣ-ಸೂಕ್ಷ್ಮ-ಸ್ಥೂಲ ಶರೀರಗಳಲ್ಲಿನ ಆಣವ-ಮಾಯೀಯ-ಕಾರ್ಮಿಕ ಮಲಗಳನ್ನು ನಾಶಪಡಿಸುತ್ತವೆ ಎಂದು ಶೈವಾಗಮಗಳು ಸಾರುತ್ತವೆ:

ತನುತ್ರಯಗತಾನಾದಿ-ಮಲತ್ರಯಮಸೌ ಗುರುಃ।
ದೀಕ್ಷಾತ್ರಯೇಣ ಸಂದಹ್ಯ ಲಿಂಗತ್ರಯಮುಪಾದಿಶೇತ್॥[೧೮]

ಈ ಮೂರು ದೀಕ್ಷೆಗಳ ಮೂಲಕ ಕಾರಣ ಶರೀರದಲ್ಲಿ ಭಾವಲಿಂಗ, ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗ ಮತ್ತು ಸ್ಥೂಲ ಶರೀರದಲ್ಲಿ ಇಷ್ಟಲಿಂಗಗಳ ಸ್ಥಾಪನೆಯಾಗುತ್ತದೆ.

ಮೇಲೆ ಸಂಕ್ಷಿಪ್ತವಾಗಿ ಸೂಚಿಸಲಾದ ದೀಕ್ಷಾಪ್ರಕ್ರಿಯೆಯ ಎಲ್ಲಾ ಹಂತಗಳನ್ನು ಚನ್ನಬಸವಣ್ಣನವರು ಕೆಲವು ವಚನಗಳಲ್ಲಿ ಸುಂದರವಾಗಿ ವರ್ಣಿಸುತ್ತಾರೆ. ಅವುಗಳಲ್ಲಿ ಒಂದು ಹೀಗಿದೆ:

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು
ಆಜ್ಞಾದೀಕ್ಷೆ ಉಪಮಾದೀಕ್ಷೆ ಸ್ವಸ್ತಿಕಾರೋಹಣ ಕಳಶಾಭಿಷೇಕ
ವಿಭೂತಿಪಟ್ಟ ಲಿಂಗಾಯತ ಲಿಂಗಸ್ವಾಯತ-
ಈ ಏಳನು ಕಾಯಕ್ಕುಪದೇಶವ ಮಾಡುವುದು.

ಸಮಯ ನಿಃಸಂಸಾರ ನಿರ್ವಾಣ ತತ್ತ್ವದೀಕ್ಷೆ
ಅಧ್ಯಾತ್ಮ ಅನುಗ್ರಹ ಶುದ್ಧವಿದ್ಯೆ-
ಈ ಏಳನು ಪ್ರಾಣಕ್ಕುಪದೇಶವ ಮಾಡುವುದು.

ಏಕಾಗ್ರಚಿತ್ತ ದೃಢವ್ರತ ಪಂಚೇಂದ್ರಿಯಾರ್ಪಿತ ಅಹಿಂಸೆ
ಮನೋಲಯ ಲಿಂಗನಿಜ ಸದ್ಯೋಮುಕ್ತಿ-

---

೧೭. ಅದೇ, ಉತ್ತರ ಭಾಗ, ಕ್ರಿಯಾಪಾದ, ೧.೯೬-೯೭; ೧.೧೧೨-೧೧೭; ೧.೪೩-೯೫; ಚಂದ್ರಜ್ಞಾನಾಗಮ, ಉತ್ತರ ಭಾಗ, ಕ್ರಿಯಾಪಾದ, ೯.೧೩; ೯.೧೪-೧೫; ೯.೧೨.

೧೮. ಕಾರಣಾಗಮ, ಉತ್ತರ ಭಾಗ, ಕ್ರಿಯಾಪಾದ, ೧.೧೦; ಚಂದ್ರಜ್ಞಾನಾಗಮ, ಉತ್ತರ ಭಾಗ, ಕ್ರಿಯಾಪಾದ ३.೪೬-೪೭ನ್ನೂ ನೋಡಿರಿ.

ಈ ಏಳು ಮನಕ್ಕುಪದೇಶವ ಮಾಡುವುದು
ಈ ಪ್ರಕಾರದುಪದೇಶ ಕೂಡಲಚನ್ನಸಂಗಯ್ಯನಲ್ಲಿ ಸಹಜದೀಕ್ಷೆ.[೧೯]

ಮೊದಲು ಹೇಳಿದ ಆಜ್ಞಾದೀಕ್ಷೆ ಮುಂತಾದ ಏಳು ದೀಕ್ಷೆಗಳು ಕ್ರಿಯಾದೀಕ್ಷೆಗೆ ಸಂಬಂಧಪಟ್ಟವುಗಳು. ಅವುಗಳು ಕಾಯಕ್ಕೆ, ಅಂದರೆ ಸ್ಥೂಲ ಶರೀರಕ್ಕೆ. ಅನಂತರದ ಸಮಯದೀಕ್ಷೆ ಮುಂತಾದ ಏಳು ದೀಕ್ಷೆಗಳು ವೇಧಾದೀಕ್ಷಾಂತರ್ಗತವಾದವುಗಳು, ಅವುಗಳು ಪ್ರಾಣಕ್ಕೆ, ಅಂದರೆ ಸೂಕ್ಷ್ಮ ಶರೀರಕ್ಕೆ ಮುಂದೆ ಹೇಳಿದ ಏಕಾಗ್ರಚಿತ್ತದೀಕ್ಷೆ ಮುಂತಾದ ಏಳು ದೀಕ್ಷೆಗಳು ಮಂತ್ರದೀಕ್ಷೆಗೆ ಸಂಬಂಧಪಟ್ಟವುಗಳು. ಅವುಗಳು ಮನಸ್ಸಿಗೆ, ಅಂದರೆ ಕಾರಣ ಶರೀರಕ್ಕೆ, ವೇಧಾದೀಕ್ಷೆಗೆ ಸಂಬಂಧಪಟ್ಟಂತೆ ಬರುವ ಏಳು ದೀಕ್ಷೆಗಳಲ್ಲಿ ಕಡೆಯ ಎರಡರ ಹೆಸರುಗಳು ಅನುಗ್ರಹದೀಕ್ಷೆ ಮತ್ತು ಶುದ್ಧವಿದ್ಯಾದೀಕ್ಷೆ. ಈ ಎರಡು ಹೆಸರುಗಳು ಚಂದ್ರಜ್ಞಾನಾಗಮದಲ್ಲಿ ಬಂದಿವೆ. ಕಾರಣಾಗಮದಲ್ಲಿ ಅವುಗಳ ಹೆಸರುಗಳು ತತ್ತ್ವಸಂಶೋಧಿನೀ ಮತ್ತು ತತ್ತ್ವೋಪದೇಶಿನೀ ಎಂದು.[೨೦]

ದೀಕ್ಷೆಯಲ್ಲಿ ಗುರುವು ಇಷ್ಟಲಿಂಗವನ್ನು ಸ್ಥೂಲಶರೀರದಲ್ಲಿಯೂ ಪ್ರಾಣಲಿಂಗವನ್ನು ಸೂಕ್ಷ್ಮತನುವಿನಲ್ಲಿಯೂ ಮತ್ತು ಭಾವಲಿಂಗವನ್ನು ಕಾರಣ ಶರೀರದಲ್ಲಿಯೂ ಪ್ರತಿಷ್ಠಾಪಿಸುತ್ತಾನೆ:

ಇಷ್ಟಂ ಸ್ಥೂಲತನೋಃ ಪ್ರೋಕ್ತಂ ಪ್ರಾಣಂ ಸೂಕ್ಷ್ಮತನೋಃ ಸ್ಮೃತಮ್।
ಭಾವಾಖ್ಯಂ ಕಾರಣಸ್ಯೈವಂ ತನುತ್ರಯಗತಂ ತ್ರಯಮ್॥[೨೦(ಅ)]

ಚನ್ನಬಸವಣ್ಣನವರು ಇದನ್ನು ಗರ್ಭೀಕರಿಸಿ ಹೇಳುತ್ತಾ ಮೂರು ಲಿಂಗಗಳಿಂದ ಮೂರು ಅಂಗಗಳ ಮಹಾಲಿಂಗಯುಕ್ತವಾದವು ಮತ್ತು ಹೃದಯದಲ್ಲಿ ಪರಂಜ್ಯೋತಿ ಕಂಡಿತೆಂದು ವರ್ಣಿಸುತ್ತಾರೆ:

ಸ್ಥೂಲತನು, ಸೂಕ್ಷ್ಮತನು, ಕಾರಣತನು:
ಸ್ಥೂಲತನುವಿನಲ್ಲಿ ಇಷ್ಟಲಿಂಗಪ್ರತಿಷ್ಠೆ;
ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗಪ್ರತಿಷ್ಠೆ;
ಕಾರಣತನುವಿನಲ್ಲಿ ತೃಪ್ತಿಲಿಂಗಪ್ರತಿಷ್ಠೆ.
ಇಂತೀ ಸ್ಥೂಲಸೂಕ್ಷ್ಮ ಕಾರಣವು ಮಹವು!
ಮಹದುದಯ ಹೃದಯದಲ್ಲಿ ಕೊನೆಯದೋರುತಿರ್ಪ ಪರಂಜ್ಯೋತಿ
ನಿಮ್ಮ ಶರಣನ ಸರ್ವಾಂಗದಲ್ಲುಂಟು
ಕೂಡಲಚನ್ನಸಂಗಮದೇವಾ![೨೦(ಆ)]

---

೧೯. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೮೮೫; ವಚನ ಸಂಖ್ಯೆ ೩.೩.೨, ೯೨೪ನ್ನೂ ನೋಡಿರಿ.

೨೦. ಚಂದ್ರಜ್ಞಾನಾಗಮ, ಉತ್ತರ ಭಾಗ, ಕ್ರಿಯಾಪಾದ, ೯.೧೩; ಕಾರಣಾಗಮ, ಉತ್ತರ ಭಾಗ, ಕ್ರಿಯಾಪಾದ, ೧.೯೬-೯೭.

೨೦(ಅ). ಚಂದ್ರಜ್ಞಾನಾಗಮ, ಉತ್ತರಭಾಗ, ಕ್ರಿಯಾಪಾದ, ೩.೩೫.

೨೦(ಆ). ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೯೨೪.

೩. ಲಿಂಗಧಾರೀ ಸದಾಶುಚಿ:

ಶ್ರೀಗುರುವು ಸಂಸ್ಕಾರಯುಕ್ತವಾದ ಲಿಂಗವನ್ನು ಅನುಗ್ರಹಿಸಿದ ಮೇಲೆ ಅದನ್ನು ಭಕ್ತನು ಸರ್ವಕಾಲದಲ್ಲಿಯೂ ದೇಹದ ಮೇಲೆ ಧರಿಸಿಕೊಂಡಿರಬೇಕು. ಏಕೆಂದರೆ ಲಿಂಗಧಾರಿಗಳು ಸದಾ ಶುಚಿ:

ಧೃತಲಿಂಗಾರ್ಚಕಾಃ ಸರ್ವೇ ಪಾವನಾಃ ಪಂಕ್ತಿಕರ್ಮಸು।
ಪೃಥಗ್ ಲಿಂಗಸ್ಯ ಸ್ಥಿತ್ವಾ ತು ಸ್ವದೇಹಸ್ಯಾಪ್ಯಶುದ್ಧಿತಃ॥
ಸ್ಪ್ರಷ್ಟುಂ ನ ಯೋಗ್ಯತಾ ಲಿಂಗಂ ನ ಚೈವಂ ಶಿವಯೋಗಿನಃ।
ಧೃತಲಿಂಗಶರೀರತ್ವಾತ್ ಪ್ರದಾತುರ್ಜ್ಞಾನಸಂಭವಾತ್॥
ಶುಚಿರೇವ ಸದಾ ತಸ್ಯ ನಾಶುದ್ಧಿರ್ನೈವ ನಾಶುಚಿಃ।
ಗಚ್ಛನ್ ತಿಷ್ಠನ್ ಸ್ವಪನ್ ಭುಂಜನ್ ಜಾಗ್ರನ್ನಪಿ ಹಸನ್ನಪಿ॥[20]

ಲಿಂಗವನ್ನು ಧರಿಸಿದ ಭಕ್ತರು ಎಲ್ಲರೂ ಪಂಕ್ತಿಗಳಲ್ಲಿ ಕುಳಿತುಕೊಳ್ಳಲು ಪರಿಶುದ್ಧರು. ಆದರೆ ಲಿಂಗವನ್ನು ಬೇರ್ಪಡಿಸಿ ಇಟ್ಟಾಗ ತನ್ನ ದೇಹವೇ ಅಶುದ್ಧವಾಗುತ್ತದೆ. ಆಗ ಅವನಿಗೆ ಲಿಂಗವನ್ನಾಗಲಿ ಶಿವಯೋಗಿಯನ್ನಾಗಲಿ ಮುಟ್ಟುವ ಯೋಗ್ಯತೆಯಿರುವುದಿಲ್ಲ. ಲಿಂಗವನ್ನು ಸದಾ ಶರೀರದ ಮೇಲೆ ಧರಿಸಿರುವುದರಿಂದ ಮತ್ತು ಲಿಂಗವನ್ನು ಅನುಗ್ರಹಿಸಿದ ಗುರುವಿನ ಜ್ಞಾನದ ಬಲದಿಂದ, ಲಿಂಗಧಾರಿ ನಡೆಯುತ್ತಿರಲಿ, ನಿಂತಿರಲಿ, ಮಲಗಿರಲಿ, ಊಟ ಮಾಡುತ್ತಿರಲಿ, ಎಚ್ಚರವಾಗಿರಲಿ, ನಗುತ್ತಿರಲಿ, ಎಲ್ಲಾ ಸಂದರ್ಭದಲ್ಲಿ ಅವನು ಶುಚಿಯೇ; ಎಂದೂ ಅಶುದ್ಧನಲ್ಲ, ಅಶುಚಿಯಲ್ಲ. ಚನ್ನಬಸವಣ್ಣನವರು ಇಂತಹದೇ ಅಭಿಪ್ರಾಯವನ್ನು ಇನ್ನೊಂದು ಆಗಮ ವಾಕ್ಯವನ್ನು ಉಲ್ಲೇಖಿಸಿ ಲಿಂಗಧಾರಿಯು ಸದಾಶುಚಿ, ಸರ್ವಾಂಗ ಪ್ರಸಾದಿ ಎಂದು ಸಾರಿದ್ದಾರೆ:

ಗಚ್ಛನ್ ತಿಷ್ಠನ್ ಸ್ವಪನ್ ಜಾಗ್ರನ್ನುನ್ಮಿಷನ್ನಿಮಿಷನ್ನಪಿ।
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್॥
ಇಂತೆಂದುದಾಗಿ
ಕಂಗಳ ಮುಂದಣಿಂದ ಗುರುಲಿಂಗ ಹಿಂಗಿದಡೆ,
ವ್ರತಕ್ಕೆ ಭಂಗವಾದುದೆಂದು (ಶ್ರೀಗುರು) ತಂದುಕೊಟ್ಟನು
ಕರಸ್ಥಲದಲ್ಲಿ ಇಷ್ಟಲಿಂಗವನು
ಆ ಲಿಂಗ ಮುಟ್ಟಲೊಡನೆ
ತನು ಪ್ರಸಾದವಾಯಿತ್ತು, ಮನಪ್ರಸಾದವಾಯಿತ್ತು
ಇಂತು ಸರ್ವಾಂಗ ಪ್ರಸಾದವಾಯಿತ್ತು ಕೂಡಲಚನ್ನಸಂಗಮದೇವಾ[21]

---

೨೦. ಪಾರಮೇಶ್ವರಾಗಮ, ಉತ್ತರ ಭಾಗ, ೨.೧೬-೧೮.

೨೧. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೪೩.

## ೪. ಲಿಂಗ ಕಳೆದರೆ ಏನು ಮಾಡಬೇಕು?

ಲಿಂಗ ಬಿದ್ದು ಹೋದರೆ, ಕಳೆದುಹೋದರೆ ಪ್ರಾಣವನ್ನು ತ್ಯಜಿಸಬೇಕು ಎಂದು ಒಂದು ಸಾಂಪ್ರದಾಯಿಕವಾದ ನಿಯಮ. ಹಾಗೆ ಮಾಡಬೇಕಾಗಿಲ್ಲ ಎಂದು ಇನ್ನೊಂದು ಮತ. ಎರಡೂ ನಿಯಮಗಳನ್ನು ಶೈವಾಗಮಗಳು ಹೇಳುತ್ತವೆ. ಅದರ ಬಗ್ಗೆ ವಿಚಾರಮಾಡಿ ಮುಂದೆ ಚನ್ನಬಸವಣ್ಣನವರ ಅಭಿಪ್ರಾಯವನ್ನು ಪರಿಶೀಲಿಸಬಹುದು. ಪಾರಮೇಶ್ವ-ರಾಗಮವು ಮೊದಲು ಲಿಂಗನಾಶವಾದರೆ ದೇಹವನ್ನು ಬಿಟ್ಟು ಶಿವನಲ್ಲಿ ಒಂದಾಗಬೇಕು ಎಂದು ಹೇಳುತ್ತದೆ:

> ಯಲ್ಲಿಂಗಂ ಗುರುಣಾ ದತ್ತಂ ಪ್ರಾಣಲಿಂಗಂ ತದೇವ ಹಿ।
> ಮಧ್ಯೇ ನಷ್ಟೇ ಪ್ರಮಾದೇನ ದೇಹಂ ತ್ಯಕ್ತ್ವಾ ಶಿವಂ ವ್ರಜೇತ್॥[೨೩]

ಅನಂತರ ಅದೇ ಆಗಮವು ನಿರಾಭಾರಿ ವೀರಶೈವನಿಗೆ ಮಾತ್ರ ಈ ನಿಯಮವೆಂದು ತಿಳಿಸುತ್ತದೆ:

> ಏತಾದೃಶಾಧಿಕಾರಸ್ಯ ತುರ್ಯವೀರಸ್ಯ ಅಂಗಿನಃ।
> ಪ್ರಮಾದಾಲ್ಲಿಂಗನಾಶೇ ತು ಸಹ ತೇನ ತನುಂ ತ್ಯಜೇತ್॥[೨೪]

ಸಾಮಾನ್ಯ ವೀರಶೈವರಿಗೆ ಮತ್ತು ವಿಶೇಷ ವೀರಶೈವರಿಗೆ ಆ ನಿಯಮವಿಲ್ಲ. ಅವರ ವಿಷಯದಲ್ಲಿ ಹೀಗೆ ಹೇಳಿದೆ:

> ಲಿಂಗಾದಿನಾಶೇ ದೈವಾದ್ವಾ ಧಾರಯೇದ್ ವಿಧಿವತ್ಪುನಃ।
> ಲಿಂಗಾದಿನಾಶಾದ್ದೈವೇನ ಧಾರಯೇದ್ವಿಧಿತಃ ಪುನಃ॥[೨೫]

ಈ ವಿಷಯವನ್ನು ಕಾರಣಾಗಮದಲ್ಲಿ ವಿಶದವಾಗಿ ವಿವೇಚಿಸಲಾಗಿದೆ:

> ಅಥ ಲಿಂಗಸ್ಯ ಲೋಪೇ ತು ಕರ್ತವ್ಯಂ ಶೃಣು ಸುಂದರಿ।
> ಲಿಂಗಸ್ಯಾದರ್ಶನೇ ತ್ಯಾಜ್ಯಾಃ ಪ್ರಾಣಾಃ ಸ್ವಭಕ್ತಿಯೋಗತಃ॥
> ಪ್ರಾಣತ್ಯಾಗೇ ತ್ವಶಕ್ತಶ್ಚೇದ್ ಏಕವಿಂಶದ್ದಿನಾವಧಿ।
> ನಿರಾಹಾರೋ ಜಪೇನ್ಮೂಲಂ ಲಿಂಗಮನ್ವೇಷಯೇಜ್ಜನೈಃ॥
> ಯದಾ ವೈ ಲಭತೇ ಲಿಂಗಂ ಧೃತ್ವಾ ಭಕ್ತ್ಯಾ ತದೈವ ತತ್।
> ಗುರುಂ ಮಾಹೇಶ್ವರಾಂಶ್ಚೈವ ಯಥಾಶಕ್ತಿ ಸಮರ್ಚಯೇತ್॥
> ತದಪ್ಯಲಾಭೇ ವಿಸೃಜೇದಸೂನ್ ಸದ್ಭಕ್ತಿಯೋಗತಃ।
> ಪ್ರಾಣತ್ಯಾಗೇ ತ್ವಶಕ್ತಶ್ಚೇಲ್ಲಿಂಗಮನ್ಯದ್ ಗುರೋಃ ಕರಾತ್॥[೨೬]

---

೨೩. ಪಾರಮೇಶ್ವರಾಗಮ, ಉತ್ತರಭಾಗ, ೨.೧೦೨-೧೦೩.

೨೪. ಅದೇ, ೨೦.೫೫.

೨೫. ಅದೇ, ೧೫.೪೧, ೪೫.

೨೬. ಕಾರಣಾಗಮ, ಉತ್ತರಭಾಗ, ಕ್ರಿಯಾಪಾದ, ೧೦.೩೨-೩೫.

"ಲಿಂಗನಾಶವಾದಾಗ ಏನು ಮಾಡಬೇಕೆಂಬುದನ್ನು ಹೇಳುತ್ತೇನೆ. ಲಿಂಗ ಕಾಣದಿದ್ದರೆ ಭಕ್ತಿಯೋಗದಿಂದ ಪ್ರಾಣವನ್ನು ಬಿಡಬೇಕು. ಪ್ರಾಣತ್ಯಾಗ ಮಾಡಲು ಸಾಧ್ಯವಾಗದಿದ್ದರೆ ಇಪ್ಪತ್ತೊಂದು ದಿನ ಆಹಾರವಿಲ್ಲದೆ ಮೂಲಮಂತ್ರವನ್ನು ಜಪಿಸುತ್ತಾ ಬೇರೆ ಜನರಿಂದ ಲಿಂಗವನ್ನು ಹುಡುಕಿಸಬೇಕು. ಲಿಂಗ ದೊರೆತರೆ ಭಕ್ತಿಯಿಂದ ಅದನ್ನೇ ಧರಿಸಿ ತನ್ನ ಶಕ್ತಿಗೆ ಅನುಗುಣವಾಗಿ ಗುರುವನ್ನು ಮತ್ತು ಮಾಹೇಶ್ವರರನ್ನು ಪೂಜಿಸಬೇಕು. ಆಗಲೂ ದೊರೆಯದಿದ್ದರೆ ಭಕ್ತಿಯೋಗದಿಂದ ಪ್ರಾಣವನ್ನು ಬಿಡಬೇಕು. ಪ್ರಾಣತ್ಯಾಗ ಮಾಡಲು ಅಶಕ್ತನಾದರೆ ಗುರುವಿನ ಕೈಯಿಂದ ಇನ್ನೊಂದು ಲಿಂಗವನ್ನು ಕಟ್ಟಿಸಿಕೊಳ್ಳಬೇಕು." ಇದರ ಮಥಿತಾರ್ಥವೆಂದರೆ ಲಿಂಗವನ್ನು ಅತ್ಯಂತ ಎಚ್ಚರಿಕೆಯಿಂದ ಪ್ರಾಣದಂತೆ ರಕ್ಷಿಸಬೇಕು ಎಂಬುದು. ಲಿಂಗನಾಶವಾದರೆ ಪ್ರಾಣ ಬಿಡಬೇಕು ಎಂಬುದು ಒಂದು ರೀತಿಯಲ್ಲಿ ಅರ್ಥವಾದವಿದ್ದಂತೆ. ಲಿಂಗವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು ಎಂಬುದರಲ್ಲೇ ಅದರ ತಾತ್ಪರ್ಯವಿದೆ. ವಚನಕಾರರಂತೂ ಖಡಾಖಂಡಿತವಾಗಿ ಪ್ರಾಣಬಿಡಬಾರದು ಎಂದು ಹೇಳುತ್ತಾರೆ. ಉದಾಹರಣೆಗೆ ಚನ್ನಬಸವಣ್ಣನವರು ಹೀಗೆ ಹೇಳುತ್ತಾರೆ:

> ಪ್ರತಿಯಿಲ್ಲದ ಲಿಂಗವು ಭಿನ್ನವಾಯಿತ್ತೆಂದು
> ತನುವಿನ ಮೇಲೆ ಶಸ್ತ್ರವನಿಕ್ಕೊಂಬ
> ಆತ್ಮದ್ರೋಹಿಯ ಮುಖವ ನೋಡಲಾಗದು.
> ಮಂತ್ರಭಿನ್ನವಿಲ್ಲವಾಗಿ ಪೂಜೆ ಭಿನ್ನವಿಲ್ಲ!
> ಮಹಾಬಯಲೊಳಗಣ ಪ್ರಾಣಸಂಚವನರಿಯರಾಗಿ
> ಕೂಡಲ ಚನ್ನಸಂಗಮದೇವಾ, ಅವರಿಗೆ ರೌರವ ನರಕ![೨೭]

ಈ ಬಗ್ಗೆ ಏನೇ ವಿವಾದವಿರಲಿ. ಚನ್ನಬಸವಣ್ಣನವರ ಈ ಮಾತಂತೂ ಯಾರೂ ಮರೆಯಲಾಗದುದು:

> ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ ಕಿತ್ತಿ ಕಿತ್ತಿ ಮತ್ತೆ ಬಿತ್ತುತ್ತ ಹೋದಡೆ
> ಆ ಬಿತ್ತು ಮೊಳೆತು ಕಳೆಯೇರಿ ಬೆಳೆದು
> ಬೆಳೆಸನೀವ ಪರಿಯಿನ್ನೆಂತೋ, ಮರುಳು ಮಾನವ?
> ಗುರುವಿತ್ತ ಲಿಂಗವ ತೊರೆ ತೊರೆದು ಮರಳಿ ಮರಳಿ ಧರಿಸಿದಡೆ,
> ಆ ಇಷ್ಟಲಿಂಗವು ಅನಿಷ್ಟವ ಕಳೆದು ಇಷ್ಟಾರ್ಥವನೀವ ಪರಿಯಿನ್ನೆಂತೋ?
> ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ ಮುಕ್ತಿಯನರಸುವಡೆ,
> ಅಂಗದಲ್ಲಿ ಹೆರಹಿಂಗದೆ ಲಿಂಗವ ಧರಿಸಬೇಕು.[೨೮]

---

೨೭. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೬೫೩.

೨೮. ಅದೇ, ವಚನ ಸಂಖ್ಯೆ ೧೩೦.

## ೫. ಗುರು-ಲಿಂಗ-ಜಂಗಮ ಒಂದೇ:

ಗುರು-ಲಿಂಗ-ಜಂಗಮ ಅಷ್ಟಾವರಣಗಳಲ್ಲಿ ಮೊದಲ ಮೂರು ಆವರಣಗಳು. ಅವು ಉಪಾಸ್ಯ ಆವರಣಗಳು. ಅವುಗಳ ವಿಷಯದಲ್ಲಿ ಶೈವಾಗಮಗಳು 'ಅವು ಒಂದೇ ಮೂರ್ತಿಯ, ಅಂದರೆ ಪರಮಾತ್ಮನ, ಮೂರು ಸ್ವರೂಪಗಳು' ಗುರು ಮತ್ತು ಜಂಗಮರ ಪಾದೋದಕವನ್ನು ಲಿಂಗಪಾದೋದಕದ ಗುಣವುಳ್ಳದ್ದೆಂದು ಸ್ವೀಕರಿಸಬೇಕು, ಎಂದು ಹೇಳುತ್ತವೆ. ನೋಡಿ:

ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ತು ಜಂಗಮಃ।
ತದೇವಂಗುಣಕಂ ಗ್ರಾಹ್ಯಂ ಗುರುಜಂಗಮಯೋರಪಿ॥[೨೯]

ಇದೇ ಶ್ಲೋಕದ ಪೂರ್ವಾರ್ಧವನ್ನು ಉಲ್ಲೇಖಿಸಿ ಚನ್ನಬಸವಣ್ಣನವರು ಗುರು-ಲಿಂಗ-ಜಂಗಮ ಒಂದೇ ಎಂಬ ತತ್ತ್ವವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ:

ಏಕಮೂರ್ತಿಸ್ತ್ರಯೋ(ರ್ತೇಸ್ತ್ರಯೋ) ಭಾಗಾ ಗುರುರ್ಲಿಂಗಂ ತು ಜಂಗಮಃ
ಎಂದುದಾಗಿ
ಪರತರ ಪರಂಜ್ಯೋತಿಯಪ್ಪ ಮಹಾಲಿಂಗವೆ ಲೋಕಾನುಗ್ರಹಕ್ಕಾಗಿ-
ಅಗ್ಗಣಿಯೆ ಆಣಿಕಲ್ಲಾದಂತೆ, ಕರಗಿದ ತುಪ್ಪವೇ ಹೆತ್ತುಪ್ಪವಾದಂತೆ-
ಗುರು ಲಿಂಗ ಜಂಗಮವಾಗಿ ಪರಿಣಮಿಸಿರ್ಪುದು ಕಾಣಾ!
..........................................................................[೩೦]

ಇದೇ ಹಿನ್ನೆಲೆಯಲ್ಲಿ ಗುರು-ಲಿಂಗ-ಜಂಗಮರಲ್ಲಿ ಯಾರೊಬ್ಬರಿದ್ದರೂ ಅವರ ಪಾದೋದಕವನ್ನೇ ಎಲ್ಲರ ಪಾದೋದಕವೆಂದು ಭಾವಿಸಿ ಸೇವಿಸಬೇಕು ಎಂದು ಚಂದ್ರಜ್ಞಾನಾಗಮವು ಹೇಳುತ್ತದೆ:

ಗುರೋಶ್ಚರಸ್ಯ ಚಾಲಾಭೇ ಇಷ್ಟಲಿಂಗಪದೋದಕಮ್।
ಲಬ್ಧ್ವಾ ಗುರ್ವಾದಿಪಾದೋದಂ ಭಾವಯೇನ್ಮನಸ್ಯೈವ ತತ್॥
ಚರವರ್ಜಂ ಗುರೋರ್ಲಾಭೇ ಲಬ್ಧ್ವಾ ಗುರುಪದೋದಕಮ್।
ಗುರುಜಂಗಮಪಾದೋದಂ ಲಬ್ಧವಾನಿತಿ ಭಾವಯೇತ್॥
ಗುರುವರ್ಜಂ ಚರಪ್ರಾಪ್ತೌ ಲಬ್ಧ್ವಾ ಚರಪದೋದಕಮ್।
ತದೇವ ಗುರುಪಾದೋದಮಿತಿ ಮತ್ವಾ ಪಿಬೇತ್ತದಾ॥[೩೧]

ಗುರು-ಜಂಗಮರು ದೊರೆಯದಿದ್ದರೆ ಇಷ್ಟಲಿಂಗ ಪಾದೋದಕವನ್ನೇ ಪಡೆದು ಅದನ್ನೇ ಗುರು-ಜಂಗಮ ಪಾದೋದಕವೆಂದು ಮನಸ್ಸಿನಲ್ಲಿ ಭಾವಿಸಬೇಕು. ಜಂಗಮನಿಲ್ಲದೆ

---

೨೯. ಚಂದ್ರಜ್ಞಾನಾಗಮ; ಉತ್ತರಭಾಗ, ಕ್ರಿಯಾಪಾದ, ೫.೧೫; ಪಾರಮೇಶ್ವರಾಗಮ, ಉತ್ತರ ಭಾಗ, ೬.೯ನ್ನೂ ನೋಡಿ.

೩೦. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೪೬೮.

೩೧. ಚಂದ್ರಜ್ಞಾನಾಗಮ, ಉತ್ತರ ಭಾಗ, ಕ್ರಿಯಾಪಾದ, ೫.೭-೯.

ಗುರುವು ದೊರೆತರೆ ಗುರುಪಾದೋದಕವನ್ನೇ ಪಡೆದು ಅದನ್ನೇ ಗುರು-ಜಂಗಮ ಪಾದೋದಕವೆಂದು ಭಾವಿಸಬೇಕು. ಗುರುವಿಲ್ಲದೆ ಜಂಗಮ ದೊರೆತರೆ ಜಂಗಮ ಪಾದೋದಕವನ್ನು ಪಡೆದು ಅದನ್ನೇ ಗುರುಪಾದೋದಕವೆಂದು ತಿಳಿದು ಸೇವಿಸಬೇಕು. ಈ ವಿಚಾರವನ್ನು ಒಪ್ಪಿ ಚನ್ನಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೀಗೆ ಹೇಳಿದ್ದಾರೆ:

ಸಹಜಸಂಬಂಧಾಚಾರದ ನಿರ್ಣಯವನಿಲ್ಲಿ ಹೇಳಿಹೆ ಕೇಳಿರಯ್ಯ:
ಪ್ರತ್ಯಕ್ಷವಾಗಿ ಜಂಗಮವೆ ಭಕ್ತನ ಮಠಕ್ಕೆ ಬಿಜಯಂಗೈಯೆ,
ನೂರು ಮಂದಿಯಲ್ಲಿ ಮೂರು ಮಂದಿ ಇರ್ಪರೆಂಬಂತೆ,
ಆ ಜಂಗಮದಲ್ಲಿ ಗುರು-ಲಿಂಗಗಳುಂಟೆಂದು ತಿಳಿದು
ತ್ರಿವಿಧ ಪಾದೋದಕವನಲ್ಲಿ ಪಡೆವುದು ಇದೇ ಸದಾಚಾರವು
ಆ ಜಂಗಮವಿಲ್ಲದೆ ಗುರು ಓರ್ವನೆ ಬಿಜಯಂಗೈಯೆ,
ಆ ಗುರುವಿನಲ್ಲಿ ವಿಧಿಗನುಗುಣವಾಗಿ ಜಂಗಮವನನುಸಂಧಾನಿಸಿ,
ಗುರುವಿನಲ್ಲಿ ಲಿಂಗವು ಸಹಜವಾಗಿರ್ಪುದರಿಂದ,
ಅಲ್ಲಿ ತ್ರಿವಿಧೋದಕವ ಪಡೆವುದು ಇದೊಂದು ಸಹಜ ಸಂಬಂಧವು
ಗುರು-ಜಂಗಮರೀರ್ವರೂ ಸಮಯಕ್ಕೊದಗದಿರ್ಪಲ್ಲಿ
ಆ ಗುರು ಜಂಗಮ ತನ್ನ ಇಷ್ಟಲಿಂಗದಲ್ಲಿ ಕ್ರಮವರಿತು
ಅನುಸಂಧಾನಿಸಿ ಅಲ್ಲಿ ತ್ರಿವಿಧೋದಕವ ಪಡೆವುದು
ಇದೊಂದು ಕೇವಲ ಸಂಬಂಧವು.
ಇಂತೀ ಸಹಜಸಂಬಂಧದ ಭೇದವನರಿದು, ಅರಿದಂತಾಚರಿಸಿ
ನಮ್ಮ ಶರಣರು ಕೂಡಲ ಚನ್ನಸಂಗಯ್ಯನಲ್ಲಿ ಅಚ್ಚಸುಖಿಗಳಾದರು.[೩೨]

ಇನ್ನೊಂದು ಗಮನಾರ್ಹ ಅಂಶವೆಂದರೆ ಶೈವಾಗಮಗಳಲ್ಲಿ ಗುರು, ಲಿಂಗ ಮತ್ತು ಜಂಗಮ ಪಾದೋದಕಗಳಿಗೆ ದೀಕ್ಷಾಪಾದೋದಕ, ಶಿಕ್ಷಾಪಾದೋದಕ ಮತ್ತು ಜ್ಞಾನ ಪಾದೋದಕವೆಂದು ಕ್ರಮವಾಗಿ ಕರೆಯಲಾಗಿದೆ.

ಪಾದತೀರ್ಥಂ ತ್ರಿಧಾ ಶಂಭೋರ್ಗುರುಜಂಗಮಯೋರಪಿ।
ಶಿಕ್ಷಾ ದೀಕ್ಷಾ ಜ್ಞಾನಮಿತಿ ತ್ರಿಸಂಜ್ಞಂ ತದ್ಭವತ್ಕಹೋ॥[೩೩]

ಆಗಮ ಶಾಸ್ತ್ರದಲ್ಲಿ ಹೇಳಿದ ಈ ತ್ರಿವಿಧ ಪಾದೋದಕಗಳನ್ನು ಸಮನ್ವಯ ಮಾಡಿ ತೋರಿಸಿರುವುದು ಚನ್ನಬಸವಣ್ಣನವರ ಪ್ರಾಯೋಗಿಕ ಅನುಭವವನ್ನು ವ್ಯಕ್ತಗೊಳಿಸುತ್ತದೆ. "ಜ್ಞಾನಪಾದೋದಕದಲ್ಲಿ ಮೂರು ಸಂಬಂಧವಾಗುವವು" ಎಂದು ಆರಂಭವಾಗುವ ದೀರ್ಘವಾದ ವಚನದಲ್ಲಿ[೩೪] ಅವರು ಗುರುಪಾದಪೂಜೆ ಮತ್ತು ಜಂಗಮಪಾದ ಪೂಜೆಗಳ

---

೩೨. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೧೬೭.

೩೩. ಚಂದ್ರಜ್ಞಾನಾಗಾಮ, ಉತ್ತರಭಾಗ, ಕ್ರಿಯಾಪಾದ, ೩.೫

೩೪. ಚನ್ನಬಸವಣ್ಣನವರ ವಚನಗಳು, ವಚನ ಸಂಖ್ಯೆ ೧೬೫.

ಸಮಗ್ರ ವಿವರಗಳನ್ನು ಕೊಟ್ಟು ಮೂರು ಪಾದೋದಕಗಳ ಸಮನ್ವಯವನ್ನು ಸಾಧಿಸಿದ್ದಾರೆ. ಗುರು ಅಥವಾ ಜಂಗಮನ ಪಾದ ತೊಳೆದ ಅನಂತರ ಒಂದು ಲೋಟದಲ್ಲಿ ಕೈ ಬೆರಳುಗಳನ್ನು ಅದ್ದಿ ಪಾದಗಳನ್ನು ಆ ಬೆರಳುಗಳಿಂದ ಸ್ಪರ್ಶಿಸಿ ಮತ್ತೆ ಲೋಟದಲ್ಲಿ ಕೈಬೆರಳುಗಳನ್ನು ಅದ್ದಿ ಪಾದೋದಕವನ್ನು ಮಾಡಿಕೊಳ್ಳಬೇಕು. ಅದು ದೀಕ್ಷಾಪಾದೋದಕ. ಎರಡನೆಯ ಹಂತದಲ್ಲಿ ಪಾದಪೂಜೆಯ ಅನಂತರ ಪಾದಗಳ ಬೆರಳುಗಳನ್ನು ದೀಕ್ಷಾಪಾದೋದಕವಿರುವ ಲೋಟದ ಮೇಲೆ ಇರಿಸಿ ಕೈಬೆರಳುಗಳನ್ನು ಅದ್ದಿ ಪಾದಾಂಗುಲಿಗಳನ್ನು ಆ ಕೈಬೆರಳುಗಳಿಂದ ಸವರಿ ತೋಯಿಸಿ ಆ ನೀರನ್ನು ಮತ್ತೆ ಲೋಟದಲ್ಲಿ ಎಳೆದುಕೊಳ್ಳಬೇಕು. ಆಗ ಅದೇ ಶಿಕ್ಷಾಪಾದೋದಕವೆನ್ನಿಸುವುದು. ಮೂರನೆ ಹಂತದಲ್ಲಿ ಮಹಾಪೂಜೆಯ ಅನಂತರ ಒಂದು ಬಟ್ಟಲ ಅಂಚಿನಲ್ಲಿ ಪಾದಗಳ ಬೆರಳುಗಳನ್ನು ಇರಿಸಿ ಲೋಟದಲ್ಲಿರುವ ಶಿಕ್ಷಾಪಾದೋದಕವನ್ನು ಬಲದ ಅಂಗುಷ್ಠದ ಮೇಲೆ ಆರು ಸಾರಿ, ಎಡದ ಅಂಗುಷ್ಠದ ಮೇಲೆ ಐದು ಸಾರಿ ಎರೆಯಬೇಕು. ಹಾಗೆ ಬಟ್ಟಲಲ್ಲಿ ಶೇಖರಿಸಲ್ಪಟ್ಟ ಪಾದೋದಕವೇ ಜ್ಞಾನಪಾದೋದಕ. ಪಾದೋದಕ ಸ್ವೀಕಾರದಲ್ಲಿ ಕೂಡ ಮೂರೂ ಪಾದೋದಕಗಳ ಸಮನ್ವಯವನ್ನು ಚನ್ನಬಸವಣ್ಣನವರು ತೋರಿಸಿದ್ದಾರೆ:

ಆ ಪೂಜೆಯ ತೆಗೆದು ಶಿಷ್ಯನು 'ಶರಣಾರ್ಥಿ ಸ್ವಾಮಿ' ಎಂದು
ಬಟ್ಟಲನೆತ್ತಿ ಕೊಟ್ಟಲ್ಲಿ
ಕರ್ತೃವಾದ ಜಂಗಮವು ಆ ಬಟ್ಟಲಲ್ಲಿರ್ದ ತೀರ್ಥವನು
ತಮ್ಮ ಪಂಚಾಗುಲಿಗಳೆ ಪಂಚಪ್ರಾಣವೆಂದು ಭಾವಿಸಿ,
ಮೂಲಮಂತ್ರದಿಂದ ಮೂರು ವೇಳೆ ಪ್ರದಕ್ಷಣವ ಮಾಡಿ ನಮಸ್ಕರಿಸಿ,
ಲಿಂಗದ ಮಸ್ತಕದ ಮೇಲೆ ಮೂರು ವೇಳೆ
ಚತುರಂಗುಲ ಪ್ರಮಾಣಿನಲ್ಲಿ ಲಿಂಗವ ಮುಟ್ಟದೆ ನೀಡಿ,
ಆ ಪಂಚಾಂಗುಲಿಗಳ ತಮ್ಮ ಜಿಹ್ವೆಯಲ್ಲಿ ಸ್ವೀಕರಿಸುವಲ್ಲಿ
ಗುರುಪಾದೋದಕವೆನಿಸುವುದು; ಅದೆ ದೀಕ್ಷಾಪಾದೋದಕ
ತಾವು ಲಿಂಗವನೆತ್ತಿ ಸಲಿಸಿದುದೆ
ಲಿಂಗಪಾದೋದಕವೆನಿಸುವುದು; ಅದೆ ಶಿಕ್ಷಾಪಾದೋದಕ.
ಬಟ್ಟಲನೆತ್ತಿ ಸಲಿಸಿದಲ್ಲಿ
ಜಂಗಮಪಾದೋದಕವೆನಿಸುವುದು; ಅದೆ ಜ್ಞಾನ ಪಾದೋದಕ.
ಈ ರೀತಿಯಲ್ಲಿ ಮಾಹೇಶ್ವರನು ಸಲಸಿದ ಬಳಿಕ
'ಶರಣಾರ್ಥಿ' ಎಂದು ಶಿಷ್ಯೋತ್ತಮನು ಎದ್ದು
ಲಲಟಂ ಚ ಭುಜದ್ವಂದ್ವಂ ಪಾಣಿಯುಗ್ಮಮುರಸ್ತಥಾ।
ಅಂಗುಷ್ಠಯುಗಲಂ ಪ್ರೋಕ್ತಂ ಪ್ರಣಾಮೋಽಷ್ಟಾಂಗಮುಚ್ಯತೇ॥ ಎಂದು
ಭೃತ್ಯೋಪಚಾರಗಳಿಂದ ಪ್ರಣತಿಂಗೈದು ಅಪ್ಪಣೆಯ ಪಡೆದುಕೊಂಡು ಬಂದು
ಆ ಜಂಗಮದ ಮರ್ಯಾದೆಯಲ್ಲಿಯೆ ತಾನು ಸ್ವೀಕರಿಸುವುದು.[೩೫]

---

೩೫. ಅದೇ. ವಚನ ಸಂಖ್ಯೆ ೧೬೩೫

ಹೀಗೆ ಗುರು ಅಥವಾ ಜಂಗಮ ಮತ್ತು ಪಾದಪೂಜೆ ಮಾಡಿದ ಭಕ್ತ ಇಬ್ಬರೂ ಮೂರೂ ಪಾದೋದಕಗಳನ್ನು ಸಮನ್ವಯ ಮಾಡಿಕೊಂಡು ಸ್ವೀಕರಿಸಬೇಕು.

**೬. ಪ್ರಸಾದದ ಪರಿಕಲ್ಪನೆ ಮತ್ತು ಆದರ ಸ್ವೀಕಾರ:**

ಪ್ರಸಾದವೆಂದರೆ ಗುರು-ಲಿಂಗ-ಜಂಗಮರಿಗೆ ಅರ್ಪಿಸಿ ಸ್ವೀಕರಿಸಿದ ವಸ್ತು (ಖಾದ್ಯ):

**ಗುರು ಲಿಂಗಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ||**[೩೬]

ಆ ಪ್ರಸಾದವು ಮೂರು ವಿಧ:

**ಶುದ್ಧಸಿದ್ಧಪ್ರಸಿದ್ಧಾಖ್ಯಸ್ತ್ರಿ ಸ ಹಿ ಮುಕ್ತ್ಯೇಕಸಾಧನಃ|**[೩೭]

ಗುರುವಿನ ಪ್ರಸಾದ ಶುದ್ಧಪ್ರಸಾದ, ಲಿಂಗದ ಪ್ರಸಾದ ಸಿದ್ಧಪ್ರಸಾದ ಮತ್ತು ಜಂಗಮನ ಪ್ರಸಾದ ಪ್ರಸಿದ್ಧ ಪ್ರಸಾದ:

**ಪೂರ್ವಸರ್ವಗುಣತ್ಯಾಗಃ ಕಾಮಕ್ರೋಧಾದಿವರ್ಜನಮ್|**
**ಗುರುಭುಕ್ತಪ್ರಸಾದೋ ಯಃ ಸ ಶುದ್ಧಃ ಪರಿಕೀರ್ತಿತಃ||**
**ಜ್ಞಾತ್ವಾ ಲಿಂಗತ್ರಯಂ ಸಮ್ಯಕ್ ತದೈಕ್ಯಂ ಚ ವರಾನನೇ|**
**ಲಿಂಗಾರ್ಪಿತಪ್ರಸಾದೋಽಯಂ ಸಿದ್ಧ ಇತ್ಯಭಿಧೀಯತೇ||**
**'ಶಿವೋಽಹಂ'ಭಾವನಾಯುಕ್ತೋ ನಿಶ್ಚಲೀಕೃತಮಾನಸಃ|**
**ಚರಾರ್ಪಿತ ಪ್ರಸಾದೋಽಯಂ ಪ್ರಸಿದ್ಧಃ ಪರಿಕೀರ್ತಿತಃ||**[೩೮]

ತನ್ನ ಪ್ರಾಕೃತ ಗುಣಗಳನ್ನು ಬಿಟ್ಟು, ಕಾಮ, ಕ್ರೋಧ ಮುಂತಾದ ದುಷ್ಟಪ್ರವೃತ್ತಿಗಳಿಂದ ಮುಕ್ತನಾದ ಗುರುಭಕ್ತನಿಗೆ ತನ್ನ ಗುರುವಿನಿಂದ ದೊರೆತ ಪ್ರಸಾದವು ಶುದ್ಧಪ್ರಸಾದವೆಂದು ಕರೆಯಲ್ಪಡುತ್ತದೆ. ಇಷ್ಟ-ಪ್ರಾಣ-ಭಾವವೆಂಬ ಲಿಂಗತ್ರಯವನ್ನು ಮತ್ತು ಅವುಗಳ ಐಕ್ಯವನ್ನು ತಿಳಿದು ಲಿಂಗಕ್ಕೆ ಅರ್ಪಿಸಲ್ಪಟ್ಟ ಪ್ರಸಾದವು ಸಿದ್ಧಪ್ರಸಾದವೆಂದು ಹೇಳಲ್ಪಡುತ್ತದೆ. 'ಶಿವೋಽಹಂ' ಭಾವನೆಯಿಂದ ಕೂಡಿದ ನಿಶ್ಚಲವಾದ ಮನಸ್ಸುಳ್ಳ ಭಕ್ತನಿಗೆ ಜಂಗಮನಿಂದ ದೊರೆತ ಪ್ರಸಾದವು ಪ್ರಸಿದ್ಧ ಪ್ರಸಾದವೆಂದು ಹೇಳಲ್ಪಡುತ್ತದೆ. ಈ ಮೂರು ಪ್ರಸಾದದಲ್ಲಿ ಮೂರೂ ದೊರೆಯಲಿ ಅಥವಾ ಎರಡು ದೊರೆಯಲಿ ಪಾದೋದಕದಂತೆ ಎಲ್ಲರದೂ ಎಂದು ಸ್ವೀಕರಿಸಬೇಕು:

**ದ್ವಯೋಸ್ತ್ರಯಾಣಾಂ ವಾ ಲಾಭೇ ಗ್ರಾಹ್ಯೇಯಂ ಪಾದತೀರ್ಥವತ್|**[೩೯]

---

೩೬. ಚಂದ್ರಜ್ಞಾನಾಗಮ, ಉತ್ತರಭಾಗ, ಕ್ರಿಯಾಪಾದ, ೫.೨೦.

೩೭. ಅದೇ. ೫.೨೧

೩೮. ಸೂಕ್ಷ್ಮಾಗಮ, ಉತ್ತರಭಾಗ, ಕ್ರಿ.ಪಾ. ೮.೩೩-೩೫.

೩೯. ಚಂದ್ರಜ್ಞಾನಾಗಮ, ಉತ್ತರಭಾಗ, ಕ್ರಿಯಾಪಾದ, ೫.೨೧.

ಪರಮಾತ್ಮನಿಗೆ ಅರ್ಪಿಸದೆ ಏನನ್ನೂ ಸ್ವೀಕರಿಸಬಾರದು; ಹಾಗೆ ಮಾಡಿದರೆ ಕ್ರಿಮಿ, ಕೀಟ, ಪಾಪಪುಂಜಗಳನ್ನೇ ತಿಂದಂತೆ; ಅಂಥವರು ಶಾಶ್ವತವಾಗಿ ಅಧೋಲೋಕಕ್ಕೆ ಹೋಗುವರು ಎಂಬ ಎಚ್ಚರಿಕೆಯನ್ನು ನೀಡಲಾಗಿದೆ:

> ಭುಂಜತೇ ಯೇ ತು ಸಂಮೂಢಾಸ್ತ್ರ್ಯಂಬಕಾಯಾಸಮರ್ಪಿತಮ್।
> ತೇ ಭುಂಜತೇ ಕ್ರಿಮೀನೇನಾಂಸ್ಯಧೋ ಗಚ್ಛಂತಿ ಶಾಶ್ವತಮ್॥[೪೦]

ಇದನ್ನೇ ಚನ್ನಬಸವಣ್ಣನವರು ತಮ್ಮದೇ ಶೈಲಿಯಲ್ಲಿ ಹೇಳಿದ್ದಾರೆ:

> ಲಿಂಗಕ್ಕೀಯದೆ ಅಂಗಸುಖಕ್ಕಾಗಿ ಅನ್ನೋದಕವ ಕೊಂಡ
> ಅಜ್ಞಾನಿಯನೇನೆಂದು ನುಡಿವೆನಯ್ಯ?
> ಆತನು ಪತಿತನಾಗಿ ನರಕದಲ್ಲಿ ಹೊರಳುತಿರ್ಪನು
> ಅಸಮರ್ಪ್ಯ ಪ್ರಾಣಲಿಂಗೇ ಜಲಂ ವಾ ಫಲಮೇವ ವಾ।
> ಸ್ವೀಕುರ್ಯಾದ್ಯದಿ ಮೋಹೇನ ಪತಿತೋ ನರಕಂ ವ್ರಜೇತ್॥
> ಎಂದುದಾಗಿ,
> ಆವ ಪದಾರ್ಥವನಾದಡೆಯೂ ಲಿಂಗಕ್ಕೆ ಕೊಡದೆ ಕೊಳಲಾಗದೆಂದುದು
> ನಮ್ಮ ಕೂಡಲ ಚನ್ನಸಂಗಯ್ಯನ ವಚನ.[೪೧]

ಈ ವಚನದಲ್ಲಿ ಬೇರೆ ಶೈವಾಗಮವೊಂದರ ಉಲ್ಲೇಖವಿರುವುದು ಸ್ಪಷ್ಟ. ಲಿಂಗಕ್ಕೆ ಸಮರ್ಪಿಸುವ ಬಗ್ಗೆ ಶೈವಾಗಮಗಳು ಬಹು ಮಾರ್ಮಿಕವಾದ ವಿಚಾರಗಳನ್ನು ತಿಳಿಸುತ್ತವೆ. ಉದಾಹರಣೆಗೆ ನೋಡಿ:

> ಯದಾ ಯೇನೇಂದ್ರಿಯೇಣೈವ ವಿಷಯೋ ಹ್ಯುಪಭುಜ್ಯತೇ।
> ತದಿಂದ್ರಿಯಗತೇ ಲಿಂಗೇ ಹ್ಯರ್ಪಣಂ ಸೂಕ್ಷ್ಮಮೀರಿತಮ್॥
> ಸಮರ್ಪಣ ವಿಶೇಷಂ ಯೇ ಭಕ್ತಾಃ ಸಮ್ಯಗ್ವಿಜಾನತೇ।
> ಶಂಭೋಃ ಪ್ರಸಾದಮತುಲಮಶ್ರಮಂ ವಿಂದತೇ ಹಿ ತೇ॥[೪೨]

ಯಾವ ಯಾವ ಇಂದ್ರಿಯದ ಮೂಲಕ ಯಾವ ವಿಷಯವು ಸೇವಿಸಲ್ಪಡುವುದೋ ಅದನ್ನು ಆಯಾಯ ಇಂದ್ರಿಯದಲ್ಲಿರುವ ಲಿಂಗಕ್ಕೆ ಅರ್ಪಿಸುವುದು ಸೂಕ್ಷ್ಮ ಸಮರ್ಪಣವೆಂದು ಹೆಸರು. ಯಾವ ಭಕ್ತರು ಈ ಸಮರ್ಪಣ ವಿಶೇಷವನ್ನು ಸರಿಯಾಗಿ ತಿಳಿದುಕೊಳ್ಳುವರೋ ಅವರು ಶಂಭುವಿನ ಎಣೆಯಿಲ್ಲದ ಪ್ರಸಾದವನ್ನು ಶ್ರಮವಿಲ್ಲದೆ ಹೊಂದುತ್ತಾರೆ.

---

೪೦. ಅದೇ, ಶ್ಲೋ.೨೩.

೪೧. ಚನ್ನಬಸವಣ್ಣನವರ ವಚನಗಳು, ವ.ಸಂ. ೧೩೩೨.

೪೨. ಚಂದ್ರಜ್ಞಾನಾಗಮ, ಉ.ಭಾ, ಕ್ರಿ.ಪಾ., ಶ್ಲೋ.೩೧-೩೨.

೭. ಸೂಕ್ಷ್ಮ ಸಮರ್ಪಣ:

ಸೂಕ್ಷ್ಮ ಸಮರ್ಪಣೆಗೆ ಸಂಬಂಧಪಟ್ಟಂತೆ ಭಕ್ತ ಮುಂತಾದ ಯಾವ ಸ್ಥಲದಲ್ಲಿ, ಕ್ರಿಯಾ ಮುಂತಾದ ಯಾವ ಶಕ್ತಿಯಿಂದ ಕೂಡಿದ, ನಾಸಿಕ ಮುಂತಾದ ಯಾವ ಅಂಗದಲ್ಲಿರುವ, ಸದ್ಯೋಜಾತ ಮುಂತಾದ ಯಾವ ಮುಖದ ಸ್ವರೂಪವಾದ, ಆಚಾರಲಿಂಗ ಮುಂತಾದ ಯಾವ ಲಿಂಗಕ್ಕೆ, ಗಂಧ ಮುಂತಾದ ಯಾವ ಪ್ರಸಾದವನ್ನು, ಸದ್ಭಕ್ತಿ ಮುಂತಾದ ಯಾವ ಭಕ್ತಿಯ ಮೂಲಕ, ಚಿತ್ತ ಮುಂತಾದ ಯಾವ ಹಸ್ತದಿಂದ ಅರ್ಪಿಸಬೇಕು ಎಂಬುದನ್ನು ಕಾರಣಾಗಮವು ವಿವರಿಸುತ್ತದೆ. ಈ ವಿವರಗಳನ್ನು ಆಯಾಯ ಸ್ಥಲಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡು ಚನ್ನಬಸವಣ್ಣನವರು ತಮ್ಮ ಆರು ವಚನಗಳಲ್ಲಿ ಸಂಬಂಧಪಟ್ಟ ಮಹಾಭೂತ, ಸಾದಾಖ್ಯ ಮತ್ತು ಕಲೆಗಳನ್ನು ಜೋಡಿಸಿ ಸೂಕ್ಷ್ಮ ಸಮರ್ಪಣದ ವಿಷಯವನ್ನು ನಿರೂಪಿಸಿದ್ದಾರೆ. ಕಾರಣಾಗಮ ಶ್ಲೋಕಗಳು ಮತ್ತು ತತ್ಸಂವಾದಿಗಳಾದ ಚನ್ನಬಸವಣ್ಣನವರ ವಚನಗಳನ್ನು ಇಲ್ಲಿ ಕೊಡಲಾಗಿದೆ:

೧. ಭಕ್ತಸ್ಥಲೇ ಕ್ರಿಯಾಶಕ್ತಿಯುತೇ ವೈ ನಾಸಿಕಾಂಗಕೇ।
ಆಚಾರಲಿಂಗಸಂಜ್ಞೇಽಸ್ಮಿನ್ ಸದ್ಯೋಜಾತಮುಖಾತ್ಮಕೇ॥
ಗಂಧಪ್ರಸಾದಂ ಸದ್ಭಕ್ತ್ಯಾ ಚಿತ್ತಹಸ್ತೇನ ಚಾರ್ಪಯೇತ್॥[೪೩]

ಭಕ್ತಸ್ಥಲದಲ್ಲಿ ಕ್ರಿಯಾಶಕ್ತಿಯುಕ್ತವಾದ, ಸದ್ಯೋಜಾತಮುಖರೂಪದ, ಆಚಾರಲಿಂಗಕ್ಕೆ ಸದ್ಭಕ್ತಿ (ಶ್ರದ್ಧಾಭಕ್ತಿ)ಯಿಂದ, ಸುಚಿತ್ತವೆಂಬ ಹಸ್ತದಿಂದ, ಗಂಧಪದಾರ್ಥವನ್ನು, ನಕಾರ ಮಂತ್ರವನ್ನು ಉಚ್ಚರಿಸುತ್ತಾ ನಾಸಿಕದ ಮೂಲಕ ಅರ್ಪಿಸಬೇಕು.

೧. ಭಕ್ತಂಗೆ ಪೃಥ್ವಿಯೆ ಅಂಗ, ಆ ಅಂಗಕ್ಕೆ ಸುಚಿತ್ತವೆ ಹಸ್ತ
ಆ ಹಸ್ತಕ್ಕೆ ಕರ್ಮಸಾದಾಖ್ಯ ಆ ಸಾದಾಖ್ಯಕ್ಕೆ ಕ್ರಿಯಾಶಕ್ತಿ
ಆ ಶಕ್ತಿಗೆ ಆಚಾರವೇ ಲಿಂಗ, ಆ ಲಿಂಗಕ್ಕೆ ನಿವೃತ್ತಿ ಕಲೆ,
ಆ ಕಲೆಗೆ ಘ್ರಾಣೇಂದ್ರಿಯವೇ ಮುಖ
ಆ ಮುಖಕ್ಕೆ ಸುಪರಿಮಳ ದ್ರವ್ಯಂಗಳನು
ರುಚಿತೃಪ್ತಿಯನರಿದು ಸದ್ಭಕ್ತಿಯಿಂದರ್ಪಿಸಿ,
ಸುಗಂಧ ಪ್ರಸಾದವ ಭೋಗಿಸಿ ಸುಖಿಸುತ್ತಿಹನು
ಕೂಡಲ ಚನ್ನಸಂಗಾ, ನಿಮ್ಮ ಭಕ್ತನು[೪೩(ಅ)]

---

೪೩. ಕಾರಣಾಗಮ, ಉತ್ತರಭಾಗ, ಕ್ರಿ.ಪಾ., ೭.೬೦;

೪೩(ಅ). ಚನ್ನಬಸವಣ್ಣನವರ ವಚನಗಳು, ವ.ಸಂ. ೨೪೭.

೨. ಮಾಹೇಶ್ವರಸ್ಥಲೇ ಜ್ಞಾನಶಕ್ತಿಕೇ ರಸನಾಂಗಕೇ।
ಗುರುಲಿಂಗಾಭಿಧೇ ವಾಮದೇವವಕ್ತ್ರೇ ವಿಶೇಷತಃ॥
ಬುದ್ಧಿಹಸ್ತೇನ ತು ರುಚಿಂ ನಿಷ್ಠಾಭಕ್ತ್ಯಾ ಸಮರ್ಪಯೇತ್॥[೪೪]

ಮಾಹೇಶ್ವರ ಸ್ಥಲದಲ್ಲಿ ಜ್ಞಾನಶಕ್ತಿ ವಿಶಿಷ್ಟವಾದ, ವಾಮದೇವ ಮುಖರೂಪದ, ಗುರುಲಿಂಗಕ್ಕೆ, ನಿಷ್ಠಾಭಕ್ತಿಯಿಂದ, ಸುಬುದ್ಧಿ ಎಂಬ ಹಸ್ತದಿಂದ, ರಸಪದಾರ್ಥವನ್ನು, ಮಃಕಾರ ಮಂತ್ರವನ್ನು ಪಠಿಸುತ್ತಾ, ರಸನೇಂದ್ರಿಯದ ಮೂಲಕ ಅರ್ಪಿಸಬೇಕು.

೨. ಮಾಹೇಶ್ವರಂಗೆ ಅಪ್ಪುವೆ ಅಂಗ, ಆ ಅಂಗಕ್ಕೆ ಸುಬುದ್ಧಿಯೆ ಹಸ್ತ
ಆ ಹಸ್ತಕ್ಕೆ ಕರ್ತೃಸಾದಾಖ್ಯ, ಆ ಸಾದಾಖ್ಯಕ್ಕೆ ಜ್ಞಾನಶಕ್ತಿ
ಆ ಶಕ್ತಿಗೆ ಗುರುಲಿಂಗ, ಆ ಲಿಂಗಕ್ಕೆ ಪ್ರತಿಷ್ಠೆಯ ಕಲೆ,
ಆ ಕಲೆಗೆ ಜಿಹ್ವೇಂದ್ರಿಯವೆ ಮುಖವು
ಆ ಮುಖಕ್ಕೆ ಸುರಸದ್ರವ್ಯಂಗಳ ರೂಪು, ರುಚಿ-ತೃಪ್ತಿಯನರಿದು
ನೈಷ್ಠಿಕ ಭಕ್ತಿಯಿಂದರ್ಪಿಸಿ, ಸುಪ್ರಸಾದವ ಭೋಗಿಸಿ ಸುಖಿಸುತ್ತಿಹನು
ಕೂಡಲ ಚೆನ್ನಸಂಗಾ, ನಿಮ್ಮ ಮಾಹೇಶ್ವರ[೪೪(ಅ)]

೩. ಸ್ಥಲೇ ಪ್ರಸಾದಿಸಂಜ್ಞೇಽಸ್ಮಿನ್ ಇಚ್ಛಾಶಕ್ತಿಸಮನ್ವಿತೇ।
ದೃಗಂಗಕೇಽಘೋರಮುಖೇ ಶಿವಲಿಂಗಾಭಿಧೇ ಪುನಃ॥
ಭಕ್ತ್ಯಾವಧಾನಯಾ ರೂಪಮ್ ಅಹಂಕಾರೇಣ ಚಾರ್ಪಯೇತ್॥

ಪ್ರಸಾದಿ ಸ್ಥಲದಲ್ಲಿ ಇಚ್ಛಾಶಕ್ತಿ ವಿಶಿಷ್ಟವಾದ, ಅಘೋರ ಮುಖರೂಪದ ಶಿವಲಿಂಗಕ್ಕೆ ಅವಧಾನ ಭಕ್ತಿಯಿಂದ, ಅಹಂಕಾರ ಹಸ್ತದಿಂದ, ರೂಪಪದಾರ್ಥವನ್ನು, ಶಿಕಾರ ಮಂತ್ರವನ್ನುಚ್ಚರಿಸಿ ನೇತ್ರೇಂದ್ರಿಯದ ಮೂಲಕ ಅರ್ಪಿಸಬೇಕು.

೩. ಪ್ರಸಾದಿ ಅಗ್ನಿಯೆ ಅಂಗ, ಆ ಅಂದಕ್ಕೆ ನಿರಹಂಕಾರವೇ ಹಸ್ತ
ಆ ಹಸ್ತಕ್ಕೆ ಮೂರ್ತಿ(ಮೂರ್ತ)ಸಾದಾಖ್ಯ, ಆ ಸಾದಾಖ್ಯಕ್ಕೆ ಇಚ್ಛಾಶಕ್ತಿ
ಆ ಶಕ್ತಿಗೆ ಶಿವನೆ ಲಿಂಗ, ಆ ಲಿಂಗಕ್ಕೆ ವಿದ್ಯೆಯೆ ಕಲೆ
ಆ ಕಲೆಗೆ ನೇತ್ರೇಂದ್ರಿಯವೆ ಮುಖ
ಆ ಮುಖಕ್ಕೆ ಸುರೂಪದ್ರವ್ಯಂಗಳನು,
ರೂಪು ರುಚಿ ತೃಪ್ತಿಯನರಿದು, ಅವಧಾನ ಭಕ್ತಿಯಿಂದರ್ಪಿಸಿ
ಆ ಸುರೂಪಪ್ರಸಾದವನು ಭೋಗಿಸಿ ಸುಖಿಸುತಿಹನು
ಕೂಡಲ ಚೆನ್ನಸಂಗಾ, ನಿಮ್ಮ ಪ್ರಸಾದಿ.[೪೫(ಅ)]

---

೪೪. ಅದೇ, ಕ್ರಿ.ಪಾ., ೭.೬೧ ೪೪(ಅ). ಅದೇ, ವ.ಸಂ. ೪೯೮.

೪೫. ಅದೇ, ಕ್ರಿ.ಪಾ., ೭.೬೨ ೪೫(ಅ). ಅದೇ, ವ.ಸಂ. ೬೮೧.

೪. ಪ್ರಾಣಲಿಂಗಿಸ್ಥಲೇ ತ್ವಾದಿಶಕ್ತಿಯುತೇ ತ್ವಗಂಕೇ।
ಚರಲಿಂಗಾಭಿಧೇ ತತ್ಪುರುಷವಕ್ತ್ರೇ ದೃಢವ್ರತಃ॥
ಭಕ್ತ್ಯಾನುಭವಯಾ ಮನೋಹಸ್ತೇನ ಸ್ಪರ್ಶಮರ್ಪಯೇತ್॥[೪೬]

ಪ್ರಾಣಲಿಂಗಿಸ್ಥಲದಲ್ಲಿ ಆದಿಶಕ್ತಿಯುಕ್ತವಾದ, ತತ್ಪುರುಷ ಮುಖರೂಪದ ಚರ(ಜಂಗಮ) ಲಿಂಗಕ್ಕೆ, ಅನುಭವ ಭಕ್ತಿಯಿಂದ, ಸುಮನಸ್ಸೆಂಬ ಹಸ್ತದಿಂದ, ಸ್ಪರ್ಶ ಪದಾರ್ಥವನ್ನು ಚರ್ಮೇಂದ್ರಿಯದ ಮೂಲಕ, ವಾಕಾರ ಮಂತ್ರ ಪುರಃಸರವಾಗಿ ಸಮರ್ಪಿಸಬೇಕು.

೪. ಪ್ರಾಣಲಿಂಗಿಗೆ ವಾಯುವೆ ಅಂಗ, ಆ ಅಂಗಕ್ಕೆ ಸುಮನವೆ ಹಸ್ತ
ಆ ಹಸ್ತಕ್ಕೆ ಅಮೂರ್ತಿ(ರ್ತ)ಸಾದಾಖ್ಯ ಆ ಸಾದಾಖ್ಯಕ್ಕೆ ಆದಿಶಕ್ತಿ,
ಆ ಶಕ್ತಿಗೆ ಜಂಗಮಲಿಂಗ, ಆ ಲಿಂಗಕ್ಕೆ ಶಾಂತಿ ಕಲೆ
ಆ ಕಲೆಗೆ ತ್ವಗಿಂದ್ರಿಯವೆ ಮುಖ ಆ ಮುಖಕ್ಕೆ ಸ್ಪರ್ಶ ದ್ರವ್ಯಂಗಳನು,
ರೂಪುರುಚಿ ತೃಪ್ತಿಯನರಿದು, ಅನುಭಾವಭಕ್ತಿಯಿಂದರ್ಪಿಸಿ,
ಆ ಸುಸ್ಪರ್ಶ ಪ್ರಸಾದವನು ಭೋಗಿಸಿ ಸುಖಿಸುತ್ತಿಹನು
ಕೂಡಲಚನ್ನಸಂಗಾ, ನಿಮ್ಮ ಪ್ರಾಣಲಿಂಗಿ.[೪೬(ಅ)]

೫. ಶರಣಸ್ಥಲೇ ಪರಯಾ ಶಕ್ತ್ಯಾ ಯುಕ್ತೇ ಶ್ರವೋಽಂಗಕೇ।
ಪ್ರಸಾದಲಿಂಗೇ ತ್ವೀಶಾನಮುಖೇ ಶಬ್ದಪ್ರಸಾದಕಮ್॥
ಆನಂದಭಕ್ತ್ಯಾ ಸುಜ್ಞಾನಹಸ್ತೇನೈವ ಸಮರ್ಪಯೇತ್॥[೪೭]

ಶರಣಸ್ಥಲದಲ್ಲಿ ಪರಾಶಕ್ತಿ ವಿಶಿಷ್ಟವಾದ, ಈಶಾನ ಮುಖರೂಪದ ಪ್ರಸಾದ ಲಿಂಗಕ್ಕೆ, ಆನಂದ ಭಕ್ತಿಯಿಂದ ಸುಜ್ಞಾನ ಹಸ್ತದಿಂದ, ಶಬ್ದ ಪದಾರ್ಥವನ್ನು ಯಕಾರ ಮಂತ್ರವನ್ನು ಜಪಿಸುತ್ತಾ ಶ್ರೋತ್ರೇಂದ್ರಿಯದ ಮೂಲಕ ಸಮರ್ಪಿಸಬೇಕು.

೫. ಶರಣಂಗೆ ಆಕಾಶವೆ ಅಂಗ, ಆ ಅಂಗಕ್ಕೆ ಸುಜ್ಞಾನವೆ ಹಸ್ತ,
ಆ ಹಸ್ತಕ್ಕೆ ಶಿವಸಾದಾಖ್ಯ, ಆ ಸಾದಾಖ್ಯಕ್ಕೆ ಪರಾಶಕ್ತಿ,
ಆ ಶಕ್ತಿಗೆ ಪ್ರಸಾದವೆ ಲಿಂಗ, ಆ ಲಿಂಗಕ್ಕೆ ಶಾಂತ್ಯತೀತನೆ ಕಲೆ,
ಆ ಕಲೆಗೆ ಶ್ರೋತ್ರೇಂದ್ರಿಯವೆ ಮುಖ
ಆ ಮುಖಕ್ಕೆ ಸುಶಬ್ದದ್ರವ್ಯಂಗಳನು
ರೂಪುರುಚಿ ತೃಪ್ತಿಯನರಿದು, ಆನಂದಭಕ್ತಿಯಿಂದರ್ಪಿಸಿ,
ಆ ಸುಶಬ್ದ ಪ್ರಸಾದವ ಭೋಗಿಸಿ ಸುಖಿಸುತ್ತಿಹನು.
ಕೂಡಲಚನ್ನಸಂಗಾ, ನಿಮ್ಮ ಶರಣ.[೪೭(ಅ)]

---

೪೬. ಅದೇ, ಕ್ರಿ.ಪಾ., ೨.೬೩ ೪೬(ಅ). ಅದೇ, ವ.ಸಂ. ೯೪೪.
೪೭. ಅದೇ, ಕ್ರಿ.ಪಾ., ೨.೬೪ ೪೭(ಅ). ಅದೇ, ವ.ಸಂ. ೧೨೪೩,

೬. ಐಕ್ಯಸ್ಥಲೇ ತು ಚಿಚ್ಛಶಕ್ತಿಯುತೇ ವೈ ಮಾನಸಾಂಗಕೇ।
ಮಹಾಲಿಂಗೇ ಪರಶಿವಮುಖೇ ಸಂಕಲ್ಪಮರ್ಪಯೇತ್॥
ಸದ್ಭಾವಾಭಿಖ್ಯಹಸ್ತೇನ ಭಕ್ತ್ಯಾ ಸಮರಸಾಖ್ಯಯಾ॥[೪೮]

ಐಕ್ಯಸ್ಥಲದಲ್ಲಿ ಚಿಚ್ಛಕ್ತಿ ವಿಶಿಷ್ಟವಾದ, ಪರಶಿವಮುಖ ಸ್ವರೂಪದ, ಮಹಾಲಿಂಗಕ್ಕೆ ಸಮರಸ ಭಕ್ತಿಯ ಮೂಲಕ ಸದ್ಭಾವವೆಂಬ ಹಸ್ತದಿಂದ, ಓಂಕಾರ ಮಂತ್ರವನ್ನು ಜಪಿಸುತ್ತಾ ಮನಸ್ಸಿನ ಮೂಲಕ ಸಮರ್ಪಿಸಬೇಕು.

೬. ಐಕ್ಯಂಗೆ ಆತ್ಮನೆ ಅಂಗ, ಆ ಅಂಗಕ್ಕೆ ಸದ್ಭಾವವೇ ಹಸ್ತ
ಆ ಹಸ್ತಕ್ಕೆ ಮಹಾಸಾದಾಖ್ಯ ಆ ಸಾದಾಖ್ಯಕ್ಕೆ ಚಿಚ್ಛಕ್ತಿ
ಆ ಶಕ್ತಿಗೆ ಮಹಾಲಿಂಗ, ಆ ಲಿಂಗಕ್ಕೆ ಶಾಂತ್ಯತೀತೋತ್ತರವೆ ಕಲೆ,
ಆ ಕಲೆಗೆ ಹೃದಯೇಂದ್ರಿಯವೆ ಮುಖ
ಆ ಮುಖಕ್ಕೆ ಸುಪರಿಣಾಮ ದ್ರವ್ಯಂಗಳನು,
ರೂಪುರುಚಿ ತೃಪ್ತಿಯನರಿದು, ಸಮರಸಭಕ್ತಿಯಿಂದರ್ಪಿಸಿ,
ಆ ಸುಪರಿಣಾಮ ಪ್ರಸಾದವ ಭೋಗಿಸಿ ಸುಖಿಸುತಿರ್ಪನು
ಕೂಡಲ ಚನ್ನಸಂಗಾ, ನಿಮ್ಮ ಲಿಂಗೈಕ್ಯನು[೪೮(ಅ)]

ಹೀಗೆ ಬಸವಣ್ಣನವರು ಗಂಧ ಮುಂತಾದ ವಿಷಯಗಳನ್ನು ಆಯಾಯ ಇಂದ್ರಿಯಗಳ ಮೂಲಕ ಆಯಾಯ ಭಕ್ತಿಗಳಿಂದ ಆಯಾಯ ಲಿಂಗಗಳಿಗೆ ಅರ್ಪಿಸಿ ಮತ್ತೆ ಅವುಗಳನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸುವ ಮತ್ತು ಆನಂದಿಸುವ ಸೂಕ್ಷ್ಮಾರ್ಪಣದ ಮರ್ಮವನ್ನು ಸಕಲ ಪರಿಕರಗಳೊಂದಿಗೆ ಬಿಚ್ಚಿಟ್ಟಿದ್ದಾರೆ. ಇದನ್ನೇ ಅವರು ಮಿಶ್ರಾರ್ಪಣವೆಂದು ಕರೆಯುತ್ತಾರೆ. ಇದಕ್ಕೆಲ್ಲ ಅವರಿಗೆ ಮೂಲಸ್ಫೂರ್ತಿಯು ಕಾರಣಾಗಮದಲ್ಲಿದೆ ಎಂಬುದನ್ನು ಗಮನಿಸಬೇಕು.

## ೮. ಪಂಚಾಚಾರಗಳು:

ಶೈವಾಗಮಗಳ ಪ್ರಕಾರ ದೀಕ್ಷೆಯ ಅನಂತರ ಗುರುವು ಕೊಡುವ ಉಪದೇಶವು ಅಷ್ಟಾವರಣ ಪಂಚಾಚಾರಗಳಲ್ಲಿ ಶ್ರದ್ಧೆಯನ್ನೇ ಒತ್ತಿ ಹೇಳುತ್ತದೆ:

ಅಷ್ಟಾಸ್ವಾವರಣೇಷು ತ್ವಂ ಶ್ರದ್ಧಾಂ ಕುರು ಪ್ರಯತ್ನತಃ।
ಪ್ರವರ್ತಸ್ವ ಮಹಾಬುದ್ಧೇ ಪಂಚಾಚಾರೇಷ್ವಪಿ ಕ್ರಮಾತ್॥[೪೯]

ಚಂದ್ರಜ್ಞಾನಾಗಮವು ಪಂಚಾಚಾರಗಳನ್ನು ಹೆಸರಿಸಿ ಅವುಗಳನ್ನು ಸಂಕ್ಷಿಪ್ತವಾಗಿ ಹೀಗೆ ನಿರೂಪಿಸುತ್ತದೆ:

---

೪೮. ಅದೇ, ಕ್ರಿ.ಪಾ., ೭.೬೫ ೪೮(ಅ). ಅದೇ, ವ.ಸಂ. ೧೪೧೭

೪೯. ಕಾರಣಾಗಮ, ಉತ್ತರಭಾಗ, ಕ್ರಿಯಾಪಾದ, ೧.೧೨೮.

ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ।
ಭೃತ್ಯಾಚಾರೋ ಗಣಚಾರಃ ಪಂಚಾಚಾರಾಃ ಪ್ರಕೀರ್ತಿತಾಃ॥
ಗುರುಣಾ ದತ್ತಲಿಂಗದ್ವೈ ನಾಸ್ತಿ ದೈವಂ ಮಹೀತಲೇ।
ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ॥
ಧರ್ಮಾರ್ಜಿತೇನ ದ್ರವ್ಯೇಣ ಯತ್ಸಂತರ್ಪಣಮನ್ವಹಮ್।
ಗುರು-ಲಿಂಗ-ಜಂಗಮಾನಂ ಸದಾಚಾರ ಇತಿ ಸ್ಮೃತಃ॥
ಶಿವ ಏವ ಪರಂ ಬ್ರಹ್ಮ ಪಂಚಕೃತ್ಯಪರಾಯಣಮ್।
ನತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ॥
ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾದಿಕಸ್ಯ ಚ।
ನ ಶೃಣೋತಿ ಚ ಯನ್ನಿಂದಾಂ ಸ ಗಣಾಚಾರ ಉಚ್ಯತೇ॥
ಶಿವಭಕ್ತಜನಾಃ ಸರ್ವೇ ವರಿಷ್ಠಾಃ ಪೃಥಿವೀತಲೇ।
ತೇಷಾಂ ಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ॥[೫೦]

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ -ಇವು ಪ್ರಸಿದ್ಧವಾದ ಪಂಚಾಚಾರಗಳು. ಗುರುವಿತ್ತ ಲಿಂಗದ ಹೊರತು ಬೇರೆ ಯಾವ ದೈವವೂ ಭೂಮಿಯಲ್ಲಿಲ್ಲ, ಎಂಬ ಭಾವವನ್ನು ಇಷ್ಟಲಿಂಗದಲ್ಲಿಡುವುದೇ ಲಿಂಗಾಚಾರ. ಧರ್ಮದಿಂದ ಗಳಿಸಿದ ಹಣದಿಂದ ನಿತ್ಯವೂ ಗುರು-ಲಿಂಗ-ಜಂಗಮರ ಸಂತರ್ಪಣೆಯೇ ಸದಾಚಾರ. ಶಿವನೇ ಪಂಚಕೃತ್ಯಗಳಲ್ಲಿ ಪರಾಯಣನಾದ ಪರಬ್ರಹ್ಮ, ಅವನ ಹೊರತು ಬೇರೆ ಗತಿಯಿಲ್ಲ, ಎಂಬುದೇ ಶಿವಾಚಾರ. ಶಿವನ, ಶಿವಭಕ್ತನ, ಶಿವಧರ್ಮದ ನಿಂದೆಯನ್ನು ಕೇಳದಿರುವುದೇ ಗಣಾಚಾರ. ಶಿವಭಕ್ತ ಜನರೆಲ್ಲರೂ ಈ ಭೂಮಿಯ ಮೇಲೆ ಶ್ರೇಷ್ಠರು, ಅವರ ಸೇವಕನು ನಾನು ಎಂಬುದೇ ಭೃತ್ಯಾಚಾರ.

ಇವೇ ವಿಚಾರಗಳನ್ನು ಗರ್ಭೀಕರಿಸಿ ಚನ್ನಬಸವಣ್ಣನವರು ಹೀಗೆ ಹೇಳಿದ್ದಾರೆ:

ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ
ಪಂಚಾಚಾರದ ಆಚರಣೆಯೆಂತೆಂದಡೆ:
ಲಿಂಗವಲ್ಲದೆ ಅನ್ಯವನರಿಯದಿಹುದೇ ಲಿಂಗಾಚಾರ.
ಸಜ್ಜನ ಕಾಯಕದಲ್ಲಿ ತಂದು ಗುರು-ಲಿಂಗ-ಜಂಗಮಕ್ಕೆ ನೀಡಿ,
ಸತ್ಯಶುದ್ಧನಾಗಿಹುದೆ ಸದಾಚಾರ.
ಶಿವಭಕ್ತರಲ್ಲಿ ಕುಲಗೋತ್ರ ಜಾತಿವರ್ಣಾಶ್ರಯವನರಸದೆ
ಅವರೊಕ್ಕುದ ಕೊಂಬುದೆ ಶಿವಾಚಾರ.
ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ.
ಶಿವಶರಣರೆ ಹಿರಿಯರಾಗಿ ತಾನೆ ಕಿರಿಯನಾಗಿ,
ಭಯಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ.

೫೦. ಚಂದ್ರಜ್ಞಾನಾಗಮ, ಉತ್ತರಭಾಗ, ಕ್ರಿಯಾಪಾದ, ೯.೪-೯.

ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ ಸಲಹಯ್ಯ
ಪ್ರಭುವೆ, ಕೂಡಲಚನ್ನಸಂಗಮದೇವಾ![೫೧]

ಇಲ್ಲಿ ಶಿವಾಚಾರದ ಪರಿಕಲ್ಪನೆಯು ಆಗಮಕ್ಕಿಂತ ಭಿನ್ನವಾಗಿದೆ. ಉಳಿದ ನಾಲ್ಕು ಆಚಾರಗಳ ಬಗ್ಗೆ ಹೇಳಿರುವುದು ಆಗಮದಲ್ಲಿ ಬಂದಿರುವ ವಿಚಾರಕ್ಕೆ ಸಂವಾದಿಯಾಗಿದೆ.

### ೬. ಸರ್ವಾಂಗಲಿಂಗ ಸಾಹಿತ್ಯ

ಎಲ್ಲಾ ಅಂಗಗಳಲ್ಲಿ ಲಿಂಗಸಾಹಿತ್ಯವನ್ನು ಶೈವಾಗಮಗಳು ಮನೋಹರವಾಗಿ ಮಾಡಿ ತೋರಿಸುತ್ತವೆ. ಉದಾಹರಣೆಗೆ ಚಂದ್ರಜ್ಞಾನಾಗಮದಲ್ಲಿ ನೋಡಿರಿ. ಅಲ್ಲಿ ಅದನ್ನು ಹೀಗೆ ಮಾಡಿ ತೋರಿಸಲಾಗಿದೆ:

ಆಯುಷಃ ಪ್ರಾಣಮಿತ್ಯಾದಿಮಂತ್ರಾನ್ ಸಮ್ಯಗನುಸ್ಮರನ್।
ಸರ್ವಾಂಗಲಿಂಗಸಾಹಿತ್ಯಂ ತತಃ ಕುರ್ಯಾತ್ ಪ್ರಯತ್ನತಃ॥
ಸರ್ವೇಷ್ವಂಗೇಷು ಸರ್ವತ್ರ ಸರ್ವದಾ ಸರ್ವತೋಮುಖಮ್।
ಲಿಂಗಂ ಗುರೂಪದೇಶೇನ ಜ್ಞಾತಂ ಯತ್ತತ್ ಪ್ರಕಾಶತೇ॥
ಏಕಮೇವ ಪರಂ ಲಿಂಗಮಂಗೇऽಸ್ಮಿನ್ ಸುಪ್ರತಿಷ್ಠಿತಮ್॥
ಸರ್ವತೋಮುಖಮಾಭಾತಿ ನಾಮರೂಪಕ್ರಿಯಾತ್ಮನಾ॥

...........................................................................

ಹೃದಯಾಂಗೇ ಮಹಾಲಿಂಗಂ ಶ್ರೋತ್ರಾಂಗೇ ತು ಪ್ರಸಾದಕಮ್।
ತ್ವಗಂಗೇ ಚರಲಿಂಗಂ ತು ದೃಗಂಗೇ ಶಿವಲಿಂಗಕಮ್॥
ಜಿಹ್ವಾಂಗೇ ಗುರುಲಿಂಗಂ ತು ನಾಸಿಕಾಂಗೇ ತಥೈವ ಚ।
ಆಚಾರಲಿಂಗಮಶ್ರಾಂತಂ ಸುಪ್ರತಿಷ್ಠಿತಮೇವ ಹಿ॥
ಯಥಾ ಜ್ಞಾನೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಮ್।
ತಥಾ ಕರ್ಮೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಮ್॥[೫೨]

"ಆಯುಷಃ ಪ್ರಾಣಮ್" ಮಂತ್ರಗಳನ್ನು ಸರಿಯಾಗಿ ಸ್ಮರಿಸುತ್ತಾ ಎಲ್ಲಾ ಅಂಗಗಳಲ್ಲಿ ಲಿಂಗಸಂಬಂಧವನ್ನು ಚೆನ್ನಾಗಿ ಮಾಡಬೇಕು. ಎಲ್ಲಾ ಅಂಗಾಂಗಗಳನ್ನು ಎಲ್ಲಾ ಕಡೆ ಎಲ್ಲಾ ಕಾಲದಲ್ಲೂ ಸರ್ವತೋಮುಖವಾದ, ಗುರುವಿನಿಂದ ಉಪದೇಶದಿಂದ ತಿಳಿಯಲ್ಪಟ್ಟು ಪ್ರಕಾಶಿಸುವ, ಶ್ರೇಷ್ಠವಾದ, ಈ ದೇಹದಲ್ಲಿ ನೆಲೆಗೊಳಿಸಲಾದ ಲಿಂಗವು ನಾಮ-ರೂಪ-ಕ್ರಿಯೆಗಳ ಸ್ವರೂಪದಿಂದ ಸರ್ವತೋಮುಖವಾಗಿ ಬೆಳಗುತ್ತಿದೆ... ಹೃದಯಾಂಗದಲ್ಲಿ ಮಹಾಲಿಂಗ, ಶ್ರೋತ್ರಾಂಗದಲ್ಲಿ ಪ್ರಸಾದಲಿಂಗ, ತ್ವಗಂಗದಲ್ಲಿ ಚರಲಿಂಗ, ದೃಗಂಗದಲ್ಲಿ ಶಿವಲಿಂಗ, ಜಿಹ್ವಾಂಗದಲ್ಲಿ ಗುರುಲಿಂಗ, ನಾಸಿಕಾಂಗದಲ್ಲಿ ಆಚಾರಲಿಂಗ. ಹೀಗೀ ಲಿಂಗಗಳು ಅವಿರತವಾಗಿ ಪ್ರತಿಷ್ಠಿತವಾಗಿವೆ. ಜ್ಞಾನೇಂದ್ರಿಯದ

---

೫೧. ಚನ್ನಬಸವಣ್ಣನವರ ವಚನಗಳು, ವ.ಸಂ., ೧೧೫೯.

೫೨. ಚಂದ್ರಜ್ಞಾನಾಗಮ, ಉತ್ತರಭಾಗ, ಚರ್ಯಾಪಾದ, ೨.೧೨-೧೪, ೧೬-೧೮.

ಅಂಗಗಳಲ್ಲಿ ಹೇಳಿದ ಕ್ರಮದಲ್ಲಿ ಹೇಗೆ ಲಿಂಗಗಳು ಸ್ಥಾಪಿಸಲ್ಪಡುತ್ತವೆಯೋ ಅದೇ ಕ್ರಮದಲ್ಲಿ ಕರ್ಮೇಂದಿಯದ ಅಂಗಗಳಲ್ಲಿ ಲಿಂಗಗಳು ಸ್ಥಾಪಿಸಲ್ಪಡಬೇಕು. ಹೇಗೆಂದರೆ ವಾಕ್‌ನಲ್ಲಿ ಪ್ರಸಾದಲಿಂಗ, ಪಾಣಿಯಲ್ಲಿ ಚರಲಿಂಗ, ಪಾದದಲ್ಲಿ ಶಿವಲಿಂಗ, ಪಾಯುವಿನಲ್ಲಿ ಗುರುಲಿಂಗ, ಉಪಸ್ಥದಲ್ಲಿ ಆಚಾರಲಿಂಗ. ಈ ಎಲ್ಲಾ ವಿವರಗಳನ್ನು ಸೂಕ್ಷ್ಮಾಗಮವು ಯಥಾವತ್ತಾಗಿ ಕೊಟ್ಟಿದೆ.[೫೩] ಚನ್ನಬಸವಣ್ಣನವರು ಈ ಎಲ್ಲಾ ವಿವರಗಳನ್ನು ತಮ್ಮ ಒಂದು ದೀರ್ಘವಾದ ವಚನದಲ್ಲಿ ಕೊಟ್ಟಿದ್ದಾರೆ, ನೋಡಿರಿ:

ಎನ್ನ ಸರ್ವಾಂಗವೆಲ್ಲವೂ ಲಿಂಗವಾದ ಪರಿಕ್ರಮವೆಂತೆಂದಡೆ:
ಶ್ರೀಗುರು ಬಸವಣ್ಣನುಪದೇಶಿಸಿದ ಇಷ್ಟಲಿಂಗವೆನ್ನ ಸರ್ವಾಂಗದಲ್ಲಿ
ಭಿನ್ನ ನಾಮಂಗಳಿಂದ ಪ್ರಕಾಶಿಸುತ್ತಿಹುದು.
ಅದೆಂತೆಂದೊಡೆ:
ಸ್ಥೂಲಾಂಗದಲ್ಲಿ ಇಷ್ಟಲಿಂಗವೆಂದು, ಸೂಕ್ಷ್ಮಾಂಗದಲ್ಲಿ ಪ್ರಾಣಲಿಂಗವೆಂದು,
ಕಾರಣಾಂಗದಲ್ಲಿ ಭಾವಲಿಂಗವೆಂದು ತ್ರಿಭೇದವಾಗಿಹುದು.
ಇಂತು ಅಂಗವ ಕುರಿತು ಮೂರು ತೆರನಾಯಿತ್ತು,
ಇನ್ನು ಇಂದ್ರಿಯಂಗಳ ಕುರಿತು ಆರು ತೆರನಾಗಿರ್ಪುದು.
ಅದು ಹೇಗೆಂದಡೆ:
ಹೃದಯದಲ್ಲಿ ಮಹಾಲಿಂಗವೆಂದು, ಶ್ರೋತ್ರದಲ್ಲಿ ಪ್ರಸಾದಲಿಂಗವೆಂದು,
ತ್ವಕ್ಕಿನಲ್ಲಿ ಜಂಗಮಲಿಂಗವೆಂದು, ನೇತ್ರದಲ್ಲಿ ಶಿವಲಿಂಗವೆಂದು,
ಜಿಹ್ವೆಯಲ್ಲಿ ಗುರುಲಿಂಗವೆಂದು, ಘ್ರಾಣದಲ್ಲಿ ಆಚಾರಲಿಂಗವೆಂದು,
ಇಂತು ಷಡಿದ್ರಿಯಂಗಳಲ್ಲಿ ಷಟ್‌ವಿಧ ಲಿಂಗವಾಗಿ ತೋರಿತ್ತು,
ಇಂತೀ ಮರ್ಯಾದೆಯಲ್ಲಿ ಜ್ಞಾನಕರ್ಮೇಂದ್ರಿಯಂಗಳಲ್ಲಿಯೂ
ಲಿಂಗವೇ ಪ್ರಕಾಶಿಸುತ್ತಿಹುದು.
..........................................................[೫೪]

ಇನ್ನೊಂದು ಗಮನಾರ್ಹ ಅಂಶವೆಂದರೆ, ಚನ್ನಬಸವಣ್ಣನವರು ಈಗ ದೊರೆಯುತ್ತಿರುವ ಶೈವಾಗಮಗಳಲ್ಲಿ ದೊರೆಯದಿರುವ ಕೆಲವು ಚಿಂತನೆಯ ಮಿಂಚನ್ನು ಬೆಳಗಿದ್ದಾರೆ.

.......................................................................
ಜ್ಞಾನೇಂದ್ರಿಯಂಗಳಿಗೂ ಕರ್ಮೇಂದ್ರಿಯಂಗಳಿಗೂ ಭೇದವಿಲ್ಲ
ಅದೆಂತೆಂದೊಡೆ:
ಶ್ರೋತಕ್ಕೂ ವಾಕ್ಕಿಗೂ ಭೇದವಿಲ್ಲ, ಶಬ್ದಕ್ಕೂ ವಚನಕ್ಕೂ ಭೇದವಿಲ್ಲ;
ತ್ವಕ್ಕಿಗೂ ಪಾಣಿಗೂ ಭೇದವಿಲ್ಲ, ಸ್ಪರ್ಶಕ್ಕೂ ಆದಾನಕ್ಕೂ ಭೇದವಿಲ್ಲ;

೫೩. ಸೂಕ್ಷ್ಮಾಗಮ, ಉತ್ತರಭಾಗ, ಕ್ರಿಯಾಪಾದ, ೮.೭೭-೮೦.

೫೪. ಚನ್ನಬಸವಣ್ಣನವರ ವಚನಗಳು, ವ.ಸಂ. ೩೪೩.

ನೇತ್ರಕ್ಕೂ ಪಾದಕ್ಕೂ ಭೇದವಿಲ್ಲ, ರೂಪಿಗೂ ಗಮನಕ್ಕೂ ಭೇದವಿಲ್ಲ;
ಜಿಹ್ವೆಗೂ ಗುಹ್ಯಕ್ಕೂ ಭೇದವಿಲ್ಲ, ರಸಕ್ಕೂ ಆನಂದಕ್ಕೂ ಭೇದವಿಲ್ಲ;
ಘ್ರಾಣಕ್ಕೂ ಗುದಕ್ಕೂ ಭೇದವಿಲ್ಲ, ಗಂಧಕ್ಕೂ ವಿಸರ್ಜನಕ್ಕೂ ಭೇದವಿಲ್ಲ
ಇನ್ನು ಶ್ರೋತ್ರವೆಂಬ ಜ್ಞಾನೇಂದ್ರಿಯಕ್ಕೂ ವಾಕ್ಕೆಂಬ ಕರ್ಮೇಂದ್ರಿಯಕ್ಕೂ
ಶಬ್ದ ವಿಷಯ, ಮೂಲಭೂತ ಆಕಾಶ, ಈಶಾನಮೂರ್ತಿ ಅಧಿದೇವತೆ
ತ್ವಕ್ಕೆಂಬ ಜ್ಞಾನೇಂದ್ರಿಯಕ್ಕೂ ಪಾಣಿಯೆಂಬ ಕರ್ಮೇಂದ್ರಿಯಕ್ಕೂ
ಸ್ಪರ್ಶನ ವಿಷಯ, ಮೂಲಭೂತ ವಾಯು, ತತ್ಪುರುಷಮೂರ್ತಿ ಅಧಿದೇವತೆ.
ಜಿಹ್ವೆಯೆಂಬ ಜ್ಞಾನೇಂದ್ರಿಯಕ್ಕೂ ಗುಹ್ಯವೆಂಬ ಕರ್ಮೇಂದ್ರಿಯಕ್ಕೂ
ರಸ ವಿಷಯ, ಮೂಲಭೂತ ಅಪ್ಪು, ವಾಮದೇವ ಮೂರ್ತಿ ಅಧಿದೇವತೆ.
ಘ್ರಾಣವೆಂಬ ಜ್ಞಾನೇಂದ್ರಿಯಕ್ಕೂ ಪಾಯುವೆಂಬ ಕರ್ಮೇಂದ್ರಿಯಕ್ಕೂ
ಗಂಧ ವಿಷಯ, ಮೂಲಭೂತ ಪೃಥಿವಿ, ಸದ್ಯೋಜಾತಮೂರ್ತಿ ಅಧಿದೇವತೆ.
ಇಂತೀ ಜ್ಞಾನೇಂದ್ರಿಯಂಗಳಿಗೂ ಕರ್ಮೇಂದ್ರಿಯಂಗಳಿಗೂ
ಹೃದಯವೇ ಆಶ್ರಯಸ್ಥಾನವಾದ ಕಾರಣ, ಹೃದಯ ಆಕಾಶವೆನಿಸಿತ್ತು,
ಅಲ್ಲಿ ಸ್ಥೂಲ-ಸೂಕ್ಷ್ಮ-ಕಾರಣರೂಪಿಂದೆಲ್ಲಾ ಇಂದ್ರಿಯಂಗಳಿರುತ್ತಿಹವು.
ಗುರೂಪದೇಶದಿಂದ ಎಲ್ಲ ಇಂದ್ರಿಯಂಗಳಲ್ಲಿಯೂ ಲಿಂಗವೆ
ಪ್ರಕಾಶಿಸುತ್ತಿಹುದು.

ಅದು ಹೇಗೆಂದಡೆ:
ಘ್ರಾಣದ ಘ್ರಾಣವೆ ಆಚಾರಲಿಂಗ, ಜಿಹ್ವೆಯ ಜಿಹ್ವೆಯೆ ಗುರುಲಿಂಗ;
ನೇತ್ರದ ನೇತ್ರವೆ ಶಿವಲಿಂಗ, ತ್ವಕ್ಕಿನ ತ್ವಕ್ಕೇ ಜಂಗಮಲಿಂಗ;
ಶ್ರೋತ್ರದ ಶ್ರೋತ್ರವೆ ಪ್ರಸಾದಲಿಂಗ, ಹೃದಯದ ಹೃದಯವೇ ಮಹಾಲಿಂಗ
..................................................[೫೫]

ಇಲ್ಲಿ ವಿಷಯ, ಮೂಲಭೂತ, ಅಧಿದೇವತೆ, ಲಿಂಗಗಳು ಸಮಾನವಾದ್ದರಿಂದ ಆಯಾಯ ಜ್ಞಾನೇಂದ್ರಿಯಗಳಿಗೂ ಆಯಾಯ ಕರ್ಮೇಂದ್ರಿಯಗಳಿಗೂ ಭೇದವಿಲ್ಲ-ವೆಂಬುದು ಅತ್ಯಂತ ಸ್ಪಷ್ಟವಾಗಿದೆ. ಇದು ಆಗಮದಲ್ಲಿ ಹೇಳಿದ ಲಿಂಗಸಾಮ್ಯದ ಆಧಾರದ ಮೇಲೆ ಭೇದವಿಲ್ಲವೆಂಬ ಮೂಲಭೂತ ವಿಷಯವನ್ನು ಅವಲಂಬಿಸಿ ಬೆಳೆದ ವಿಸ್ತಾರವಾಗಿ ಕಾಣುತ್ತದೆ.

## ೧೦. ಲಿಂಗಸ್ಥಲಗಳು ಮತ್ತು ಅವುಗಳ ಭಕ್ತರ ಪ್ರಕಾರಗಳು:

ಭಕ್ತ ಮುಂತಾದ ಆರು ಅಂಗಸ್ಥಲಗಳಿಗೆ ಕ್ರಮವಾಗಿ ಆರು ಲಿಂಗಸ್ಥಲಗಳು ಆಚಾರಲಿಂಗಸ್ಥಲ, ಗುರುಲಿಂಗಸ್ಥಲ, ಶಿವಲಿಂಗಸ್ಥಲ, ಚರಲಿಂಗಸ್ಥಲ, ಪ್ರಸಾದಲಿಂಗ ಸ್ಥಲ ಮತ್ತು ಮಹಾಲಿಂಗಸ್ಥಲ. ಇವುಗಳಲ್ಲಿ ಒಂದೊಂದು ಲಿಂಗದ ಉಪಾಸಕನು ಆರಾರು ಪ್ರಕಾರದವನಾಗುತ್ತಾನೆ ಅದು ಹೇಗೆಂಬುದನ್ನು ಸೂಕ್ಷ್ಮಾಗಮವು ತಿಳಿಸುತ್ತದೆ:

---

೫೫. ಅದೇ, ವ.ಸಂ. ೩೮೩.

ಮೋಹೀ ಭಕ್ತಃ ಪೂಜಕಶ್ಚ ತಥಾ ವೀರಃ ಪ್ರಸಾದವಾನ್।
ಪ್ರಾಣೀ ಚಾಚಾರಲಿಂಗಾದಿಃ ಸ ವೈ ಭಕ್ತೋಽಪಿ ಷಡ್ವಿಧಃ॥[೫೬]

ಆಚಾರಲಿಂಗ, ಗುರುಲಿಂಗ ಮುಂತಾದ ಆರು ವಿಧ ಲಿಂಗಗಳಲ್ಲಿ ಒಂದೊಂದರ ಮೋಹೀ, ಭಕ್ತ, ಪೂಜಕ, ವೀರ, ಪ್ರಸಾದಿ ಮತ್ತು ಪ್ರಾಣಿ ಎಂದು ಆರಾರು ಪ್ರಕಾರದ ಭಕ್ತರು ಇರುತ್ತಾರೆ. ಅವರ ಸ್ವರೂಪ ಹೀಗಿದೆ: (೧) ಸತಿ-ಸುತ ಮುಂತಾದವರ ಮೋಹವನ್ನು ಬಿಟ್ಟವನು, ಶಿವಾಚಾರಕ್ಕೆ ವಿರುದ್ಧವಾದ ಪುತ್ರಾದಿಗಳನ್ನು ತ್ಯಜಿಸಿದವನು ಮತ್ತು ವಿರುದ್ಧ ಆಚಾರಗಳನ್ನು ಬಿಟ್ಟವನು **ಆಚಾರಲಿಂಗ ಮೋಹಿ.** (೨) ಪೂರ್ವ ಆಚಾರಗಳನ್ನು ಬಿಟ್ಟು ಶಿವಾಚಾರವನ್ನು ಸ್ವೀಕರಿಸಿದವನು **ಆಚಾರಲಿಂಗ ಭಕ್ತ.** (೩) ಅನ್ಯದೇವತೆಗಳನ್ನು ಬಿಟ್ಟು ಶಿವಲಿಂಗವನ್ನು ಪೂಜಿಸುತ್ತಾ ಶಿವಾಚಾರವನ್ನು ಪಾಲಿಸುವವನು **ಆಚಾರಲಿಂಗ ಪೂಜಕ.** (೪) ಪ್ರಾಣಕ್ಕೆ ಸಂಚಕಾರ ಬಂದಾಗಲೂ ತನ್ನ ಆಚಾರವನ್ನು ಬಿಡದೆ ನಡೆಸುವವನು **ಆಚಾರಲಿಂಗ ವೀರ.** (೫) ಪವಿತ್ರ ಮತ್ತು ಅಪವಿತ್ರ, ಗ್ರಾಹ್ಯ ಮತ್ತು ಅಗ್ರಾಹ್ಯ, ಇವುಗಳ ಬಗ್ಗೆ ಸಂದೇಹವಿಲ್ಲದ ಸಾಧಕ **ಆಚಾರಲಿಂಗ ಪ್ರಸಾದಿ.** (೬) ಈಶ್ವರನ ನಿಂದೆಯನ್ನು ಎಂದೂ ಕೇಳದಿರುವವನು **ಆಚಾರಲಿಂಗ ಪ್ರಾಣಿ.**

(೭) ಮಾತಾಪಿತೃ ಮುಂತಾದವರ ಮೋಹವನ್ನು ಬಿಟ್ಟು ಗುರುಲಿಂಗದ ಬಗ್ಗೆ ಮೋಹವುಳ್ಳವನು **ಗುರುಲಿಂಗ ಮೋಹಿ.** (೮) ಲೌಕಿಕ ಬಾಂಧವರನ್ನು ಬಿಟ್ಟು ಗುರುಲಿಂಗವೊಂದನ್ನೇ ಬಂಧುವೆಂದು ತಿಳಿಯುವವನು **ಗುರುಲಿಂಗ ಭಕ್ತ.** (೯) ಅನ್ಯ ದೇವತೆಗಳ ಪೂಜೆಯನ್ನು ಬಿಟ್ಟು ಗುರುಲಿಂಗವನ್ನು ಮಾತ್ರ ಪೂಜಿಸುವವನು **ಗುರುಲಿಂಗ ಪೂಜಕ.** (೧೦) ಗುರುವಿನಿಂದ ಉಪದೇಶಿಸಲ್ಪಟ್ಟ ಸದಾಚಾರವನ್ನು ಪಾಲಿಸುತ್ತಾ ಅನ್ಯ ಆಚಾರಗಳನ್ನು ಬಿಟ್ಟವನು **ಗುರುಲಿಂಗ ವೀರ.** (೧೧) ಗುರುವಿನಿಂದ ಆದೇಶಿಸಲ್ಪಟ್ಟ ಶಾಸನವನ್ನು ಮೀರದವನು, ಬೇರೆಲ್ಲ ಶಾಸನಗಳಿಂದ ಮುಕ್ತನಾದವನು **ಗುರುಲಿಂಗ ಪ್ರಸಾದಿ.** (೧೨) ಬೇರೆ ಎಲ್ಲಾ ದೇವತೆಗಳ ಸೇವೆಯನ್ನು ಬಿಟ್ಟು ಕೇವಲ ಗುರುಲಿಂಗ ಸೇವೆಯಲ್ಲಿ ಮಗ್ನನಾದವನು **ಗುರುಲಿಂಗ ಪ್ರಾಣಿ.**

(೧೩) ಬೇರೆಲ್ಲ ರೀತಿಯ ಮೋಹಗಳನ್ನು ಬಿಟ್ಟು ಶಿವಲಿಂಗದ ಮೋಹವನ್ನು ಇಟ್ಟುಕೊಂಡವನು **ಶಿವಲಿಂಗಮೋಹಿ.** (೧೪) ಅನ್ಯದೇವತೆಗಳ ಬಗ್ಗೆ ಭಕ್ತಿ ಇಲ್ಲದವನು **ಶಿವಲಿಂಗ ಭಕ್ತ.** (೧೫) ಬೇರೆಲ್ಲಾ ದೇವತೆಗಳ ಪೂಜೆಯನ್ನು ತ್ಯಜಿಸಿ ಶಿವಲಿಂಗವೊಂದನ್ನೇ ಪೂಜಿಸುವವನು **ಶಿವಲಿಂಗ ಪೂಜಕ.** (೧೬) ಪುಣ್ಯಕ್ಷೇತ್ರ ಮುಂತಾದವುಗಳ ಯಾತ್ರೆಯ ಮೋಹವನ್ನು ಬಿಟ್ಟವನು **ಶಿವಲಿಂಗ ವೀರ.** (೧೭) ಸುಖದುಃಖಗಳಿಲ್ಲದವನು **ಶಿವಲಿಂಗ ಪ್ರಸಾದಿ.** (೧೮) ಸ್ತ್ರೀ ಭೋಗದಿಂದ ದೂರವಾದವನು **ಶಿವಲಿಂಗ ಪ್ರಾಣಿ.**

---

೫೬. ಸೂಕ್ಷ್ಮಾಗಮ, ಕ್ರಿ.ಪಾ., ೮.೩೭.

(೧೯) ಅನ್ಯಮೋಹಗಳಿಂದ ದೂರಾಗಿ ಚರಲಿಂಗವನ್ನೇ ಸರ್ವಸ್ವವೆಂದು ತಿಳಿದವನು **ಚರಲಿಂಗ ಮೋಹಿ**. (೨೦) ದೇಹಾದಿಗಳಲ್ಲಿ ಅಭಿಮಾನವನ್ನು ಬಿಟ್ಟು ಜಂಗಮ ಮಾತ್ರನಲ್ಲಿ ಅಭಿಮಾನವಿಟ್ಟವನು **ಚರಲಿಂಗಭಕ್ತ**. (೨೧) ಬೇರೆ ಪೂಜೆಯನ್ನು ಬಿಟ್ಟು ಚರಲಿಂಗವನ್ನೇ ಪೂಜಿಸುವವನು **ಚರಲಿಂಗ ಪೂಜಕ**. (೨೨) ಅರ್ಥ ಪ್ರಾಣಾದಿಗಳನ್ನು ಚರನಿಗೆ ಪ್ರೀತಿಯಿಂದ ಅರ್ಪಿಸುವವನು **ಚರಲಿಂಗ ವೀರ**. (೨೩) ಎಲ್ಲವನ್ನೂ ಚರನಿಗೆ ಅರ್ಪಿಸಿ ಆ ಪ್ರಸಾದವನ್ನು ಸ್ವೀಕರಿಸುವವನು **ಚರಲಿಂಗ ಪ್ರಸಾದಿ**. (೨೪) ಶಿವಸ್ವರೂಪರಾದ ಜಂಗಮರನ್ನು ತನ್ನ ಪ್ರಾಣದಂತೆ ಭಾವಿಸುವವನು **ಚರಲಿಂಗ ಪ್ರಾಣಿ**.

(೨೫) ಬೇರೆ ಎಲ್ಲಾ ವಸ್ತುಗಳ ರುಚಿಯನ್ನು ಬಿಟ್ಟು ಬೇರೆ ಹಿಂದಿನ ಪೂಜಾ ಪದ್ಧತಿಗಳನ್ನು ತ್ಯಜಿಸಿದವನು **ಪ್ರಸಾದಲಿಂಗ ಮೋಹಿ**. (೨೬) ಪೂಜೆ ಮಾಡದೆ ಆಹಾರವನ್ನು ಸ್ವೀಕರಿಸದವನು **ಪ್ರಸಾದಲಿಂಗ ಭಕ್ತ**. (೨೭) ಪೂಜೆಯ ಅನಂತರ ಪ್ರಸಾದವನ್ನು ಸ್ವೀಕರಿಸುವವನು ಮತ್ತು ಬೇರೆಯವರ ಬಗ್ಗೆ ರಾಗ-ದ್ವೇಷಗಳಿಲ್ಲದವನು **ಪ್ರಸಾದಲಿಂಗ ಪೂಜಕ**. (೨೮) ತನ್ನ ಕೈಯಿಂದ ಪರರ ಧನವನ್ನು ಮುಟ್ಟದವನು **ಪ್ರಸಾದಲಿಂಗ ವೀರ**. (೨೯) ಯಾವುದೇ ದಾನವನ್ನು ತೆಗೆದುಕೊಳ್ಳುವುದಕ್ಕಾಗಲಿ ಕೊಡುವುದಕ್ಕಾಗಿ ಕೈ ಚಾಚದೆ ಪ್ರಸಾದಕ್ಕಾಗಿ ಕೈ ಚಾಚುವವನು **ಪ್ರಸಾದಲಿಂಗ ಪ್ರಸಾದಿ**. (೩೦) ತಾನೂ ಜೀವಹಿಂಸೆ ಮಾಡುವುದಿಲ್ಲ, ಬೇರೆಯವರಿಂದಲೂ ಮಾಡಿಸುವುದಿಲ್ಲ; ಅಂಥವನು ಮತ್ತು ಆತ್ಮಬೋಧವುಳ್ಳವನು **ಪ್ರಸಾದಲಿಂಗ ಪ್ರಾಣಿ**.

(೩೧) ಲೋಕ ವ್ಯವಹಾರವನ್ನು ಬಿಟ್ಟು ಯಾರು ಮಹಾಲಿಂಗ ಪೂಜೆಯಲ್ಲಿ ಮಗ್ನನಾಗಿರುವನೋ ಅವನು **ಮಹಾಲಿಂಗಮೋಹಿ**. (೩೨) ಪೂರ್ವದಲ್ಲಿ ಮಾಡಿದ ಬೇರೆ ಬೇರೆ ಭಕ್ತಿಯನ್ನೋ ಅನುಷ್ಠಾನಾದಿಗಳನ್ನು ತ್ಯಜಿಸಿದವನು **ಮಹಾಲಿಂಗಭಕ್ತ**. (೩೩) ಅಜ್ಞಜನರ ಸಂಪರ್ಕವನ್ನು ಬಿಟ್ಟು ಸಜ್ಜನರೊಂದಿಗೆ ಸಂಪರ್ಕವಿರಿಸಿಕೊಂಡವನು **ಮಹಾಲಿಂಗ ಪೂಜಕ**. (೩೪) ಸೃಷ್ಟಿ, ಸ್ಥಿತಿ, ಲಯ ಮುಂತಾದ ಕಾರ್ಯ ಜೀವಭಾವದೊಂದಿಗೆ ಸಂಬಂಧಿಸಿದ್ದು, ಶಿವಭಾವದ ನೆಲೆಯಲ್ಲಿ ನಿಂತ ಸಾಧಕನು ಅವುಗಳ ಬಗ್ಗೆ ವಿಚಾರ ಮಾಡುವುದಿಲ್ಲ, ಅಂತಹ ವ್ಯಕ್ತಿಯು **ಮಹಾಲಿಂಗ ವೀರ**. (೩೫) ಪೂರ್ವಕೃತ ಕರ್ಮಫಲವನ್ನೆಲ್ಲ ಅಂತರ್ಲಿಂಗಕ್ಕೆ ಸಮರ್ಪಣೆ ಮಾಡಿ ಪಂಕ್ತಿಯಲ್ಲಿ ಕುಳಿತು ಊಟ ಮಾಡುವವನು **ಮಹಾಲಿಂಗ ಪ್ರಸಾದಿ**. (೩೬) ಬಾಹ್ಯ ಪತ್ರ, ಪುಷ್ಪ ಮುಂತಾದವುಗಳಿಂದ ಮಾಡುವ ಪೂಜೆಯನ್ನು ಬಿಟ್ಟು ಆಂತರಿಕ ಭಾವ ಪುಷ್ಪಗಳಿಂದ ಮಹಾಲಿಂಗ ಪೂಜೆ ಮಾಡಿ ತನ್ನನ್ನು ತಾನು ಸಮರ್ಪಣೆ ಮಾಡಿಕೊಳ್ಳುವವನು **ಮಹಾಲಿಂಗ ಪ್ರಾಣಿ**.[೫೬]

---

೫೬. ಅದೇ, ಕ್ರಿಪಾ., ೮.೩೬-೭೫.

ಈ ಮೂವತ್ತಾರು ಲಿಂಗಸ್ಥಲಗಳ ವಿವರಗಳು ಚನ್ನಬಸವಣ್ಣನವರ ಆರು ವಚನಗಳಲ್ಲಿ ಯಥಾವತ್ತಾಗಿ ಮೂಡಿಬಂದಿವೆ:

೧. "ಆಚಾರಲಿಂಗಮೋಹಿತನಾದಡೆ, ಸಖೀ ಸಹೋದರ ಮೋಹವ ಮರೆಯಬೇಕು
ಆಚಾರಲಿಂಗ ಭಕ್ತನಾದಡೆ, ಪೂರ್ವಾಚಾರವ ನಡೆಯಲಾಗದು.
ಆಚಾರಲಿಂಗ ಪೂಜಕನಾದಡೆ, ಅನ್ಯಪೂಜೆಯ ಮಾಡಲಾಗದು.
ಆಚಾರಲಿಂಗ ವೀರನಾದಡೆ, ಹಿಡಿದ ವ್ರತನೇಮವ ಬಿಡಲಾಗದು.
ಆಚಾರಲಿಂಗ ಪ್ರಸಾದಿಯಾದಡೆ, ಅಶುಚಿಯಾಗಿರಲಾಗದು.
ಆಚಾರಲಿಂಗ ಪ್ರಾಣಿಯಾದಡೆ, ಭಕ್ತನಿಂದೆಯ ಕೇಳಲಾಗದು
ಇದು ಕಾರಣ, ಕೂಡಲ ಚನ್ನಸಂಗಯ್ಯನಲ್ಲಿ
ಈ ಆರು ಸಹಿತ ಆಚಾರಲಿಂಗಭಕ್ತಿ.

೨. "ಗುರುಲಿಂಗ ಮೋಹಿತನಾದಡೆ, ಮಾತಾಪಿತರ ಮೋಹವ ಮರೆಯಬೇಕು
ಗುರುಲಿಂಗ ಭಕ್ತನಾದಡೆ, ಪೂರ್ವ ಬಂಧು ಪ್ರೇಮವ ಮಾಡಲಾಗದು.
ಗುರುಲಿಂಗ ಪೂಜಕನಾದಡೆ, ಅನ್ಯಪೂಜೆಯ ಮಾಡಲಾಗದು.
ಗುರುಲಿಂಗ ವೀರನಾದಡೆ, ಗುರುಮಾರ್ಗಾಚಾರದಲ್ಲಿ ನಡೆಯಬೇಕು.
ಗುರುಲಿಂಗ ಪ್ರಸಾದಿಯಾದಡೆ, ಗುರ್ವಾಜ್ಞೆಯ ಮೀರಲಾಗದು.
ಗುರುಲಿಂಗ ಪ್ರಾಣಿಯಾದಡೆ, ಮಾನವರ ಸೇವೆ ಮಾಡಲಾಗದು.
ಇದು ಕಾರಣ, ಕೂಡಲ ಚನ್ನಸಂಗಯ್ಯನಲ್ಲಿ
ಈ ಆರು ಸಹಿತ ಗುರುಲಿಂಗಭಕ್ತಿ.

೩. "ಶಿವಲಿಂಗ ಮೋಹಿತನಾದಡೆ, ಅನ್ಯಮೋಹವ ಮರೆಯಬೇಕು.
ಶಿವಲಿಂಗ ಭಕ್ತನಾದಡೆ, ಅನ್ಯದೈವದ ಭಜನೆ ಮಾಡಲಾಗದು.
ಶಿವಲಿಂಗ ಪೂಜಕನಾದಡೆ, ಅನ್ಯದೈವದ ಪೂಜೆಯ ಮಾಡಲಾಗದು.
ಶಿವಲಿಂಗ ವೀರನಾದಡೆ, ಪುಣ್ಯಕ್ಷೇತ್ರಂಗಳ ಕುರಿತು ಹೋಗಲಾಗದು
ಶಿವಲಿಂಗ ಪ್ರಸಾದಿಯಾದಡೆ, ಅಂಗಭೋಗವ ಮರೆಯಬೇಕು.
ಶಿವಲಿಂಗ ಪ್ರಾಣಿಯಾದಡೆ, ಸತಿಸಂಗವ ಮಾಡಲಾಗದು.
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ,
ಈ ಆರು ಸಹಿತ ಶಿವಲಿಂಗ ಭಕ್ತಿ.

೪. "ಜಂಗಮಲಿಂಗ ಮೋಹಿತನಾದಡೆ, ತನ್ನ ಕುಲಗೋತ್ರ ಮೋಹವ ಮರೆಯಬೇಕು
ಜಂಗಮಲಿಂಗ ಭಕ್ತನಾದಡೆ, ಪೂರ್ವಕುಲವ ಬೆರೆಸಲಾಗದು.
ಜಂಗಮಲಿಂಗ ಪೂಜಕನಾದಡೆ, ಮಾನವರನು ಉಪಥಾವಿಸಲಾಗದು.
ಜಂಗಮಲಿಂಗ ವೀರನಾದಡೆ, ಅರ್ಥವ ಕಟ್ಟಲಾಗದು.
ಜಂಗಮಲಿಂಗ ಪ್ರಸಾದಿಯಾದಡೆ, ಬೇಡಿದಡೆ ಇಲ್ಲೆನ್ನಲಾಗದು.
ಜಂಗಮಲಿಂಗ ಪ್ರಾಣಿಯಾದಡೆ, ಲಾಂಛನದ ನಿಂದೆಯ ಕೇಳಲಾಗದು.
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ
ಈ ಆರು ಸಹಿತ ಜಂಗಮಲಿಂಗ ಭಕ್ತಿ.

೫. "ಪ್ರಸಾದಲಿಂಗ ಮೋಹಿತನಾದಡೆ, ಅಂಗರುಚಿಗೆ ಇಚ್ಛೈಸಲಾಗದು.
ಪ್ರಸಾದಲಿಂಗ ಭಕ್ತನಾದಡೆ, ಪೂರ್ವಾಹಾರವ ಕೊಳ್ಳಲಾಗದು.
ಪ್ರಸಾದಲಿಂಗ ಪೂಜಕನಾದಡೆ, ಅಪ್ರಸಾದಿಗೆ ಉಣಲಿಕ್ಕಾಗದು.
ಪ್ರಸಾದಲಿಂಗ ವೀರನಾದಡೆ, ಅನ್ಯರಿಗೆ ಕೈಯಾನಲಾಗದು.
ಪ್ರಸಾದಲಿಂಗ ಪ್ರಸಾದಿಯಾದಡೆ. ಜೀವಹಿಂಸೆಯ ಮಾಡಲಾಗದು.
ಪ್ರಸಾದಲಿಂಗ ಪ್ರಾಣಿಯಾದಡೆ, ಆತ್ಮನಿಗ್ರಹವ ಮಾಡಲಾಗದು.
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ
ಈ ಆರು ಸಹಿತ ಪ್ರಸಾದಲಿಂಗ ಭಕ್ತಿ.

೬. "ಮಹಾಲಿಂಗ ಮೋಹಿತನಾದಡೆ, ಲೋಕದ ಮೋಹವ ಮರೆಯಬೇಕು.
ಮಹಾಲಿಂಗ ಭಕ್ತನಾದಡೆ, ಪೂರ್ವಭಕ್ತಿಯ ಮಾಡಲಾಗದು.
ಮಹಾಲಿಂಗ ಪೂಜಕನಾದಡೆ, ಅಜ್ಞಾನಿಗಳ ಕೂಡೆ ಸಂಗ-ಸಂಭಾಷಣೆಯ ಮಾಡಲಾಗದು.
ಮಹಾಲಿಂಗ ವೀರನಾದಡೆ, ಪ್ರಳಯಾದಿಗಳಿಗಂಜಲಾಗದು.
ಮಹಾಲಿಂಗ ಪ್ರಸಾದಿಯಾದಡೆ, ಸಮತೆ ನೆಲೆಗೊಳ್ಳಬೇಕು.
ಮಹಾಲಿಂಗ ಪ್ರಾಣಿಯಾದಡೆ, ಮನದ ಕೊನೆಯಲ್ಲಿ ಲಿಂಗದ ನೆನಹು ಹಿಂಗಲಾಗದು.
ಇದುಕಾರಣ, ಕೂಡಲಚನ್ನಸಂಗಯ್ಯನಲ್ಲಿ
ಈ ಆರು ಸಹಿತ ಪ್ರಸಾದಲಿಂಗಭಕ್ತಿ"[೫೮]

ಹೀಗೆ ಅಂಗಸ್ಥಲಗಳ ಮತ್ತು ಲಿಂಗಸ್ಥಲಗಳ ವಿಚಾರದಲ್ಲಿ ಶೈವಾಗಮಗಳಿಗೂ ವಚನ ಸಾಹಿತ್ಯಕ್ಕೂ ನಿಕಟವಾದ ಸಂಬಂಧವಿರುವುದು ಸ್ಪಷ್ಟವಾಗುತ್ತದೆ. ಹಾಗೆಯೇ ಆಚಾರಾದಿ ಲಿಂಗಸ್ಥಲಗಳಲ್ಲಿ ಒಂದೊಂದೂ ಮೂರು ಮೂರಾಗಿ ಹದಿನೆಂಟು ಲಿಂಗಸ್ಥಲಗಳು ಮತ್ತು ಭಕ್ತಾದಿ ಲಿಂಗಸ್ಥಲಗಳಲ್ಲಿ ಒಂದೊಂದೂ ಮೂರು ಮೂರಾಗಿ ಹದಿನೆಂಟು ಅಂಗಸ್ಥಲಗಳು ಸೇರಿ ಒಟ್ಟು ಮೂವತ್ತಾರು ಸ್ಥಲಗಳಾಗುವ ಪ್ರಕ್ರಿಯೆಯಲ್ಲಿಯೂ ಶೈವಾಗಮಗಳಿಗೂ ಮತ್ತು ವಚನ ಸಾಹಿತ್ಯಕ್ಕೂ ನಿಕಟವಾದ ಸಂಬಂಧವಿರುವುದು ಮತ್ತಷ್ಟು ಗೊತ್ತಾಗುತ್ತದೆ.

### ೧೧. ೧೮ ಲಿಂಗಸ್ಥಲಗಳು ಮತ್ತು ೧೮ ಅಂಗಸ್ಥಲಗಳು:

ಆಚಾರಾದಿ ಲಿಂಗಗಳನ್ನು ಹೆಸರಿಸಿಯಾಗಿದೆ. ಅವುಗಳಲ್ಲಿ ಆಚಾರಲಿಂಗ ಸ್ಥಲ ಮೂರುವಿಧ: ಸದಾಚಾರ ಸ್ಥಲ, ನಿಯತಾಚಾರ ಸ್ಥಲ ಮತ್ತು ಗಣಾಚಾರ ಸ್ಥಲವೆಂದು.

ಸ್ಥಲಮಾಚಾರಲಿಂಗಸ್ಯ ತ್ರಿವಿಧ ಶ್ರೂಯತಾಂ ಕ್ರಮಾತ್।
ಸದಾಚಾರಸ್ತು ನಿಯತೋ ಗಣಾಚಾರಸ್ತಥಾಪರಃ॥[೫೯]

---

೫೮. ಚನ್ನಬಸವಣ್ಣನವರ ವಚನಗಳು, ವ.ಸಂ. ೧೪೩-೧೪೮.

೫೯. ಸೂಕ್ಷ್ಮಾಗಮ, ಕ್ರಿ.ಪಾ., ೮.೬.

ಯಾವ ಮಾರ್ಗದಿಂದ ಸಜ್ಜನ ಶಿವಭಕ್ತನನ್ನು ಸದಾ ಸಂತುಷ್ಟನನ್ನಾಗಿ ಮಾಡಬಹುದೋ ಅದು **ಸದಾಚಾರಸ್ಥಲ**-(೧). ತಾನು ಸ್ವೀಕರಿಸಿದ ಆಚಾರವನ್ನು ಎಂದೂಬಿಡದೆ, ಎಂತಹ ಸಂಕಟ ಬಂದರೂ ಪ್ರಾಣವನ್ನೂ ಲೆಕ್ಕಿಸದೆ ಯಾವ ವ್ಯಕ್ತಿ ಆಚರಿಸುತ್ತಾನೋ ಅಂಥವನ ಆಚಾರ **ನಿಯತಾಚಾರಸ್ಥಲ**-(೨). ಗುರು-ಲಿಂಗ-ಜಂಗಮರ ವಿಷಯದಲ್ಲಿ ಯಾವುದೇ ಪ್ರಕಾರದ ನಿಂದೆಯನ್ನು ಕೇಳುವುದಿಲ್ಲ; ಅಂತಹ ನಿಂದಕನನ್ನು ಶಿಕ್ಷಿಸುತ್ತೇನೆ, ಇಂತಹ ಸಂಕಲ್ಪವೇ **ಗಣಾಚಾರಸ್ಥಲ**-(೩).[೬೦]

**ಗುರುಲಿಂಗಸ್ಥಲವು** ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಅನುಭಾವ ಗುರುಸ್ಥಲವೆಂದು ಮೂರು ವಿಧ:

**ದೀಕ್ಷಾ ಶಿಕ್ಷಾನುಭಾವಶ್ಚ ಗುರುಲಿಂಗಂ ತ್ರಿಧಾಭವೇತ್।**[೬೧]

ಕುಂಡ ಮಂಡಲಗಳನ್ನು ಸಿದ್ಧಗೊಳಿಸಿಕೊಂಡು, ಹೋಮ, ಷಡಧ್ವಸಿದ್ಧಿ, ಶಿವಕಲೆಯನ್ನು ಶಿಷ್ಯನಲ್ಲಿ ಸಮಾವೇಶಗೊಳಿಸುವುದು, ಮಂತ್ರೋಪದೇಶ ಮುಂತಾದ ಕ್ರಿಯೆಗಳಿಂದ ವಿಶಿಷ್ಟವಾದ ದೀಕ್ಷೆಯನ್ನು ಮಾಡುವ ಗುರು ದೀಕ್ಷಾಗುರು, ಆ ಕ್ರಿಯೆಯನ್ನು ನಡೆಸುವುದು **ದೀಕ್ಷಾಗುರುಸ್ಥಲ**-(೪). ಗುರುಲಿಂಗ ಜಂಗಮರು ಏಕರೂಪರು ಎಂಬ ಜ್ಞಾನವನ್ನು ಕೊಡುವ ಗುರುವಿನ ಸ್ಥಲವೇ **ಶಿಕ್ಷಾಗುರುಸ್ಥಲ**-(೫). ಹಿಂದಿನ ಜನ್ಮದ ಸಂಸ್ಕಾರದಿಂದ, ಈಗ ಗಳಿಸಿದ ಸುಕೃತದಿಂದ ಯಾವ ಹೆಚ್ಚಿನ ಜ್ಞಾನ ದೊರೆಯುವುದೋ ಅದು ಸ್ವಾನುಭಾವ. ಆ ಜ್ಞಾನಯುಕ್ತ ಗುರುಸ್ಥಲವೇ **ಅನುಭಾವ ಗುರುಸ್ಥಲ**. ಇದಕ್ಕೆ **ಜ್ಞಾನಗುರು ಸ್ಥಲವೆಂದೂ** ಹೆಸರು-(೬).[೬೨]

**ಶಿವಲಿಂಗಸ್ಥಲವು** ಹಾಗೆಯೇ ಮೂರು ವಿಧ: ಇಷ್ಟಲಿಂಗಸ್ಥಲ, ಪ್ರಾಣಲಿಂಗಸ್ಥಲ, ಭಾವಲಿಂಗಸ್ಥಲ:

**ಶಿವಲಿಂಗಸ್ವರೂಪಂ ತೇ ವಕ್ಷ್ಯಾಮಿ ಶೃಣು ಪಾರ್ವತಿ।**
**ಇಷ್ಟಲಿಂಗಂ ಪ್ರಾಣಲಿಂಗಂ ಭಾವಲಿಂಗಮಿತಿ ತ್ರಿಧಾ॥**[೬೩]

ಗುರುವು ಮಂತ್ರೋಪದೇಶ ಸಹಿತವಾಗಿ ದೀಕ್ಷೆಯ ಮೂಲಕ ಅನುಗ್ರಹಿಸಿದ ಲಿಂಗದ ವಿಚಾರವನ್ನು ತಿಳಿಯುವುದು **ಇಷ್ಟಲಿಂಗಸ್ಥಲ**-(೭). ದೇಹ, ಇಂದ್ರಿಯಂಗಳ ಗುಣಗಳನ್ನು ಬಿಟ್ಟು ತನ್ನ ಅಂತರಾತ್ಮವನ್ನು ಶಿವನಿಗೆ ಅರ್ಪಿಸಿ, ಶಿವನನ್ನು ಮನಸ್ಸಿನಲ್ಲಿ ಲೀನಗೊಳಿಸಿಕೊಂಡ ಸ್ಥಿತಿ **ಪ್ರಾಣಲಿಂಗಸ್ಥಲ**-(೮). ಜಾಗ್ರತ್, ಸ್ವಪ್ನ, ಸುಷುಪ್ತಿಗಳಲ್ಲಿ ಮನಸ್ಸನ್ನು ಜ್ಯೋತಿರ್ಲಿಂಗದಲ್ಲಿ ಐಕ್ಯಗೊಳಿಸಿಕೊಂಡ ನೆಲೆ **ಭಾವಲಿಂಗಸ್ಥಲ**-(೯).[೬೪]

---

೬೦. ಅದೇ, ಕ್ರಿ.ಪಾ., ಲ. ೭-೯.

೬೧. ಅದೇ, ಕ್ರಿ.ಪಾ., ಲ. ೧೦.

೬೨. ಅದೇ, ಕ್ರಿ.ಪಾ., ಲ. ೧೦-೧೩.

೬೩. ಅದೇ, ಕ್ರಿ.ಪಾ., ಲ.೧೪.

೬೪. ಅದೇ, ಕ್ರಿ.ಪಾ., ಲ. ೧೫-೧೭.

ಚರಲಿಂಗಸ್ಥಲವು ಸ್ವಯಜಂಗಮಸ್ಥಲ, ಚರಜಂಗಮಸ್ಥಲ ಮತ್ತು ಪರಜಂಗಮ ಸ್ಥಲವೆಂದು ಮೂರು ವಿಧ:

> ಚರಲಿಂಗಸ್ಥಲಸ್ಯಾಸ್ಯ ಸ್ವರೂಪಂ ಕಥಯಾಮಿ ತೇ।
> ಸ್ವಯಂ ಚರಂ ಪರಂ ಚೇತಿ ತ್ರೈವಿಧ್ಯಂ ಸಮುಪಾಗತಮ್॥[೬೫]

ಲಿಂಗದ ಚಿಹ್ನೆಯಿಂದ ಕೂಡಿದ, ಬಾಹ್ಯ ಕರ್ಮವನ್ನು ತ್ಯಜಿಸಿದ, ಕೇವಲಾನಂದಯುಕ್ತ ನಾದವನ ನೆಲೆ ಸ್ವಯಜಂಗಮಸ್ಥಲ-(೧೦). ಸ್ವತಂತ್ರನೂ ತನಗಿಂತ ಭಿನ್ನವಲ್ಲದ ಲಿಂಗವನ್ನುಧರಿಸಿದವನೂ ನಿರಾಕುಲನೂ ಭೇದ ಭ್ರಾಂತಿಯಿಲ್ಲದವನೂ ಆದವನ ಸ್ಥಿತಿ ಚರಜಂಗಮಸ್ಥಲ-(೧೧). ದ್ವಂದ್ವವಿಲ್ಲದ ಸದಾ ಶಿವಸ್ವರೂಪನಾದ ಗಮನಾಗಮನವಿಲ್ಲದ ಜ್ಯೋತಿರ್ಲಿಂಗ ಸ್ವರೂಪನ ನೆಲೆಯು ಪರಜಂಗಮಸ್ಥಲ-(೧೨)[೬೬]

ಪ್ರಸಾದಲಿಂಗ ಸ್ಥಲವು ಶುದ್ಧಪ್ರಸಾದ ಸ್ಥಲ, ಸಿದ್ಧಪ್ರಸಾದ ಸ್ಥಲ ಮತ್ತು ಪ್ರಸಿದ್ಧ ಪ್ರಸಾದಸ್ಥಲವೆಂದು ಮೂರು ವಿಧ:

> ಪ್ರಸಾದಲಿಂಗಸ್ಯ ತ್ರೈವಿಧ್ಯಮಪಿ ಶೃಣು ವರಾನನೇ।
> ಶುದ್ಧಂ ಸಿದ್ಧಂ ಪ್ರಸಿದ್ಧಂ ಚ ಭೇದಶ್ಚೈಷಾಮಥೋಚ್ಯತೇ॥[೬೭]

ಹಿಂದಿನ ಎಲ್ಲಾ ಗುಣಗಳನ್ನು ಬಿಟ್ಟ, ಕಾಮಕ್ರೋದಾಧಿಗಳನ್ನು ತ್ಯಜಿಸಿದ ಗುರುಭಕ್ತನು ಗುರುವಿನಿಂದ ಪಡೆದು ಸ್ವೀಕರಿಸಿದ ಪ್ರಸಾದಕ್ಕೆ ಸಂಬಂಧಿಸಿದ್ದು ಶುದ್ಧಪ್ರಸಾದಿಸ್ಥಲ-(೧೩). ಲಿಂಗತ್ರಯವನ್ನು ಸರಿಯಾಗಿ ತಿಳಿದು ಅವುಗಳ ಏಕತ್ವವನ್ನು ಅರಿತು ಲಿಂಗದಿಂದ ಪಡೆಯುವ ಪ್ರಸಾದಕ್ಕೆ ಸಂಬಂಧಿಸಿದುದು ಸಿದ್ಧಪ್ರಸಾದಸ್ಥಲ-(೧೪). ಶಿವೋಹಂ ಭಾವನೆಯಿಂದ ಕೂಡಿದ ನಿಶ್ಚಲವಾದ ಮನಸ್ಸಿನಿಂದ ಯುಕ್ತನಾದವನು ಜಂಗಮನಿಂದ ಪಡೆಯುವ ಪ್ರಸಾದಕ್ಕೆ ಸಂಬಂಧಪಟ್ಟುದು ಪ್ರಸಿದ್ಧಪ್ರಸಾದಸ್ಥಲ-(೧೫).[೬೮]

ಮಹಾಲಿಂಗಸ್ಥಲವು ಪಿಂಡಜಸ್ಥಲ, ಅಂಡಜಸ್ಥಲ, ಬಿಂದ್ವಾಕಾಶ ಸ್ಥಲವೆಂದು ಮೂರು ವಿಧ:

> ಮಹಾಲಿಂಗಸ್ಥಲಂ ಚಾಪಿ ತ್ರಿಧಾ ಭಿನ್ನಂ ಶೃಣುಕ್ರಮಾತ್।
> ಪಿಂಡಜಂ ಪ್ರಥಮಂ ಪ್ರೋಕ್ತಮಂಡಜಂ ಚ ತತಃ ಸರಮ್।
> ಬಿಂದ್ವಾಕಾಶಂ ತತೋ ಜ್ಞೇಯಮೇಷಾಂ ಲಕ್ಷಣಮುಚ್ಯತೇ॥[೬೯]

---

೬೫. ಅದೇ, ಕ್ರಿ.ಪಾ., ೮.೧೮.

೬೬. ಅದೇ, ಕ್ರಿ.ಪಾ., ೮. ೧೯-೨೧.

೬೭. ಅದೇ, ಕ್ರಿ.ಪಾ., ೮.೨೨.

೬೮. ಅದೇ, ಕ್ರಿ.ಪಾ., ೮.೨೩-೨೫.

೬೯. ಅದೇ, ಕ್ರಿ.ಪಾ., ೮.೨೬.

ದೇಹವೇ ದೇಗುಲ ಜೀವನೇ ಸದಾಶಿವನು ಎಂಬ ನಿಶ್ಚಿತ ಸದ್ಭಾವವುಳ್ಳ ನೆಲೆಯು ಪಿಂಡಜಸ್ಥಲ-(೧೬). ಭೂಮಿಯೆ ಪೀಠಿಕೆ, ಸೃಷ್ಟಿಕಾರಣವಾದ ಲಿಂಗವೇ ಆಕಾಶವೆಂಬ ನಿಶ್ಚಿತ ಜ್ಞಾನದ ಸ್ಥಿತಿಯೇ ಅಂಡಜಸ್ಥಲ-(೧೭). ಆತ್ಮನನ್ನು ಆಕಾಶದಲ್ಲೂ ಆಕಾಶವನ್ನು ಆತ್ಮನಲ್ಲೂ ಧ್ಯಾನಿಸಿ ಆತ್ಮಾಕಾಶ ಸ್ವರೂಪದ ಲಿಂಗವನ್ನು ಅರಿತ ನೆಲೆಯು ಬಿಂದ್ವಾಕಾಶಸ್ಥಲ-(೧೮).[೨೦]

ಈ ಹದಿನೆಂಟು ಲಿಂಗಸ್ಥಲಗಳ ಭೇದವನ್ನು ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಯಥಾವತ್ತಾಗಿ ನಿರೂಪಿಸಿದ್ದಾರೆ:

"ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆಂದಿಂತು
ಲಿಂಗಸ್ಥಲವಾರಕ್ಕಂ ವಿವರ:
ಆಚಾರಲಿಂಗಸ್ಥಲ ತ್ರಿವಿಧ: ಸದಾಚಾರ, ನಿಯತಾಚಾರ, ಗಣಾಚಾರ
ಇದಕ್ಕೆ ವಿವರ:
ಎಲ್ಲ ಜನವಹುದೆಂಬುದೆ ಸದಾಚಾರ.
ಹಿಡಿದ ವ್ರತನಿಯಮವ ಬಿಡದಿಹುದೆ ನಿಯತಾಚಾರ
ಶಿವನಿಂದೆಯ ಕೇಳದಿಹುದೆ ಗಣಾಚಾರ.
ಗುರುಲಿಂಗಸ್ಥಲ ತ್ರಿವಿಧ: ದೀಕ್ಷೆ, ಶಿಕ್ಷೆ, ಸ್ವಾನುಭಾವ.
ಇದಕ್ಕೆ ವಿವರ:
ದೀಕ್ಷೆಯೆಂದಡೆ ಗುರು, ಶಿಕ್ಷೆಯೆಂದಡೆ ಜಂಗಮ,
ಸ್ವಾನುಭಾವವೆಂದಡೆ ತನ್ನಿಂದ ತಾನರಿವುದು
ಶಿವಲಿಂಗಸ್ಥಲ ತ್ರಿವಿಧ: ಇಷ್ಟಲಿಂಗ, ಪ್ರಾಣಲಿಂಗ, ತೃಪ್ತಿಲಿಂಗ
ಇದಕ್ಕೆ ವಿವರ:
ಶ್ರೀಗುರು ಕರಸ್ಥಲದಲ್ಲಿ ಅನುಗ್ರಹವ ಮಾಡಿಕೊಟ್ಟುದೀಗ ಇಷ್ಟಲಿಂಗ
ತನುಗುಣನಾಸ್ತಿಯಾದುದೇ ಪ್ರಾಣಲಿಂಗ.
ಜಾಗ್ರುತ್‌ಸ್ವಪ್ನ ಸುಷುಪ್ತಿಯಲ್ಲಿ ಲಿಂಗವಲ್ಲದೆ ಪೆರತೊಂದನರಿಯದಿಪ್ಪುದೆ
ತೃಪ್ತಿಲಿಂಗ.
ಜಂಗಮಲಿಂಗಸ್ಥಲ ತ್ರಿವಿಧ: ಸ್ವಯ, ಚರ, ಪರ
ಇದಕ್ಕೆ ವಿವರ:
ಸ್ವಯಂವೆಂದಡೆ ತಾನು
ಚರನೆಂದಡೆ ಲಾಂಛನ ಮುಂತಾಗಿ ಚರಿಸುವುದು
ಪರವೆಂದಡೆ ಅರಿವು ಮುಂತಾಗಿ ಚರಿಸುವುದು
ಪ್ರಸಾದಲಿಂಗಸ್ಥಲ ತ್ರಿವಿಧ: ಶುದ್ಧ, ಸಿದ್ಧ, ಪ್ರಸಿದ್ಧ
ಇದಕ್ಕೆ ವಿವರ:

---

೨೦. ಅದೇ, ಕ್ರಿ.ಪಾ., ೬.೨೭-೩೯.

ಶುದ್ಧವೆಂದಡೆ, ಗುರುಮುಖದಿಂದ ಮಲತ್ರಯವ ಕಳೆದುಳಿದ ಶೇಷ.
ಸಿದ್ಧವೆಂದಡೆ ಲಿಂಗಮುಖದಿಂದ ಕರಣಮಥನಂಗಳ ಕಳೆದುಳಿದ ಶೇಷ,
ಪ್ರಸಿದ್ಧವೆಂದಡೆ ಜಂಗಮಮುಖದಿಂದ ಸರ್ವಚೈತನ್ಯಾತ್ಮಕ
ತಾನೆಯಾಗಿ ಖಂಡಿತವಳಿದುಳಿದ ಶೇಷ.
ಮಹಾಲಿಂಗಸ್ಥಲ ತ್ರಿವಿಧ: ಪಿಂಡಜ, ಅಂಡಜ, ಬಿಂದುಜ
ಇದಕ್ಕೆ ವಿವರ:
ಪಿಂಡಜವೆಂದರೆ ಘಟಾಕಾಶ, ಅಂಡಜವೆಂದರೆ ಬ್ರಹ್ಮಾಂಡ
ಬಿಂದುಜವೆಂದಡೆ ಮಹಾಕಾಶ
ಇಂತು ಲಿಂಗಸ್ಥಲ ಆರಕ್ಕಂ ಹದಿನೆಂಟು ಸ್ಥಲವಾಯಿತ್ತು.
.........................................................................."[೨೧]

ಇಲ್ಲಿ ಗಮನಿಸಬೇಕಾದ ಅಂಶವೆಂದರೆ- ಈಗ ದೊರೆತ ಶೈವಾಗಮ ಭಾಗಗಳಲ್ಲಿ ಮೇಲೆ ಹೇಳಿದ ೧೮ ಲಿಂಗಸ್ಥಲಗಳಿಗೆ ಅನುಗುಣವಾಗಿ ೧೮ ಅಂಗಸ್ಥಲಗಳಲ್ಲಿ ಕೇವಲ ಭಕ್ತಸ್ಥಲದ ಮೂರು ವಿಧ: ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ ಎಂಬ ವಿವರವನ್ನು ಬಿಟ್ಟರೆ, (ನೋಡಿರಿ: ಗುರುಭಕ್ತೊ ಲಿಂಗಭಕ್ತಶ್ಚರಭಕ್ತಸ್ತಥೈವ ಚ। ಏವಂ ಭೇದ-ಸಮಾಯುಕ್ತೋ ಭಕ್ತಸ್ತು ತ್ರಿವಿಧೋ ಭವೇತ್॥[೨೨]), ಮುಂದಿನ ಐದು ಸ್ಥಲಗಳ ವಿವರಗಳು ದೊರೆಯುತ್ತಿಲ್ಲ. ಆದರೆ ಚನ್ನಬಸವಣ್ಣನವರು ಎಲ್ಲಾ ೧೮ ಅಂಗಸ್ಥಲಗಳ ವಿವರವನ್ನು ಕೊಟ್ಟಿದ್ದಾರೆ: ಅದರ ಸಂಕ್ಷೇಪ: "ಭಕ್ತಸ್ಥಲ ತ್ರಿವಿಧ: ಗುರುಭಕ್ತ, ಲಿಂಗಭಕ್ತ, ಜಂಗಮ ಭಕ್ತ... ಮಾಹೇಶ್ವರಸ್ಥಲ ತ್ರಿವಿಧ: ಇಹಲೋಕ ವೀರ, ಪರಲೋಕ ವೀರ, ಲಿಂಗವೀರ... ಪ್ರಸಾದಿಸ್ಥಲ ತ್ರಿವಿಧ: ಅರ್ಪಿತ ಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ... ಪ್ರಾಣಲಿಂಗಿಸ್ಥಲ ತ್ರಿವಿಧ: ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ... ಶರಣಸ್ಥಲ ತ್ರಿವಿಧ: ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ತೃಪ್ತಿಲಿಂಗಾರ್ಚಕ... ಐಕ್ಯಸ್ಥಲ ತ್ರಿವಿಧ: ಕಾಯಲಿಂಗೈಕ್ಯ, ಜೀವಲಿಂಗೈಕ್ಯ, ಭಾವಲಿಂಗೈಕ್ಯ... ಇಂತಿ ಅಂಗಸ್ಥಲ ಆರಕ್ಕಂ ಹದಿನೆಂಟು ಸ್ಥಲವಾಯಿತ್ತು. ಉಭಯಸ್ಥಲ ಮೂವತಾರರೊಳಗಾದ ಸರ್ವಾಚಾರ ಸಂಪತ್ತು ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನೆ ಬಲ್ಲ."[೨೨]

## ೧೨. ಸಿದ್ಧಾಂತ ಶಿಖಾಮಣಿಯ ೫೭ ಲಿಂಗಸ್ಥಲಗಳ ಹೆಸರುಗಳು:

ಇನ್ನೊಂದು ಗಮನಾರ್ಹವಾದ ಸಂಗತಿಯೆಂದರೆ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ೫೭ ಲಿಂಗಸ್ಥಲಗಳ ವಿವರಗಳು ದೊರೆಯುತ್ತವೆ. ಶೈವಾಗಮಗಳ ಈ ವಿವರಗಳನ್ನು ಒಳಗೊಂಡ ಭಾಗಗಳು ಉಪಲಬ್ಧವಾಗಿಲ್ಲ. ಸದ್ಯದ ಸಂಶೋಧನೆಯ ನೆಲೆಯಲ್ಲಿ ಈ ಎಲ್ಲಾ ೫೭ ಲಿಂಗಸ್ಥಲಗಳ ವಿವರಗಳಿಗೆ ಮೂಲ ಶ್ರೀ ಸಿದ್ಧಾಂತ ಶಿಖಾಮಣಿಯೆಂದೇ

---

೨೧. ಚನ್ನಬಸವಣ್ಣನವರ ವಚನಗಳು, ವ.ಸಂ. ೧೦೪.

೨೨. ಅದೇ, ವ.ಸಂ. ೧೦೪.

ಹೇಳಬೇಕು. ಚನ್ನಬಸವಣ್ಣನವರು ಒಂದು ವಚನದಲ್ಲಿ ಮತ್ತು ಅಲ್ಲಮಪ್ರಭುಗಳು ಒಂದು ವಚನದಲ್ಲಿ ಈ ೫೭ ಲಿಂಗಸ್ಥಲಗಳ ಹೆಸರುಗಳನ್ನು ಅನುವಾದ ಮಾಡಿದ್ದಾರೆ ಚನ್ನಬಸವಣ್ಣ.

"ಗುರುಲಿಂಗ ತ್ರಿವಿಧ: ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು
ಶಿವಲಿಂಗ ತ್ರಿವಿಧ: ಕ್ರಿಯಾಲಿಂಗ, ಭಾವಲಿಂಗ. ಜ್ಞಾನಲಿಂಗ
ಜಂಗಮಲಿಂಗ ತ್ರಿವಿಧ; ಸ್ವಯ, ಚರ, ಪರ
ಇಂತು ಆಚಾರಲಿಂಗಸ್ಥಲ ಒಂಬತ್ತು.

ಆಗಮಲಿಂಗ ತ್ರಿವಿಧ; ಕ್ರಿಯಾಗಮ, ಭಾವಾಗಮ, ಜ್ಞಾನಾಗಮ
ಕಾಯಲಿಂಗ ತ್ರಿವಿಧ: ಸಕಾಯ, ಅಕಾಯ, ಪರಕಾಯ
ಆಚಾರಲಿಂಗ ತ್ರಿವಿಧ: ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ
ಇಂತು ಗುರುಲಿಂಗಸ್ಥಲ ಒಂಬತ್ತು; ಅಂತುಭಯ ಸ್ಥಲ ಹದಿನೆಂಟು.

ಅನುಗ್ರಹಲಿಂಗ ತ್ರಿವಿಧ: ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ
ಅರ್ಪಿತಲಿಂಗ ತ್ರಿವಿಧ: ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ
ತನುರ್ಗುಲಿಂಗ ತ್ರಿವಿಧ: ಶಿಷ್ಯ ಶುಶ್ರೂಷೆ, ಸೇವ್ಯ
ಇಂತು ಶಿವಲಿಂಗಸ್ಥಲ ಒಂಬತ್ತು; ಅಂತು ತೃತೀಯ ಸ್ಥಲ ಇಪ್ಪತ್ತೇಳು.

ಒಲವುಲಿಂಗ ತ್ರಿವಿಧ: ಜೀವಾತ್ಮ, ಅಂತರಾತ್ಮ, ಪರಮಾತ್ಮ
ನಿರೂಪಲಿಂಗ ತ್ರಿವಿಧ: ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ
ಪ್ರಸಾದಲಿಂಗ ತ್ರಿವಿಧ: ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ
ಇಂತು ಜಂಗಮಲಿಂಗಸ್ಥಲ ಒಂಬತ್ತು; ಅಂತ ಚತುರ್ಥಸ್ಥಲ ಮೂವತ್ತಾರು

ಪಾದೋದಕಲಿಂಗ ತ್ರಿವಿಧ: ದೀಕ್ಷಾಪಾದೋದಕ, ಶಿಕ್ಷಾಪಾದೋದಕ,
ಜ್ಞಾನಪಾದೋದಕ
ನಿಷ್ಪತ್ತಿಲಿಂಗ ತ್ರಿವಿಧ: ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ
ಆಕಾಶಲಿಂಗ ತ್ರಿವಿಧ: ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ
ಇಂತು ಪ್ರಸಾದಲಿಂಗಸ್ಥಲ ಒಂಬತ್ತು; ಅಂತು ಪಂಚಮಸ್ಥಲ ನಾಲ್ವತ್ತೈದು.

ಪ್ರಕಾಶಲಿಂಗ ತ್ರಿವಿಧ: ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ
ಪ್ರಸಾದಲಿಂಗ ತ್ರಿವಿಧ: ಸ್ವೀಕೃತ ಪ್ರಸಾದ, ಶಿಷ್ಯೋದನ ಪ್ರಸಾದ
ಚರಾಚರನಾಸ್ತಿ ಪ್ರಸಾದ
ಸ್ಥಲಲಿಂಗ ತ್ರಿವಿಧ: ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪಸ್ಥಲ
ಶೂನ್ಯಲಿಂಗ ತ್ರಿವಿಧ: ಸ್ವಯಪರವರಿಯದ ಸ್ಥಲ, ಭಾವಾಭಾವನಷ್ಟಸ್ಥಲ
ಜ್ಞಾನಶೂನ್ಯಸ್ಥಲ.

ಇಂತೀ ಮಹಾಲಿಂಗಸ್ಥಲ ಹನ್ನೆರಡು;
ಅಂತು ಷಟ್‌ಸ್ಥಲ ಐವತ್ತೇಳು.

ಇಂತಿವೆಲ್ಲ ಸ್ಥಲಂಗಳನೊಳಗೊಂಡು ಮಹಾಮಹಿಮನು
ಜ್ಞಾನಿಯಲ್ಲ, ಅಜ್ಞಾನಿಯಲ್ಲ, ಶೂನ್ಯವಲ್ಲ, ನಿಶ್ಶೂನ್ಯನಲ್ಲ
ಉಭಯಾಚಾರ ತಾನೆಂದರಿದ ಪರಮಜ್ಞಾನಿಗೆ ಕೊಡುಕೊಳೆಯಿಲ್ಲ
ಸಾಕಾರ ಸಂಬಂಧವನರಿಯ, ನಿತ್ಯಮುಕ್ತ, ನಿರವಯ, ಉಭಯಾತ್ಮಕ
ತಾನು ಕೂಡಲಚನ್ನಸಂಗನೆಂದು ಎನ್ನದ ಸುಯಿದಾನಿ"[೭೩]

ಅಲ್ಲಮಪ್ರಭುದೇವರ ವಚನದಲ್ಲಿ[೭೪] ಮೇಲೆ ವಚನದಲ್ಲಿ ಹೇಳಿದ ರೀತಿಯಲ್ಲಿ ಒಂಬತ್ತು, ಒಂಬತ್ತು, ಒಂಬತ್ತು, ಒಂಬತ್ತು, ಒಂಬತ್ತು -ಹೀಗೆ ಆಚಾರಲಿಂಗದಿಂದ ಪ್ರಸಾದ ಲಿಂಗದವರೆಗಿನ ಐದು ಸ್ಥಲಗಳಿಗೆ ಸಂಬಂಧಿಸಿದ ಸ್ಥಲಗಳನ್ನು ಹೇಳಿದ್ದಾರೆ. ಮಹಾಲಿಂಗ ಸ್ಥಲದ ವಿಷಯದಲ್ಲಿ ಚನ್ನಬಸವಣ್ಣನವರು ಹನ್ನೆರಡು ಸ್ಥಲಗಳನ್ನು ಹೇಳಿದ್ದರೆ ಪ್ರಭುದೇವರು ಒಂಬತ್ತು ಸ್ಥಲಗಳನ್ನು ಹೇಳಿ, ಕಡೆಯ ಮೂರು ಸ್ಥಲಗಳ ಬಗ್ಗೆ ವಿಶೇಷವಾಗಿ ಹೇಳಿದ್ದಾರೆ.

### ೧೩. ನೂರೊಂದು ಸ್ಥಲ ಪರಿಕಲ್ಪನೆ:

ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಪಿಂಡಸ್ಥಲದಿಂದ ಹಿಡಿದು ಜ್ಞಾನಶೂನ್ಯ ಸ್ಥಲಗಳವರೆಗೆ ನೂರೊಂದು ಸ್ಥಲಗಳ ಪರಿಕಲ್ಪನೆಯನ್ನು ಕಾಣುತ್ತೇವೆ. ಈಗಾಗಲೇ ಹೇಳಿದಂತೆ ಚನ್ನಬಸವಣ್ಣನವರ ಮತ್ತು ಅಲ್ಲಮಪ್ರಭುಗಳ ವಚನಗಳಲ್ಲಿ ಬಂದಿರುವ ೫೭ ಲಿಂಗಸ್ಥಲಗಳ ಹೆಸರುಗಳು ಶ್ರೀಸಿದ್ಧಾಂತಶಿಖಾಮಣಿಯಲ್ಲಿನ ಈ ೫೭ ಲಿಂಗಸ್ಥಲಗಳ ಹೆಸರುಗಳಿಗೆ ನಿಕಟಸಂವಾದಿಯಾಗಿವೆ. ಇನ್ನೊಂದು ಅಂಶವಿಲ್ಲಿ ವ್ಯಕ್ತವಾಗಿದೆ. ಅದು ಚನ್ನಬಸವಣ್ಣನವರ ಮತ್ತು ಅಲ್ಲಮಪ್ರಭುದೇವರ ವಚನಗಳಿಂದಲೇ ವ್ಯಕ್ತವಾಗಿದೆ. ಅದೆಂದರೆ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಬರುವ 'ನೂರೊಂದು ಸ್ಥಲಗಳ ಪರಿಕಲ್ಪನೆ'. ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ[೭೫] "ನಮ್ಮ ಆದ್ಯರ ವಚನ ನೂರೊಂದು ಸ್ಥಲವ ಮೀರಿದ ಮಹದಲ್ಲಿ ನೆಲೆಸಿತ್ತು" ಎಂದು ಹೇಳಿದ್ದಾರೆ.

### ೧೪. ಆಧಾರಾದಿ ಚಕ್ರಗಳಲ್ಲಿ ಷಡಕ್ಷರ ಮಂತ್ರದ ವಿನ್ಯಾಸ:

ಶೈವಾಗಮಗಳಲ್ಲಿ ಮಂತ್ರದ ಅಕ್ಷರಗಳನ್ನು ಆಧಾರಾದಿ ಚಕ್ರಗಳಲ್ಲಿ ವಿನ್ಯಾಸ ಮಾಡುವ ಕೆಲವು ರಹಸ್ಯಗಳನ್ನು ಹೇಳಲಾಗಿದೆ. ಉದಾಹರಣೆಗೆ ವಾತುಲಶುದ್ಧಾಗಮ ಹೀಗೆ ಹೇಳುತ್ತದೆ.

ಸೂಕ್ಷ್ಮಪಂಚಾಕ್ಷರಂ ಪ್ರೋಕ್ತಂ ಸ್ಥೂಲಪಂಚಾಕ್ಷರಂ ಶೃಣು।
ನಕಾರಾದಿಯಕಾರಾಂತಂ ಪಂಚಾರ್ಣಂ ತತ್ರ ವಿನ್ಯಸೇತ್॥[೭೬]

---

೭೩. ಅದೇ, ವ.ಸಂ. ೧೦೪.

೭೪. ಅಲ್ಲಮಪ್ರಭುದೇವರ ವಚನ ಸಂಪುಟ, ವ.ಸಂ. ೭೮೯.

೭೫. ಅಲ್ಲಮಪ್ರಭುದೇವರ ವಚನ ಸಂಪುಟ, ವ.ಸಂ. ೮೦೧.

೭೬. ವಾತುಲಶುದ್ಧಾಗಮ, ಮಂತ್ರಜಾತ ಪಟಲ (೯), ೨೬.

"ಹೀಗೆ ಹ ಓಂ ಮ ಉ ಅ ಎಂಬ ಸೂಕ್ಷ್ಮಪಂಚಾಕ್ಷರಗಳ ನ್ಯಾಸವನ್ನು ಹೇಳಲಾಯಿತು. ಈಗ ಸ್ಥೂಲಪಂಚಾಕ್ಷರಗಳ ನ್ಯಾಸವನ್ನು ತಿಳಿಸುವೆನು, ನಮಃ ಶಿವಾಯ ಎಂಬ ಪಂಚಾಕ್ಷರಗಳನ್ನು ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಎಂಬ ಚಕ್ರಗಳ ಸ್ಥಾನದಲ್ಲಿ ಕ್ರಮವಾಗಿ ವಿನ್ಯಾಸ ಮಾಡಬೇಕು." ಹಾಗೆಯೇ ಸೂಕ್ಷ್ಮಾಗಮವು ನಕಾರಾದಿಗಳು ಆಚಾರಾದಿ ಮಹಾಲಿಂಗಾಂತ ಆರು ಲಿಂಗಗಳ (ಓಂ-ಮಹಾಲಿಂಗ) ಸ್ವರೂಪವನ್ನು ಹೊಂದಿವೆ ಎಂದು ಹೇಳುತ್ತದೆ:

> ಪ್ರಸಾದಶ್ಚ ಚರಶ್ಚೈವ ಶಿವಲಿಂಗಂ ಗುರುಸ್ತಥಾ।
> ಆಚಾರಶ್ಚ ಮಹಾಲಿಂಗಂ ಯಾದಿತಾರಾಂತ ಗೋಚರಮ್॥[೭೭]

ಪ್ರಸಾದಲಿಂಗ, ಚರಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರ ಲಿಂಗಗಳು ಯ, ವಾ, ಶಿ, ಮಃ, ನ ಎಂಬ ಕ್ರಮದಲ್ಲಿ ಪಂಚಾಕ್ಷರಗಳನ್ನು ಪ್ರತಿನಿಧಿಸುತ್ತವೆ; ಮಹಾಲಿಂಗವು ಓಂಕಾರವನ್ನು ಪ್ರತಿನಿಧಿಸುತ್ತದೆ.

ಚನ್ನಬಸವಣ್ಣನವರ ಒಂದು ವಚನದಲ್ಲಿ ಈ ವಿಷಯವು ಯಥಾವತ್ತಾಗಿ ಬಂದಿದೆ:

"...................................................................
ಇನ್ನು ಷಡಾಧಾರಂಗಳಲ್ಲಿ ಷಡಕ್ಷರರೂಪದಿಂದ ಷಡ್ಲಿಂಗ ಸ್ಥಾಪ್ಯವಾಗಿಹವು
ಅದು ಹೇಗೆಂದಡೆ:
ನಕಾರವೇ ಆಚಾರಲಿಂಗ, ಮಕಾರವೆ ಗುರುಲಿಂಗ, ಶಿಕಾರವೆ ಶಿವಲಿಂಗ
ವಾಕಾರವೆ ಜಂಗಮಲಿಂಗ, ಯಕಾರವೆ ಪ್ರಸಾದಲಿಂಗ, ಓಂಕಾರವೆ ಮಹಾಲಿಂಗ
ಎಂದು ಆರು ತೆರವಾಗಿಹವು.
ಅದೆಂತೆಂದಡೆ:
ಆಧಾರದಲ್ಲಿ ನಕಾರ, ಸ್ವಾಧಿಷ್ಠಾನದಲ್ಲಿ ಮಕಾರ
ಮಣಿಪೂರದಲ್ಲಿ ಶಿಕಾರ, ಅನಾಹತದಲ್ಲಿ ವಾಕಾರ.
ವಿಶುದ್ಧಿಯಲ್ಲಿ ಯಕಾರ, ಆಜ್ಞೆಯಲ್ಲಿ ಓಂಕಾರ
......................................................................"[೭೮]

ಹಾಗೆಯೇ ವಾತುಲಶುದ್ಧಾಗಮವು ಆಧಾರಾದಿ ಚಕ್ರಗಳಲ್ಲಿ ಅಕ್ಷರಗಳ ನ್ಯಾಸ ಮಾಡುವ ಪದ್ಧತಿಯನ್ನು ವಿವರಿಸಿದೆ: ಆಧಾರದಲ್ಲಿ ವಾದಿ-ಸಾಂತ (ವ, ಶ, ಷ, ಸ) ಅಕ್ಷರಗಳನ್ನು, ಸ್ವಾಧಿಷ್ಠಾನದಲ್ಲಿ ಬಾದಿ-ಲಾಂತ (ಭ ಭ ಮ ಯ ರ ಲ) ಅಕ್ಷರಗಳನ್ನು, ಮಣಿಪೂರಕದಲ್ಲಿ ಡಾದಿ-ಫಾಂತ (ಡಢಣ ತಥದಧನ ಪಫ) ಅಕ್ಷರಗಳನ್ನು, ಅನಾಹತದಲ್ಲಿ ಕಾದಿ-ಠಾಂತ (ಕಖಗಘಙ ಚಛಜಝಞ ಟಠ) ಅಕ್ಷರಗಳನ್ನು, ವಿಶುದ್ಧಿಯಲ್ಲಿ ಆದಿವರ್ಗದ

---

೭೭. ಸೂಕ್ಷ್ಮಾಗಮ, ಕ್ರಿ.ಪಾ., ೪.೪೪

೭೮. ಚನ್ನಬಸವಣ್ಣನವರ ವಚನಗಳು, ವ.ಸಂ. ೩೪೩.

ಹದಿನಾರು (ಅಆಇಈಉಊಋೠಌೡಎಐಓಔ ಅಂ ಅಃ) ಅಕ್ಷರಗಳನ್ನು ಮತ್ತು ಆಜ್ಞಾದಲ್ಲಿ ಳ, ಕ್ಷ, ಎಂಬ ಎರಡು ವರ್ಣಗಳನ್ನು ವಿನ್ಯಾಸ ಮಾಡಬೇಕು. ಆಧಾರದಲ್ಲಿ ನಾಲ್ಕು ದಳಗಳು, ಸ್ವಾಧಿಷ್ಠಾನದಲ್ಲಿ ಆರು ದಳಗಳು, ಮಣಿಪೂರಕದಲ್ಲಿ ಹತ್ತು ದಳಗಳು, ಅನಾಹತದಲ್ಲಿ ಹನ್ನೆರಡು ದಳಗಳು, ವಿಶುದ್ಧಿಯಲ್ಲಿ ಹದಿನಾರು ದಳಗಳು ಮತ್ತು ಆಜ್ಞಾದಲ್ಲಿ ಎರಡು ದಳಗಳು ಇರುತ್ತವೆ. ಅವುಗಳಿಗೆ ಅನುಗುಣವಾಗಿ ಅಕ್ಷರಗಳ ವಿನ್ಯಾಸ.[೭೯]

ಚನ್ನಬಸವಣ್ಣನವರ ಒಂದು ವಚನದಲ್ಲಿ[೮೦] ಬ್ರಹ್ಮಚಕ್ರವನ್ನು ಹಿಡಿದು ಏಳು ಚಕ್ರಗಳಲ್ಲಿ ಅಕ್ಷರ ವಿನ್ಯಾಸವನ್ನು ಹೇಳಿದ್ದಾರೆ:

(೧) ಗುದಸ್ಥಾನ, ಆಧಾರಚಕ್ರ, ಪೃಥ್ವಿಭೂತ, ಸದ್ಯೋಜಾತ ಮುಖ, ಬ್ರಹ್ಮಪೂಜಾರಿ, ಸುವರ್ಣತೇಜ, ಬಾಲರವಿಕೋಟಿ ಪ್ರಕಾಶ, ಸುವರ್ಣಮಯ, ಆಚಾರಲಿಂಗ, ನಾಲ್ಕು ದಳಗಳಲ್ಲಿ ವ, ಶ, ಷ, ಸ ಅಕ್ಷರಗಳ ವಿನ್ಯಾಸ. ಬೀಜಾಕ್ಷರ: ಓಂ ನಾಂ ನಾಂ ನಾಂ.

(೨) ಲಿಂಗಸ್ಥಾನ, ಸ್ವಾಧಿಷ್ಠಾನ ಚಕ್ರ, ಅಪ್ಪು ಭೂತ, ವಾಮದೇವ ಮೂಲ, ವಿಷ್ಣು ಪೂಜಾರಿ, ನೀಲವರ್ಣ, ಬಾಲದ್ವಿಕೋಟಿ ಸೂರ್ಯ ಪ್ರಕಾಶ, ಧವಳ ಗುರುಲಿಂಗ, ಆರು ದಳಗಳಲ್ಲಿ ಬ ಭ ಮ ಯ ರ ಲ ಅಕ್ಷರಗಳ ವಿನ್ಯಾಸ. ಬೀಜಾಕ್ಷರ: ಓಂ ಮಾಂ ಮಾಂ ಮಾಂ.

(೩) ನಾಭಿಸ್ಥಾನ, ಮಣಿಪೂರಕ ಚಕ್ರ, ಅಗ್ನಿಭೂತ, ಅಘೋರ ಮುಖ, ರುದ್ರ ಪೂಜಾರಿ, ಮಾಣಿಕ್ಯ ವರ್ಣ, ಶಿವಲಿಂಗ, ಬಾಲತ್ರಿಕೋಟಿ ಸೂರ್ಯ ಪ್ರಕಾಶ, ಹತ್ತು ದಳಗಳಲ್ಲಿ ಡ ಢ ಣ ತ ಥ ದ ಧ ನ ಪ ಫ ಎಂಬ ಅಕ್ಷರಗಳ ವಿನ್ಯಾಸ. ಬೀಜಾಕ್ಷರ: ಓಂ ಶಿಂ ಶಿಂ ಶಿಂ.

(೪) ಹೃದಯಸ್ಥಾನ, ಅನಾಹತ ಚಕ್ರ, ವಾಯು ಭೂತ, ತತ್ಪುರುಷ ಮುಖ, ಈಶ್ವರ ಪೂಜಾರಿ, ಕಪೋತವರ್ಣ, ಬಾಲ ಚತುಷ್ಕೋಟಿ ಸೂರ್ಯ ಪ್ರಕಾಶ, ಹನ್ನೆರಡು ದಳಗಳಲ್ಲಿ ಕ ಖ ಗ ಘ ಙ ಚ ಛ ಜ ಝ ಞ ಟ ಠ ಅಕ್ಷರಗಳ ವಿನ್ಯಾಸ. ಬೀಜಾಕ್ಷರ: ಓಂ ವಾಂ ವಾಂ ವಾಂ.

(೫) ಕಂಠಸ್ಥಾನ, ವಿಶುದ್ಧಚಕ್ರ, ಆಕಾಶ ಭೂತ, ಈಶಾನ ಮುಖ, ಸದಾಶಿವ ಪೂಜಾರಿ, ವಿದ್ಯುಲ್ಲತೆ ತೇಜ, ಬಾಲ ಪಂಚಕೋಟಿ ಸೂರ್ಯಪ್ರಕಾಶ, ಮಿಂಚುವರ್ಣದ ಪ್ರಸಾದ ಲಿಂಗ, ಹದಿನಾರು ದಳಗಳಲ್ಲಿ ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅ ಅಃ ಅಕ್ಷರಗಳ ವಿನ್ಯಾಸ. ಬೀಜಾಕ್ಷರ: ಓಂ ಯಂ ಯಂ ಯಂ.

---

೭೯. ವಾತುಲಶುದ್ಧಾಗಮ, ಮಂತ್ರಜಾತ ಪಟಲ (೯), ೧೪-೨೧.

೮೦. ಚನ್ನಬಸವಣ್ಣನವರ ವಚನಗಳು, ವ.ಸಂ. ೧೦೬೪.

(೬) ಭ್ರೂಮಧ್ಯಸ್ಥಾನ, ಆಜ್ಞಾಚಕ್ರ, ಮನಸ್ಸು ಭೂತ, ಶ್ರೀಗುರು ಮುಖ, ಮಹೇಶ್ವರ ಪೂಜಾರಿ, ಜ್ಯೋತಿರ್ವರ್ಣ, ಬಾಲಷಟ್ಕೋಟಿ ಸೂರ್ಯ ಪ್ರಕಾಶ, ಶ್ರೀಗುರು ಪಾದದ ವರ್ಣದ ಲಿಂಗ (ಎಡಗಡೆ ಪಾದ ಕೆಂಪು ಬಲಗಡೆ ಪಾದ ಶ್ವೇತ) -ಮಹಾಲಿಂಗ, ಎರಡು ದಳಗಳಲ್ಲಿ ಹಂ ಸಃ ಅಕ್ಷರ ವಿನ್ಯಾಸ (ಆಗಮದಲ್ಲಿ ಳ ಕ್ಷ). ಬೀಜಾಕ್ಷರ: ಓಂಕಾರ.

(೭) ಬ್ರಹ್ಮರಂಧ್ರ ಸ್ಥಾನ, ಬ್ರಹ್ಮಚಕ್ರ, ಚಂದ್ರ ಭೂತ, ಲಿಂಗ ಮುಖ, ಪರಮೇಶ್ವರ ಪೂಜಾರಿ, ಮಹಾಜ್ಯೋತಿ, ಬಾಲ ಅನಂತಕೋಟಿ ಸೂರ್ಯಪ್ರಕಾಶ, ಮಹಾಜ್ಯೋತಿ ವರ್ಣದ ಲಿಂಗ-ನಿರಾಮಯಲಿಂಗ, ನೂರಾ ಒಂಟು ಸಾವಿರ ದಳಗಳಲ್ಲಿ ನೂರಾ ಒಂಟು ಸಾವಿರ ಅಕ್ಷರಗಳ ವಿನ್ಯಾಸ. ಬೀಜಾಕ್ಷರ: ಪ್ರಣವ.

ಚನ್ನಬಸವಣ್ಣನವರ ಮೇಲೆ ಸಂಕ್ಷಿಪ್ತವಾಗಿ ಸಂಗ್ರಹಿಸಿದ ವಚನದಲ್ಲಿ ಸ್ಥಾನ, ಭೂತ, ಮುಖ, ಪೂಜಾರಿ, ವರ್ಣ, ಪ್ರಕಾಶ, ಲಿಂಗ ಮುಂತಾದ ಹೆಚ್ಚಿನ ವಿವರಗಳು ಬಂದಿರುವುದನ್ನು ಗಮನಿಸಬೇಕು. ಇನ್ನೊಂದು ವಚನದಲ್ಲಿ[೮೧] ನವಚಕ್ರಗಳ ವಿಷಯ ಬಂದಿದೆ.

**ಜಗತ್ತತ್ವ:**

ಜಗತ್ತತ್ವದ ಬಗ್ಗೆ ಪಾರಮೇಶ್ವರಾಗಮವು ವಿಶೇಷವಾದ ವಿಚಾರವನ್ನು ಮಂಡಿಸಿದೆ; ಅದನ್ನು ಅನುಸರಿಸಿದ ಜಗತ್ತತ್ವ ಸ್ವರೂಪ ಹೀಗಿದೆ:

ಶಿವೋಽಹಂ ತ್ವಮುಮೇ ಶಕ್ತಿಸ್ತ್ವಮೇವಾಹಮಹಂ ತ್ವಮು।
ಸ್ವಾತ್ಮಾತ್ಮಾತ್ವಂ ವೈ ಪುಮಾತ್ಮಾಹಂ ಶಿವಶಕ್ತ್ಯಾತ್ಮಕಂ ಜಗತ್॥[೮೨]

ಪರಮಾತ್ಮ-ಉಮೆಯರೆಂದು ಶಿವ-ಶಕ್ತಿಯರಿಗೆ ಹೆಸರು; ಶಿವನೇ ಶಕ್ತಿ, ಶಕ್ತಿಯೇ ಶಿವನು, ಶಕ್ತಿಯು ಸಕಲ ಸ್ತ್ರೀತ್ವದ ಪ್ರತಿನಿಧಿ, ಶಿವನು ಪುರುಷ ಸ್ವರೂಪನು; ಈ ಜಗತ್ತೆಲ್ಲವೂ ಶಿವ-ಶಕ್ತಿಯರ ವಿಕಾಸವೇ ಆಗಿದೆ. ಯಾವ ಶಕ್ತಿಯು ಪರಮಾತ್ಮನ ಪಂಚಭೂತಾತ್ಮಕ ಶರೀರದಲ್ಲಿ ಅವಿನಾಭಾವ ಸಂಬಂಧದಿಂದ ಇದ್ದಾಳೆಯೋ, ಪರಮಾತ್ಮನ ಆ ಶರೀರವೇ ಜಗತ್ತಿನ ರೂಪವನ್ನು ಧರಿಸುತ್ತದೆ. ಚಂದ್ರಜ್ಞಾನಾಗಮವು ಜಗತ್ತನ್ನು ಭವ್ಯವಾದ ಲಿಂಗದ ಆಕಾರದಲ್ಲಿ ವರ್ಣಿಸಿದೆ:

ಆಕಾಶಂ ಲಿಂಗಮಿತ್ಯಾಹುಃ ಪೃಥವೀ ತಸ್ಯ ಪೀಠಿಕಾ।
ಆಲಯಃ ಸರ್ವಭೂತಾನಾಂ ಲಯನಾಲ್ಲಿಂಗಮುಚ್ಯತೇ॥[೮೩]

---

೮೧. ಅದೇ, ವ.ಸಂ. ೯೨೭.

೮೨. ಪಾರಮೇಶ್ವರಾಗಮ, ೨೧.೫೦

೮೩. ಚಂದ್ರಜ್ಞಾನಾಗಮ, ಕ್ರಿ.ಪಾ., ೩.೫೧

ಆಕಾಶವೇ ಲಿಂಗ, ಭೂಮಿಯೇ ಅದರ ಆಧಾರ (ಪೀಠಿಕೆ). ಎಲ್ಲಾ ಚರಾಚರಗಳ ಆಲಯವಾದ ಅದು ಲಯಗೊಳಿಸಿಕೊಳ್ಳುವ ಕಲೆಯಿಂದ ಲಿಂಗವೆನಿಸಿದೆ. ಹೀಗೆ ವಿಶ್ವವೇ ಲಿಂಗಾಕಾರವೆಂದು ಹೇಳಿ ವಿಶ್ವವು ಪರಮಾತ್ಮನಿಗಿಂತ ಭಿನ್ನವಲ್ಲವೆಂಬುದನ್ನು ಈ ಶೈವಾಗಮವು ಸಮರ್ಥಿಸುತ್ತದೆ. ಇಲ್ಲಿ "ಸರ್ವಂ ಖಲ್ವಿದಂ ಬ್ರಹ್ಮ"[೮೪] ಎಂಬ ಶ್ರುತಿವಾಕ್ಯದ ಭಾವವನ್ನು ಬಿಂಬಿಸುತ್ತದೆ. ಈ ವಿಶ್ವಲಿಂಗ ಕಲ್ಪನೆಯಿಂದ ಶ್ರೀ ಸಿದ್ಧಾಂತ ಶಿಖಾಮಣಿಯು ಪ್ರಭಾವಿತವಾಗಿ ಹೀಗೆ ಹೇಳುತ್ತದೆ:

> ಪೀಠಿಕಾ ಪರಮಾ ಶಕ್ತಿಃ ಲಿಂಗಂ ಸಾಕ್ಷಾತ್ ಪರಃ ಶಿವಃ।
> ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗ ತದುಚ್ಯತೇ॥[೮೫]

ಪಾಣಿಪೀಠವೇ ಪರಾಶಕ್ತಿ. ಲಿಂಗವು ಸಾಕ್ಷಾತ್ ಶಿವನು; ಶಿವಶಕ್ತಿಯರ ಸಂಯೋಗದಿಂದಾಗ ವಿಶ್ವವು ಲಿಂಗವೇ ಆಗಿದೆ. ಹೀಗೆ ಜಗತ್ತೆಂಬುದು ಸರ್ವಾತ್ಮನಾದ ಪರಮಾತ್ಮನ ಸತ್ಯರೂಪ ಪರಿಣಾಮವಾಗಿದೆ, ಮಿಥ್ಯಾರೂಪ ವಿವರ್ತವಲ್ಲ.

ಚನ್ನಬಸವಣ್ಣನವರು "ಭೂಚಕ್ರ ಈಶ್ವರ ಪರಿಯಂತ ಪಂಚವಿಂಶತಿ ತತ್ವಂಗಳು ತ್ಪತ್ಯ. ಈಶ್ವರಾದಿ ಪರಶಿವ ಪರಿಯಂತ ಶಿವತ್ವದುತ್ಪತ್ಯ. ದೇವತಾದಿಗೆ, ಜಗದಾದಿಗೆ, ಪೃಥ್ವಿಯಾದಿಗೆ ಪಂಚವಿಂಶತಿ ತತ್ವಂಗಳುತ್ಪಿತ್ಯವಂ ಪೇಳ್ವೆ:....."[೮೬] ಎಂದು ಬ್ರಹ್ಮಾಂಡದ ವರ್ಣನೆಯನ್ನು ಮಾಡಿದ್ದಾರೆ. ಇದೆಲ್ಲ ಪ್ರಪಂಚವು ಪರಮಾತ್ಮನಿಂದ ಬಂದದ್ದು ಎಂಬ ಸತ್ಯವನ್ನು ಅದರಲ್ಲಿ ಬಿಂಬಿಸಿದ್ದಾರೆ.

**ಮುಕ್ತಿಯ ಸ್ವರೂಪ:**

ಜೀವತತ್ತ್ವ ನಿರೂಪಣೆಯ ಸಂದರ್ಭದಲ್ಲಿ ಪಾರಮೇಶ್ವರಾಗಮವು ಹೀಗೆ ಹೇಳುತ್ತದೆ:

> ತತ್ರ ತತ್ರ ಗತೋ ದೇವಿ ಮಮಾತ್ಮಾ ಪ್ರತಿಬಿಂಬಿತಃ।
> ಜೀವತ್ವಮೇತ್ಯ ಮಚ್ಛಾಸ್ತ್ರಾತ್ ಪ್ರಕೃತಿಂ ಚಾನುಗಚ್ಛತಿ॥[೮೭]

ಇದರ ಮಥಿತಾರ್ಥವೆಂದರೆ, ಪರಮಾತ್ಮನ ಭಿನ್ನ ಭಿನ್ನ ಪ್ರತಿಬಿಂಬಗಳಾದ ಜೀವಾತ್ಮರು ಅವನಿಂದ ಬೇರ್ಪಟ್ಟಿದ್ದರೂ ಶಿವಶಾಸ್ತ್ರಾಧ್ಯಯನ ಮತ್ತು ಸಾಧನೆಯಿಂದ ಶಿವಭಾವವನ್ನು ಹೊಂದುತ್ತಾರೆ. ಶಿವನಲ್ಲಿ ಸಮರಸೈಕ್ಯವನ್ನು ಹೊಂದುತ್ತಾರೆ ಎಂಬುದೇ ಆಗಿದೆ. ಇದೇ

---

೮೪. ಛಾಂದೋಗ್ಯೋಪನಿಷತ್, ೩.೧೪.೧.

೮೫. ಶ್ರೀ ಸಿದ್ಧಾಂತ ಶಿಖಾಮಣಿ, ೧೧.೩೨.

೮೬. ಚನ್ನಬಸವಣ್ಣನವರ ವಚನಗಳು. ಹೆಚ್ಚಿನ ವ.ಸಂ. ೩೩; ಇದರಲ್ಲಿ "ಆಕಾಶಂ ಲಿಂಗಮಿತ್ಯಾಹುಃ ಪೃಥಿವೀ/ತಸ್ಯಪೀಠಿಕಾ" ಇತ್ಯಾದಿ ಶ್ಲೋಕವನ್ನು ಉಲ್ಲೇಖಿಸಿದ್ದಾರೆ.

೮೭. ಪಾರಮೇಶ್ವರಾಗಮ, ೨೧.೭೫.

ಆಗಮೋಕ್ತ ವೀರಶೈವಸಿದ್ಧಾಂತದ ಪ್ರಕಾರ ಮುಕ್ತಿಯ ಸ್ವರೂಪ. ಮಾಯಾಶಕ್ತಿಯು ಪರದೆಯಾಗಿ ಪರಮಾತ್ಮ-ಜೀವಾತ್ಮರಲ್ಲಿ ಭೇದಕಲ್ಪನೆಯಾಗುತ್ತದೆ. ಅದು ಸರಿದಾಗ ಅಭೇದವೇ ಉಳಿಯುತ್ತದೆ. "ಯಥಾ ನದ್ಯಃ ಸ್ಯಂದಮಾನಾಃ"[೮೮] ಇತ್ಯಾದಿ ಮುಂಡಕ ಶ್ರುತಿಯ ಅಭಿಪ್ರಾಯವೇ ಇಲ್ಲಿ ಮೂಡಿಬಂದಿದೆ.

ಶೈವಾಗಮಗಳಲ್ಲಿನ ಷಟ್‌ಸ್ಥಲಗಳ ಪೈಕಿ ಐಕ್ಯಸ್ಥಲದ ನಿರೂಪಣೆಯಲ್ಲಿ ವೀರಶೈವ ಸಿದ್ಧಾಂತಾನುಸಾರದ ಮುಕ್ತಿಸ್ವರೂಪವನ್ನು ನೋಡಬಹುದು.

**ಶಿವ-ಜೀವೋಭಯಭ್ರಾಂತಿರಹಿತಶ್ಚೈಕ್ಯ ಉಚ್ಯತೇ॥**[೮೯]

ಶಿವ-ಜೀವರ ಭೇದಭ್ರಾಂತಿ ಇಲ್ಲದವನು ಐಕ್ಯನು. ಹಿಂದಿನ ಸ್ಥಲವಾದ ಶರಣಸ್ಥಲದಲ್ಲಿ ಅನುಭವಕ್ಕೆ ಬಂದ ಶಿವನ ಸಖ್ಯರು ಗಾಢವಾಗಿ ಅಭೇದದಲ್ಲಿ ಪರ್ಯವಸಾನ ಹೊಂದಿದಾಗ ಐಕ್ಯನ ಸ್ಥಿತಿ. ಅದೇ ಜೀವನ್ಮುಕ್ತಿಯ ಸ್ಥಿತಿ. ಜೀವಭಾವ ನಿವೃತ್ತಿಯಾಗಿ ಶಿವಭಾವ ಅಳವಡುವುದೇ ಶಿವೈಕ್ಯ, ಸಮರಸೈಕ್ಯ; ಅದೇ ಮುಕ್ತಿ. ಅದರ ಕಲ್ಪನೆಯನ್ನು ಒಂದು ಶೈವಾಗಮವು ಸುಂದರವಾಗಿ ಮಾಡಿಕೊಡುತ್ತದೆ:

**ಗುರುದೀಕ್ಷಾಪರಿಪ್ರಾಪ್ತ-ಶಿವಲಿಂಗಾಂಗಯೋಗತಃ।**
**ದ್ವಿರೇಫ-ಕೀಟನ್ಯಾಯೇನ ಶಿವೈಕ್ಯಂ ಪ್ರಾಪ್ತವಾನ್ ದ್ವಿಜಃ॥**[೯೦]

ಗುರುವು ಅನುಗ್ರಹಿಸಿದ ದೀಕ್ಷೆಯ ಮೂಲಕ ಪಡೆದ ಲಿಂಗ ಮತ್ತು ಅಂಗಗಳ (ಶಿವ-ಜೀವರ) ಯೋಗವು ಹಂತ ಹಂತಕ್ಕೂ ಹದಗೊಂಡು ದುಂಬಿಕೀಟ ನ್ಯಾಯದಂತೆ ಷಟ್‌ಸ್ಥಲಬ್ರಹ್ಮಿಯು ಶಿವೈಕ್ಯವನ್ನು ಹೊಂದುತ್ತಾನೆ. ಕೀಟವು ದುಂಬಿಯನ್ನು ನೆನೆದು ನೆನೆದು ದುಂಬಿಯೇ ಆಗಿ ಪರಿಣಮಿಸುವಂತೆ ಜೀವನು ಶಿವನನ್ನು ನಿರಂತರವಾಗಿ ನೆನೆದು ನೆನೆದು ಶಿವನಾಗಿ ಪರಿಮಣಿಸುತ್ತಾನೆ. ಅದನ್ನೇ ಆಗಮಜ್ಞರು ಮುಕ್ತಿಯೆಂದು ಕರೆಯುತ್ತಾರೆ. ಚನ್ನಬಸವಣ್ಣನವರು ತಮ್ಮ ವಚನವೊಂದರಲ್ಲಿ ಇದನ್ನೇ ಸೆರೆ ಹಿಡಿದಿದ್ದಾರೆ:

**"ಲಿಂಗವು ಲಿಂಗದಲ್ಲಿ ಸಂಬಂಧವಾದವರ ಲಿಂಗವೆಂದೇ ಕಾಂಬುದು,**
**'ಕೀಟೋಽಪಿ ಭ್ರಮರಾಯತೇ' ಎಂಬ ನ್ಯಾಯದಂತೆ.**
**ಅಂಗವು ಲಿಂಗ ಸೋಂಕಿ ಲಿಂಗವಾಯಿತ್ತಾಗಿ**
**ಲಿಂಗ ಎಂದೇ ಕಾಂಬುದು.**
**ಅಂಗೇಂದ್ರಿಯಗಳೆಂಬುದಿಲ್ಲ,**
**ಅವೆಲ್ಲವೂ ಲಿಂಗೇಂದ್ರಿಯಂಗಳಾದ ಕಾರಣ ಲಿಂಗವೆಂದೇ ಕಾಂಬುದು**
**ಸರ್ಪದಷ್ಟಸ್ಯ ಯದ್ದೇಹಂ ತದ್ದೇಹಂ ವಿಷದೇಹಮ್।**

---

೮೮. ಮುಂಡಕೋಪನಿಷತ್, ೩.೨.೮.

೮೯. ಸೂಕ್ಷ್ಮಾಗಮ, ಕ್ರಿ.ಪಾ., ೮.೩೫.

೯೦. ಮಕುಟಾಗಮ, ಕ್ರಿ.ಪಾ.; ೭.೩.

ಲಿಂಗದಷ್ಟಸ್ಯ ಯದ್ದೇಹಂ ತದ್ದೇಹಂ ಲಿಂಗದೇಹವತ್। ಎಂದುದಾಗಿ,
ಸರ್ವಾಂಗಲಿಂಗಿ, ಕೂಡಲಚನ್ನಸಂಗಾ, ನಿಮ್ಮ ಶರಣ."[೯೧]

ಇಲ್ಲಿ ಬಂದಿರುವ ದೃಷ್ಟಾಂತ ಶ್ಲೋಕ ಯಾವುದಾದರೂ ಶೈವಾಗಮದಿಂದ ತೆಗೆದುಕೊಂಡದ್ದಿರಬೇಕು. ಅದರ ಅರ್ಥ: "ಹಾವು ಕಡಿದವನ ದೇಹವು ವಿಷದೇಹವಾದಂತೆ ಲಿಂಗ ಕಡಿದವನ ದೇಹ (ಅಂಗ) ಲಿಂಗದೇಹದಂತೆ." ಚನ್ನಬಸವಣ್ಣನವರು ಇನ್ನೊಂದು ದೃಷ್ಟಾಂತದಿಂದ ಇದನ್ನು ಬಿಂಬಿಸಿದ್ದಾರೆ: "ಪರುಷ ಮುಟ್ಟಲು ಕಬ್ಬುನ ಹೊನ್ನಾದಂತೆ, ಪುಣ್ಯ ಪಾಪಂಗಳಿಲ್ಲ, ಸ್ವರ್ಗನರಕಂಗಳಿಲ್ಲವಾಗಿ ನಿಮ್ಮವರಿಗೆ ಕೇಡಿಲ್ಲ ಕೂಡಲ ಚನ್ನಸಂಗಯ್ಯಾ, ನಿಮ್ಮ ಶರಣರು ಭವರಹಿತರು."[೯೨] ಭವರಹಿತರೆಂದರೆ ಮುಕ್ತರು. ಇದನ್ನೇ ಆಗಮಗಳಲ್ಲಿ ಮತ್ತು ಆಗಮಗಳ ಸಾರವಾದ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶಿವಾದ್ವೈವೆಂದು ಕರೆದಿರುವರು. ಚನ್ನಬಸವಣ್ಣನವರು ಇದನ್ನೇ ಹೇಳಿದ್ದಾರೆ.

—

ಪ್ರಶ್ನೆ: ಸಮಸಮುಚ್ಚಯ ಎಂಬ ಮಾತನ್ನು ಹೇಳಿದಿರಿ, ಅಂದರೆ ಜ್ಞಾನ ಮತ್ತು ಕ್ರಿಯೆಯನ್ನು ಒಳಗೊಂಡಿರುವಂತಹದು. ಚನ್ನಬಸವಣ್ಣನವರ ವಚನಗಳನ್ನು ಸಂಪಾದನೆ ಮಾಡುವ ಕಾಲದಲ್ಲಿ ಇದನ್ನೇ ನಾವು ಗಮನಿಸಿದ್ದೆವು. ಈಗ ನನಗಿರುವ ಭಯವೆಂದರೆ, ಎಲ್ಲಿ ಈ ಧರ್ಮ ಕೇವಲ ಜ್ಞಾನಪ್ರಧಾನವಾಗಿ ಉಳೀತದೋ ಎನ್ನುವುದು. ಇದು ಜ್ಞಾನ ಮತ್ತು ಕ್ರಿಯೆ ಎರಡನ್ನೂ ಒಳಗೊಂಡಂತಹ ಧರ್ಮ ಎಂದು ನಾವು ಹೇಳುವುದೆಲ್ಲಾ ಬರೀ ಶಾಸ್ತ್ರವಾಗಿ ಉಳಿದು ಇಂದಿನ ವೀರಶೈವರಲ್ಲಿ ಕ್ರಿಯೆ ನಿಂತುಹೋಗಿರುವುದರಿಂದ ಈ ಮಾತನ್ನು ಮುಂದೆಯೂ ಹೇಳಲು ಸಾಧ್ಯವೇ?

ಪಾದೋದಕದ ವಿಚಾರ ಸವಿಸ್ತಾರವಾಗಿ ಹೇಳಿದಿರಿ ದುರ್ದೈವವೆಂದರೆ ವೀರಶೈವರಲ್ಲಿ ಇಂದು ಅಸಡ್ಡೆಗೆ ಈಡಾಗಿದೆ. ಜಂಗಮ ಶ್ರೇಷ್ಠನಾಗಿ ಉಳಿದಿಲ್ಲ ಎಂದು ಭಕ್ತರು ಭಾವಿಸಿರಬಹುದು. ಎಲ್ಲಿಯವರೆಗೆ ಭಕ್ತ ತಾನು ಭಕ್ತನಾಗಿ ಉಳಿದಿಲ್ಲ ಎಂಬ ಪರಿಜ್ಞಾನವನ್ನು ಪಡೆಯುವುದಿಲ್ಲವೋ ಅಲ್ಲಿಯವರೆಗೆ ಈ ಭಯ ಇದ್ದೇ ಇರುತ್ತದೆ ಎಂದು ನನಗೆ ಅನ್ನಿಸುತ್ತದೆ. ನಿಮಗೆ ಈ ಭಯ ಕಾಡಿಸುತ್ತಿದೆಯೇ?

–ಡಾ॥ ಪಂಚಾಕ್ಷರಿ ಹಿರೇಮಠ

---

೯೧. ಚನ್ನಬಸವಣ್ಣನವರ ವಚನಗಳು, ವ.ಸಂ. ೧೦೨೧; ಬಸವಣ್ಣನವರ ಷಟ್‌ಸ್ಥಲದ ವಚನಗಳು, ವ.ಸಂ. ೧೨೬೦; ಕುಂಡಲಿಗನೊಂದು ಕೀಡೆಯ ತಂದು ತನ್ನವ ಮಾಡಿತಲ್ಲಾ, ಎಲೆ ಮಾನವಾ. ಕೇಳಿ ನಂಬಯ್ಯಾ, ನೋಡಿ ಕಲಿಯಯ್ಯಾ ಎಲೆ ಮಾನವಾ. ತ್ವಚಿಂತಮಾ ಮಹಾದೇವ ತ್ವಾಮೇವೈತಿ ನ ಸಂಶಯಃ। ಭ್ರಮದ್ ಭ್ರಮರ ಚಿಂತಾಯಂ ಕೀಟೋಽಪಿ ಭ್ರಮರಾಯತೇ॥ ಕೂಡಲಸಂಗನ ಶರಣರ ಅನುಭಾವ ಇದರಿಂದ ಕಿರುಕುಳವೆ, ಎಲೆ ಮಾನವಾ.

೯೨. ಅದೇ, ವ.ಸಂ. ೧೦೨೨;

ಉತ್ತರ: ವೀರಶೈವರದ್ದು ಜ್ಞಾನ-ಕ್ರಿಯೆಗಳ ಸಮುಚ್ಚಯ ಪದ್ಧತಿ ಎನ್ನುವುದು ಸತ್ಯವಾದ ಮಾತು. "ಅಂಧ-ಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ" (ಕುರುಡ-ಕುಂಟರಂತೆ ಜ್ಞಾನ ಮತ್ತು ಕರ್ಮಗಳು ಅನ್ಯೋನ್ಯ ಸಾಪೇಕ್ಷವಾಗಿವೆ) ಎಂಬುದು ಶೈವಾಗಮಗಳ ಸಿದ್ಧಾಂತ. ಅದು ಬರೀ ಶಾಸ್ತ್ರವಾಗಿ ಉಳಿಯಬಾರದು.

ಗುರು ಅಥವಾ ಜಂಗಮ ಭಕ್ತರಿಗೆ ಮೆಚ್ಚುಗೆಯಾಗಿ, ಆತನನ್ನು ಕರೆದು ಪೂಜೆ ಮಾಡಿ ಜ್ಞಾನವನ್ನು ತಿಳಿಯುವುದರ ಜೊತೆಗೆ ಕ್ರಿಯೆಯಲ್ಲೂ ಅದನ್ನು ಆಚರಣೆಗೆ ತಂದರೆ ಅದು ಸಾರ್ಥಕವಾಗುತ್ತದೆ. ಈ ಮಾತು ಯಾವಾಗಲೂ ಸತ್ಯವೇ. ಜನರಲ್ಲಿ ಜಾಗೃತಿಯು ಮೂಡಿದರೆ ನನಗೆ ಆ ಭಯವಿಲ್ಲ.

-ಡಾ॥ ಎಂ. ಶಿವಕುಮಾರ ಸ್ವಾಮಿ

ಪ್ರಶ್ನೆ: ವೇದಾಗಮಗಳ ಒಂದು ಉಲ್ಲೇಖವನ್ನು ಶಿವಶರಣರು ಮಾಡುತ್ತಾರೆ. ಕೆಲವು ಸಲ ಅತಿಯಾಗಿ ಮಾಡಿದ್ದಾರೆ ಎನ್ನಿಸುತ್ತದೆ. ಚನ್ನಬಸವಣ್ಣನವರು ತಮ್ಮ ಒಂದೇ ವಚನದಲ್ಲಿ ೧೯-೨೦ ಶ್ಲೋಕಗಳನ್ನು ಉದಾಹರಿಸಿದ್ದಾರೆ. ಇವು ಆಮೇಲೆ ಸೇರಿದವುಗಳೇನೋ ಎಂದು ನನಗೆ ಅನ್ನಿಸುತ್ತದೆ. ಇದು ಸಾಮಾನ್ಯ ಅನಿಸಿಕೆ ಆಗಿರಬಹುದೇನೋ.

-ಡಾ॥ ಮಲ್ಲಿಕಾರ್ಜುನ ಪರಡ್ಡಿ

ಉತ್ತರ: ವಚನಗಳಲ್ಲಿ ಕೆಲವು ಕಡೆ ಬಹಳ ಶ್ಲೋಕಗಳಿವೆ, ಕೆಲವು ಕಡೆ ಒಂದೆರಡು ಸೇರಿಸಿದ್ದಾರೆ. ಬಹಳ ಶ್ಲೋಕಗಳು ಬಂದಿರುವುದು ಪ್ರಕ್ಷಿಪ್ತ, ಕಡಿಮೆ ಬಂದರೆ ಪ್ರಕ್ಷಿಪ್ತ ಅಲ್ಲ ಎಂದು ಹೇಳಿದರೆ, ನಿರ್ಣಯಿಸುವುದು ಕಷ್ಟವಾಗುತ್ತದೆ. ಶ್ಲೋಕ ಅಥವಾ ಶ್ಲೋಕಗಳು ವಚನದಲ್ಲಿ ವಿಷಯಕ್ಕೆ ಸಂವಾದಿಯೇ ಇಲ್ಲವೇ ಎಂಬುದನ್ನು ನೋಡಬೇಕಾಗುತ್ತದೆ. ಪ್ರಕ್ಷಿಪ್ತವೇ ಅಲ್ಲವೇ ಎನ್ನುವುದನ್ನು ಸಂಪಾದನಾಶಾಸ್ತ್ರದ ಪ್ರಕಾರ ನಿರ್ಣಯ ಮಾಡಬಹುದು.

-ಡಾ॥ ಎಂ. ಶಿವಕುಮಾರ ಸ್ವಾಮಿ

ಬಾಲಸಂಗಯ್ಯನವರು ಒಂದು ವಚನದಲ್ಲಿ ಆದರ ವಿಷಯವನ್ನು ಸಮರ್ಥಿಸಲು ೨೩ ಆಗಮಗಳ ಶ್ಲೋಕಗಳನ್ನು ಪೂರಕವಾಗಿ, ಸಾಕ್ಷಿಯಾಗಿ ತೆಗೆದುಕೊಂಡಿದ್ದಾರೆ. ಒಮ್ಮೊಮ್ಮೆ ಹಾಗಾಗುವುದು ಸಾಧ್ಯ.

-ವಿದ್ವಾನ್ ಕೋ.ರಂ. ಬಸವರಾಜು

ಪ್ರಶ್ನೆ: ಸಾಮಾನ್ಯವಾಗಿ ಆಗಮಗಳಲ್ಲಿ ಗುರುಮುಖದಿಂದ ಬಂದದ್ದು ಶುದ್ಧಪ್ರಸಾದ, ಲಿಂಗಮುಖದಿಂದ ಬಂದದ್ದು ಸಿದ್ಧಪ್ರಸಾದ, ಜಂಗಮ ಮುಖದಿಂದ ಬಂದದ್ದು ಪ್ರಸಿದ್ಧ ಪ್ರಸಾದ ಅಂತ ರೂಢಿಯಲ್ಲಿದೆ. ಆದರೆ ಚನ್ನಬಸವಣ್ಣನವರ ಹೆಚ್ಚಿನ ವಚನಗಳಲ್ಲಿ

ಒಂದು ಕಡೆ ಲಿಂಗಮುಖದಿಂದ ಬಂದದ್ದು ಶುದ್ಧಪ್ರಸಾದ, ಜಂಗಮ ಮುಖದಿಂದ ಬಂದದ್ದು ಸಿದ್ಧಪ್ರಸಾದ, ಗುರುಮುಖದಿಂದ ಬಂದದ್ದು ಪ್ರಸಿದ್ಧ ಪ್ರಸಾದ ಎಂದು ಹೇಳಿ ಅದಕ್ಕೆ ಆಗಮ ಸಾಕ್ಷಿ ಶ್ಲೋಕವನ್ನು ಕೊಟ್ಟಿದ್ದಾರೆ. ಇದನ್ನು ಪ್ರಕ್ಷಿಪ್ತ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಇದೇ ಒಂದು ಉದಾಹರಣೆ ಮತ್ತು ಇದೇ ಶ್ಲೋಕ ಕೆರೆಯ ಪದ್ಮರಸನ ದೀಕ್ಷಾಬೋಧೆಯಲ್ಲೂ ಇದೇ ತರ ಬಂದಿದೆ. ಚನ್ನಬಸವಣ್ಣನವರು ಕೊಟ್ಟಿರುವ ಆಗಮ ಶ್ಲೋಕ ಹೀಗಿದೆ: ಶುದ್ಧಂ ಲಿಂಗಮುಖಂ ತ್ಯಕ್ತಂ ಸಿದ್ಧಂ ಚರ ಪಾದವಿಸರ್ಜಿತಮ್।। ಪ್ರಸಿದ್ಧಂ ಚ ಗುರೋರ್ಭುಕ್ತಂ ಇತ್ಯೇತತ್ ತ್ರಿವಿಧಂ ಸ್ಮೃತಮ್।। ಈ ಒಂದು ವ್ಯತ್ಯಾಸವನ್ನು ಹೆಚ್ಚಿನ ವಚನದಲ್ಲಿ ಗಮನಿಸಿದ್ದೀರಾ?

-ವಿದ್ವಾನ್ ಕೋ.ರಂ. ಬಸವರಾಜು

ಉತ್ತರ: ಇದನ್ನು ತಿಳಿಸಿದ್ದಕ್ಕೆ ಕೃತಜ್ಞತೆಗಳು. ಇಲ್ಲೊಂದು ವಿಷಯವನ್ನು ಪ್ರಸ್ತಾಪಿಸುತ್ತೇನೆ. ನಾವು ಸಾಮಾನ್ಯವಾಗಿ ಪಾದೋದಕದ ವಿಷಯದಲ್ಲಿ ಏನು ಹೇಳ್ತೇವೆಂದರೆ, ಗುರುವಿನ ಪಾದೋದಕವು ದೀಕ್ಷಾಪಾದೋದಕ, ಲಿಂಗಪಾದೋದಕವು ಶಿಕ್ಷಾಪಾದೋದಕ ಮತ್ತು ಜಂಗಮ ಪಾದೋದಕವು ಜ್ಞಾನಪಾದೋದಕ ಎಂದು ಹೇಳುತ್ತೇವೆ. ಆದರೆ ಚಂದ್ರಜ್ಞಾನಾಗಮದಲ್ಲಿ ಕ್ರಮವೇ ವ್ಯತ್ಯಾಸಗೊಂಡಿದೆ. ಹಾಗೆ ಶ್ಲೋಕದಲ್ಲಿ ಬಂದಿರುವುದನ್ನು ಸರಿಯಾಗಿ ತಿಳಿದುಕೊಳ್ಳಬೇಕು.

ಪ್ರಶ್ನೆ: ಮೂರೇಳು ದೀಕ್ಷೆಗಳನ್ನು ಹೇಳಿದಿರಿ. ಈಗ ಪ್ರಸಿದ್ಧವಾಗಿರುವ ದೀಕ್ಷಾತ್ರಯಗಳಿಗೆ ಆಗಮ ಶ್ಲೋಕಗಳಿರುವಂತೆ, ೨೧ ದೀಕ್ಷೆಗಳಿಗೂ ಆಗಮ ಶ್ಲೋಕಗಳಿವೆಯೇ?

ಉತ್ತರ: ಆಗಮದಲ್ಲಿ ಇರುವುದನ್ನೇ ನಾನು ಉದಾಹರಿಸಿದ್ದೇನೆ. ಆಗಮಗಳಲ್ಲಿ ಇಲ್ಲದಿರುವುದನ್ನು ಯಾವುದನ್ನೂ ಈ ಲೇಖನದಲ್ಲಿ ತೆಗೆದುಕೊಂಡಿಲ್ಲ. ವಿಶೇಷವಾಗಿ ನನ್ನ ಉದ್ದೇಶವಿರುವುದು ಚನ್ನಬಸವಣ್ಣನವರ ಅನೇಕ ವಚನಗಳು ಆಗಮಗಳ ಪಡಿಯಚ್ಚು ಎಂದು ತೋರಿಸುವುದು. ೨೧ ದೀಕ್ಷೆಗಳ ಉಲ್ಲೇಖ ಚಂದ್ರಜ್ಞಾನಾಗಮದಲ್ಲಿದೆ. ಅವುಗಳ ವಿವರಣೆ ಕಾರಣಾಗಮದಲ್ಲಿದೆ.

ಪ್ರಶ್ನೆ: ಸಂಬಂಧಾಚರಣೆ, ಸಹಜಾಚರಣೆ ಎಂದು ಎರಡು ವಿಧ ಹೇಳಿದಿರಿ. ಗುರು, ಲಿಂಗ ಅಥವಾ ಜಂಗಮ ಯಾರಾದರೂ ಸಿಕ್ಕಿದರೆ ಅವರನ್ನು ಪೂಜೆ ಮಾಡಿ ಪಾದೋದಕ-ಪ್ರಸಾದ ತೆಗೆದುಕೊಳ್ಳುವುದಾದರೆ ಸಂಬಂಧಾಚರಣೆ. ಇಲ್ಲದಿದ್ದಾಗ ಲಿಂಗದಲ್ಲಿಯೇ ಗುರು-ಲಿಂಗ-ಜಂಗಮವನ್ನು ಭಾವಿಸಿಕೊಂಡು ಪ್ರಸಾದ-ಪಾದೋದಕ ತೆಗೆದುಕೊಳ್ಳುವುದು ಸಹಜಾಚರಣೆ ಎಂದು ಹೇಳಿದಿರಿ. ಹೀಗೆ ಈ ಸಂಬಂಧ ಮತ್ತು ಸಹಜಾಚರಣೆಗಳ ಪರವಾದ ಆಗಮ ಶ್ಲೋಕಗಳಿವೆಯೇ?

-ವಿದ್ವಾನ್ ಕೋ.ರಂ. ಬಸವರಾಜು

**ಉತ್ತರ:** ಆಗಮಗಳಲ್ಲಿ ಬಂದಿರುವುದನ್ನು ಚನ್ನಬಸವಣ್ಣನವರು ಹೇಳಿದ್ದಾರೆ. ಮೂರೂ ಜನರು ಒಟ್ಟಿಗೆ ಸಿಗುವುದಿಲ್ಲ. ಆಗ ಗುರು-ಜಂಗಮ ಸಿಗದಿದ್ದರೆ ಲಿಂಗದ ಪಾದೋದಕದಲ್ಲಿಯೇ ಗುರು-ಜಂಗಮ ಪಾದೋದಕವನ್ನು ಭಾವಿಸಿ ತೆಗೆದುಕೊಳ್ಳಬೇಕು. ಚಂದ್ರಜ್ಞಾನಾಗಮದಲ್ಲಿ ಇದನ್ನು ಹೇಳಿದೆ. ಚಂದ್ರಜ್ಞಾನಾಗಮದಲ್ಲಿ ಬಂದದ್ದನ್ನೇ ತೆಗೆದುಕೊಂಡು ಚನ್ನಬಸವಣ್ಣನವರು ಸಂಬಂಧಾಚರಣೆ, ಸಹಜಾಚರಣೆ ಇತ್ಯಾದಿ ಹೆಸರುಗಳನ್ನು ಕೊಟ್ಟಿದ್ದಾರೆ. ಲೇಖನದಲ್ಲಿ ವಿವರಗಳಿವೆ.

**ಪ್ರಶ್ನೆ:** ಚನ್ನಬಸವಣ್ಣನವರನ್ನು "ಷಟ್‌ಸ್ಥಲ ಜ್ಞಾನ ಚಕ್ರವರ್ತಿ" ಎಂದು ಹೇಳ್ತಾರೆ. ಆದರೆ ಷಟ್‌ಸ್ಥಲದ ವಿವರವಾದ ಸಂಗತಿಗಳು ಶಿವಾಗಮಗಳಲ್ಲಿ ವ್ಯಾಪಕವಾಗಿ ಸಿಗುವಾಗ, ಬಹುಶಃ ಶಿವಾಗಮಗಳಲ್ಲಿ ಸಿಗುವಂತಹ ವಿವರಗಳಿಗೂ ಮತ್ತು ಚನ್ನಬಸವಣ್ಣನವರು ಹೇಳುವ ವಿವರಗಳಿಗೂ ಏನಾದರೂ ವ್ಯತ್ಯಾಸವಿದೆಯೇ? ವಿಶೇಷವಾದ ವಿವರಗಳನ್ನು ಹೇಳಿದ್ದರಿಂದ ಚನ್ನಬಸವಣ್ಣನವರನ್ನು "ಷಟ್‌ಸ್ಥಲಜ್ಞಾನ ಚಕ್ರವರ್ತಿ" ಎಂದು ಕರೆಯಲಾಗುತ್ತದೆಯೇ? ಅಥವಾ ಹಾಗೆ ಕರೆಯುವುದರಲ್ಲಿ ಔಚಿತ್ಯವಿದೆಯೇ?

**ಉತ್ತರ:** ಈ ಎಲ್ಲಾ ವಿಷಯಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಚನ್ನಬಸವಣ್ಣನವರು ಆಗಮಗಳನ್ನು ಬಹಳ ಆಳವಾಗಿ ಅಧ್ಯಯನ ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಮೂಲಭೂತ ಅನೇಕ ವಿಷಯಗಳು ಆಗಮಗಳಲ್ಲಿ ಬಂದಿವೆ. ಅವುಗಳೇ ಚನ್ನಬಸವಣ್ಣನವರ ವಚನಗಳಲ್ಲೂ ಬಂದಿವೆ ಎಂಬುದನ್ನು ತೋರಿಸಿದ್ದೇನೆ. ಕೆಲವೆಡೆ ಚನ್ನಬಸವಣ್ಣನವರು ತಮ್ಮ ಅನುಭವದಿಂದ ನಿರ್ಣಯ ಕೊಡುತ್ತಾರೆ. ಉದಾಹರಣೆಗೆ ಲಿಂಗ ಬಿದ್ದು ಹೋದರೆ, ಕಳೆದುಹೋದರೆ ಏನು ಮಾಡಬೇಕೆಂಬ ಚರ್ಚೆಯಲ್ಲಿ ಅವರು ನಿರ್ಣಯ ಕೊಟ್ಟಿದ್ದಾರೆ. ಮತ್ತೆ ಮತ್ತೆ ಕಳೆದುಕೊಂಡು ಹೊಸದಾಗಿ ಲಿಂಗ ಕಟ್ಟಿಕೊಂಡರೆ ಅದು ಸರಿಯಲ್ಲ ಎಂದು ಎಚ್ಚರಿಸಿದ್ದಾರೆ. ಷಟ್‌ಸ್ಥಲದ ವಿಷಯದಲ್ಲಿಯೂ ಈ ರೀತಿಯ ಅನುಭವದ ನಿರ್ಧಾರಗಳನ್ನು ಕೊಟ್ಟಿದ್ದಾರೆ. ಹೀಗಾಗಿ ಅವರನ್ನು ಷಟ್‌ಸ್ಥಲದ ಉದ್ಧಾರಕರು ಎನ್ನುತ್ತಾರೆ 'Revive' ಮಾಡಿದರು ಎನ್ನುವ ಅರ್ಥವೂ ಇದೆ ಅದಕ್ಕೆ.

**ಪ್ರಶ್ನೆ:** ಚನ್ನಬಸವಣ್ಣನವರ ಇನ್ನೂ ಅನೇಕ ಕೃತಿಗಳಿವೆ. 'ಕರಣಹಸುಗೆ' 'ಉದ್ಧರಣ ಸಾಹಿತ್ಯ ಪ್ರಕಾರ' ಇದೆ. ಅವುಗಳನ್ನು ಎದುರು ಇಟ್ಟುಕೊಂಡು ನೋಡಿದರೆ, ಬಹುಶಃ ಈ ವೇದ, ಆಗಮ ಇತ್ಯಾದಿಗಳು ಏನಾದರೂ ಇವುಗಳ ಬೇರುಗಳಾಗಿವೆಯೇ? ಅವುಗಳ ಬಗ್ಗೆಯೂ ತಮ್ಮ ಪ್ರಬಂಧದಲ್ಲಿ ಸೇರಿಸಿದರೆ ಸಮಗ್ರ ಅಧ್ಯಯನವಾಗುತ್ತದೆ.

ಉತ್ತರ: ಅವರ ಗ್ರಂಥಗಳಲ್ಲಿನ 'ಮಿಶ್ರಾರ್ಪಣ'ದ ವಿಷಯ ಸ್ವಲ್ಪ ಬಂದಿದೆ. ಅದೇ ತರಹ 'ಕರಣ ಹಸುಗೆ' ಮುಂತಾದವುಗಳ ಅಧ್ಯಯನವನ್ನು ಮಾಡಬೇಕು. ಆದರೆ ಪ್ರಸ್ತುತ ಲೇಖನದಲ್ಲಿ ಈಗ ಸೇರಿಸುವುದು ಕಷ್ಟ.

ಪ್ರಶ್ನೆ: ಬ್ರಹ್ಮಜ್ಞಾನವನ್ನು ಹೊಂದಿದವನು ಎಂದಿಗೂ ಅಂಜಲಾರ ಎಂಬುದನ್ನು ಚನ್ನಬಸವಣ್ಣನವರು ಹೇಳಿದ್ದಾರೆ ಎಂದಿರಿ. ನವರಸಗಳು ಮಾನವರ ರಕ್ತದಲ್ಲಿ ಸಂಕಲಿತಗೊಂಡು ಹುದುಗಿಹೋಗಿವೆ. ಅದರಲ್ಲಿ ಭೀಭತ್ಸರಸ ಒಂದು. ಅಂಜಿಕೆ ಪ್ರಕೃತಿ ಸಹಜ ಗುಣ. ಇದನ್ನು ಹೋಗಲಾಡಿಸಲು ಸಾಧ್ಯವೇ?

ಉತ್ತರ: ಇದಕ್ಕೆ ನಾನೇನು ಉತ್ತರ ಕೊಡಲಿ? ಸಂಸಾರದ ಯಾವುದೇ ಜಂಜಡ ಇಲ್ಲದವನಿಗೆ ಭಯಕ್ಕೆ ಏನು ಕಾರಣ? ಜಗದ್ಗುರುಗಳು ಹೀಗೆ ಅಪ್ಪಣೆ ಕೊಡಿಸಿದ್ದಾರೆ. ಶರಣರು 'ಮರಣವೇ ಮಹಾನವಮಿ' ಎನ್ನುವವರು. ಜೀವನ್ಮುಕ್ತನಾದಂಥ ವ್ಯಕ್ತಿ ಬ್ರಹ್ಮಾನಂದದ ಅನುಭವವನ್ನು ಪಡೆಯುವುದರಿಂದ ಅವನು ಯಾವುದಕ್ಕೂ ಅಂಜುವುದಿಲ್ಲ. ಯಾವುದಕ್ಕೂ ಅಂಟಿಕೊಂಡಿರುವುದಿಲ್ಲ. ಆದ್ದರಿಂದ ಶರಣರು ಯಾವುದಕ್ಕೂ ಹೆದರುವುದಿಲ್ಲ ಎಂದು ಚನ್ನಬಸವಣ್ಣನವರು ಹೇಳಿದ್ದಾರೆ.

ಪ್ರಶ್ನೆ: ಶಿವಶರಣರ ಮೇಲೆ ವೇದಾಗಮಗಳ ಪ್ರಭಾವ ಬರೀ ಧಾರ್ಮಿಕ ದೃಷ್ಟಿಯಿಂದಷ್ಟೇ ಆಗಿತ್ತೇ ಅಥವಾ ಸಾಹಿತ್ಯಿಕವಾಗಿ ಏನಾದರೂ ಅವರ ಮೇಲೆ ಪ್ರಭಾವ ಉಂಟಾಗಿತ್ತೆ. ದಯವಿಟ್ಟು ತಿಳಿಸಿ.

ಉತ್ತರ: ಇದಕ್ಕೆ ಉತ್ತರಿಸಬೇಕಾದರೆ ಬಹಳ ಆಳವಾದ ಅಧ್ಯಯನ ಬೇಕು. ಚನ್ನಬಸವಣ್ಣನವರ ವಚನದ ಭಾಷೆ ಶಾಸ್ತ್ರಗರ್ಭಿತ. ಅವರು ಅಧ್ಯಯನ ಮಾಡಿರುವ ಶೈವಾಗಮಗಳು ಶಾಸ್ತ್ರವಿಚಾರ ಗರ್ಭಿತವೇ. ಆ ಶಾಸ್ತ್ರಗರ್ಭಿತ ಶೈಲಿಯಲ್ಲಿ ಕೆಲವೆಡೆ ಉಪಮಾದಿ ಅಲಂಕಾರಗಳು ಆಗಮಗಳಲ್ಲಿ ತುಂಬಾ ಚನ್ನಾಗಿ ಬಂದಿವೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಕಾವ್ಯಾಂಶಗಳು ಸಾಕಷ್ಟು ತುಂಬಿವೆ. ಶರಣರ ವಚನಗಳಲ್ಲೂ ಉಪಮಾ, ರೂಪಕ ಮುಂತಾದ ಅಲಂಕಾರಗಳು ಬಹು ವಿಧವಾಗಿ ಬಂದಿರುವುದನ್ನು ನೋಡುತ್ತೇವೆ. ಹೀಗೆಯೇ ಚನ್ನಬಸವಣ್ಣನವರ ಮೇಲೆ ಆಗಮಗಳ ಪ್ರಭಾವ ಕೇವಲ ಧಾರ್ಮಿಕ ದೃಷ್ಟಿಯಲ್ಲಿ ಮಾತ್ರವಲ್ಲ, ಸಾಹಿತ್ಯಿಕ ದೃಷ್ಟಿಯಲ್ಲೂ ಹೌದು ಎಂದು ಹೇಳಬೇಕು.

ಱ ಱ

# ೨. ವೇದಾಗಮಗಳು ಮತ್ತು ಅಕ್ಕಮಹಾದೇವಿ

-ಡಾ|| ಸಿ.ಯು. ಉಮಾದೇವಿ

ಭಾರತೀಯ ಸಂಸ್ಕೃತಿಗೆ ಮೂಲ ಸಾಹಿತ್ಯ ಸಂಪತ್ತೆಂದರೆ ವೇದಾಗಮಗಳು. ಇಲ್ಲಿನ ಎಲ್ಲ ಧರ್ಮದರ್ಶನಗಳನ್ನು ಅವಲೋಕಿಸಿದಾಗ ಇವುಗಳಿಗೆ ಮೂಲ ವೇದಾಗಮಗಳೇ ಎನ್ನುವುದು ನಿರ್ವಿವಾದ. ಪ್ರಾಚೀನ ಋಷಿಗಳಾಗಲಿ, ಆಚಾರ್ಯರಾಗಲಿ ಕೆಲವರು ವೇದಗಳನ್ನು ಪ್ರಮಾಣವಾಗಿರಿಸಿಕೊಂಡು ಧರ್ಮಗ್ರಂಥಗಳನ್ನು ರಚಿಸಿದರೆ ಕೆಲವರು ಆಗಮಗಳನ್ನು ಪ್ರಮಾಣವಾಗಿರಿಸಿಕೊಂಡು ಧರ್ಮಗ್ರಂಥಗಳನ್ನು ರಚಿಸಿದ್ದಾರೆ. ಆದರೆ ವೇದ ಆಗಮಗಳನ್ನು ಸಮಾನ ಪ್ರಮಾಣವನ್ನಾಗಿ ಸ್ವೀಕರಿಸಿ, ಜೊತೆಗೆ ಉಪನಿಷತ್‌ಗಳನ್ನೂ ಒಳಗೊಂಡಿರುವುದೇ ವೀರಶೈವ ಧರ್ಮವಾಗಿದೆ. ಅಂದಿನಿಂದ ಕಾಲಾನುಕಾಲಕ್ಕೆ ಅನೇಕ ಮಹನೀಯರು ಸಂಸ್ಕೃತದಲ್ಲಿ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿಕೊಂಡು ಬಂದಿದ್ದಾರೆ.

ಅದನ್ನೇ ಆಡುಭಾಷೆಯಲ್ಲಿ-ಜನವಾಣಿಯಲ್ಲಿ ಮೊದಲಿಗೆ ದೇವರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ಆನಂತರ ಶ್ರೀ ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದ ಶರಣರು ಸಂಸ್ಕೃತದಲ್ಲಿದ್ದ ಶಾಸ್ತ್ರಗ್ರಂಥಗಳನ್ನೆಲ್ಲಾ ಆಳವಾಗಿ ಅಧ್ಯಯನ ನಡೆಯಿಸಿ ಅದರಲ್ಲಿ ಪ್ರೌಢಿಮೆ ಸಾಧಿಸಿ, ಪಂಡಿತರಾಗಿ, ದೃಢವಾದ ಹೆಜ್ಜೆಗಳನ್ನು ಆ ಗಟ್ಟಿನೆಲದ ಮೇಲೆ ಇಟ್ಟು ನಡೆಯುವುದನ್ನು ಕಲಿತ ಮೇಲೆ ವೇದಗಳಲ್ಲಿನ ಜ್ಞಾನ, ಆಗಮಗಳಲ್ಲಿನ ಉಪಾಸನೆಯ ವಿಧಾನ, ಉಪನಿಷತ್‌ಗಳ ದಿವ್ಯ ಆದರ್ಶ ಎಲ್ಲವೂ ಒಂದೆಡೆ ಸೇರಿ ತ್ರಿವೇಣಿ ಸಂಗಮವಾಗಿ ಹರಿದುಬಂದಿರುವುದೇ ವಚನಗಳಾಗಿವೆ. ಅಂತೆಯೇ ಜನವಾಣಿ ಬೇರುಗಳಿಂದ ಮೂಡಿಬಂದ ಶರಣವಾಣಿ ಹೂಗಳವೇ ವಚನಗಳು. ತತ್ತ್ವಶಾಸ್ತ್ರಗಳನ್ನು ಅರ್ಥೈಸಿಕೊಂಡು ಮೊದಲು ತಮ್ಮ ಬದುಕಿಗೆ ಅವನ್ನು ಅಳವಡಿಸಿಕೊಂಡು ಮಹಾನುಭಾವರಾಗಿ ತಮ್ಮ ತಮ್ಮ ಅನುಭವಗಳನ್ನು ಜನಸಾಮಾನ್ಯರಿಗೂ ತಿಳಿಸುವ ಸಲುವಾಗಿ ಜನವಾಣಿಯನ್ನೇ ಬಳಸಿಕೊಂಡು ವಚನಗಳನ್ನು ರಚಿಸಿದ್ದಾರೆ. ಹಾಗಾಗಿ ಭಾರತೀಯ ಬೇರೆ ಯಾವುದೇ ಭಾಷಾ ಸಾಹಿತ್ಯಕ್ಕೂ ಇಲ್ಲದ ಒಂದು ವಿಶಿಷ್ಟರೂಪ ವಚನಗಳದ್ದಾಗಿದೆ.

ಶರಣರ ಅನೇಕ ವಚನಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ತಮ್ಮ ಹೇಳಿಕೆಗೆ ಸಾಕ್ಷಿಯಾಗಿ, ಪ್ರಮಾಣವಾಗಿ ಬಳಸಿರುವುದನ್ನು ಕಂಡಾಗ ವಚನಕಾರರಿಗೂ

ವೇದಾಗಮಗಳೇ ಪ್ರತ್ಯಕ್ಷ ಪ್ರಾಮಾಣಗಳಾಗಿದ್ದವು ಎನ್ನುವುದು ನಿರ್ವಿವಾದ. ಅಕ್ಕಮಹಾದೇವಿಯು ಇದಕ್ಕೆ ಹೊರತಲ್ಲ.

**ಅಕ್ಕಮಹಾದೇವಿ-ವೇದಗಳು**

ತ್ರಿಯಾಯುಷಂ ಜಮದಗ್ನೇಃ ಕಶ್ಯಪಶ್ಯ ತ್ರಿಯಾಯುಷಂ।
ಅಗಸ್ತ್ಯಸ್ಯ ತ್ರಿಯಾಯುಷಂ ಯದ್ದೇವಾನಾಂ ತ್ರಿಯಾಯುಷಂ॥

ಎಂಬ ವೇದೋಕ್ತ ಮಹರ್ಷಿಗಳು ಮತ್ತು ದೇವತೆಗಳೆಲ್ಲರೂ ಭಸ್ಮಧಾರಣ ಮಾಡುತ್ತಿದ್ದ ಬಗ್ಗೆ ಬೃಹಜ್ಜಾಬಾಲೋಪನಿಷತ್‌ನಲ್ಲಿ ಉಲ್ಲೇಖವಾದುದನ್ನು ಅಕ್ಕಮಹಾದೇವಿ ಭಸ್ಮಧಾರಣದ ಮಹತ್ವವನ್ನು ಹೇಳುವ ಸಂದರ್ಭದಲ್ಲಿ ಮೇಲಿನ ಶ್ಲೋಕದ ಅನುವಾದವೋ ಎನ್ನುವಂತೆ ಈ ವಚನದಲ್ಲಿ ಬಳಸಿರುವುದನ್ನು ಕಾಣಬಹುದು:

ಹಿತವಿದೆ ಸಕಲ ಲೋಕದ ಜನಕ್ಕೆ
ಮತವಿದೆ ಶ್ರುತಿ ಪುರಾಣಾಗಮದ
ಗತಿಯಿದೆ ಭಕುತಿಯ ಬೆಳಗಿನನ್ನತಿಯಿದೆ

ಎಂದು ಆರಂಭಿಸಿ ಕೊನೆಯಲ್ಲಿ

ಮರಣ ಭಯದಿಂದ ಆಗಸ್ತ್ಯ ಕಾಶ್ಯಪ ಜಮದಗ್ನಿಗಳು
ಧರಿಸಿದರಂದು ನೋಡಾ ಚೆನ್ನಮಲ್ಲಿಕಾರ್ಜುನಾ!

ಎಂದು ಭಸ್ಮಧಾರಣದ ಮಹತ್ವವನ್ನು ಹೇಳಿದ್ದಾಳೆ.

ಚಂದ್ರಜ್ಞಾನಾಗಾಮದ[2]

ಸಪ್ತಕೋಟಮಹಾಮಂತ್ರಾ ರೂಪವಕ್ತ್ರೈರನೇಕಧಾ।
ಪಂಚಾಕ್ಷರೇ ಪ್ರಲೀಯಂತೆ ಪುನಸ್ತಸ್ಮಾದ್ವಿನಿರ್ಗತಾಃ॥

"ಏಳು ಕೋಟಿ ಮಹಾಮಂತ್ರಗಳು ಸ್ವರೂಪ ಆಕಾರಗಳಿಂದ ಅನೇಕವಾಗಿವೆ. ಅವುಗಳೆಲ್ಲವೂ ಪಂಚಾಕ್ಷರ ಮಂತ್ರದಲ್ಲಿಯೇ ಲಯವಾಗುತ್ತದೆ. ಅಲ್ಲಿಂದಲೇ ಉಗಮ ಹೊಂದುತ್ತವೆ" ಎಂಬ ಶ್ಲೋಕದಿಂದ ಪ್ರಭಾವಿತಳಾಗಿ

ಏಳುಕೋಟಿ ಮಹಾಮಂತ್ರ ಉಪಮಂತ್ರಗಳಿಗೆ ಲೆಕ್ಕವಿಲ್ಲ
ಚಿತ್ತ ವ್ಯಾಕುಲನಾಗಿ ಭ್ರಮಿಸದಿರಾದಿರೆ ಮನವೇ।
ಶಿವಶಿವಾ ಶಿವಶಿವಾ ಶಿವಶಿವಾ ಶಿವಶಿವಾ ನಮೋ ನಮೋ
ಶರಣೆಂದಡೆ ಸಾಲದೆ?

ಎಂಬ ವಚನ ರಚಿಸಿದ್ದಾಳೆ.

---

೧. ಬೃಹಜ್ಜಾಬಾಲೋಪನಿಷತ್ ೪.೩.೨, ಚಂದ್ರಜ್ಞಾನಾಗಮದ ೬ನೇ ಪಟಲ, ಪುಟ ೭೮, ಶ್ಲೋಕ ೬೦ ನೋಡಿ.

೨. ಚಂದ್ರಜ್ಞಾನಾಗಮ ; ಅಷ್ಟಮ ಪಟಲ, ಶ್ಲೋಕ ೪೫.

"ಈ ಜಗತ್ತು ಒಬ್ಬ ವ್ಯಕ್ತಿಯಿಂದ ನಿರ್ಮಿತವಾದುದಲ್ಲ ಅದು ಅವಿರ್ಭಾವವಾಯಿತು" ಎಂದು ವೇದದಲ್ಲಿ ಬರುವ ನಾಸದೀಯ ಸೂಕ್ತದಲ್ಲಿಯೂ ಉಪನಿಷತ್ತುಗಳಲ್ಲಿಯೂ ಇದೆ. "ಕಾಲದ ಕಲ್ಪನೆಯು ಇಲ್ಲದಿದ್ದಾಗ ಎಂದಿನಿಂದ ಎಂದು ಹೇಳುವುದು ಕಷ್ಟ. ಮನಸ್ಸಿನ ಕಲ್ಪನೆಗೆ ಬರುವ ಯಾವುದೇ ವಸ್ತುವಾಗಲೀ ಇರಲಿಲ್ಲ. ತಾನೇ ತಾನಾಗಿದ್ದ ಚೈತನ್ಯ ಸ್ಫುರಣೆಯೊಂದು ಮಾತ್ರ ಇದ್ದಿತೆನ್ನಬಹುದು."

ನಾಸದೀಯ ಸೂಕ್ತ : ಸೃಷ್ಟಿಗೆ ಪೂರ್ವದಲ್ಲಿ, ಸದಸತ್ತುಗಳಾಗಲಿ, ಆಕಾಶಾಂತರಿಕ್ಷಗಳಾಗಲೀ ಹಗಲು ರಾತ್ರಿಗಳಾಗಲೀ ಅಮೃತವಾಗಲೀ ಮೃತ್ಯುವಾಗಲೀ ಇರಲಿಲ್ಲ. ಆದರೆ ಆಗ ಇದ್ದುದೇನೆಂದರೆ:

'ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಃ ಕಿಂಚನಾಸ।'

"ವಾಯು ಇಲ್ಲದೆ ಇದ್ದರೂ ಪ್ರಾಣ ಚೈತನ್ಯದ ಸ್ಫುರಣೆಯಿದ್ದಿತು. ಸ್ವಶಕ್ತಿಯಿಂದ ಸ್ಫುರಿಸುತ್ತಿದ್ದಿತು. ಅದೊಂದೇ ಇತ್ತು ಅಲ್ಲದೆ ಮತ್ತೇನೂ ಇರಲಿಲ್ಲ."

ಹೀಗೆ ಅದ್ವೈತವೂ ಶಕ್ತಿವಿಶಿಷ್ಟವೂ ಆದ ಪರಬ್ರಹ್ಮದ ಕಲ್ಪನೆಯು ನಾಸದೀಯ ಸೂಕ್ತದಲ್ಲಿದೆ. ಇಲ್ಲಿ ಹೇಳಿದಂತೆ ಅಕ್ಕಮಹಾದೇವಿಯು "ಆರೂ ಅರಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ ಹಿಡಿದೆನ್ನ ಕರದಲ್ಲಿ....." ಎಂದು ಒಡಲಿಲ್ಲದ ಬಯಲನಿಂತು ವರ್ಣಿಸಿದ್ದಾಳೆ. ನಾಸದೀಯ ಸೂಕ್ತದಲ್ಲಿ ಹೇಳಿದಂತೆ ಪ್ರಾಣ ಚೈತನ್ಯವನ್ನೇ ಅಕ್ಕಮಹಾದೇವಿ ದೇವರೆಂದು ಭಾವಿಸಿ:

ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚೆಲುವಂಗೆ ನಾನೊಲಿದೆನವ್ವಾ;
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗೆ
ನಾನೊಲಿದೆ..... ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ
ನಾನು ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು.

"ಜೀವನವೆಂಬ ಮಿಡಿಯು ಬಲಿತು ಕಾಯಾಗಿ ಹಣ್ಣಾಗಿ ತಾನಾಗಿಯೇ ತೊಟ್ಟುಕಳಚಿ ಬೀಳ ಬೇಕೆಂದು" ಹೇಳುವ ಋಗ್ವೇದ ಮಂತ್ರದ ಅಭಿಪ್ರಾಯವನ್ನು ಅಕ್ಕಮಹಾದೇವಿ "ಫಲ ಪಕ್ವವಾಗಿಲ್ಲದೆ, ಹೊರಗಣ ಸಿಪ್ಪೆ ಒಪ್ಪಗೆಡದು" ಎಂದು ಒಂದು ವಚನದಲ್ಲಿ ಹೇಳಿರುವುದನ್ನು ಕಂಡರೆ ವೇದಗಳನ್ನು ಚೆನ್ನಾಗಿ ತಿಳಿದಿದ್ದಳೆಂದೆನಿಸುತ್ತದೆ.

ಋಗ್ವೇದದಲ್ಲಿ ಬರುವ

"ಸ್ಥಿರೇಭಿರಂಗೈಃ ಪುರುರೂಪ ಉಗ್ರೋ
ಬಭ್ರುಃ ಶುಕ್ರೇಭಿಃ ಪಿಪಿಶೇ ಹಿರಣ್ಯೈಃ

---

(ಋಗ್ವೇದದ ದಶಮ ಮಂಡಲದಲ್ಲಿ ೧೨೯ನೆಯ ಸೂಕ್ತವೇ ನಾಸದೀಯ ಸೂಕ್ತ. ಪ್ರಜಾಪತಿ ಪರಾಮೇಷ್ಠೀ ಈ ಸೂಕ್ತದ ಋಷಿಯು 'ಪರಮಾತ್ಮನೇ ಈ ಸೂಕ್ತಕ್ಕೆ ದೇವತೆಯ ಇದರಲ್ಲಿ ೭ ಮಂತ್ರಗಳಿವೆ).

ಈಶಾನಾದಸ್ಯ ಭುವನಸ್ಯ ಭುರೇಃ ನ ವಾ ಉ
ಯೋಷದುದ್ರಾದಸೂರ್ಯಮ್॥" ಋ II. ೩೩.೯

"ರುದ್ರದೇವನು ಚಲಿಸಿದ, ಚಿರಕಾಲ ಬಾಳುವ, ಗಟ್ಟಿಯಾದ ಅವಯವವುಳ್ಳವನು ಹೆಚ್ಚು ಚೆನ್ನಿಗನು, ಹೆಚ್ಚು ತೇಜಸ್ವಿಯು, ಸತ್ವಶಾಲಿಯೂ, ಹೊಂದೊಡಿಗೆಗಳಿಂದ ಹೊಳೆಯುವವನು, ಈ ಲೋಕದ ಒಡೆಯನು ಮತ್ತು ಈ ಭುವನವನ್ನು ಭರಿಸಿದಾತನಾದನು."

ಈ ಶ್ಲೋಕಕ್ಕೆ ಸಂವಾದಿಯಾಗಿ:

"ಹೊಳೆವ ಕೆಂಜಡೆಯ ಮೇಲೆ ಎಳೆಬೆಳದಿಂಗಳು
ಫಣಿ ಮಣಿ ಕರ್ಣಕುಂಡಲ ನೋಡವ್ವ
ರುಂಡಮಾಲೆಯ ಕೊರಳವನ ಕಂಡಡೆ ಒಮ್ಮೆ ಬರಹೇಳವ್ವ"

ಎಂದು ಚನ್ನಮಲ್ಲಿಕಾರ್ಜುನನ್ನು ವರ್ಣಿಸಿರುವುದನ್ನು ಕಾಣಬಹುದು.

## ಅಕ್ಕಮಹಾದೇವಿ-ಆಗಮಗಳು

ಅಕ್ಕಮಹಾದೇವಿ ವಚನಗಳಲ್ಲಿ ಆಗಮಗಳ ಪ್ರಭಾವ ಹೇಗಿತ್ತು ಎಂಬುದನ್ನು ನೋಡೋಣ:

ಮುಂದೆ ಉಲ್ಲೇಖಿಸಿದ ವಚನ ಕಾರಣಾಗಮದಲ್ಲಿ ಬರುವ ಅನೇಕ ಶ್ಲೋಕಗಳನ್ನು ನೋಡಿ ರಚಿಸಿರುವುದನ್ನು ಕಾಣಬಹುದಾಗಿದೆ.

ವಸ್ತ್ರೇಣಾಚ್ಛಾದಯನ್ ಶಿಷ್ಯಮಾತ್ಮಾನಂ ಚ ಗುರುಸ್ತದಾ।
ವಾಮಹಸ್ತಂ ತಾ ಶಿಷ್ಯಸ್ಯ ಮೂಲೇನೈವಾಭಿಮಂತ್ರ್ಯ ಚ॥[೩]

ಗುರುವು ತನ್ನ ಮತ್ತು ಶಿಷ್ಯನ ಮೇಲೆ ವಸ್ತ್ರವನ್ನು ಹೊದ್ದುಕೊಂಡು ಶಿಷ್ಯನ ಎಡಗೈಯನ್ನು ಮೂಲಮಂತ್ರದಿಂದ ಅಭಿಮಂತ್ರಿಸಿ ಎಂದೂ, "ಅನಾದಿಮಲಸಂಹೃತ್ಯೈ ಭೂತಿ ಪಟ್ಟಾಖ್ಯದೀಕ್ಷೆಯೂ."[೪] ಅನಾದಿಮಲಗಳನಾಶ ಮಾಡಲು ಭೂತಿ ಪಟ್ಟದೀಕ್ಷೆಯ ಮೂಲಕ ಗುರುವು ಶಿಷ್ಯನಿಗೆ ಭಸ್ಮಸ್ನಾನವನ್ನು ಮಾಡಿಸಬೇಕು. ೭೪ನೇ ಶ್ಲೋಕದಲ್ಲಿ ಪಂಚಕಳಶ ಸ್ಥಾಪಿಸಿ ಶ್ಲೋಕ ೮೯, ೯೪, ೧೦೮ರಲ್ಲಿ ಸಂಪೂರ್ಣವಾಗಿ ಹೇಳಿರುವ ದೀಕ್ಷಾ ಅಭಿಷೇಕ ದೀಕ್ಷೆ. ಇಷ್ಟಲಿಂಗವು ಸಚ್ಚಿದಾನಂದ ಆತ್ಮಸ್ವರೂಪವಾಗಿದೆ. ಅದಕ್ಕೆ ಬ್ರಹ್ಮವೆಂದು ಕರೆಯಲಾಗುತ್ತಿತ್ತು. ಅದುವೇ ನೀನಾಗಿರುತ್ತೀ -ಎಂದು ಮುಂತಾಗಿ ದೀಕ್ಷಾ ವಿಧಿವಿಧಾನಗಳನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ

---

೩. ಕಾರಣಾಗಮ, ಕ್ರಿ.ಪಾ. ೧-೯೪.
೪. ಅದೇ, ಕ್ರಿ.ಪಾ. ೧-೮೩.

ಸದ್ಗುರು ಸ್ವಾಮಿ ಶಿಷ್ಯಂಗೆ ಅನುಗ್ರಹ ಮಾಡುವಲ್ಲಿ-
ತಚ್ಛಿಷ್ಯನ ಮಸ್ತಕದ ಮೇರೆ ತನ್ನಶ್ರೀ ಹಸ್ತವನಿರಿಸಿದಡೆ....

ಎಂದು ಹಾಗೆ ಮುಂದುವರೆಯುತ್ತ ನೊಸಲಿಂಗೆ ಪಟ್ಟವ ಕಟ್ಟಿದಡೆ

ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನವೆಂಬ
ಪಂಚಕಳಶದಭಿಷೇಕ ಮಾಡಿಸಲು....................
....................ಪ್ರಣವ ಪಂಚಾಕ್ಷರಿಯುಪದೇಶವ
ಕರ್ಣದಲ್ಲಿ ಹೇಳಿ, ಕಂಕಣವ ಕಟ್ಟಿದಲ್ಲಿ............
.................ಪ್ರಾಣವೇ ಪಂಚಬ್ರಹ್ಮಮಯಲಿಂಗವಾಯಿತ್ತು..........
....................ಚೆನ್ನಮಲ್ಲಿಕಾರ್ಜುನಾ.

ಎಂದು ಮೇಲಿನ ಶ್ಲೋಕಗಳಿಂದ ಪ್ರಭಾವಿತಳಾಗಿಯೇ ಹೇಳಿದ್ದಾಳೆ.

ಅಕ್ಕನ ಈ ಮೂರು ವಚನಗಳು ಅನೇಕ ಕಾರಣಗಳಿಂದ ಮುಖ್ಯವೆನಿಸುತ್ತದೆ. ಏಕೆಂದರೆ,

ಲಿಂಗದಿಂದುದಯಿಸಿ, ಅಂಗವಿಡಿದಿಪ್ಪ ಪುರಾತನರ
ಇಂಗಿತವನೇನೆಂದು ಬೆಸಗೊಂಬಿರಯ್ಯಾ?
ಅವರ ನಡೆಯೇ ಆಗಮ, ಅವರ ನುಡಿಯೇ ವೇದ
ಅವರ ಲೋಕದ ಮಾನವರೆಂದೆನ್ನ ಬಹುದೇ ಅಯ್ಯಾ?

ಎನ್ನುವ ವಚನದಲ್ಲಿ ಅವಳು ತನ್ನ ಈ ವಚನವನ್ನು ಸಮರ್ಥಿಸುವ ಸಲುವಾಗಿ ಆಗಮ ಶ್ಲೋಕವನ್ನು ಸಾಕ್ಷಿಯಾಗಿಸಿಕೊಂಡಿದ್ದಾಳೆ:

"ವೃಕ್ಷಾದ್ಭವತಿ ಬೀಜಂ ಹಿ ತದ್ ವೃಕ್ಷೇ ಲೀಯತೆ ಪುನಃ।
ರುದ್ರಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತಿ॥"

ಎಂದುದಾಗಿ ಅಂಕೋಲೆಯ ಬೀಜದಿಂದಾಯಿತ್ತು ವೃಕ್ಷವು; ಆ ವೃಕ್ಷ ಮರಳಿ ಆ ಬೀಜದೊಳಡಗಿತ್ತು.

"ಆ ಪ್ರಕಾರವಾಗಿ ಲಿಂಗದೊಳಗಿಂದ ಪುರಾತನರುದ್ಭವಿಸಿ
ಮರಳಿ ಆ ಪುರಾತನರು ಆ ಲಿಂಗದೊಳಗೆ ಬೆರೆಸಿದರು ನೋಡಿರಯ್ಯಾ.
ಇಂತಪ್ಪ ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯಾ
ಚೆನ್ನಮಲ್ಲಿಕಾರ್ಜುನಾ" ಎಂದೂ

ಇನ್ನೊಂದು ವಚನದಲ್ಲಿ:

"ಶಿವಗಣಂಗಳ ಮನೆಯಂಗಳ ವಾರಣಾಸಿಯೆಂಬುದು ಹುಸಿಯೆ
ಪುರಾತನರ ಮನೆಯಂಗಳದಲ್ಲಿ ಅಷ್ಟಾಷಷ್ಟಿ ತೀರ್ಥಂಗಳು
ನೆಲೆಸಿಪ್ಪವಾಗಿ" ಎಂದೂ

ಮತ್ತೊಂದರಲ್ಲಿ

"ಕಣ್ಣೆ ಶೃಂಗಾರ ಗುರು ಹಿರಿಯರ ನೋಡುವುದು,
ಕರ್ಣಕ್ಕೆ ಶೃಂಗಾರ ಪುರಾತನರ ಸುಗೀತಂಗಳ ಕೇಳುವುದು"

ಈ ಮೂರು ವಚನಗಳಲ್ಲಿ ಗಮನ ಸೆಳೆವ ಅಂಶವೆಂದರೆ 'ಪುರಾತನರು' ಎಂದರೆ ಯಾರು ಎಂಬುದನ್ನು ಅಕ್ಕಮಹಾದೇವಿ ಲಿಂಗೋದ್ಭವರನ್ನು ಕುರಿತು ಹೇಳಿರುವುದು ಎಂದು ಸಂಶಯವಿಲ್ಲ. ಅವಳೇ ಹೇಳಿರುವಂತೆ ಲಿಂಗದಿಂದುಯಿಸಿ ಅಂಗವಿಡಿಪ್ಪ ಪುರಾತನರ ಇಂಗಿತವನೇನೆಂದು ಬೆಸಗೊಂಬಿರಯ್ಯಾ? ಎನ್ನುತ್ತಾ.........ಆ ಪ್ರಕಾರವಾಗಿ.........

ಹನ್ನೆರಡನೆಯ ಶತಮಾನದಲ್ಲಾಗಲೇ ಲಿಂಗೋದ್ಭವರ ವಿಚಾರದಲ್ಲಿ ಶ್ರದ್ಧೆ, ಭಕ್ತಿ, ನಂಬಿಕೆಗಳು ಆಳವಾಗಿ ಜನರ ಮನದಲ್ಲಿ ಇದ್ದುದ್ದು ಈ ವಚನದಿಂದ ತಿಳಿಯಬಹುದಾಗಿದೆ. ಅವರ ನಡೆಯೇ ಆಗಮ, ಅವರ ನುಡಿಯೇ ವೇದ ಎಂಬ ಗೌರವ ಭಾವ ತಳೆದಿರುವುದನ್ನು ನೋಡಿದರೆ ಯಾವುದೇ ಒಂದು ನಂಬಿಕೆ ಅನೇಕ ಶತಮಾನಗಳಿಂದ ಜನಪದದಲ್ಲಿ ಬೆಳೆದು ಬಂದಿದ್ದರೆ ಮಾತ್ರ ಇಷ್ಟು ಗಟ್ಟಿ ರೂಪ ತಾಳಿ ಆ ನಂಬಿಕೆಯನ್ನು ಕುರಿತು ಸಾಹಿತ್ಯ ರಚಿಸಲು ಸಾಧ್ಯ.

ತಮಿಳುನಾಡಿನ ೬೩ ಪುರಾತನರನ್ನು ಕರ್ನಾಟಕದ ವೀರಶೈವರು ಭಕ್ತಿಯಿಂದ ಸ್ಮರಿಸುತ್ತಿದ್ದುದನ್ನು ಅನೇಕ ವಚನಗಳಲ್ಲಿ ಹಾಗೂ ಅಂದಿನ ಸಾಹಿತ್ಯಗಳಲ್ಲಿ ಕಂಡುಬಂದರೂ ಪಂಚಾಚಾರ್ಯರನ್ನು ಅಂದಿನ ಸಮಾಜ ಪುರಾತನರೆಂದು ಭಾವಿಸುತ್ತಿತ್ತು ಎಂಬುದಕ್ಕೆ ಸಾಕ್ಷಿ ಮೇಲಿನ ವಚನಗಳು.

ವೇದಾಗಮಗಳ ಬಗ್ಗೆ ಆಕೆಗಿದ್ದ ಗೌರವ ಭಾವನೆಯೂ ಇದರಿಂದ ತಿಳಿದುಬರುತ್ತದೆ.

"ಇಂದೆನ್ನ ಮನೆಗೆ ಒಡೆಯರು ಬಂದಡೆ ತನುವೆಂಬ
ಕಳಶದಲುದಕವ ತುಂಬಿ"

ಎಂದು ಆರಂಭವಾಗುವ ಇನ್ನೊಂದು ಸುದೀರ್ಘವಾದ ವಚನದಲ್ಲಿ, ಮನೆಗೆ ಬಂದ ಒಡೆಯರಿಗೆ ಯಾವ ರೀತಿ ಪೂಜೋಪಚಾರ ಸಲ್ಲಿಸುವೆ ಎಂಬ ವಚನಕ್ಕೆ ಸಂವಾದಿಯಾದ ಶ್ಲೋಕಗಳು ಪಾರಮೇಶ್ವರಾಗಮದ ೧೬ನೇ ಪಟಲದ ಅನೇಕ ಶ್ಲೋಕಗಳಲ್ಲಿ (೮೬ನೇ ಶ್ಲೋಕದಿಂದ ೧೧೦ನೇ ಶ್ಲೋಕಗಳಲ್ಲಿ), ಗೃಹಸ್ಥರ ಮನೆಗಳಿಗೆ ತುರ್ಯಾ ವೀರಶೈವನು ಆಗಮಿಸಿದರೆ ಹೇಗೆ ಪೂಜಿಸಬೇಕು, ಉಪಚರಿಸಬೇಕು, ಯಾವ ರೀತಿಯಲ್ಲಿ ಸೇವೆಗಳನ್ನು ಮಾಡಬೇಕು ಎಂಬೆಲ್ಲ ವಿವರಗಳಿವೆ.

(ತುರ್ಯಾವೀರಶೈವನ - ವೀರವತ್ರದ ಬಗ್ಗೆ ಪಾರಮೇಶ್ವರಾಗಮದ ಪಟಲ ೧೬ ಶ್ಲೋಕ ೪೭ ರಿಂದ ೬೧ರಲ್ಲಿ ವಿವರಿಸಲಾಗಿದೆ.)

ಪಾರಮೇಶ್ವರಾಗಮದಲ್ಲಿ

ಯತ್ರ ಯತ್ರ ಮನೋ ಯಾತಿ ಗೋಚರೀಕುರುತೇ ಚ ಯತ್।
ತತ್ರ ಸರ್ವತ್ರ ತತ್ಸರ್ವಂ ಮದ್ರೂಪಮುಪಧಾರಯೇತ್॥ (ಪಾ. ೧೬.೨೯)

"ವೀರಶೈವನ ಮನಸ್ಸು ಎಲ್ಲೆಲ್ಲಿ ಹೋಗುತ್ತದೆಯೋ ಮತ್ತು ಯಾವುದನ್ನು ಗ್ರಹಿಸುತ್ತದೆಯೋ ಅಲ್ಲೆಲ್ಲ ಅವೆಲ್ಲವುಗಳಲ್ಲಿ ನನ್ನ (ಶಿವ) ಸ್ವರೂಪವನ್ನೇ ಭಾವಿಸಬೇಕು" ಎಂದೆನ್ನುವ ಈ ಅರ್ಥ ಅಕ್ಕನ ಒಂದು ವಚನದಲ್ಲಿ "ಯತ್ರ ಜೀವಃ ತತ್ರ ಶಿವಃ" ಎಂಬ "ಅಭಿನ್ನ ಜ್ಞಾನವಾಯಿ"ತೆಂದು ಹೇಳಿದ್ದಾಳೆ.

ಇದೇ ಆಗಮದ ಶರಣ ಸ್ಥಲದಲ್ಲಿ ಶರಣ ಲಕ್ಷಣವನ್ನು ಹೇಳುತ್ತಾ "ಮೂರು ವಿಧ ಈಷಣೆ (ಪುತ್ರೇಷಣಾ, ವಿತ್ತೇಷಣಾ ಮತ್ತು ಪ್ರತಿಷ್ಠೇಷಣಾ)ಗಳಿಂದ ಮುಕ್ತನಾದವನು, ಸದಾ ಏಕಾಂತರದಲ್ಲಿರುವವನು, ಸದಾಶಿವನ ಧ್ಯಾನದಲ್ಲಿರುವವನ್ನು ಶರಣನೆಂದು ಪ್ರಶಂಸಿಸಲ್ಪಡುತ್ತಾನೆ. ಅವನು ದೇಹಾಂತದಲ್ಲಿ ಶಿವನೇ ಆಗುವನು" ಎಂಬ ಲಕ್ಷಣವನ್ನು (ಪಟಲ ೬ ಶ್ಲೋಕ ೨೩,೨೫),

"ತನು ನಿಮ್ಮ ರೂಪಾದ ಬಳಿಕ ಆರಿಗೆ ಮಾಡುವೆ? ಮನ ನಿಮ್ಮ ರೂಪಾದ ಬಳಿಕ ಆರ ನೆನೆವೆ? ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ? ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ" ಎನ್ನುವ ಅಕ್ಕಮಹಾದೇವಿ ಈ ಸ್ಥಲದ ಮನಃಸ್ಥಿತಿಯನ್ನು ತಲುಪಿ ಅನುಭಾವಿಯಾಗಿ ನುಡಿದಿದ್ದಾಳೆ.

ಇದೇ ಆಗಮದಲ್ಲಿ ಐಕ್ಯಸ್ಥಲದ ಭಕ್ತನ ಲಕ್ಷಣಗಳನ್ನು ಹೇಳುವಲ್ಲಿ- "ಪೂಜೆಯಿಲ್ಲ, ಧ್ಯಾನವೂ ಇಲ್ಲ, ಯೋಗ-ಕರಣ ಮುಂತಾದವೂ ಇಲ್ಲ ಅಹಂತಾ (ನಾನೇ ಎಂಬ=ಶಿವನೇ ಎಂಬ) ಭಾವನೆಯುಳ್ಳ ಶಿವಲಿಂಗೈಕ್ಯನೆಂಬ ಸಂಜ್ಞೆಯುಳ್ಳವನೇ ಪರಮೇಶ್ವರನು. ಅದು ಶಿವನ ಪ್ರಧಾನರೂಪ. ಅವನೇ ನಾನು" ಎಂಬ ಅರ್ಥವನ್ನು ಕೊಡುವ ಶ್ಲೋಕ (೬.೨೬-೨೮)ಗಳಿವೆ. "ಕದಳಿ ಎಂಬುದು ತನು, ಕದಳಿ ಎಂಬುದು ಮನ.... ಚನ್ನಮಲ್ಲಿಕಾರ್ಜುನ"ನು 'ಹೃದಯ ಕಮಲದಲ್ಲಿ ಅಡಗಿದೆನು' ಎಂಬ ವಚನದಲ್ಲಿ ಮೇಲಿನ ಶ್ಲೋಕಗಳ ಛಾಯೆಯನ್ನು ಕಾಣಬಹುದಾಗಿದೆ.

ಈ ಬ್ರಹ್ಮಾಂಡದ ಸೃಷ್ಟಿಯ ಬಗ್ಗೆ-

"ಏವಂರೂಪಃ ಪರಾತ್ಮಾ ಹಿ ಪಶುಪಾಶವಿಮೋಚಕಃ।
ಶಂಭುಃ ಕದಾಚನ್ನಿಜಯಾ ಪ್ರಕೃತ್ಯಾ ಲೀಲಯಾ ಸ್ವಾಯಮ್॥

"ಈ ಸ್ವರೂಪದಲ್ಲಿರುವ ಪರಮಾತ್ಮನೇ ಜೀವಗಳ ಪಾಶ ವಿಮೋಚಕನಾದ ಶಂಭು. ಈ ಶಿವನು ತನ್ನ ಲೀಲಾರೂಪನಾದ ಪ್ರಕೃತಿಯಿಂದ ಒಮ್ಮೆ ತಾನೇ ಲೀಲೆಯನ್ನು ಮಾಡುತ್ತಾನೆ" ಎನ್ನುವ ಸೂಕ್ಷ್ಮಾಗಮದ (೧.೧೮) ಈ ಶ್ಲೋಕಾರ್ಥವನ್ನು ಅಕ್ಕಮಹಾದೇವಿ

"ತನ್ನ ವಿನೋದಕ್ಕೆ ತಾನೇ ಸೃಜಿಸಿದ ಸಕಲ ಜಗತ್ತು, ತನ್ನ ವಿನೋದಕ್ಕೆ ತಾನೆ ಸುತ್ತಿದನದಕ್ಕೆ ಸಕಲ ಪ್ರಪಂಚನು, ತನ್ನ ವಿನೋದಕ್ಕೆ ತಾನೆ ತಿರುಗಿಸಿದನನಂತ ಭವದುಃಖಗಳಲ್ಲಿ ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು ತನ್ನ ಜಗದ್ವಿಲಾಸ ಸಾಕಾದ ಮತ್ತೆ ತಾನೆ ಪರಿವನದರ ಮಾಯಾ ಪಾಶವನು" ಎಂಬ ವಚನದಲ್ಲಿ ಕಾಣಬಹುದಾಗಿದೆ.

"ಆದಿಯನಾದಿ ನಿತ್ಯಾನಿತ್ಯವ ತಿಳಿಯಲರಿಯದೆ......." ಎಂದು ಆರಂಭವಾಗುವ ಸುದೀರ್ಘವಾದ ಸೃಷ್ಟಿಯ ವಚನ ಸಂಪೂರ್ಣವಾಗಿ ಶೈವಾಗಮ್ಗಳನ್ನೇ ಅನುಸರಿಸಿ ಬರೆದುದ್ದಾಗಿದೆ ಎನ್ನಿಸುತ್ತದೆ.

ಮಕುಟಾಗಮದಲ್ಲಿ ವರ್ಣಿಸಿರುವ ಶಾಂಭವ ವ್ರತದಲ್ಲಿ (೨ ರಿಂದ ೫ನೇ ಪಟಲ) ಬರುವ ಷೋಡಶೋಪಚಾರಗಳನ್ನೆಲ್ಲಾ ಅಕ್ಕಮಹಾದೇವಿ ತನ್ನ ವಚನದಲ್ಲಿ ಬಹು ಸರಳವಾಗಿ - ಎಲ್ಲಾ ಉಪಚಾರಗಳನ್ನು ಜಂಗಮಕ್ಕೆ ಮಾಡಿಸುವೆ -ಎಂದು ಹೇಳಿರುವುದು ಕಂಡುಬರುತ್ತದೆ. ಬಾಹ್ಯ ಪರಿಕರಗಳನ್ನೆಲ್ಲಾ ಆಗಮಗಳು ಅಂತರಂಗದ ಕಡೆಗೆ ತಿರುಗಿಸಿವೆ.

ಚಂದ್ರಜ್ಞಾನಾಗಮದ ಪ್ರಭಾವವೂ ಸಾಕಷ್ಟು ವಚನಗಳಲ್ಲಿ ಕಂಡುಬರುತ್ತದೆ.

ಚಂದ್ರಜ್ಞಾನಾಗಮದ ಎರಡನೇ ಪಟಲದಲ್ಲಿ (೨.೫, ೬.೭೮, ೨.೧೪, ೨.೪೮ ರಿಂದ ೫೨ನೇ ಶ್ಲೋಕ) ಗುರುವಿನ ಲಕ್ಷಣಗಳನ್ನು ಹೇಳಿದ್ದಾರೆ:

ಶ್ಲೋಕದ ಕನ್ನಡಾನುವಾದ ಹೀಗಿದೆ- "ಮೋಕ್ಷಕ್ಕೆ ಮತ್ತು ದೀಕ್ಷೆಯನ್ನು ಪಡೆಯಲು ಗುರುವೇ ಮೂಲ ಕಾರಣ. ಗುರುವಿಲ್ಲದ ಯಾವ ಸಾಧನಗಳೂ ಸಿದ್ಧಿಗೆ ಪರ್ಯಾಪ್ತವಾಗಲಾರವು. ಯಾರು ಗುರುವೋ ಅವನೇ ಶಿವನು. ಗುರು ಶಿವ ಜ್ಞಾನದ್ವಯ ಸ್ವರೂಪದಿಂದ ಪ್ರತಿಷ್ಠಿತರು. ಮೋಕ್ಷಕ್ಕೆ ದಾರಿ ತೋರುವವರು ಶ್ರೀ ಗುರುವು. ಮೋಕ್ಷವನ್ನು ಅನುಗ್ರಹಿಸುವವನು ಶ್ರೀ ಗುರುವು" ಎಂದು ಮುಂತಾಗಿ ಇರುವ ಗುರುವಿನ ಲಕ್ಷಣಗಳನ್ನು

"ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ ನಮೋ
ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೇ ನಮೋ
ಭವಿಯೆಂಬುದ ತೊಡೆದು ಭಕ್ತೆ ಎಂದೆನಿಸಿದ ಗುರುವೆ ನಮೋ
ಚನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ ನಮೋ ನಮೋ॥

ಎಂದು ಅಕ್ಕಮಹಾದೇವಿ ಚಂದ್ರಜ್ಞಾನಾಗಮದ ಶ್ಲೋಕಗಳನ್ನು ಬಹಳ ಸುಂದರವಾಗಿ ಅನುವಾದ ಮಾಡಿದ್ದಾಳೇನೋ ಎನ್ನುವಂತಿದೆ.

"ಭಗವದ್ಗೀತೆಯಲ್ಲಿ ಒಂದೆಡೆ "ಜ್ಞಾನಿತ್ವಾತ್ಮೈವ ಮೇ ಮತಂ" (೭-೧೮) "ಜ್ಞಾನಿಯಾದ ಗುರುವು ನನ್ನಾತ್ಮವೇ ಆಗಿರುತ್ತಾನೆ" ಎಂದೂ, ಶ್ರುತಿಯಲ್ಲಿ ಅದು "ಸಾಕ್ಷಾತ್ ಭರ್ಗೋ ನರಾಕೃತಿಃ" ಪರಮಾತ್ಮನೇ ಗುರುವಾಗಿ ಭೂಲೋಕದಲ್ಲಿ ಅವತರಿಸುತ್ತಾನೆ" ಎಂದಿರುವುದನ್ನು

"ಹರ ತನ್ನ ರೂಪವ ತೋರಲು ಧರೆಗೆ ಮರ್ತ್ಯನಾಗಿ ಬಂದನು" ಎಂದು ಕನ್ನಡಿಸಿದ್ದಾಳೆ ಅಕ್ಕಮಹಾದೇವಿ.

ಇನ್ನೊಂದೆಡೆಯಲ್ಲಿ-

ಚಂದ್ರಜ್ಞಾನಾಗಮದ ಕೆಳಗಿನ ಶ್ಲೋಕವನ್ನು-

ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ।
ಲೀಯಂತೇ ಲಿಂಗಮೂಲೇ ತು ತಸ್ಮಾಲ್ಲಿಂಗಂ ಪ್ರಪೂಜಯೇತ್॥

(ಚಂ. ೩.೫೦)

"ಭೂಮಿಯ ಮೇಲೆ ಇರುವ ಎಲ್ಲ ತೀರ್ಥಗಳು ಪುಣ್ಯಕ್ಷೇತ್ರಗಳು ಲಿಂಗ ಮೂಲದಲ್ಲಿಯೇ ಲೀನವಾಗಿದೆ. ಆದ್ದರಿಂದ ಲಿಂಗವನ್ನು ಪೂಜಿಸಬೇಕು" ಎಂಬ ಶ್ಲೋಕವನ್ನು ಅಕ್ಕ ತನ್ನೊಂದು ವಚನದಲ್ಲಿ:

"ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ?
.........ಇದನರಿದು ಗುರುಕೊಟ್ಟ ಲಿಂಗದಲ್ಲಿಯೆ ಎಲ್ಲಾ ತೀರ್ಥಂಗಳೂ
ಎಲ್ಲಾ ಕ್ಷೇತ್ರಂಗಳೂ ಇದ್ದವೆಂದು ಭಾವಿಸಿ ಮುಕ್ತರಪ್ಪುದಯ್ಯ"

ಎಂಬ ವಚನ ಯಥಾವತ್ತಾಗಿ ಅನುಸರಿಸಿರುವುದು ತಿಳಿದುಬರುತ್ತದೆ.

ಇನ್ನು ಅನೇಕ ಆಗಮಗಳ ಪ್ರಭಾವವನ್ನು ಅಕ್ಕನ ವಚನಗಳಲ್ಲಿ ಕಾಣಬಹುದಾಗಿದೆ.

ಹೀಗೆ ಶಿವಾಗಮಗಳಲ್ಲಿ ವರ್ಣಿತವಾದ ಷಟ್‌ಸ್ಥಲ ಸಿದ್ಧಾಂತ, ಗುರು-ಲಿಂಗ-ಜಂಗಮ ಮೊದಲಾದ ಪದಗಳನ್ನು ಶಿವಶರಣರು ತಮ್ಮದೇ ರೀತಿಯಲ್ಲಿ ಬಳಸಿಕೊಂಡು ಆಧ್ಯಾತ್ಮ ಪಥವನ್ನು ನಿರ್ಮಿಸಿಕೊಂಡರು. ಅವರು ಆಗಮಶಾಸ್ತ್ರಗಳಿಗೆ ಅನುಭವಾತ್ಮಕವಾದ ವಿಶಾಲವಾದ ಅರ್ಥವನ್ನು ಹೊಸ ಆಧ್ಯಾತ್ಮಿಕ ಸಂಪತ್ತಿಯ ಮೆರುಗನ್ನು ನೀಡಿದರು.

### ಅಕ್ಕಮಹಾದೇವಿ-ಉಪನಿಷತ್ತು

ಅಕ್ಕಮಹಾದೇವಿ ಉಪನಿಷತ್ತುಗಳಲ್ಲಿ ಪಡೆದುಕೊಂಡಿದ್ದ ಜ್ಞಾನವನ್ನು ತನ್ನ ವಚನದಲ್ಲಿ ಹೇಗೆ ಹಾಸುಹೊಕ್ಕಾಗಿರುವಂತೆ ಬಳಸಿಕೊಂಡಿರುವುದನ್ನು ಕೆಲವು ವಚನಗಳಲ್ಲಿ ನೋಡಬಹುದು.

ಶ್ರೀಮಾನ್ ದಿವಾಕರರು "ವೀರಶೈವ ತತ್ವಪ್ರಕಾಶ"ದಲ್ಲಿ - "ವಚನಗಳು ಉಪನಿಷತ್‌ಗಳಿಗಿಂತ ಯಾವ ವಿಷಯದಲ್ಲಿಯೂ ಹಿಂದೆ ಬೀಳಲಾರದು. ಉಪನಿಷತ್ತಿನ ಎಲ್ಲಾ ವಿಷಯಗಳು ವಚನಗಳಲ್ಲಿ ಸಿಗುತ್ತದೆ. ಸತ್ಯಾನ್ವೇಷಿಗಳಾದ ಋಷಿಗಳ ಅಂತಃಸ್ಫೂರ್ತಿಯಿಂದ ಹೊರ ಹೊರಟವುಗಳೇ ಉಪನಿಷತ್‌ಗಳು. ಶರಣರ ಹೃದಯದಿಂದ ನಿರರ್ಗಳವಾಗಿ ಹೊರಟವುಗಳೇ ವಚನಗಳು. ಗೀತೆಯ ಗುಟ್ಟು ಉಪನಿಷತ್ತಿನಲ್ಲಿರುವಂತೆ ವಚನಗಳಲ್ಲಿಯೂ ಅಡಕವಾಗಿದೆ" ಎಂದಿದ್ದಾರೆ.

ಪೂರ್ಣ ಜೀವನದ ದರ್ಶನವನ್ನು ಹೊರಹೊಮ್ಮಿಸದ ಉಪನಿಷತ್‌ಗಳನ್ನು ಅಕ್ಕಮಹಾದೇವಿ ಚೆನ್ನಾಗಿ ಬಲ್ಲವಳಾಗಿದ್ದಳು. ಅವಳ ಅನೇಕ ವಚನಗಳಲ್ಲಿ ಉಪನಿಷತ್ ಶ್ಲೋಕಗಳ ಪ್ರಭಾವ ಗಾಢವಾಗಿ ಕಂಡುಬರುತ್ತದೆ.

ಶ್ವೇತಾಶ್ವತರೋಪನಿಷತ್‌ನಲ್ಲಿ (೧-೧೫)

"ತಿಲೇಷು ತೈಲಂ ದಧತೀವ ಸರ್ಪಿರಾಪಃ" ಎಂಬ ಶ್ಲೋಕ "ತಿಲದಮರೆಯ ತೈಲದಂತೆ...." ಎಂಬ ಕನ್ನಡಾನುವಾದವಾಗಿ ಸುಂದರವಾಗಿ ಮೂಡಿಬಂದಿದೆ.

ಉಪನಿಷತ್ತಿನಲ್ಲಿ ಆತ್ಮವನ್ನು ವರ್ಣಿಸಲು ಬಳಸಿರುವ ಪರಸ್ಪರ ವಿರುದ್ಧವೆಂದು ತೋರುವ ಭಾಷೆಯಂತೆಯೇ ಶರಣರೂ ಸಹ ಶೂನ್ಯವನ್ನು ವರ್ಣಿಸಿದ್ದಾರೆ. ಅದು ರೂಪಲ್ಲ-ನಿರೂಪಲ್ಲ, ಸಾವಯವವಲ್ಲ-ನಿರವಯವವಲ್ಲ, ನಾಮವಲ್ಲ-ನಿರ್ನಾಮವಲ್ಲ; ಸಕಲವಲ್ಲ-ನಿಷ್ಕಲವಲ್ಲ (ಷ.ಜ್ಞಾಸು. ಪು. ೧೪) ಅಲ್ಲಿ ಚಿತ್ತ-ಬುದ್ಧಿ-ಅಹಂಕಾರವಿಲ್ಲ, ಅದು ಅಖಂಡ ಪ್ರಪೂರ್ಣ, ಸಾಧ್ಯ ಸಾಧಕರಿಲ್ಲ, ಪೂಜ್ಯ ಪೂಜಕರಿಲ್ಲ, ದೇವ ಭಕ್ತನಿಲ್ಲ. ಇಂತ ಮೂಲತತ್ತ್ವವನ್ನೇ ಶೂನ್ಯ ಎಂದು ಕರೆದಿದ್ದಾರೆ. ಆಕಾರವಿಲ್ಲದ ವಿಕಾರವನ್ನು ಹೊಂದದ ನಿತ್ಯವಾದ ಎಲ್ಲೆ ಇಲ್ಲದ ಆಕಾಶದ ಉಪಮೆ ನೀಡಿದ್ದಾರೆ.

ನಿರ್ವಿಕಾರಂ ನಿರಾಕಾರಂ ನಿತ್ಯಂ ಸೀಮಾವಿವರ್ಜಿತಂ।
ವ್ಯೋಮವತ್ ಪರಮಂ ಬ್ರಹ್ಮ ನಿರ್ವಿಕಲ್ಪತಯಾ ಸ್ಥಿತಮ್॥
(ಸಿ.ಶಿ. ೨೦-೨೮)

ಅಲ್ಲಲ್ಲಿ ಶೂನ್ಯ ಹಾಗೂ ನಿರ್ವಾಣ ಪದವನ್ನು ಬಳಸಿದ್ದರೂ, ಬ್ರಹ್ಮ ಶಬ್ದಕ್ಕೂ ಮಿಗಿಲಾದ ಅರ್ಥವನ್ನು ಕೊಡುವ ಉಪನಿಷತ್ತಿನಲ್ಲಿ ಪ್ರತಿಪಾದಿತವಾದ ಆತ್ಮಶಬ್ದಕ್ಕೆ ಸಂವಾದಿಯಾಗಿ ಶೂನ್ಯಪದವನ್ನು, ಆಧ್ಯಾತ್ಮದ ಉನ್ನತ ನಿಲವನ್ನು ತಿಳಿಸುವ ಮಾಧ್ಯಮವನ್ನಾಗಿ ವ್ಯಾಪಕವಾಗಿ ವೀರಶೈವರು ಬಳಸಿರುವರು.

ಅಹಿಂಸೆಯ ಬಗ್ಗೆ ಛಾಂದೋಗ್ಯ ಉಪನಿಷತ್‌ನಲ್ಲಿ (೩-೧೭-೪) ತಪೋ ದಾನಂ ಆರ್ಜವಂ ಅಹಿಂಸಾ ಸತ್ಯವಚನಂ ಇತಿ ತಾ ಅಸ್ಯ ದಕ್ಷಿಣಾಃ॥ ನಿಜವಾದ ದಕ್ಷಿಣ ಎಂದರೆ ಇದೇ ಎಂದು ಜ್ಞಾನಕ್ಕೆ ಮಹತ್ತ್ವವನ್ನು ಕೊಟ್ಟಿರುವುದನ್ನು ಅಕ್ಕಮಹಾದೇವಿ ಹೇಗೆ ಹೇಳಿದಳೆಂಬುದನ್ನು ನೋಡೋಣ:

"ಜಾಲಗಾರನೊಬ್ಬ ಜಗವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು ನಲಿನಲಿದಾಡುವ ತನ್ನ ಮಗೆಯಲೊಂದು ಶಿಶು ಸತ್ತಡೆ ಅದಕ್ಕೆ ಮರುಗುವಂತೆ ಆವನೇಕೆ ಮರುಗ? ಜಾಲಗಾಲನ ದುಃಖ ಜಗಕ್ಕೆಲ್ಲ ನಗೆಗೆಡೆ ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವಹಿಂಸೆ ಮಾಡುವ ಮಾದಿಗರ ನೇನೆಂಬೆನಯ್ಯಾ" ಇದನ್ನು ಶಾರೀರಿಕಉಪನಿಷತ್‌ನಲ್ಲೂ ಕಾಣಬಹುದಾಗಿದೆ. (೮.೯)

ಮುಂಡಕೋಪನಿಷತ್ತಿನ-

ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ
ಅಸ್ತಂಗಚ್ಛಂತಿ ನಾಮರೂಪೇ ವಿಹಾಯ।
ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ
ಪರಾತ್ಪರಂ ಪುರುಷಮುಪೈತಿ ದಿವ್ಯಮ್॥ (೩.೨.೮)

ಎಂಬ ಮಂತ್ರವೂ ಸಹ ಇದನ್ನೇ ಸ್ಪಷ್ಟಪಡಿಸುತ್ತದೆ. ನದಿಗಳು ಸಮುದ್ರಕ್ಕೆ ಸೇರಿ ಹೇಗೆ ತಮ್ಮ ನಾಮರೂಪಗಳನ್ನು ಕಳೆದುಕೊಳ್ಳುತ್ತವೆಯೋ ಹಾಗೆಯೇ ಜೀವರು ಶಿವನನ್ನು ಸೇರಿ ತಮ್ಮ ವ್ಯಕ್ತಿತ್ವವನ್ನು, ಅದಕ್ಕೆ ಸಂಬಂಧಿಸಿದ ಅಹಂಕಾರ ಮಮಕಾರಗಳನ್ನು, ನಾಮರೂಪಗಳನ್ನು ತೊರೆಯುವರು.

ಈ ದೃಷ್ಟಾಂತವನ್ನೇ ಅನುಕರಿಸಿ ಅಕ್ಕಮಹಾದೇವಿ ತನ್ನ ವಚನದಲ್ಲಿ:

"ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ
ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಜದೆ
..................................................................
ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ ಉಭಯದ ಲಿಂಗೈಕ್ಯವ ಮಾಡಿದೆ
ಚನ್ನಮಲ್ಲಿಕಾರ್ಜುನಯ್ಯನೊಳಗೆ ನಾನಳಿದನಾಗಿ ಲಿಂಗವೆಂಬ ಘನವು ಎನ್ನಲ್ಲಿ
ಅಳಿಯಿತ್ತು"

ಎಂದು ಮುಂಡಕೋಪನಿಷತ್ತಿನ ಶ್ಲೋಕವನ್ನೇ ಯಥಾವತ್ತಾಗಿ ಕನ್ನಡದಲ್ಲಿ ಸ್ಪಷ್ಟಪಡಿಸಿದ್ದಾರೆ.

ಸೃಷ್ಟಿಕರ್ತನ ಸರ್ವವ್ಯಾಪಕತ್ವವನ್ನು ಈಶಾವಾಸ್ಯೋಪನಿಷತ್ತು ಬಹಳ ಸುಂದರವಾಗಿ ಹೇಳುತ್ತದೆ.

"ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್" ಈ ಸರ್ವವೂ ಈಶನ ಆವಾಸಸ್ಥಾನ ಎಂದೇ ಆರಂಭವಾಗುವ ಆ ಉಪನಿಷತ್ತಿನ ೫ನೇ ಶ್ಲೋಕ ಹಾಗೂ ೮ನೇ ಶ್ಲೋಕಗಳಲ್ಲಿ ಅವನು ಎಲ್ಲಾ ದಿಕ್ಕುಗಳಲ್ಲಿಯೂ ಪ್ರಸರಿಸಿದನು. ಅವನು ತೇಜಸ್ವೀ, ಅಶರೀರ, ಗಾಯರಹಿತ, ಸ್ನಾಯುರಹಿತ, ಶುದ್ಧನಾದವನು, ಪಾಪದಿಂದ ಅಲಿಪ್ತನು, ಸರ್ವವ್ಯಾಪಿ, ಸ್ವಯಂಭು ಮುಂತಾಗಿ ಆ ಪರಬ್ರಹ್ಮದ ಸ್ವರೂಪವನ್ನು ವರ್ಣಿಸಿದೆ.

ಋಗ್ವೇದದ ಹಾಗೆಯೇ- "ಸ ಭೂಮಿಂ ವಿಶ್ವತೋ ವೃತ್ವಾ। ಅತ್ಯತಿಷ್ಠದ್ದಶಾಂಗುಲಂ" ಎಂದಿದೆ ಪುರುಷಸೂಕ್ತ.

"ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ" ಪ್ರಪಂಚದ ಒಳ-ಹೊರಗೆಲ್ಲ ಪೂರ್ಣವಾಗಿ ತುಂಬಿಕೊಂಡಿದೆ.

ಮೇಲಿನ ಈ ಶ್ಲೋಕಗಳನ್ನು ಅದರಲ್ಲಡಗಿರುವ ಅರ್ಥವನ್ನು ತನ್ನದೇ ಆದ ಶೈಲಿಯಲ್ಲಿ ಅಕ್ಕಮಹಾದೇವಿಯ "ವನವೆಲ್ಲ ನೀವೇ ವನದೊಳಗಣ ದೇವ ತರುವೆಲ್ಲಾ ನೀವೆ... ಚನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ಎನಗೆ ಮುಖ ದೋರಾ" ಎಂದು ಸೃಷ್ಟಿಯಲ್ಲಿಯೇ ಪರಮಾತ್ಮನು ಹೇಗೆ ತನ್ನ ವಿರಾಟ್‌ಸ್ವರೂಪದಿಂದ ಗೋಚರಿಸಬಲ್ಲ ನೆಂಬುದನ್ನು ತೋರಿಸಿದ್ದಾಳೆ. ವಚನ ಮೂಡಿಬರಲು ಅವಳ ದೈವತ್ವದ ಕಲ್ಪನೆಗೆ ಮೇಲಿನ ಎಲ್ಲಾ ಮಾತುಗಳೂ ಹಿನ್ನೆಲೆಯಾಗಿದ್ದವು.

ಕಠೋಪನಿಷತ್‌ನಲ್ಲಿ

ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ
ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್।
ತಮಾತ್ಮಸ್ಥಂ ಯೇಽನುಪಶ್ಯಂತಿ
ಧೀರಾಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಂ॥

"ಒಂದೇ ರೂಪವನ್ನು ನಾನಾ ರೂಪವಾಗಿ ಪ್ರಕಟಮಾಡುವ ಸರ್ವಭೂತಾಂತ-ರಾತ್ಮನಾದ ಆ ಪರಮಾತ್ಮನನ್ನು ಯಾರು ತಮ್ಮ ಆತ್ಮದಲ್ಲಿ ನೋಡುವರೋ ಅವರಿಗೆ ಅಕ್ಷಯ ಸುಖ ದೊರೆಯುವುದು" ಎಂದು ಋಷಿಗಳು ಹೇಳಿವುದಕ್ಕೆ,

"ಎಲ್ಲ ಎಲ್ಲವನರಿದು ಫಲವೇನಯ್ಯ, ತನ್ನ ತಾನರಿಯ ಬೇಕಲ್ಲದೆ, ತನ್ನಲ್ಲಿ ಅರಿವು ಸ್ವಯವಾಗಿರಲು ಅನ್ಯರ ಕೇಳಲುಂಟೆ ಚೆನ್ನಮಲ್ಲಿಕಾರ್ಜುನ" ಎಂದು ಅಕ್ಕಮಹಾದೇವಿ ಅಂತರ್ಮುಖವಾದ ತನ್ನ ಸಾಧನೆಯ ಬಗ್ಗೆ ಹೇಳಿರುವುದಕ್ಕೂ ಸಾಮ್ಯತೆಯನ್ನು ಗುರುತಿಸಬಹುದಾಗಿದೆ.

ಮಾಂಡಕ್ಯೋಪನಿಷತ್‌ನಲ್ಲಿ ಋಷಿಯು ಪರಿಶುದ್ಧ ಆತ್ಮನ ಮತ್ತು ಭಗವಂತನ ಸ್ವರೂಪಗಳನ್ನು

"ನ ಅಂತಃಪ್ರಜ್ಞಂ ನ ಬಹಿಃ ಪ್ರಜ್ಞಂ ನ ಉಭಯತಃ ಪ್ರಜ್ಞಂ ನ....."
(ಮಾ.ಉ. ೭.೮.೨೬)

ಎಂದು ಮುಂದುವರೆಯುತ್ತದೆ.

"ಭಗವನು ಬಹಿರ್ಮುಖಿಯೂ ಅಲ್ಲ, ಅಂತರ್ಮುಖಿಯೂ ಅಲ್ಲ, ಅವನು ಘನೀಕರಿಸಿದ ವಿವೇಕವೂ ಅಲ್ಲ. ಬುದ್ಧಿವಂತನಲ್ಲ, ಅಜ್ಞಾನಿಯಲ್ಲ. ಅವನಿಗೆ ತಿಳಿದಿದೆ ಎಂದು ಹೇಳುವುದೂ ಕಷ್ಟ. ಅವನು ಜ್ಞಾನದಿಂದ ಬೇರೆಯಲ್ಲ ಆದುದರಿಂದಲೇ ಅವನು ಬುದ್ಧಿಶಕ್ತಿಯೂ ಅಲ್ಲ, ಅಜ್ಞಾನವೂ ಅಲ್ಲ. ಅವನನ್ನು ಕಣ್ಣುಗಳಿಂದ ಕಾಣುವುದು ಸಾಧ್ಯವಿಲ್ಲ, ಅವನಿಗೆ ದೇಹವಾಗಲಿ, ಇಂದ್ರಿಯವಾಗಲಿ, ಮನಸ್ಸಾಗಲಿ ಇಲ್ಲ" ಇದನ್ನೇ ಅಕ್ಕ ತಾನು ಒಲಿದ ಚೆಲುವನನ್ನು "ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ಎಡೆಯಿಲ್ಲದ, ಕುರುಹಿಲ್ಲದ, ಭವವಿಲ್ಲದ, ಭಯವಿಲ್ಲದ, ನಿರ್ಭಯ ಚೆಲುವಂಗೊಲಿದುದಾಗಿ

ಸೀಮೆಯಿಲ್ಲದ ನಿಸ್ಸೀಮ ಅವನು" ಎಂದು ದೇವನ ಅಸ್ತಿತ್ವವನ್ನು ಹೇಳುವಲ್ಲಿ ಮೇಲಿನ ಉಪನಿಷತ್ತನ್ನೇ ಅನುಸರಿಸಿದ್ದಾಳೆ.

ಅಕ್ಕಮಹಾದೇವಿ ಶಿವನನ್ನು ಧ್ಯಾನಿಸುತ್ತಾ "ನಿಮ್ಮ ನಿಜವನಾರಯ್ಯಾ ಬಲ್ಲವರು? ವೇದಂಗಳಿಗಭೇದ್ಯನು, ಶಾಸ್ತ್ರಂಗಳಿಗಸಾಧ್ಯನು, ಆಗಮಕೆ ಆಗೋಚರನು ಎನ್ನುವ ವಚನದಲ್ಲಿ ಶಿವನ ಸ್ವರೂಪವನ್ನು ವಿವಿಧ ರೀತಿಯಲ್ಲಿ ಹೇಳಿ ಅಲ್ಲದೆ ಬಹಿರಂಗ ವ್ಯವಹಾರದೂರಸ್ಥಾನು, ವಾಙ್ಮನಕ್ಕತೀತನು, ನಾದಾತೀತನು, ಮಾತಿಗತೀತನು ಸರ್ವಾಂಗಪರಿಪೂರ್ಣನು" ಎಂದು ಉಪನಿಷತ್ತಿನಲ್ಲಿ ಬರುವ ವರ್ಣನೆಯಂತೆ ವರ್ಣಿಸಿದ್ದಾಳೆ.

### ಅಕ್ಕಮಹಾದೇವಿ-ಸಿದ್ಧಾಂತ ಶಿಖಾಮಣಿ

ಸಿದ್ಧಾಂತ ಶಿಖಾಮಣಿಯಲ್ಲಿನ ಅನೇಕ ವಿಚಾರಗಳು ಅಕ್ಕನ ವಚನಗಳಲ್ಲಿ ರೂಪಾಂತರವಾಗಿಯೋ ಅನುವಾದವಾಗಿಯೋ, ಭಾವಾರ್ಥಗಳನ್ನು ಹೊಮ್ಮಿಸುವ ಅನೇಕ ವಚನಗಳು ಕಂಡುಬರುತ್ತವೆ.

ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಪರಕಾಯಸ್ಥಲದ ಒಂದು ಶ್ಲೋಕ:

> ಸ್ವಸ್ವರೂಪಂ ಚಿದಾಕಾರಂ ಜ್ಯೋತಿಃ ಸಾಕ್ಷಾದ್ವಿಚಿಂತಯನ್।
> ದೇಹವಾನಪಿ ನಿರ್ದೇಹೋ ಜೀವನ್ಮುಕ್ತೋ ಹಿ ಸಾಧಕಃ॥
>
> (ಸಿ.ಶಿ. ೧೬.೫೪)

"ಆತ್ಮವು ಚಿದ್ರೂಪವಾಗಿರುತ್ತದೆ. ಆ ಚಿದ್ರೂಪವಾದ ತನ್ನಾತ್ಮವನ್ನು ಸಾಕ್ಷಾತ್ಕರಿಸಿಕೊಂಡು ಸ್ವಸ್ವರೂಪದ ಚಿಂತನೆಯಲ್ಲಿರುವ ಸಾಧಕನು ದೇಹವನ್ನು ಧರಿಸಿಕೊಂಡಿದ್ದರೂ ನಿರ್ದೇಹಿಯಾಗಿರುತ್ತಾನೆ ಎಂತಲೇ ಅವನು ಜೀವನ್ಮುಕ್ತನೂ ಸಹ ಆಗಿರುತ್ತಾನೆ." (ಶ್ರೀಸಿದ್ಧಾಂತಶಿಖಾಮಣಿ ಪ್ರವಚನಪ್ರಭೆ, ಪುಟ ೧೮೭, ಸಂ. ೨)

ಅದೇ ಸ್ಥಲದ ಇನ್ನೊಂದು ಶ್ಲೋಕ

> ದೇಹಾಭಿಮಾನನಿರ್ಮುಕ್ತಃ ಕಲಾತೀತಪದಾಶ್ರಯಃ।
> ಕಥಂ ಯಾತಿ ಪರಿಚ್ಛೇದಂ ಶರೀರೇಷು ಮಹಾಬುಧಃ॥
>
> (ಸಿ.ಶಿ. ೧೬.೫೭)

"ಶಿವಯೋಗಿಯು ದೇಹದ ಮೇಲಿನ ಅಭಿಮಾನವನ್ನು ತೊರೆದು ಕಲಾತೀತನಾಗಿರುವ ಆ ಪರಶಿವ ಬ್ರಹ್ಮವನ್ನು ಆಶ್ರಯಿಸಿ ಪರಮಜ್ಞಾನಿಯಾದ ಅವನು ತನ್ನನ್ನು ಶರೀರ ಪರಿಮಿತನನ್ನಾಗಿ ಭಾವಿಸುವುದಿಲ್ಲ."

ಅಂತೆಯೇ ಅಕ್ಕಮಹಾದೇವಿಗೆ ಜ್ಞಾನಪ್ರಾಪ್ತವಾದ ನಂತರ

ಕಾಯಕರ್ರನೆ ಕಂದಿದರೇನು?
ಕಾಯಮಿರ್ರನೆ ಮಿಂಚಿದರೇನು?
ಅಂತರಂಗ ಶುದ್ಧವಾದ ಬಳಿಕ ಕಾಯವೇನಾದಡೇನಯ್ಯಾ?
ಚೆನ್ನಮಲ್ಲಿಕಾರ್ಜುನನೊಲಿವ ಕಾಯವೇನಾದಡೆ ನಿಮಗೇನಯ್ಯಾ?

ಎಂದು ಶರೀರದ ಬಗ್ಗೆ ತನಗೆ ಯಾವುದೇ ಅಭಿಮಾನವಿಲ್ಲ ಎಂದು ಸ್ಪಷ್ಟವಾಗಿ ನುಡಿದಿದ್ದಾಳೆ. ಜೀವನ್ಮುಕ್ತಿಯ ಸ್ಥಿತಿಯನ್ನು ತಲ್ಪಿದ ಅಕ್ಕನಿಗೆ ಈ ರೀತಿ ಅನುಭವವಾಗಲು ಶ್ರೀಸಿದ್ಧಾಂತಶಿಖಾಮಣಿಯ ಪ್ರಭಾವ ಅವಳ ಮೇಲೆ ಆಗಿತ್ತು ಎಂದೆನಿಸುತ್ತದೆ.

ಶ್ರೀಸಿದ್ಧಾಂತಶಿಖಾಮಣಿಯಲ್ಲಿನ ಪಿಂಡಸ್ಥಲದ ೩೩-೩೫ನೇ ಶ್ಲೋಕಗಳಲ್ಲಿ ಶಿವನ ಸರ್ವತ್ರ ವ್ಯಾಪಕತೆಯನ್ನು ನಿರ್ಗುಣ ನಿರಾಕಾರನಾಗಿ ವಿಕಲ್ಪರಹಿತನಾಗಿ, ತನ್ನಲ್ಲಿಯೂ ಭೇದವಿಲ್ಲದೆ ತಾನೇ ತಾನಾಗಿರುತ್ತಾನೆ. ಶಿವನ ಈ ವಿಶ್ವೋತ್ತೀರ್ಣ ಸ್ಥಿತಿಯನ್ನು 'ಏಕಮೇವಾದ್ವಿತೀಯಂ ಬ್ರಹ್ಮ' (ಛಾ.ಉ. ೬-೨-೧) ಎಂಬ ಶ್ರುತಿಯು ಸಾರುತ್ತದೆ. 'ಏಕ ಏವ ಶಿವಃ' ಎಂಬುದು ಇದರ ಸಾರ.

ಜ್ಞಾನದಲ್ಲಿ ಹಿರಿಯಳಾಗಿದ್ದ ಅಕ್ಕನು ಶಿವನ ವ್ಯಾಪಕತ್ವವನ್ನು-

"ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯಾ?
ನೀನು ಬಹಿರಂಗ ವ್ಯವಹಾರ ದೂರಸ್ಥನು
.........ನೀನು ಧ್ಯಾನಕ್ಕೆ ವಾಙ್ಮಾನಾತೀತನು ಜಪಕ್ಕೆ ಮತಿಗತೀತನು
ಹೃದಯಕಮಲದಲ್ಲಿಂಬಿಟ್ಟು ಕೊಂಬೆನೆ ನೀನು ಸರ್ವಾಂಗ ಪರಿಪೂರ್ಣನು"

ಎಂದು ತನ್ನ ಅನುಭಾವದ ನುಡಿಯಲ್ಲಿ ವ್ಯಕ್ತಪಡಿಸಿದ್ದಾಳೆ.

ಶ್ರೀಸಿದ್ಧಾಂತಶಿಖಾಮಣಿಯಲ್ಲಿನ ೫.೫೭ನೇ ಮತ್ತೊಂದು ಶ್ಲೋಕದಲ್ಲಿ ಶರೀರ, ಇಂದ್ರಿಯ, ಪ್ರಾಣ, ಮನಸ್ಸು ಹಾಗೂ ಬುದ್ಧಿಗಳು ಆತ್ಮವಲ್ಲ. ಇವೆಲ್ಲಕ್ಕೂ ವಿಲಕ್ಷಣವಾದ ಸನಾತನ ತತ್ತ್ವವೇ ಆತ್ಮ - ಎಂದೂ,

ಭಗವದ್ಗೀತೆಯಲ್ಲಿ (೩-೪೨)

"ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ॥"

"ಶರೀರಕಿಂತ ಇಂದ್ರಿಯಗಳು, ಅದಕ್ಕಿಂತ ಮನಸ್ಸು, ಮನಸ್ಸಿಗಿಂತ ಬುದ್ಧಿ, ಬುದ್ಧಿಗಿಂತ ಆತ್ಮವು ಆಂತರಿಕವಾಗಿದೆ" ಎಂದು ಭಗವಂತನು ಉಪದೇಶಿಸಿದ್ದಾನೆ. ಈ ಅಂತರಾತ್ಮವನ್ನು ಅಂತರ್ಮುಖಿಯಾಗಿ ಅರಿಯಬಹುದೇ ವಿನಃ ಬಹಿರ್ಮುಖಿಗಳಾಗಿ ಎಂದಿಗೂ ಸಾಧ್ಯವಿಲ್ಲ ಎಂದು ಅಕ್ಕನು-

ಹಗಲು ನಾಲ್ಕು ಜಾವ ಅಶನಕ್ಕೆ ಕಂದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿದಳು
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
ತನ್ನೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ.

ಆತ್ಮವನ್ನರಿಯದೆ ದೇಹವೇ ತಾವೆಂದು ತಿಳಿದು ಈ ಭವಚಕ್ರದಲ್ಲಿ ತಿರುಗುತ್ತಾರೆಂದು ಮರುಗಿದ್ದಾಳೆ.

'ಮಲಕೋಶೇ ಶರೀರೇಽಸ್ಮಿನ್' ಎಂಬ (ಸಿ.ಶಿ., ೫.೭೨) ವಾಕ್ಯದಂತೆ ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ, ಸುಡಲೀ ದೇಹವ ಒಡಲವಿಡಿದು ಚೆನ್ನಮಲ್ಲಿಕಾರ್ಜುನನರಿ -ಎನ್ನುತ್ತಾಳೆ.

"ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ।
ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ॥"

(ಸಿ.ಶಿ. ೫.೩೧)

"ಅನೇಕ ಜನ್ಮಜನ್ಮಾಂತರಗಳಲ್ಲಿ ಮಾಡಿದ ಪುಣ್ಯದ ಪ್ರಭಾವದಿಂದ ಪಾಪವೆಲ್ಲ ನಶಿಸಿ ಶುದ್ಧ ಅಂತಾಕರಣ ಉಳ್ಳ ಜೀವಾತ್ಮನೆ ಪಿಂಡ ನೆನೆಸುತ್ತಾನೆ. ಪುಣ್ಯ, ಪಾಪ, ಪೂರ್ವಜನ್ಮ ಮತ್ತು ಪುನರ್ಜನ್ಮಗಳು ಕಣ್ಣಿಗೆ ಕಾಣುವ ವಸ್ತುಗಳಲ್ಲ. ಪುಣ್ಯ, ಪಾಪ ಹಾಗೂ ಜನ್ಮಾಂತರಗಳನ್ನು ಅರಿಯಬೇಕಾದರೆ ಶಾಸ್ತ್ರಗಳಿಗೆ ಶರಣಾಗಬೇಕಾಗುವುದು." ಇದನ್ನೇ ಅಕ್ಕ

ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
ಎಂಬತ್ತು ನಾಲ್ಕು ಲಕ್ಷ ಯೋನಿಯೊಳಗೆ ಬಂದೆ ಬಂದೆ
ಬಾರದ ಭವಂಗಳಲ್ಲಿ ಉಂಡೆ ಉಂಡೆ ಸುಖಾಸುಖಂಗಳ
ಹಿಂದಣ ಜನ್ಮ ತಾನೇನಾದಡೆಯೂ ಆಗಲಿ
ಮುಂದೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನಾ.

ಎಂದು ಅನುವಾದಿಸಿದ್ದಾಳೆ.

(ಭಾರತೀಯ ಶಾಸ್ತ್ರಜ್ಞರು ಜನ್ಮಗಳ ಸಂಖ್ಯೆಯನ್ನು ಒಂದಲ್ಲ ಎರಡಲ್ಲ ೮೪ ಲಕ್ಷ ಪ್ರಕಾರವಾಗಿ ಪರಿಗಣಿಸಿದ್ದಾರೆ. ಉದ್ಭಿಜ ೨೧ ಲಕ್ಷ, ಸ್ವೇದಜ ೨೧ ಲಕ್ಷ, ಅಂಡಜ ೨೧ ಲಕ್ಷ ಹಾಗೂ ಜರಾಯುಜ ೨೧ ಲಕ್ಷಗಳೆಂದು ಮುನಿಗಳ ಎಣಿಕೆ.)

ಈ ಶಾಸ್ತ್ರಗ್ರಂಥಗಳ ಅಧ್ಯಯನ ಅಕ್ಕಮಹಾದೇವಿಗೆ ಇದ್ದುದರಿಂದಲೇ ಮೇಲಿನ ವಚನ ರಚನೆಯಾಗಿದೆ ಎಂದೆನ್ನಬಹುದು.

"ಅನಿತ್ಯಗಳಾದ ಶಬ್ದ-ಸ್ಪರ್ಶಾದಿ ವಿಷಯಗಳಲ್ಲಿ ವೈರಾಗ್ಯವನ್ನು ಹೊಂದಿದ. ವಿವೇಕಿಯು, ನಿತ್ಯವಸ್ತುವಾದ ತನ್ನ ಆತ್ಮದಲ್ಲಿ ಆನಂದ ಪಡೆದವನಾಗಿ, ಈ ಸಂಸಾರ ದುಃಖದಿಂದ ನಿವೃತ್ತಿ ಪಡೆಯುವ ಮಾರ್ಗವನ್ನು ಹುಡುಕುತ್ತಾನೆ"

(ಸಿ.ಶಿ. ೫.೭೬) ಎಂಬ ವಿಚಾರ ಅಕ್ಕನ ಈ ವಚನದಲ್ಲಿ ಭಕ್ತಮಾರ್ಗದಲ್ಲಿ ಹೊರಟವಳಿಗೆ ಅನೇಕ ಅಡೆತಡೆಗಳೊದಗಿದರೂ ಅದನ್ನೆದುರಿಸಿದ ಮಾರ್ಗ ಹೀಗಿದೆ:

"ಹಸಿವಾದೊಡೆ ಭಿಕ್ಷಾನ್ನಗಳುಂಟು; ತೃಷೆಯಾದೊಡೆ ಕೆರೆ ಭಾವಿ ಹಳ್ಳಗಳುಂಟು - ಶಯನಕೆ ಹಾಳುದೇಗುಲಗಳುಂಟು; ಆತ್ಮ ಸಂಗಾತಕ್ಕೆ ನೀನೆನಗುಂಟು ಚೆನ್ನಮಲ್ಲಿಕಾರ್ಜುನಾ" ಎಂದು ಪರಮಾತ್ಮನನ್ನೇ ಆಶ್ರಯಿಸಿ "ಅಂತೇ ಯಾ ಮತಿಃ ಸಾ ಗತಿಃ" ಎನ್ನುವಂತೆ ಪರಮಾತ್ಮನಲ್ಲೇ ಲೀನವಾಗುತ್ತಾಳೆ.

ಶ್ರೀಸಿದ್ಧಾಂತಶಿಖಾಮಣಿಯ ಭಾವಾಗಮಸ್ಥಲದಲ್ಲಿನ "ಪರಿಶುದ್ಧವಾದ ಮನಸ್ಸಿನಿಂದಲೇ ಶಿವನನ್ನು ಪೂಜಿಸಬೇಕು. ಹೀಗೆ ಭಾವನೆಯಿಲ್ಲದ ಪೂಜೆ ಅದೆಷ್ಟೇ ದೊಡ್ಡದಾಗಿದ್ದರೂ ಶಿವನು ಆ ಪೂಜೆಯನ್ನು ಸ್ವೀಕರಿಸುವುದಿಲ್ಲ," (ಸಿ.ಶಿ. ೧೬.೨೧)

"ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು"

ಎನ್ನುವ ಅಕ್ಕನ ವಚನ ಮೇಲಿನ ಶ್ಲೋಕದಿಂದ ಪ್ರಭಾವಿತವಾಗಿದೆ.

ಭಾವಪ್ರಕಾಶಸ್ಥಲದಲ್ಲಿನ ಶ್ಲೋಕದಲ್ಲಿ "ಈ ಜಗತ್ತೆಲ್ಲವೂ ಶಿವರೂಪವಾಗಿ ನಾನೂ ಸಹ ಶಿವಸ್ವರೂಪನೇ ಆಗಿದ್ದೇನೆ ಎಂಬುದಾಗಿ ಭಾವಿಸುವ ಶಿವಯೋಗಿಯು ಭವದೋಷಗಳಿಂದ ಬದ್ಧಿತನಾಗುವುದಿಲ್ಲ, ಶಿವಭಾವನೆಯು ಸ್ಥಿರಗೊಂಡ ಮೇಲೆ ವಿಷಯಗಳಿಂದ ನಿರ್ಲಿಪ್ತನಾದ ಶಿವಯೋಗಿಯ ಮನಸ್ಸಿನಲ್ಲಿ ಯಾವ ಭಾವನೆಗಳು ಉತ್ಪನ್ನವಾಗುತ್ತವೆಯೋ ಅವೆಲ್ಲವೂ ಶಿವಮಯಗಳೇ ಆಗಿರುತ್ತದೆ." (ಸಿ.ಶಿ., ೧೯.೮೪-೮೫)

"ಶಿವಯೋಗಿಯ ಭಾವನೆಯಲ್ಲಿ ಶಿವನೊಬ್ಬನೇ ಪ್ರಕಾಶಮಾನನಾಗಿದ್ದು ಉಳಿದ ಕಾಮಕ್ರೋದಾದಿ ಭಾವನೆಗಳೆಲ್ಲ ಅಡಗಿಹೋದ ಸ್ಥಿತಿಯೇ ಭಾವ ಪ್ರಕಾಶವು."

ಅಕ್ಕಮಹಾದೇವಿಯು ಶಿವಪಥದಲ್ಲಿ ಹೊರಟಾಗ ಅಡ್ಡ ಬಂದ ಅರಿಷಡ್ವರ್ಗಗಳನ್ನು "ಕಾಮವೇ ನೀನು ನಿಲ್ಲು ನಿಲ್ಲು, ಕ್ರೋಧವೇ ನೀನು ನಿಲ್ಲು ನಿಲ್ಲು, ಲೋಭವೇ ನೀನು ನಿಲ್ಲು ನಿಲ್ಲು, ಮೋಹವೇ ನೀನು ನಿಲ್ಲು ನಿಲ್ಲು, ಮದವೇ ನೀನು ನಿಲ್ಲು ನಿಲ್ಲು, ಮತ್ಸರವೇ ನೀನು ನಿಲ್ಲಿ ನಿಲ್ಲು ಆನು ಚೆನ್ನಮಲ್ಲಿಕಾರ್ಜುನನ ಅವಸರದ ಓಲೆಯನ್ನು ಒಯ್ಯುತ್ತಲಿದ್ದೇನೆ ಶರಣಾರ್ಥಿ."

ಅರಿಷಡ್ವರ್ಗಗಳನ್ನು ದೂಷಿಸಿಕೊಂಡು ತನ್ನ ಭಾವನೆಯನ್ನು ಕಲುಷಿತ ಗೊಳಿಸಿಕೊಳ್ಳದೆ ಪರಿಶುದ್ಧ ಭಾವನೆಯಿಂದ ಶಿವ ಸಾಯುಜ್ಯ ಪಡೆದುಕೊಂಡಳು.

ಹೀಗೆ ಆಮೂಲಾಗ್ರವಾಗಿ ಅಕ್ಕಮಹಾದೇವಿಯ ವಚನಗಳನ್ನು ಅಧ್ಯಯನ ಮಾಡಿದಾಗ ಆಕೆ ಪ್ರಾಚೀನ ಧರ್ಮ ಗ್ರಂಥಗಳಾದ ವೇದ, ಆಗಮ, ಉಪನಿಷತ್, ಶಿವಪುರಾಣಗಳು, ಯೋಗ, ಶಿವರಹಸ್ಯ, ಪರಮರಹಸ್ಯ, ಶ್ರೀಸಿದ್ಧಾಂತಶಿಖಾಮಣಿ

ಮುಂತಾದ ಸಂಸ್ಕೃತ ಶಾಸ್ತ್ರಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿಕೊಂಡು ಅವನ್ನು ತನ್ನ ಬದುಕಿಗೆ ಅಳವಡಿಸಿಕೊಂಡು ಅನುಭವಿಸಿದಳು. ಆಕೆಯ ವಚನಗಳು ಅವಳ ಅಂತಹ ಅನುಭಾವಿಕ ಹೃದಯದಿಂದ ಹೊರಹೊಮ್ಮಿವೆ ಎಂದರೆ ತಪ್ಪಾಗಲಾರದು.

ವೇದ ಆಗಮ ಪುರಾಣಗಳನ್ನು ಒಂದೆಡೆ **"ವೇದಗಳಿಗಭೇದನು, ಆಗಮಕ್ಕೆ ಅಗೋಚರನು"**, ಇನ್ನೊಂದು ಕಡೆ **"ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವೂ ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ"**, ಮತ್ತೊಂದು ವಚನದಲ್ಲಿ **"ಓದಿ ಓದಿ ವೇದ ವಾದಕ್ಕಿಕ್ಕಿತ್ತು, ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು, ಅರಿದಿಹೆ ಅರಿದಿಹೆನೆಂದು ಆಗಮ ಅರೆಯಾಗಿ ಹೋಯ್ತು"** ಎಂದು ಹೇಳಲು ಇಂತಹ ನಿಂದಿಗೆ ಕಾರಣ ವೇದಗಳಲ್ಲಿ ನಿರೂಪಿತವಾಗಿರುವ ಯಜ್ಞ-ಯಾಗಾದಿಗಳ ಮೂಲದಲ್ಲಿರುವ ಹಿಂಸೆ, ಕರ್ಮ ಕಾಂಡ. ವೇದಾಗಮಗಳನ್ನು ಅವಳೆಂದೂ ತಿರಸ್ಕರಿಸಿಲ್ಲ. ಕಡಿಮೆ ಜೀವಿತಾವಧಿಯಲ್ಲೇ ಅವಳು ಸಕಲ ಶಾಸ್ತ್ರ ಪಾರಂಗತಳಾಗಿ ತನ್ನದಾಗಿಸಿಕೊಂಡು ಅವನ್ನೇ ಆಡುಭಾಷೆಯಲ್ಲಿ ಸುಲಲಿತವಾಗಿ ಹೇಳಿಕೊಂಡು ಹೋಗಿದ್ದಾಳೆ.

ತನ್ನ ವಿಷಯಗಳನ್ನು, ಹೇಳಿಕೆಗಳನ್ನು ಪುಷ್ಟೀಕರಿಸುವ ಸಲುವಾಗಿ ಶಿವಾಗಮಗಳನ್ನು ಸಾಕ್ಷಿಗೆ ಬಳಸಿದ್ದಾಳೆ. ಜೈನ, ಬೌದ್ಧಮತಗಳಂತೆ ಸಮಗ್ರ ವೇದ ವಾಙ್ಮಯವನ್ನೇ ತಿರಸ್ಕರಿಸಿದ್ದಾಳೆ ಎಂಬ ಅಭಿಪ್ರಾಯ ಸಾಧುವಲ್ಲ.

**"ತ್ರಿಗುಣಾತ್ಮಕವಾದ ವೇದವನ್ನು ಮೀರಿ ನಿಲ್ಲು"** ಎಂದು ಶ್ರೀಕೃಷ್ಣನು ಅರ್ಜುನನಿಗೆ ಉಪದೇಶವಿತ್ತಿದ್ದಾನೆ (ಗೀತೆ- ೨-೪೫). **"ಬ್ರಹ್ಮಜ್ಞಾನವಿಲ್ಲದ ಕೇವಲ ವೇದಾಧ್ಯಯನದಿಂದೇನು ಫಲ? ಶಾಸ್ತ್ರದಿಂದೇನು?"** ಎಂದು ಶಂಕರಾಚಾರ್ಯರೂ ಹೇಳಿದ್ದಾರೆ. ಹೀಗೆ ಹೇಳಿದ ಮಾತ್ರಕ್ಕೆ ಇವರೆಲ್ಲಾ ವೇದ ವಿರೋಧಿಗಳಾಗಿ ಸಂಪೂರ್ಣವಾಗಿ ವೇದಾಗಮಗಳನ್ನು ತಿರಸ್ಕರಿಸಿದ್ದಾರೆಂದು ಎನ್ನಲು ಸಾಧ್ಯವೆ?

ಹಾಗೆಂದೇ

**"ಹಿತವಿದೆ ಸಕಲ ಲೋಕದ ಜನಕ್ಕೆ, ಮತವಿದೆ ಶ್ರುತಿ ಪುರಾಣಾಗಮ ಗತಿಯಿದೆ"** ಎಂದಿರುವುದಲ್ಲದೆ ಅಲ್ಲಿನ ಅನೇಕ ಮಂತ್ರಗಳನ್ನು, ಶ್ಲೋಕಗಳನ್ನು ಹಾಗೆಯೇ ಬಳಸಿಕೊಂಡಿರುವುದನ್ನು ನೋಡಬಹುದಾಗಿದೆ. **"ನಡೆಯೆಲ್ಲ ಸದಾಚಾರ ನುಡಿಯೆಲ್ಲ ಶಿವಾಗಮ" "ನಿತ್ಯಶುದ್ಧರಾದವರನೆನಗೊಮ್ಮೆ ತೋರಾ"** ಎಂದು ಶಿವಾಗಮದ ಶುದ್ಧತೆಯನ್ನು ಎತ್ತಿ ಹಿಡಿದಿದ್ದಾಳೆ.

ವೇದಾಗಮೋಪನಿಷತ್ತುಗಳ ಆಧಾರದ ಮೇಲೆ ನಿಂತು ಬೆಳೆದುಬಂದಿರುವ ವಚನ ಸಾಹಿತ್ಯ ರಚನಾಕಾರರಾದ ಶಿವಶರಣ ಶರಣೆಯರನ್ನು ಅವೈದಿಕರು ಎಂದು ಹೇಳುವ ಕೆಲವು ವಿದ್ವಾಂಸರು ಇಂತಹ ವಚನಗಳನ್ನು ಕಣ್ತೆರೆದು ನೋಡಿದರೆ ಒಳ್ಳೆಯದೆಂದೆನಿಸುತ್ತದೆ.

## ಗ್ರಂಥಋಣ


೧. ಶಿವಶರಣೆಯರ ವಚನ ಸಂಪುಟ-೫ : ಸಂ. ಡಾ. ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩

೨. ಮಹಾದೇವಿ ಅಕ್ಕನ ವಚನಗಳು : ಸಂ. ಡಾ. ಆರ್.ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩

೩. ಚಂದ್ರಜ್ಞಾನಾಗಮ : ಅನು: ಡಾ. ಎಂ. ಶಿವಕುಮಾರ ಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನ, ೨೦೦೨.

೪. ಪಾರಮೇಶ್ವರಾಗಮ : ಅನು: ಡಾ. ಎಂ. ಶಿವಕುಮಾರ ಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನ, ೧೯೯೯.

೫. ಕಾರಣಾಗಮ : ಅನು: ಡಾ. ಮಲ್ಲಿಕಾರ್ಜುನ ಪರಡ್ಡಿ, ವೀರಶೈವ ಅನುಸಂಧಾನ ಸಂಸ್ಥಾನ, ೧೯೯೯

೬. ಮಕುಟಾಗಮ : ಅನು: ಡಾ. ಎಂ. ಶಿವಕುಮಾರ ಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನ, ೧೯೯೫

೭. ಸೂಕ್ಷ್ಮಾಗಮ : ಅನು: ಶ್ರೀ ಷಣ್ಮುಖಯ್ಯ ಅಕ್ಕೂರಮಠ, ವೀರಶೈವ ಅನುಸಂಧಾನ ಸಂಸ್ಥಾನ, ೨೦೦೨

೮. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೨೦೦೧.

೯. ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ ಸಂಪುಟ-೧೨ : ವಿದ್ಯಾವಾಚಸ್ಪತಿ ಶ್ರೀ ೧೦೦೮ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಪ್ರಕಾಶಕರು: ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಗದಗ, ೨೦೦೦.

೧೦. ವಚನಾನುಶೀಲನ : ಡಾ. ಎಸ್. ವಿದ್ಯಾಶಂಕರ, ಸ್ನೇಹಾ ಪ್ರಕಾಶನ, ೧೯೮೯.

೧೧. ಮಹಾಯಾತ್ರೆ : ಡಾ. ಆರ್.ಸಿ. ಹಿರೇಮಠ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೧೨. ವಚನಗಳಲ್ಲಿ ವೀರಶೈವಧರ್ಮ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು, ೧೯೮೨.

೧೩. ಶರಣರ ಅನುಭಾವ ಸಾಹಿತ್ಯ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು, ೧೯೯೧.

೧೪. ಯಾಜ್ಞವಲ್ಕ್ಯಸ್ಮೃತಿ : ಅನು: ವಿ. ನಾಗೇಶ್ ರಂಗೇ ಕುಲಕರ್ಣಿ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೯೬.

೧೫. ಮನುಸ್ಮೃತಿ : ಅನು: ಚ. ಈಶ್ವರ ಶಾಸ್ತ್ರಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೪.

೧೬. ಚಿಗುರಿಟ್ಟ ಚಿಂತನ : ಡಾ. ಶ್ರೀ ಜಚನಿ, ಶ್ರೀಶೈಲ ಜಗದ್ಗುರು ನಿಡುಮಾಮಿಡಿ ನಿವಾಸ, ಬೆಂಗಳೂರು, ೧೯೮೧.

೧೭. ಅರ್ಚನ : ಸಂ. ವಿದ್ವಾನ್ ಡಾ. ಹೆಚ್.ಪಿ. ಮಲ್ಲದೇವರು, ೧೯೮೪.

೧೮. ಶ್ರೀ ಮದ್ಭಗವದ್ಗೀತಾ : ಅನು: ಲಕ್ಷ್ಮಣ ವಿರೂಪಾಕ್ಷ ಜೋಶಿ, ಪ್ರ: ಶರಣರ ಸುವಾಸಿನಿ ಬಳಗ, ೧೯೯೮.

೧೯. ಸಿದ್ಧಗಂಗಾಶ್ರೀ : ಸಂ. ಚನ್ನಪ್ಪ ಎರೇಸೀಮೆ, ಟಿ.ಆರ್. ಮಹಾದೇವಯ್ಯ, ೧೯೮೦.

೨೦. ಶಿವಾಗಮ ಸೌರಭ : ಸಂ. ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ, ೧೯೮೬.

೨೧. ಮಾಂಡೂಕ್ಯೋಪನಿಷತ್ : ಲೇಖಕರು: ಡಾ. ಸ್ವಾಮಿ ಸತ್ಯಂ, ೧೯೯೮.

೨೨. ಶ್ವೇತಾಶ್ವತರೋಪನಿಷತ್ : ಸ್ವಾಮಿ ಆದಿ ದೇವಾನಂದ, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು, ೧೯೯೩.

೨೩. ತೈತ್ತಿರೀಯೋಪನಿಷತ್ : ಸ್ವಾಮಿ ಆದಿ ದೇವಾನಂದ, ಮೈಸೂರು, ೧೯೯೭.

೨೪. ವಚನೋಪನಿಷತ್ತು : ಲೇ: ವೇದವೇದಾಂತ ವಿದ್ಯಾವಾಚಸ್ಪತಿ, ಜಿ.ರ್ಯ. ಮಲ್ಲಪ್ಪ, ೧೯೬೯.

೨೫. ವೀರಶೈವ ರತ್ನ : ಪಂ. ಶ್ರೀ ಕಾಶೀನಾಥ ಶಾಸ್ತ್ರಿಗಳವರು, ೧೯೮೧.

೨೬. ಅಭಯಕಲ್ಪ : ಸ್ವಾಮಿ ವೀರಭದ್ರ ಶಿವಾಚಾರ್ಯ, ೧೯೭೩.

೨೭. ಶ್ವೇತ ಪ್ರಭೆ : ಶ್ರೀ ಶ್ರೀ ಶ್ರೀ ಷ|| ಬ್ರ|| ಸ್ವಾಮಿ ವೀರಭದ್ರ ಶಿವಾಚಾರ್ಯರು, ೧೯೭೧.

೨೮. ಶಿವಾತ್ಮ ನಿರೀಕ್ಷೆ : ಲೇ. ಶ್ರೀ ಶ್ರೀ ಷ|| ಬ್ರ|| ಸ್ವಾಮಿ ವೀರಭದ್ರ ಶಿವಾಚಾರ್ಯರು, ೧೯೮೦.

೨೯. ವೀರಶೈವಧರ್ಮ ಭಾರತೀಯ ಸಂಸ್ಕೃತಿ : ಡಾ. ಎಂ. ಚಿದಾನಂದಮೂರ್ತಿ, ಮಿಂಚು ಪ್ರಕಾಶನ, ೨೦೦೦.

೩೦. ವಚನಧರ್ಮಸಾರ : ಎಂ.ಆರ್.ಶ್ರೀ., ೧೯೬೦.

೩೧. ಶಿವಾಗಮ ಸಾಹಿತ್ಯ : ಡಾ. ಶ್ರೀ ಜ.ಚ.ನಿ.

ಅಭಿಪ್ರಾಯ: ಅಕ್ಕಮಹಾದೇವಿಯವರ ವಚನದಲ್ಲಿ 'ಪರಮ ರಹಸ್ಯ'ದ ಬಗ್ಗೆ ಉಲ್ಲೇಖ ಇದೆ. ಡಾ|| ಚಿದಾನಂದಮೂರ್ತಿಗಳು ಈಗಾಗಲೇ ಪರಮ ರಹಸ್ಯದ ಬಗ್ಗೆ ಸ್ವಲ್ಪ ಸಂಶೋಧನೆ ನಡೆಸಿದ್ದಾರೆ. ಇದರ ಒಂದು ಹಸ್ತಪ್ರತಿ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಕೇಂದ್ರದಲ್ಲಿದೆ. ಆ ಶ್ಲೋಕದ ಭಾಗ ಪೂರ್ಣ ಕೊಟ್ಟಿಲ್ಲ; ಅಕ್ಕಮಹಾದೇವಿ ವಚನದಲ್ಲಿ. ಆ ಶ್ಲೋಕದ ವಿವರ ಚಿದಾನಂದ ಮೂರ್ತಿಯವರು ಕೊಟ್ಟಿದ್ದಾರೆ. ಅಕ್ಕಮಹಾದೇವಿ ವಚನಗಳ ಮೇಲೆ ಈ ಪರಮ ರಹಸ್ಯದ ಪ್ರಭಾವವಿದೆ ಎಂದು ಪ್ರಸ್ತಾಪ ಮಾಡಿದ್ದೀರಿ.

-ಡಾ|| ಎಸ್. ವಿದ್ಯಾಶಂಕರ

ಪ್ರಶ್ನೆ: ಆದ್ಯರ ಬಗ್ಗೆ ನೀವು ವಿವರಣೆ ಕೊಡುವಾಗ ಈ ಆದ್ಯರು ಎಂದರೆ ಪಂಚಾಚಾರ್ಯರು ಇದ್ದಿರಬಹುದು ಎಂದಿರಿ. ಖಂಡಿತ, ಆ ಅರ್ಥ ಬರುವುದಿಲ್ಲ. ದಯಮಾಡಿ ಅದನ್ನು ತಿದ್ದಿಕೊಳ್ಳಬಹುದು. ಆದ್ಯರು ಎಂದರೆ ಸ್ಪಷ್ಟವಾಗಿ ಶಿವಶರಣರ ಮಾತುಗಳಲ್ಲೆ ಹೇಳುವುದಾದರೆ ಬಸವಣ್ಣನವರಿಗಿಂತ ಹಿರಿಯರು, ಜೇಡರ ದಾಸಿಮಯ್ಯನಿಗಿಂತ ಹಿರಿಯರು. ಈ ಅರ್ಥದಲ್ಲಿ ಪ್ರಸ್ತಾಪ ಮಾಡಿರುವುದನ್ನು ನಾವು ನೋಡಬಹುದು. ಅದನ್ನು ಪಂಚಾಚಾರ್ಯರಿಗೆ ಅನ್ವಯಿಸುವುದು ಸರಿಯಲ್ಲ.

-ಡಾ. ಎಸ್. ವಿದ್ಯಾಶಂಕರ

ಉತ್ತರ: ಆದ್ಯರು ಅಲ್ಲ, ಪುರಾತನರು ಎಂದಿದೆ ಆ ವಚನದಲ್ಲಿ.

ಪ್ರಶ್ನೆ: ಆದ್ಯರು-ಪುರಾತನರು ಎರಡು ಸಮಾನಾರ್ಥ ಪದಗಳು.

-ಡಾ. ಎಶ್. ವಿದ್ಯಾಶಂಕರ

ಉತ್ತರ: ಲಿಂಗದುದಯಿಸಿ ಅಂಗವಿಡಿದಿಪ್ಪ ಪುರಾತನರ ಇಂಗಿತವ
ನೇನೆಂದು ಬೆಸಗೊಂಬೆನಯ್ಯ

-ಎಂದು ಆಕೆಯೇ ಹೇಳಿರುವುದರಿಂದ ಹಾಗೆಯೇ ಮುಂದುವರೆದು-

ಅವರ ನಡೆಯೇ ಆಗಮ ಅವರ ನುಡಿಯೇ ವೇದ
ಅವರ ಲೋಕದ ಮಾನವರೆಂದೆನ್ನಬಹುದೆ ಅಯ್ಯ

ಎಂದು ಹೇಳಿದ್ದಾಳೆ. ಆದ್ದರಿಂದ ಪುರಾತನರು ಎಂದರೆ ೬೩ ಪುರಾತನರನ್ನು ಮಾತ್ರ ಹೇಳುತ್ತಿದ್ದಾಳೆ ಎಂದಲ್ಲ. ಆಗಿನ ಕಾಲಕ್ಕೆ ಪಂಚಾಚಾರ್ಯರನ್ನು ಕುರಿತು ಹಾಗೆ ಹೇಳುತ್ತಿದ್ದ ರೂಢಿ ಇತ್ತೇ ಎಂಬ ಅನುಮಾನ ಈ ವಚನವನ್ನೋದಿದವರಿಗೆ ಸಹಜವಾಗಿಯೇ ಬರುತ್ತದೆ. [ಶ್ರೀರೇಣುಕರು ಲಿಂಗೋದ್ಭವರು ಎಂಬುದನ್ನು ಹರಿಹರ ತನ್ನ 'ರೇವಣಸಿದ್ಧೇಶ್ವರ ರಗಳೆ'ಯಲ್ಲಿ ನಿರೂಪಿಸಿದ್ದಾನೆ.

ಡಾ|| ಎಂ. ಶಿವಕುಮಾರಸ್ವಾಮಿ]

�>< ><

# ೩. ವೇದಾಗಮಗಳು ಮತ್ತು ಹಡಪದ ಅಪ್ಪಣ್ಣನವರು

**-ಡಾ|| ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**

**ವಿಷಯ ಪ್ರವೇಶಕ್ಕೆ ಮುನ್ನ:**

ಶಿವನ ನಿಃಶ್ವಾಸದಿಂದ ವೇದಗಳು ಮತ್ತು ವೈಖರಿಯಿಂದ ಶಿವಾಗಮಗಳು ಆವಿರ್ಭವಿಸಿದವೆಂಬುದು ಜನಜನಿತ ವಿಷಯ. ಅಧ್ಯಯನ ಹಾಗೂ ಅನುಭವಗಳ ಸಮ್ಮಿಶ್ರಣದ ಫಲವಾಗಿ ೧೨ನೇ ಶತಮಾನದ ಬಸವಾದಿ ಶಿವಶರಣರಿಂದ ರಚನೆಗೊಂಡುದು ವಚನ ಸಾಹಿತ್ಯ. ವೇದಾಗಮಗಳ ಭಾಷೆ ಸಂಸ್ಕೃತವಾದರೆ, ವಚನಗಳ ಭಾಷೆ ಕನ್ನಡ. ವೇದಾಗಮ ವಾಙ್ಮಯವಾಗಲಿ ವಚನ ಸಾಹಿತ್ಯವಾಗಲಿ ಎರಡೂ ವಿಶಾಲವಾದ ವಾಙ್ಮಯಗಳು.

ಬಸವಾದಿ ಶಿವಶರಣರ ವಚನಗಳು ವೇದಾಗಮಗಳ ಪ್ರಾಮಾಣ್ಯವನ್ನು ಅಂಗೀಕರಿಸುತ್ತಿವೆಯೋ ಅಥವಾ ನಿರಾಕರಿಸುತ್ತವೆಯೋ ಎಂಬುದನ್ನು ತುಂಬ ಸೂಕ್ಷ್ಮವಾಗಿ ಪರ್ಯಾಲೋಚಿಸಿ ಸಂಶೋಧಿಸಬೇಕು. ವಚನಗಳಲ್ಲಿ ಒಂದೆಡೆ ವೇದಾಗಮಗಳನ್ನು ವಿರೋಧಿಸುವ ಮಾತುಗಳು ಬಂದರೆ, ಇನ್ನೊಂದೆಡೆ ಶರಣರು ತಾವು ಮಂಡಿಸುವ ವಿಚಾರಗಳ ಸಮರ್ಥನೆಗಾಗಿ ವೇದಾಗಮಗಳ ಉಕ್ತಿಗಳನ್ನು ಬಳಸಿಕೊಳ್ಳಲಾಗಿದೆ. ಕಾರಣ ಈ ವಿಷಯದಲ್ಲಿ ಒಮ್ಮೆಲೆ ಒಂದು ಸ್ಪಷ್ಟ ನಿರ್ಣಯಕ್ಕೆ ಬರುವುದು ಕ್ಲಿಷ್ಟವಾಗುತ್ತದೆ.

ವೇದಕ್ಕೆ ಒರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ ಆಗಮದ ಮೂಗ ಕೊಯ್ಯುವೆ ನೋಡಯ್ಯ

-ಬಸವಣ್ಣನವರು

ವೇದವೆಂಬುದು ಓದಿನ ಮಾತು ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ

-ಅಲ್ಲಮಪ್ರಭುಗಳು

ಇಂತಹ ವೇದವಿರೋಧ ಪರವಾದ ವಚನೋಕ್ತಿಗಳನ್ನು ಅವಲೋಕಿಸಿದಾಗ ಕೆಲವರಿಗೆ ಶರಣರು ವೇದವಿರೋಧಿಗಳೆನಿಸುವುದು ಸಹಜವೆ! ಆದರೆ ಯಾವುದೋ ಒಂದು

ಸಂದರ್ಭದಲ್ಲಿ ಹೇಳಿದ ಮಾತು ಶರಣರ ಮತ್ತು ಶರಣ ಸಾಹಿತ್ಯದ ನೇರ ನಿಲುವೆಂದು ಪರಿಗಣಿಸುವುದು ಸೂಕ್ತವಲ್ಲ. ಏಕೆಂದರೆ ಶರಣರ ವಚನಗಳಲ್ಲಿ ವೇದಾಗಮಗಳಿಗೆ ವಿರೋಧಿಯಾಗಿ ತೋರುವ ವಚನಗಳು ಕೇವಲ ಹತ್ತೆಂಟು. ಆದರೆ ಅವುಗಳಿಗೆ ಪೂರಕವಾಗಿ ನಿಲ್ಲುವ ವಚನಗಳು ನೂರಾರು. ಸಮಗ್ರ ವಚನ ವಾಙ್ಮಯವನ್ನು ಪಾರದರ್ಶಕ ದೃಷ್ಟಿಯಿಂದ ಅವಲೋಕಿಸಿದಾಗ ಇದು ಗಮನಕ್ಕೆ ಬರುತ್ತದೆ. ಆಗ ಶರಣರು ನೂರಾರು ಬಾರಿ ಹೇಳಿದ ಮಾತು ಅವರ ನಿಲುವಾಗಬೇಕೋ, ಇಲ್ಲವೆ ಕೇವಲ ಹತ್ತೆಂಟು ಬಾರಿ ಹೇಳಿದ ಮಾತು ಅವರ ನಿಲುವಾಗಬೇಕೋ ಎಂಬ ಸಂದೇಹಕ್ಕೆ ಸ್ಪಷ್ಟ ಉತ್ತರವನ್ನು ಕಂಡುಕೊಳ್ಳಬಹುದು. ಈ ವಿಧವಾದ ಪರ್ಯಾಲೋಚನೆಯಿಂದ ಶಿವಶರಣರು ವೇದಾಗಮ ವಿರೋಧಿಗಳಲ್ಲವೆಂಬುದು ತಿಳಿದುಬರುತ್ತದೆ.

ಶರಣರು ವೇದಾಗಮ ವಿರೋಧಿಗಳಲ್ಲದಿದ್ದರೆ ತಮ್ಮ ವಚನಗಳಲ್ಲಿ ಅವುಗಳ ಬಗ್ಗೆ ಹಗುರಾಗಿ ಮಾತನಾಡಲು ಕಾರಣವೇನು? ಸಾಮಾನ್ಯವಾಗಿ ವೇದದಲ್ಲಿ ಚರ್ಚಿಸಲ್ಪಟ್ಟ ವಿಷಯವನ್ನು ಕರ್ಮಕಾಂಡ, ಉಪಾಸನಾಕಾಂಡ ಮತ್ತು ಜ್ಞಾನಕಾಂಡ ವೆಂಬುದಾಗಿ ಮುಖ್ಯವಾಗಿ ಮೂರು ವಿಧವಾಗಿ ವಿಂಗಡಿಸಬಹುದು. ಇವುಗಳಲ್ಲಿ ಜ್ಞಾನಕಾಂಡ ಮತ್ತು ಉಪಾಸನಾಕಾಂಡಗಳು (ಅದರಲ್ಲೂ ಏಕದೇವೋಪಾಸನೆ) ಶರಣರಿಗೆ ಅವಿರೋಧವಾದರೂ ಕರ್ಮಕಾಂಡವು ಅವರಿಗೆ ವಿರೋಧವಾದುದು. ಏಕೆಂದರೆ ಅಲ್ಲಿ ಯಜ್ಞಯಾಗಾದಿಗಳ ಪ್ರಸಂಗದಲ್ಲಿ ಹೇಳುವ ಪ್ರಾಣಿಹಿಂಸೆ, ಮಾನವರಲ್ಲಿ ಜನ್ಮದಿಂದ ಅವರ ಉಚ್ಚ-ನೀಚತೆಗಳನ್ನು ಅಳೆಯುವುದು. ಉಚ್ಚಕುಲದವರಿಗೆ ಮಾತ್ರ ಅಲ್ಲಿ ಪ್ರವೇಶ, ವರ್ಣಾಶ್ರಮ ಭೇದ, ಬಹುದೇವೋಪಾಸನೆ ಮುಂತಾದ ವಿಚಾರಗಳು ಪರೋಕ್ಷ ಇಲ್ಲವೆ ಅಪರೋಕ್ಷವಾಗಿ ಅಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಇವು ಶರಣರ ವೈಚಾರಿಕ ನಿಲುವಿಗೆ ಸರಿ ಹೊಂದುವುದಿಲ್ಲ. ಕಾರಣ ಶರಣರು ಎಲ್ಲಿಯಾದರು ವೇದಗಳ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಅದು ಅವರ ವೈಚಾರಿಕ ನಿಲುವಿಗೆ ಸರಿಬಾರದ ಕರ್ಮಕಾಂಡವನ್ನು ಮಾತ್ರ ವಿರೋಧಿಸುವುದಕ್ಕಾಗಿಯೇ ಹೊರತು. ಇಡೀ ವೇದರಾಶಿಯನ್ನೆಲ್ಲ ವಿರೋಧಿಸುವುದಕ್ಕಲ್ಲ ಎಂದು ಭಾವಿಸಬೇಕು. ಇದಕ್ಕೆ ಬಸವಣ್ಣನವರು ಹೇಳುವ-

> ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತದೆ.
> ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತದೆ
> ಶೃತಿ ಘನವೆಂಬೆನೆ? ಮುಂದಿಟ್ಟರಸುತ್ತದೆ.

ಎಂಬ ಈ ವಚನ ಸಮರ್ಥತೆ ನೀಡುತ್ತದೆ. ವಚನಗಳಲ್ಲಿ ಬರುವ ವೇದನಿಂದಾಪರವಾದ ಉಕ್ತಿಗಳ ಉದ್ದೇಶ ಏನೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ರಚನೆಗೊಂಡಂತಿದೆ ಈ ವಚನ.

ಶಿವಾಗಮಗಳಲ್ಲಿ ಪೂರ್ವಭಾಗ ಮತ್ತು ಉತ್ತರ ಭಾಗವೆಂಬುದಾಗಿ ಎರಡು ಭಾಗ. ಶರಣರಿಗೆ ಸಮ್ಮತವಾದ ಮತ್ತು ಅವರ ವೈಚಾರಿಕ ನಿಲುವಿಗೆ ಪ್ರೇರಣಾದಾಯಿಯಾದ ವೀರಶೈವ ಸಿದ್ಧಾಂತವು ಶಿವಾಗಮಗಳ ಉತ್ತರ ಭಾಗದಲ್ಲಿ ಉಪದೇಶಿಸಲ್ಪಟ್ಟಿವೆ. ಕಾರಣ ವಚನಗಳಲ್ಲಿ ಆಗಮದ ನಿಂದಾಪರವಾದ ಉಕ್ತಿಗಳು ಉಲ್ಲೇಖಗೊಂಡಿದ್ದರೆ, ಅವುಗಳ ಉದ್ದೇಶ ಆ ಪೂರ್ವಭಾಗದ ನಿರಾಕರಣೆಯೇ ಹೊರತು ಸಂಪೂರ್ಣ ಶಿವಾಗಮಗಳ ನಿರಾಕರಣೆಯಲ್ಲವೆಂದು ಭಾವಿಸಿಕೊಳ್ಳಬೇಕು. ಇದಲ್ಲದೆ ಶಿವಾಗಮಗಳಲ್ಲಿ ಕಾಳಾಮುಖ, ಕಾಪಾಲಿಕ, ಪಾಶುಪತ ಮುಂತಾದ ಹಲವು ಶೈವ ಪದ್ಧತಿಗಳೂ ಉಪದಿಷ್ಟಗೊಂಡಿದ್ದು, ಅವೂ ಸಹ ಶರಣರ ವಿಚಾರಧಾರೆಗೆ ಸರಿ ಹೊಂದುವುದಿಲ್ಲವಾದ್ದರಿಂದ, ಆಗಮ ನಿಂದೆಯ ಹಿಂದೆ ಇದೂ ಒಂದು ಉದ್ದೇಶವಿರಬಹುದೆಂದು ಭಾವಿಸಿಕೊಳ್ಳಬಹುದು.

ಈ ಹಿನ್ನೆಲೆಯಲ್ಲಿ ವಿಚಾರಿಸಲಾಗಿ ಶರಣರು ವೇದಾಗಮ ವಿರೋಧಿಗಳಲ್ಲ, ಅರಿತು ಅವುಗಳ ಪರಿಶೋಧಕರು. ಹೊಳೆಯಲ್ಲಿ ಹೊಸದಾಗ ಹರಿದು ಬರುವ ನೀರನ್ನು ಕಾಯಿಸಿ ಸೋಸಿ ಪರಿಶೋಧಿಸಿ ಆ ಮೂಲಕ ಅವರ ಕೊಳೆಯನ್ನು ಕಳೆದು ಮಕ್ಕಳಿಗೆ ಕುಡಿಯಲು ಕೊಡುವಂತೆ, ಶರಣರು ವೇದಾಗಮಗಳಲ್ಲಿರುವ, ಅಂದಿನ ಸಮಾಜದ ಸ್ವಾಸ್ಥ್ಯಕ್ಕೆ ಸರಿಯೆನಿಸದ ಅಂಶವನ್ನು ತೆಗೆದು ಉತ್ತಮವಾದುದನ್ನು ಅಂಗೀಕರಿಸಿ ಅದನ್ನು ಸಮಾಜಕ್ಕೆ ನೀಡಿದರು. ಈ ವೇದಾಗಮಗಳೆಂಬ ನೀರನ್ನು ಕಾಯಿಸಲು ಸ್ವಾನುಭವವೆ ಅಗ್ನಿಯಾಗಿತ್ತು, ಅನುಭವ ಮಂಟಪದ ಚರ್ಚಾಗೋಷ್ಠಿಗಳೇ ಅದನ್ನು ಸೋಸಲು ವಸ್ತ್ರವಾಗಿತ್ತು. ಕಾರಣ ಶಿವಶರಣರು ವೇದಾಗಮ ವಿರೋಧಿಗಳಲ್ಲ; ಪರಿಶೋಧಕರು! ಈ ಹಿನ್ನೆಲೆಯಲ್ಲಿ ಪ್ರಾಚೀನ ವೇದಾಗಮಗಳ ಮತ್ತು ಅರ್ವಾಚೀನ ಪ್ರಗತಿಪರ ವೈಚಾರಿಕತೆಯ ಮಧ್ಯದ ಕೊಂಡಿಯಾಗಿ ನಿಲ್ಲುವರು ಶರಣರು! ಈ ಶರಣರಲ್ಲ ಹಡಪದ ಅಪ್ಪಣ್ಣನವರೂ ಒಬ್ಬರು.

## ವೇದಾಗಮಗಳು ಮತ್ತು ಹಡಪದ ಅಪ್ಪಣ್ಣನವರ ವಚನಗಳು

ಹಡಪದ ಅಪ್ಪಣ್ಣನವರು ವೇದಾಗಮಗಳ ಹಿನ್ನೆಲೆಯಲ್ಲಿ ಮೇಲೆ ತಿಳಿಸಿದ ಪರಂಪರೆಯಲ್ಲಿ ಅಪವಾದರೇನಲ್ಲ! ಚನ್ನಮಲ್ಲೇಶ್ವರರನ್ನು ಗುರುಗಳನ್ನಾಗಿ ಪಡೆದು[೧] ಅವರ ಮಾರ್ಗದರ್ಶನದಿಂದ ಅಧ್ಯಾತ್ಮದ ಉನ್ನತಿಯನ್ನು ಸಾಧಿಸಿದ ಹಡಪದ

---

೧. ೮೫೮, ೮೮೮, ೮೯೧, ೯೪೯, ೧೦೨೯, ೧೦೩೦, ೧೦೫೯, ಸಂಕೀರ್ಣ ವಚನ ಸಂಪುಟ-೪ರ ಈ ಎಲ್ಲ ಸಂಖ್ಯೆಯ ವಚನಗಳಲ್ಲಿ ಹಡಪದ ಅಪ್ಪಣ್ಣನವರು ಚನ್ನಮಲ್ಲೇಶ್ವರರ ಹೆಸರು ಗುರುಗಳ ರೂಪದಲ್ಲಿ ಉಲ್ಲೇಖಗೊಂಡಿರುರುದು. ಈ ಲೇಖನದಲ್ಲಿ ವಚನಗಳ ಕೆಳಗೆ ಉಲ್ಲೇಖಿಸಿರುವ ಸಂಖ್ಯೆಗಳು ಸಂಕೀರ್ಣ ವಚನ ಸಂಪುಟ-೪ರ, ವಚನಗಳ ಕ್ರಮ ಸಂಖ್ಯೆಗಳು.

ಅಪ್ಪಣ್ಣನವರು ೨೪೩ ವಚನಗಳನ್ನು (ವಚನ ಸಂಪುಟಗಳ ಪ್ರಕಾರ) ರಚಿಸಿರುವರು. ಈ ವಚನಗಳಲ್ಲಿ ವೀರಶೈವ ಸೈದ್ಧಾಂತಿಕ ನಿಲುವು, ಸಾಮಾಜಿಕ ಚಿಂತನೆ, ಆಧ್ಯಾತ್ಮದ ಔನ್ನತ್ಯ ಮುಂತಾದ ಅನೇಕ ವಿಚಾರಗಳು ಪ್ರಸ್ತಾಪಗೊಂಡಿವೆ. ಅವುಗಳೆಲ್ಲ ಗುರುಗಳ ಮಾರ್ಗದರ್ಶನ, ವೇದಾಗಮಗಳ ಅಧ್ಯಯನ ಮತ್ತು ಸ್ವಾನುಭವದ ನೆಲೆಗಟ್ಟಿನ ಮೇಲೆ ಘಟ್ಟಿಗೊಂಡು ನಿಂತವು.

ಹಡಪದ ಅಪ್ಪಣ್ಣನವರು ವೇದಾಗಮಗಳಿಂದ ಪ್ರಭಾವಿತಗೊಂಡಿರುವರೆಂಬುದಕ್ಕೆ ಅವರು ತಮ್ಮ ವಚನಗಳಲ್ಲಿ ಹೇರಳವಾಗಿ ಬಳಸಿರುವ ವೇದಾಗಮೋಕ್ತಿಗಳೇ ಸಾಕ್ಷಿ. ಇವರು ವೇದಾಗಮಗಳ ಪ್ರಭಾವಕ್ಕೊಳಗಾಗಿರುವುದನ್ನು ನಿರ್ಧರಿಸುವ ವಚನಗಳನ್ನು ಮೂರು ಪ್ರಕಾರ ವಿಂಗಡಿಸಬಹುದು.

೧. ವೇದಾಗಮ ಪ್ರಾಮಾಣ್ಯವನ್ನು ಅಂಗೀಕರಿಸುವ ವಚನಗಳು.

೨. ವೇದಾಗಮಗಳ ಉಕ್ತಿಗಳನ್ನು ಪ್ರಮಾಣಕ್ಕಾಗಿ ಉದ್ಧರಿಸಿರುವ ವಚನಗಳು.

೩. ವೇದಾಗಮಗಳ ಉಕ್ತಿಗಳು ನೇರವಾಗಿ ಉದ್ಧೃತವಾಗದಿದ್ದರೂ ಅವುಗಳ ಭಾವವನ್ನು ಪ್ರಕಟಪಡಿಸುವ ವಚನಗಳು.

**ವೇದಾಗಮ ಪ್ರಮಾಣವನ್ನು ಅಂಗೀಕರಿಸುವ ವಚನಗಳು:**

ಈ ಪ್ರಕಾರದ ವಚನಗಳು ವಿರಳ. ಆದರೂ ಹಡಪದ ಅಪ್ಪಣ್ಣನವರು ವೇದ ಪ್ರಮಾಣವನ್ನು ಒಪ್ಪುವರೊ ಇಲ್ಲವೊ ಎಂಬುದನ್ನು ನಿರ್ಧರಿಸುವಲ್ಲಿ ಪ್ರಧಾನ ಪಾತ್ರವಹಿಸುತ್ತವೆ.

> ಜಗದೊಳಗೆ ಹುಟ್ಟಿದವರೆಲ್ಲ ಹಗರಣಿಗರಾಗಿ ಹುಟ್ಟಿದರಲ್ಲದೆ
> ಜಗವಗೆಲ್ಲಲರಿಯದೆ.................................
> ..................................................................
> ನಿಗಮ ಶಾಸ್ತ್ರ ಸಾಕ್ಷಿಯಾಗಿ ಚೆನ್ನಮಲ್ಲೇಶ್ವರ ನಿನಗಾಯಿತ್ತಯ್ಯ....
> ...................................................... (೯೪೯)

ಶರಣರ ಬದುಕು ಆದರ್ಶ ಮತ್ತು ಅರ್ಥಪೂರ್ಣವೆಂಬುದಕ್ಕೆ ನಿಗಮ ಶಾಸ್ತ್ರವೇ ಸಾಕ್ಷಿ ಎಂದು ಹೇಳುವ ಮೂಲಕ ನಿಗಮಶಾಸ್ತ್ರದ ಪ್ರಾಮಾಣ್ಯವನ್ನು ಅಂಗೀಕರಿಸಿರುವುದನ್ನು ಇಲ್ಲಿ ಕಂಡುಕೊಳ್ಳಬಹುದು.

ಆಧ್ಯಾತ್ಮ ಸಾಧನೆಯಲ್ಲಿ ಸಾಧಕನ ಮನಸ್ಸು ಏಕಮುಖವಾಗಿ ಹರಿಯಬೇಕು, ಹಲವು ದೈವವ ನಂಬಿದವನ ಸಾಧನೆ ಸಿದ್ಧಿಸಲಾರದು. ಕಾರಣ ಇಷ್ಟದೈವವೇ ತನ್ನ ಸರ್ವಸ್ವವೆಂದು ಭಾವಿಸುವುದು ಸೂಕ್ತ. ಹಡಪದ ಅಪ್ಪಣ್ಣನವರು ಈ ವಿಷಯವನ್ನು ಪ್ರತಿಪಾದಿಸುವಾಗ ವೇದದ ಬೆಂಬಲ ಪಡೆದುಕೊಳ್ಳುತ್ತಾರೆ.

ಹರನಲ್ಲದೆ ದೈವವಿಲ್ಲೆಂದು ಶ್ರುತಿ ಸಾರುತಿರ್ದು
ವೇದಂಗಳು ಪೊಗಳುತಿರ್ದು, ನರರು ಸುರರು ಅರಿವಿರ್ದು ಅರಿಯದೆ
ಹರಿಯು ದೈವ, ಬ್ರಹ್ಮನು ದೈವ, ಸುರಪನು ದೈವ, ಮನುಮುನಿ
ತ್ರಿವಿಧ ದೇವರ್ಕಳು ದೈವವೆಂದು
ಚಂದ್ರ, ಸೂರ್ಯರು, ದೈವವೆಂದು ಆರಾಧಿಸುವಿರಿ
ಪತಿವ್ರತೆಯಾದವಳಿಗೆ ತನ್ನ ಪುರುಷನ ನೆನೆಹಲ್ಲದೆ ಅನ್ಯರ ನೆನೆವಳೆ!
ವೇಶಿಯಂತೆ ಹಲವರು ನೆಂಟರೆ?

.........................................................................

ಹೀಗೆ ಹಡಪದ ಅಪ್ಪಣ್ಣನವರು ಅನೇಕ ವಚನಗಳಲ್ಲಿ ತಮ್ಮ ವಿಷಯ ಮಂಡನೆಗೆ ವೇದಾಗಮಗ್ಗಳ ಬೆಂಬಲ ಪಡೆದುಕೊಂಡಿರುವರು. ಇವುಗಳಿಂದ ಅವರು ವೇದಾಗಮ ಪ್ರಮಾಣವನ್ನು ಅಂಗೀಕರಿಸಿರುವುದು ತಿಳಿದುಬರುತ್ತದೆ.

**ವೇದಾಗಮಗಳ ಉಕ್ತಿಗಳನ್ನು ಬಳಸಿಕೊಂಡಿರುವ ವಚನಗಳು:**

ಇಲ್ಲಿ ಕೇವಲ ವೇದಾಗಮಗಳ ನಾಮೋಲ್ಲೇಖನ ಮಾತ್ರ ಮಾಡದೆ ಅವುಗಳಲ್ಲಿಯ ಉಕ್ತಿಗಳನ್ನು ತಮ್ಮ ವಚನಗಳಲ್ಲಿ ತಾವು ನಿರೂಪಿಸುವ ಸಿದ್ಧಾಂತಗಳಿಗೆ ಪ್ರಮಾಣ ರೂಪದಲ್ಲಿ ಬಳಸಿಕೊಂಡಿರುವ ವಚನಗಳನ್ನು ಈ ಭಾಗದಲ್ಲಿ ಅವಲೋಕಿಸಲಾಗುವುದು. ಹಡಪದ ಅಪ್ಪಣ್ಣನವರು ಬರೆದ ವಚನಗಳಲ್ಲಿ ಈ ತೆರನಾದ ವಚನಗಳ ಹೇರಳವಾಗಿ ದೊರೆಯುತ್ತವೆ.

ಅಯ್ಯಾ ನಾ ಉತ್ತರವನೇರಿ ನೋಡಲಾರೆ ಊರೊಳಗಣ ಉಲುಹೆಲ್ಲ ನಿಂದಿತ್ತು
ಪಶ್ಚಿಮಕ್ಕಿಳಿದು ನೋಡಲಾಗಿ ಪ್ರಾಣಪವನವ ಸುಳುಹು ನಿಂದಿತ್ತು.
ಪೂರ್ವವ ಮೆಟ್ಟಿ ನೋಡಲಾಗಿ ಆರು ನೆಲೆ ಮೂರಾಗಿದ್ದವು
ಅಯ್ಯಾ ನಾ ದಕ್ಷಿಣಕ್ಕೆ ಬಂದು ನೋಡಲಾಗಿ
ಈರೇಳು ಭುವನವು ಕುಕ್ಷಿಯೊಳಗೆ ನಿಕ್ಷೇಪವಾಗಿದ್ದಿತು
ಅದು ಹೇಗೆಂದಡೆ,
ಇಹಲೋಕವು ತನ್ನೊಳಗೆ, ಪರಲೋಕವು ತನ್ನೊಳಗೆ
ಸಚರಾಚರವೆಲ್ಲ ತನ್ನೊಳಗೆ, ಶಿವಶಕ್ತಿಯು ತನ್ನೊಳಗೆ
ಭುವನಾದಿ ಭುವನಂಗಳು ತನ್ನೊಳಗೆ, ಅದು ಹೇಗೆಂದಡೆ
ಅದಕ್ಕೆ ದೃಷ್ಟವ ಹೇಳಿಹೆನು, ಬಲ್ಲವರು ತಿಳಿದು ನೋಡಿ
'ಓಂ ಏಕಮೇವನದ್ವಿತೀಯ' ಎಂಬ ಶ್ರುತಿ ಕೇಳಿ ಬಲ್ಲಿರೆ

(೮೬೦)

ಈ ವಚನದಲ್ಲಿ ಹಡಪದ ಅಪ್ಪಣ್ಣ ಶರಣರು ಹೇಳಿರುವ ಉಕ್ತಿಯು ಛಾಂದೋಗ್ಯ ಉಪನಿಷತ್ತಿನದು (೬.೨.೧) ಸಾಮಾನ್ಯವಾಗಿ ದೇವನೊಬ್ಬನೇ ಎಂಬುದನ್ನು ನಿರೂಪಿಸುವುದಕ್ಕಾಗಿ ಈ ಕೃತಿಯ ಪ್ರಮಾಣವನ್ನು ಕೊಡಲಾಗುತ್ತದೆ. ಆದರೆ ಇಲ್ಲಿ

ಶರಣರು ಪ್ರಪಂಚ ಹಾಗೂ ಪರಮಾತ್ಮ ಎಲ್ಲವೂ ತನ್ನೊಳಗೇ ತುಂಬಿಹುದು ತನ್ನ ಬಿಟ್ಟು ಇನ್ನೊಂದಿಲ್ಲವೆಂಬುದನ್ನು ದೃಢೀಕರಿಸುವುದಕ್ಕಾಗಿ ಈ ಶೃತಿಯನ್ನು ಉಪಯೋಗಿಸಿಕೊಂಡಿರುವುದು ವೈಶಿಷ್ಟ್ಯಪೂರ್ಣ. ಈ ಉಕ್ತಿಯನ್ನೆ ಈ ಶರಣರು ಇನ್ನೊಂದೆಡೆ ಜಂಗಮ ಸ್ವರೂಪವನ್ನು ತಿಳಿಸುವ ಪ್ರಸಂಗದಲ್ಲಿ

ಜಂಗಮವಾದರೆ ಬಾಯಿಲೆಕ್ಕಕ್ಕೆ ಬಾರದೆ, ಬಂದು ಆಶ್ರಿತವೆನಿಸಿಕೊಳ್ಳದೆ
ಆಸೆಯಳಿದು ಲಿಂಗಜಂಗಮವಾ ನಿರ್ಗಮನಿಯಾಗಿ
ಭರ್ಗೋ ದೇವಸ್ಯ ಎಂಬ ಏಕೋದೇವ ನ ದ್ವಿತೀಯವೆಂಬ ಶೃತಿಗೆ ತಂದು (೯೯೩)

ಎಂಬುದಾಗಿ ಬಳಸಿಕೊಂಡಿರುವರು. ಇಲ್ಲಿ ನಿರೂಪಿಸಲಾದ 'ಭರ್ಗೋ ದೇವಸ್ಯ' ಎಂಬ ಶೃತಿ ಬೃಹದಾರಣ್ಯಕೋಪನಿಷತ್ತಿನದು (೬.೩.೬)

ವೀರಶೈವ ಸಿದ್ಧಾಂತದಲ್ಲಿ ಪರಮತತ್ತ್ವವನ್ನು ಲಿಂಗವೆಂದು ಕರೆಯಲಾಗುತ್ತದೆ. ಈ ಲಿಂಗದಿಂದಲೇ ಪರಿಪೂರ್ಣ ಪ್ರಪಂಚದ ಸೃಷ್ಟಿ-ಲಯಗಳು ಘಟಿಸುತ್ತವೆ. ಇದು ಬ್ರಹ್ಮವಾಚಕ. ಅಂತೆಯೇ ಹಡಪದ ಅಪ್ಪಣ್ಣನವರು-

...ಇಂತಿ ಪಸರಿಸಿದ ಪರಬ್ರಹ್ಮವೇ ಏಕಮಯವಾಗಿ ನಿಂದುದಕ್ಕೆ ದೃಷ್ಟಃ
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಮ್।
ಲಿಂಗಬಾಹ್ಯಂ ಪರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೇತ್॥
ಇಂತಪ್ಪ ನಿಂಗವೇ ನೀನಲಾ ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ
ಮಾಂ ತ್ರಾಯಿ, ತ್ರಾಹಿ ಕರುಣಾಕರನೆ (೮೪೫)

ಎಂಬೀ ವಚನದಲ್ಲಿ ಲಿಂಗದ ವ್ಯಾಪಕತೆಯನ್ನು ತಿಳಿಸುವ ಪುರಾಣದ ಉಕ್ತಿಯನ್ನು ಉದ್ಧರಿಸಿ ಲಿಂಗದ ಸ್ವರೂಪವನ್ನು ತಿಳಿಸಿರುವರು.

ಹಡಪದ ಅಪ್ಪಣ್ಣನವರಿಗೆ ಪಾದೋದಕ ಪ್ರಸಾದಗಳ ಬಗ್ಗೆ ವಿಶೇಷ ಒಲವು. ಇದು ಅವರ ವಚನಗಳಲ್ಲಿ ಎದ್ದು ತೋರುತ್ತದೆ. ಮತ್ತು ಇದಕ್ಕೆ ಸಂಬಂಧಪಟ್ಟ ವಚನಗಳನ್ನು ರಚಿಸುವಾಗ ಆಗಮದ ಮಾತುಗಳನ್ನು ಹೆಚ್ಚಾಗಿ ಬಳಸಿಕೊಂಡಿರುವರು. ಚಂದ್ರಜ್ಞಾನಾಗಮದಲ್ಲಿ (ಕ್ರಿಯಾಪಾದ ೫.೧೬)

ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಃ।
ಗುರೋಃ ಪಾದೋದಕಂ ಚಿತ್ರಂ ಸಂಸಾರದ್ರುಮನಾಶನಮ್॥

ಎಂಬುದಾಗಿ ಗುರುಪಾದೋದಕದ ಮಹಿಮೆಯನ್ನು ಉಪದೇಶಿಸಲಾಗಿದೆ. ಹಡಪದ ಅಪ್ಪಣ್ಣನವರು "ಸುಪ್ರಬಾ ಕಳೆಯಿಂದ ಚಿತ್ಪ್ರಣಯ ಉದಯ..." (೧೦೪೧) ಎಂಬ ವಚನದಲ್ಲಿ ಈ ಪಾದೋದಕದ ಶ್ರೇಷ್ಠತೆಯನ್ನು ಬಿತ್ತರಿಸುತ್ತ ಮೇಲಿನ ಚಂದ್ರಜ್ಞಾನಾಗಮದ ಶ್ಲೋಕವನ್ನು ಪ್ರಮಾಣಕ್ಕಾಗಿ ಬರೆದು ಪಾದೋದಕ ಸೇವನೆಯಿಂದ ಸಂಸಾರ ಬಂಧನ ದೂರಾಗಿ ಕೈವಲ್ಯ ಕೈಗೂಡುವುದೆಂದು ನಿರೂಪಿಸಿರುವರು.

ಈ ಪಾದೋದಕದಲ್ಲಿ ಮೂರು ಪ್ರಕಾರ. ಅವುಗಳ ಸ್ವರೂಪ ಮತ್ತು ಮಹಿಮೆಯನ್ನು ತಿಳಿಸುವ ಹಡಪದ ಅಪ್ಪಣ್ಣನವರ ವಚನವೊಂದು ಹೀಗುಂಟು-

ಗುರುಪಾದೋದಕಕ್ಕೆ ಹರಿವ ನದಿಯಲ್ಲ ಸರಿಯೆಂದು
ನುಡಿದರೆ ಸುರಿಯುವೆ ಬಾಲಹುಳು
ಇಷ್ಟಲಿಂಗ ಪಾದೋದಕಕ್ಕೆ ಅಷ್ಟಷಷ್ಟಿ ತೀರ್ಥಂಗಳು ಸರಿಯಲ್ಲ
ಜಂಗಮಪಾದೋದಕಕ್ಕೆ ಜಗದ ತೀರ್ಥ ಸರಿಯೆಂದು
ನುಡಿದರೆ ಜಗದ ಜಂಗುಳಿಗಳೆಂಬೆ
ಇಂತೀ ತ್ರಿವಿಧ ಪಾದೋದಕ ತ್ರಿವಿಧ ಅಂಗಕ್ಕೆ ಪ್ರಾಣ
ಇಂತು ಮಂತ್ರೋದಕ ಮಜ್ಜನೋದಕ ಪ್ರಸಾದೋದಕ
ಈ ತ್ರಿವಿಧವು ತ್ರಿವಿಧಲಿಂಗಕ್ಕೆ ಪ್ರಾಣ.
ಈ ಷಡ್ವಿಧ ಪಾದೋದಕವೇ ಷಡ್ವಿಧ ಅಂಗ ಲಿಂಗದ ಕಳೆ
ಪ್ರಾಣದ ಕಳೆಯೇ ಪಾದೋದಕ, ಅದಕ್ಕೆ ದೃಷ್ಟಃ ರಹಸ್ಯೇಃ
ಸರ್ವತೀರ್ಥಾಭಿಷೇಕಾದಿ ಶುದ್ಧ ಮಾನಸ ಜಾಯತೆ।
ಗುರೋರಂಘ್ರಿಸ್ಪರ್ಶಜಲಂ ತಸ್ಮಾತ್ ಶಿರಸಾ ಧಾರಯೇತ್॥
ಎಂದುದಾಗಿ, ಆ ಪಾದೋದಕವ ಕೊಂಡವನೇ ಪರಬ್ರಹ್ಮಸ್ವರೂಪನು
ಬಸವಪ್ರಿಯ ಕೂಡಲ ಚೆನ್ನಬಸವಣ್ಣ (೯೩೭)

ಹಡಪದ ಅಪ್ಪಣ್ಣನವರು ಈ ವಚನದಲ್ಲಿ ಉದ್ಧರಿಸಿರುವ ಶ್ಲೋಕವು ಚಂದ್ರಜ್ಞಾನಾಗಮ ದಲ್ಲಿಯ-

ಸರ್ವತೀರ್ಥಾಭಿಷೇಕೇ ಯಾ ಶುದ್ಧಿರ್ಮನಸಿ ಜಾಯತೇ।
ಗುರೋರಂಘ್ರಿಸ್ಪರ್ಶಜಲೇ ಶಿರಸಾ ಧಾರಿತೇ ಹಿ ಸಾ॥

(ಕ್ರಿಯಾಪಾದ ೫.೧೭)

ಈ ಶ್ಲೋಕದ ಪ್ರತಿರೂಪವೇ ಆಗಿದೆ (ಪಾಠಭೇದದಿಂದುಂಟಾದ ಕೆಲ ಮಾರ್ಪಾಟುಗಳನ್ನು ಹೊರತುಪಡಿಸಿ) ವೀರಶೈವಾನಂದಚಂದ್ರಿಕೆಯಲ್ಲಿ ಮರಿತೋಂಟದಾರ್ಯರು ಇದನ್ನು ಸ್ಕಂದ ಪುರಾಣದ ಶ್ಲೋಕವೆಂಬುದಾಗಿಯೂ ಕೂಡಾ ಉಲ್ಲೇಖಿಸಿರುವರು. ಪಾದೋದಕದ ಅಕ್ಷರಾರ್ಥವನ್ನು ಸೂಚಿಸುವ ಶ್ಲೋಕವು ಸಾಮಾನ್ಯವಾಗಿ ಅನೇಕ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ ಅದು ಹೀಗುಂಟು-

ಪಾಕಾರಂ ಪರಮಂ ಜ್ಞಾನಂ ದೋಕಾರಂ ದೋಷನಾಶನಂ।
ರಕಾರಂ ರಹ್ಯತೇ ಜನ್ಮ ಕಕಾರಂ ಕರ್ಮಛೇದನಮ್॥

ಪಾದೋದಕ ಶಬ್ದದಲ್ಲಿಯ 'ಪಾ' ಅಕ್ಷರವು ಪರಮಜ್ಞಾನ ಪ್ರತೀಕವೂ 'ದೋ' ಅಕ್ಷರವು ದೋಷನಾಶಕವೂ 'ದ' ಅಕ್ಷರವು ಜನ್ಮ ಮರಣ ಬಂಧನವನ್ನು ದಹಿಸುವಂತಹುದೂ 'ಕ' ಅಕ್ಷರವು ಕರ್ಮಬಂಧನ ನಾಶಕವೂ ಆಗಿದೆ. ಇದು ಈ ಶ್ಲೋಕದ ಅರ್ಥ.

ಮರಿತೋಂಟದಾರ್ಯರು ವೀರಶೈವಾನಂದ ಚಂದ್ರಿಕೆಯಲ್ಲಿ (ಪು. ೧೧೫) ಇದು 'ಶಿವರಹಸ್ಯ' ಎಂಬ ಗ್ರಂಥದ ಶ್ಲೋಕವೆಂದು ಹೇಳಿರುವರು. ಹಡಪದ ಅಪ್ಪಣ್ಣನವರು ಈ ಶ್ಲೋಕವನ್ನು ತಮ್ಮ ಪರಾಪರದಲ್ಲಿ ಹುಟ್ಟಿದ ಪಾದೋದಕ.... (೯೭೭) ಎಂಬ ವಚನದಲ್ಲಿ ಉಲ್ಲೇಖಿಸಿರುವರು.

ಪಾದೋದಕದಂತೆಯೇ ಪ್ರಸಾದಕ್ಕೂ ವೀರಶೈವ ದರ್ಶನದಲ್ಲಿ ವಿಶಿಷ್ಟವಾದ ಸ್ಥಾನ. ಈ ಪ್ರಸಾದದ ಸ್ವರೂಪ ಹಾಗೂ ಮಹಿಮೆಯನ್ನು ಕುರಿತು ಹೇಳುವಾಗಲೂ ಹಡಪದ ಅಪ್ಪಣ್ಣನವರು ಅನೇಕ ಆಗಮೋಕ್ತಿಗಳನ್ನು ಪ್ರಮಾಣಕ್ಕಾಗಿ ಉಲ್ಲೇಖಿಸಿರುವರು. ಒಂದೆರಡು ಸ್ಥಾನದಲ್ಲಂತೂ ತಾವು ಉಲ್ಲೇಖಿಸುವ ಉಕ್ತಿಯು ಯಾವ ಗ್ರಂಥವೆಂಬುದನ್ನು ತಿಳಿಸುವುದಕ್ಕಾಗಿ ಗ್ರಂಥದ ಹೆಸರು ಸಮೇತ ಶ್ಲೋಕಗಳನ್ನು ಉಲ್ಲೇಖಿಸುತ್ತಾರೆ-

೧. ಮೂಲಬ್ರಹ್ಮದಲ್ಲಿ ಮೊನೆದೋರಿದ ಪ್ರಸಾದವೇ ಪರಮ ಪ್ರಣಮ
ಆ ಪ್ರಣಮದ ಪರಮಪ್ರಕಾಶವೇ ಪ್ರಸಿದ್ಧ ಪ್ರಸಾದ
ಆ ಪ್ರಸಿದ್ಧ ಪ್ರಸಾದದಿಂದಲೇ ಬ್ರಹ್ಮಾಂಡ ರೂಪುದೋರಿತ್ತು
ಆ ಸ್ವರೂಪವೇ ಪ್ರಸಾದ, ನಿರೂಪವೇ ಲಿಂಗೈಕ್ಯ ಆದಕ್ಕೆ ದೃಷ್ಟ
ತತ್ತ್ವಪ್ರದೀಪಿಕಾಯಾಂ!
ಪ್ರಸಾದಂ ಮುಕ್ತಿಮೂಲಂ ಚ ಯತ್ ಪ್ರಸಾದಂ ಶಿವಸ್ಯ ಚ।
ಶಿವಃ ಸರ್ವಾಧಿದೇವಃ ಸ್ಯಾದ್ ವೇದಕರ್ಮೇಷು ತದ್ಧನಂ॥ (೧೦೧೪)

ಎಂದುದಾಗಿ

೨. ಲಿಂಗಪ್ರಸಾದವ ಜಂಗಮಕ್ಕೆ ಕೊಡುವ ಕರ್ಮಿಗಳು ನೀವು ಕೇಳಿರೆ
ಜಂಗಮಪ್ರಸಾದವ ಲಿಂಗಕ್ಕೆ ಕೊಡುವ ಧರ್ಮಿಗಳು ನೀವು ಕೇಳಿರೆ
ಲಿಂಗಪ್ರಸಾದವ ಜಂಗಮಕ್ಕೆ ಕೊಡುವುದು ಅನಾಚಾರ
ಜಂಗಮಪ್ರಸಾದವ ಲಿಂಗಕ್ಕೆ ಕೊಡುವುದು ಸದಾಚಾರ
ಅದೆಂತೆಂದಡೆ- ಶಿವಧರ್ಮ ಪುರಾಣದಲ್ಲಿ :
ಲಿಂಗಾರ್ಪಿತ ಪ್ರಸಾದಂ ಚ ನ ದದ್ಯಾಜ್ಜಂಗಮಾರ್ಪಿತಂ।
ಜಂಗಮಾರ್ಪಿತಪ್ರಸಾದಂ ತದ್‌ದದ್ಯಾಲ್ಲಿಂಗಮೂರ್ತಿಷು॥
ಎಂದುದಾಗಿ.......................... (೧೦೨೦)

ಈ ಎರಡು ವಚನಗಳಲ್ಲಿ ಕ್ರಮವಾಗಿ ಪ್ರಸಾದದ ಮಹಿಮೆ ಮತ್ತು ಪ್ರಸಾದ ಸ್ವೀಕರಿಸುವಲ್ಲಿಯ ವೈಶಿಷ್ಟ್ಯತೆಗಳನ್ನು ಕುರಿತು ಹೇಳುತ್ತ, ಆ ವಿಷಯವನ್ನು ದೃಢೀಕರಿಸುವುದಕ್ಕಾಗಿ ತತ್ವಪ್ರದೀಪಿಕೆಯ ಮತ್ತು ಶಿವಧರ್ಮಪುರಾಣದ ಉಕ್ತಿಗಳ ಸಮರ್ಥನೆ ನೀಡಿರುವುದನ್ನು ಕಾಣಬಹುದು.

ಹಡಪದ ಅಪ್ಪಣ್ಣನವರು ಪ್ರಸಾದ ಶಬ್ದದ ವ್ಯುತ್ಪತ್ಯರ್ಥವನ್ನು ನೀಡುವ ಶ್ಲೋಕವೊಂದನ್ನು ತಮ್ಮ ವಚನವೊಂದರಲ್ಲಿ (೯೮೩) ಉಲ್ಲೇಖಿಸಿರುವುದು. ಆ ಶ್ಲೋಕವು ಹೀಗಿದೆ-

ಪ್ರಕಾರೋऽಯಂ ಪ್ರಸಾದಃ ಸ್ಯಾತ್ ಸಾಕಾರಂ ಭಕ್ತಿರುಚ್ಯತೇ।
ಪ್ರಸಾದಂ ಪೂರ್ವಿಕಾ ಭಕ್ತಿರ್ಮುಕ್ತಿರೇತಿ ದಕಾರಕಮ್॥

ಇದು ಯಾವ ಗ್ರಂಥದ್ದೆಂದು ನಿಖರವಾಗಿ ಹೇಳಲು ಸಾಧ್ಯವಾಗದಿದ್ದರೂ ಇದು ಆಗಮದ ಉಕ್ತಿಯಿರಬಹುದೆಂದು ನಮ್ಮ ಅನಿಸಿಕೆ. ಇದರ ಅರ್ಥ ತುಂಬ ಮಾರ್ಮಿಕವಾಗಿದೆ. 'ಪ್ರ' ಎಂದರೆ ಪ್ರಸಾದ ಅರ್ಥಾತ್ ಪ್ರಸನ್ನತೆ 'ಸಾ' ಎಂದರೆ ಭಕ್ತಿ 'ದ' ಎಂದರೆ ಮೋಕ್ಷ, ಪ್ರಸನ್ನತೆಯಿಂದ ಕೂಡಿದ ಭಕ್ತಿಯು ಮೋಕ್ಷವನ್ನು ತಂದುಕೊಡುತ್ತದೆ ಎಂದು ಇಲ್ಲಿ ಭಾವಿಸಬೇಕು.

ಇದೇ ರೀತಿ ಹಡಪದ ಅಪ್ಪಣ್ಣನವರ ಮತ್ತೊಂದು ವಚನದಲ್ಲಿ (೮೮೭)

ಮತ್ಪ್ರಾಣೋ ಜಂಗಮೋ ನಿತ್ಯಂ ಮಲ್ಲಿಂಗಂ ಜಂಗಮಸ್ತಥಾ।
ಆವಯೋಸ್ತತ್ಪ್ರಸಾದಂ ಚ ಭೋಗಸ್ಯಾದಿ ನಿಶ್ಚಯಂ॥

ಈ ಶ್ಲೋಕದಲ್ಲಿ 'ಮತ್' ಶಬ್ದವು ಪ್ರಯೋಗಿಸಲ್ಪಟ್ಟಿರುವುದರಿಂದ ಶಿವನೇ ಈ ಶ್ಲೋಕವನ್ನು ಉಪದೇಶಿಸಿರಬೇಕು. ಆದುದರಿಂದ ಇದು ಶಿವಾಗಮಗಳಲ್ಲಿಯ ಒಂದು ಶ್ಲೋಕವೇ ಇರಬೇಕು. ಆದರೆ ಇದು ಪ್ರಕಟಿತ ಆಗಮಗಳಲ್ಲಿ ನಮಗೆ ಕಂಡುಬಂದಿಲ್ಲ. ಹೀಗೆ ಅಪ್ಪಣ್ಣನವರ ವಚನಗಳಲ್ಲಿ ವೇದಾಗಮಗಳ ಮತ್ತು ಇನ್ನಿತರ ಗ್ರಂಥಗಳ ಉಕ್ತಿಗಳು ಪ್ರಸಂಗಾನುಸಾರ ಮಾರ್ಮಿಕವಾಗಿ ಉಲ್ಲೇಖಗೊಂಡು ಆಯಾ ವಿಚಾರಗಳನ್ನು ಬಲಪಡಿಸುವಲ್ಲಿ ಸಹಕರಿಸುತ್ತವೆ.

## ವೇದಾಗಮೋಕ್ತಿಗಳ ಭಾವವನ್ನು ಧ್ವನಿತಗೊಳಿಸುವ ವಚನಗಳು:

ಈ ಪ್ರಕಾರದ ವಚನಗಳಲ್ಲಿ ವೇದಾಮಗಳ ಹೆಸರಾಗಲಿ ಅಥವಾ ವೇದಾಗಮೋಕ್ತಿಗಳಾಗಲಿ ಉಲ್ಲೇಖಗೊಂಡಿರುವುದಿಲ್ಲ. ಆದರೆ ವೇದಾಗಮೋಕ್ತಿಗಳ ಭಾವವು ಅಲ್ಲಿ ಧ್ವನಿತಗೊಳ್ಳುತ್ತಿರುತ್ತದೆ. ಅಂಥ ವಚನಗಳನ್ನು ಕುರಿತು ಇಲ್ಲಿ ವಿಚಾರಿಸಲಾಗುತ್ತದೆ. ಪರಾತ್ಪರ ಪರಶಿವ ಬ್ರಹ್ಮ ವಸ್ತು ಸರ್ವವ್ಯಾಪಕವಾದುದು. ಅದು ಗಗನದಂತೆ ವಿಶ್ವದ ಎಲ್ಲೆಡೆಯಲ್ಲಿಯೂ ತುಂಬಿಕೊಂಡಿಹುದು. ಅದು ವಿಶ್ವವ್ಯಾಪಿ ಮತ್ತು ಸರ್ವಗ. ಅದಿಲ್ಲದ ಸ್ಥಾನ ಒಂದಿಷ್ಟು ಇಲ್ಲ. ಇದನ್ನು ಕಠೋಪನಿಷತ್ತು "ಅಣೋರಣೀಯಾನ್ ಮಹತೋ ಮಹೀಯಾನ್" (೭.೭೦) ಎಂದು ಬಣ್ಣಿಸಿದೆ. ಅಂದರೆ ಅದು ಅಣುವಿಗಿಂತಲೂ ಅಣುವಾಗಿದೆ. ಮಹತ್ತಿಗಿಂತಲೂ ಮಹತ್ತಾಗಿದೆ. ಹಡಪದ ಅಪ್ಪಣ್ಣನವರು... ಅಣುವಿಂಗಣು, ಮಹತ್ತಿಂಗೆ ಮಹತ್ತು, ಘನಕ್ಕೆ ಘನವೆಂಬ ವಾಕ್ಯಕ್ಕೆ ಸಂದು... (೯೯೩) ಎಂಬುದಾಗಿ ಅದೇ ಮಾತುಗಳಿಂದ ವರ್ಣಿಸಿರುವರು. ಇಲ್ಲಿ ಕಠೋಪನಿಷತ್ತಿನ ಉಕ್ತಿಯ ಧ್ವನಿ ಎದ್ದು ತೋರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಪರಶಿವ ಚೈತನ್ಯದ ಸಾಕ್ಷಾತ್ಕಾರವೇ ಜೀವನದ ಉದ್ದೇಶ. ಆದರೆ ಇದನ್ನು ಸಾಧಿಸಲು ಸಹಕಾರಿಯಾಗುವ ಉಪಾಯಗಳು ತುಂಬ ವಿರಳ. ಅಲ್ಲಿ ನಮ್ಮ ಮಾತು

ನಮ್ಮ ಮನಸ್ಸುಗಳು ಉಪಯೋಗಕ್ಕೆ ಬಾರವು ಏಕೆಂದರೆ ಅದು ಮಾತು-ಮನಗಳ ಪರಿಧಿಗೆ ಮೀರಿದ ಪರವಸ್ತು. ಅಂತೆಯೇ ಶಾಂಡಿಲ್ಯೋಪನಿಷತ್ತು "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" (೭.೩) ಮಾತು ಮನಸುಗಳು ಮುಂದೆ ಹೋಗಲಾಗದೆ ಎಲ್ಲಿಂದ ಮರಳಿ ಬರುತ್ತವೆಯೋ ಅದರ ಮುಂದೆ ಪರಬ್ರಹ್ಮ ವಸ್ತುವಿರುತ್ತದೆ ಎಂದು ತಿಳಿಸುತ್ತದೆ. ಉಪನಿಷತ್ತಿನ ಈ ಅಭಿಪ್ರಾಯವೆ ಅಪ್ಪಣ್ಣನವರ ವಚನ ಭಾಷೆಯಲ್ಲಿ ಬಂದು "ಅರಿವಿಂಗೆ ಅಪ್ರಮಾಣ, ವಾಙ್ಮನಕ್ಕಗೋಚರ, ಆಗಮ ಶಾಸ್ತ್ರಂಗಳು ಅರಸಿ ಕಾಣವು" (೮೭೭) ಎಂದು ರೂಪ ತಾಳುತ್ತದೆ.

ಜಗತ್ತಿನ ಎಲ್ಲ ಚರಾಚರ ವಸ್ತುಗಳಿಗೆ ಈ ಪರಶಿವ ಬ್ರಹ್ಮವೆ ಮೂಲ ಕಾರಣ. ಅದರಿಂದಲೇ ಪಂಚಭೂತಗಳೂ, ಅನಂತ ವಿಶ್ವವೂ, ವಿಶ್ವದ ಅನೇಕ ಜೀವರಾಶಿಗಳೂ ಜನ್ಮ ತಳೆದವು. ಇದನ್ನು ಹಡಪದ ಅಪ್ಪಣ್ಣನವರು ಬಣ್ಣಿಸುವುದು ಹೀಗೆ-

ವೇದ ಪುರಾಣಾಗಮ ಶಾಸ್ತ್ರ ನಾದದ ಸೊಮ್ಮೆಂಬರಿ
ಆ ನಾದದಿಂದ ಆಕಾಶ ಪುಟ್ಟಿತ್ತು,
ಆಕಾಶದಿಂದ ವಾಯು ಪುಟ್ಟಿತ್ತು, ವಾಯುವಿನಿಂದ ಅಗ್ನಿ ಪುಟ್ಟಿತ್ತು
ಅಗ್ನಿಯಿಂದ ಅಪ್ಪು ಪುಟ್ಟಿತ್ತು, ಅಪ್ಪುವಿನಿಂದ ಪೃಥ್ವಿ ಪುಟ್ಟಿತ್ತು
ಪೃಥ್ವಿಯಿಂದ ಇರುವೆ ಕಡೆಯಾಗಿ ಎಂಬತ್ತುನಾಲ್ಕು ಲಕ್ಷ ಜೀವಂಗಳು
ಪುಟ್ಟಿದವು (೧೦೨೪)

ಉಪನಿಷತ್ತುಗಳಲ್ಲಿ ಈ ಪೃಥ್ವಿಕ್ರಮವು- "ತಸ್ಮಾದ್ವಾ ಏತಸ್ಮಾದಾತ್ಮನಃ ಆಕಾಶಃ ಸಂಭೂತಃ ಆಕಾಶಾದ್ವಾಯುಃ, ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ ಪೃಥಿವೀ, ಪೃಥಿವ್ಯಾ ಓಷಧಯಃ ಓಷಧಿಭ್ಯೋ ಅನ್ನಂ, ಅನ್ನಾತ್ ಪ್ರಜಾಃ" (ತೈತ್ತಿ. ೨.೧.೧) ಎಂಬುದಾಗಿ ನಿರೂಪಿಸಲ್ಪಟ್ಟಿದೆ. ಉಪನಿಷತ್ತಿನಲ್ಲಿ ಉಪದೇಶಿಸಲ್ಪಟ್ಟ ಸೃಷ್ಟಿಕ್ರಮವು ಹಡಪದ ಅಪ್ಪಣ್ಣನವರ ವಚನದಲ್ಲೂ ಧ್ವನಿತಗೊಂಡಿರುವುದನ್ನು ಇಲ್ಲಿ ಗುರುತಿಸಬಹುದು.

ಸಂಪೂರ್ಣ ವಿಶ್ವಕ್ಕೆ ಕಾರಣೀಭೂತವಾದ ಆ ಪರಶಿವಚೈತನ್ಯವು ತನ್ನ ಸ್ವರೂಪವೇ ಆಗಿದೆ. ಅದುವೇ ನಾನೆಂಬ ಅಭೇದ ಜ್ಞಾನವನ್ನು ಹೊಂದಿರುವಾತನೇ ಜಂಗಮ. ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಜಂಗಮದ ಲಕ್ಷಣವನ್ನು ತಿಳಿಸುತ್ತ-

ಜ್ಞಾನಂತ್ಯತಿಶಯಾದ್ಯೇ ತು ಶಿವಂ ವಿಶ್ವಪ್ರಕಾಶಕಂ।
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ॥ (೧೧.೩೭)

ಎಂಬುದಾಗಿ ವಿಶ್ವವನ್ನು ಬೆಳಗುವ ಶಿವಚೈತನ್ಯವೇ ನನ್ನ ಸ್ವರೂಪವೆಂದು ದೃಢವಾಗಿ ನೆರೆ ನಂಬಿದ ಶಿವಯೋಗಿಯನ್ನು ಜಂಗಮವೆಂದು ಕರೆಯಬೇಕೆಂದು ನಿರೂಪಿಸಲಾಗಿದೆ. ಜಂಗಮ ಲಕ್ಷಣದ ವಿಷಯದಲ್ಲಿ ಹಡಪದ ಅಪ್ಪಣ್ಣನವರು ಇದೇ ಅಭಿಪ್ರಾಯವನ್ನು ವ್ಯಕ್ತಗೊಳಿಸುವರು. ಅದು ಈ ಕೆಳಗಿನ ವಚನದಿಂದ ದೃಢಗೊಳ್ಳುತ್ತದೆ:

ಜಂಗಮಲಿಂಗವೆಂತಾಹನೆಂದರೆ:
ಇಂತಿ ವಿಶ್ವಬ್ರಹ್ಮಾಂಡವು ತನ್ನ ಕುಕ್ಷಿಯೊಳು ನಿಕ್ಷೇಪವಾಗಿ
ತಾ ನಿರ್ಗಮನಿಯಾಗಿ ಲಿಂಗರೂಪಾಗಿ ಸುಳಿಯಬಲ್ಲರೆ
ಜಂಗಮಲಿಂಗವೆಂಬೆ................ (೯೪೭)

ಹೀಗೆ ಹಡಪದ ಅಪ್ಪಣ್ಣನವರ ಸಾಕಷ್ಟು ವಚನಗಳಲ್ಲಿ ವೇದಾಗಮಗಳ ಪ್ರಭಾವ ಎದ್ದು ತೋರುತ್ತದೆ. ಇದರಿಂದ ಅಪ್ಪಣ್ಣನವರು ವಸ್ತುತಃ ಹಡಪದರಾದರೂ ವೇದ, ಆಗಮ ಮತ್ತು ತತ್ತ್ವಪ್ರದೀಪಿಕಾ, ಶಿವಧರ್ಮಪುರಾಣ, ಶ್ರೀಸಿದ್ಧಾಂತಶಿಖಾಮಣಿ ಮೊದಲಾದ ಪ್ರಾಚೀನವಾದ ಸಂಸ್ಕೃತ ಸಾಹಿತ್ಯದ ಅನೇಕ ಗ್ರಂಥಗಳನ್ನು ಬಲ್ಲವರಾಗಿದ್ದರೆಂದು ತಿಳಿದುಬರುತ್ತದೆ. ಇದಕ್ಕೆಲ್ಲ ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಪ್ರಭುಗಳಂತಹ ಮೇಧಾವಿ ಶರಣರ ಸಾಮೀಪ್ಯ ಮತ್ತು ಸ್ವತಃ ಅವರಲ್ಲಿ ಈ ಬಗ್ಗೆ ಇರುವ ಆಸಕ್ತಿ ಕಾರಣವಾಗಿರಬಹುದೇನೊ! ಅಂತು ಹಡಪದ ಅಪ್ಪಣ್ಣನವರ ವಚನಗಳನ್ನು ಅವಲೋಕಿಸಿದಾಗ ಅಲ್ಲಿ ಬಳಸಿರುವ ಶೈಲಿ, ಮಧ್ಯಮಧ್ಯದಲ್ಲಿ ಬರುವ ಬೆಡಗು ಮತ್ತು ಸಮರ್ಥನೆಗಾಗಿ ನೀಡಿದ ವೇದಾಗಮೋಕ್ತಿಗಳು ಅವರನ್ನು ಮೇರು ಶರಣರ ಸಾಲಿನಲ್ಲಿ ನಿಲ್ಲಿಸುತ್ತವೆ.

ಅಪ್ಪಣ್ಣನವರು ಹಲವಾರು ವಚನಗಳಲ್ಲಿ ವೇದಾಗಮಗಳ ಹೆಸರನ್ನು ಉಲ್ಲೇಖಿಸಿರುವರು ಮತ್ತು ಅದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ವಚನಗಳಲ್ಲಿ ವೇದಾಗಮಗಳ ಉಕ್ತಿಗಳನ್ನೇ ಉದ್ಧರಿಸಿರುವರು. ಇದಲ್ಲದೆ ಇನ್ನೂ ಕೆಲವು ವಚನಗಳಲ್ಲಿ ವೇದಾಗಮಗಳ ಹೆಸರಾಗಲಿ, ಉಕ್ತಿಗಳಾಗಲಿ ಬಳಕೆಯಾಗದಿದ್ದರೂ ಅಲ್ಲಿ ಪ್ರಸ್ತಾಪಿಸಿರುವ ವಿಚಾರಗಳು ವೇದಾಗಮಗಳಿಂದ ಪ್ರಭಾವಿತಗೊಂಡುವುಗಳಾಗಿವೆ. ಇದೆಲ್ಲ ಒಂದು ದೃಷ್ಟಿಯಿಂದ ಸರಿಯಾದುದು. ಆದರೆ ಅಪ್ಪಣ್ಣನವರ ಒಂದೆರಡು ವಚನಗಳು ವೇದಾಗಮಗಳನ್ನು ವಿರೋಧಿ ದೃಷ್ಟಿಕೋನದಿಂದ ನೋಡುತ್ತವೆ ಎಂದು ಅನಿಸುತ್ತವೆ. ಅಂಥ ವಚನಗಳನ್ನು ಇಲ್ಲಿ ಪರ್ಯಾಲೋಚಿಸಬೇಕು.

ವೇದವನೋದಿದವರೆಲ್ಲ ನಮ್ಮ ಶರಣರು ಹೋದ ದಾರಿಯನರಿಯದೆ
ನಾಹಂ ಎಂದು ಅಹಂಕರಿಸಿ, ಅನಿತ್ಯ ದೇಹಿಗಳಾಗಿ ಅನಾಮಿಕರಾಗಿ ಹೋದರು
..............................................................................
ಎಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣನ ಶರಣರ ಪರಿ ಬೇರೆ. (೧೦೨೫)

ಈ ವಚನದಲ್ಲಿ ವೇದ-ಶಾಸ್ತ್ರ-ಪುರಾಣ-ಆಗಮಗಳಿಗಿಂತಲೂ ಶರಣ ಪಥ ಭಿನ್ನ ಮತ್ತು ಶ್ರೇಷ್ಠವೆಂದು ಹೇಳಲಾಗಿದೆ ಎಂದೆನಿಸುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ವಚನದ ಹಿಂದೆ ಅವರದೆಯಾದ ಒಂದು ಸಂದರ್ಭ ಮತ್ತು ಉದ್ದೇಶಗಳಿರುತ್ತವೆ. ಇಲ್ಲಿ ಅಪ್ಪಣ್ಣನವರು ವೇದಾಗಮಗಳ ಪ್ರಮಾಣದ ಆಧಾರದ ಮೇಲೆ ಶರಣ ಪಥವನ್ನು ಹೀಯಾಳಿಸಿ ಮಾತನಾಡುವವರಿಗೆ ಉತ್ತರಿಸುವ ದೃಷ್ಟಿಯಿಂದ ಹೇಳಿರುವರೆ ಹೊರತು ವೇದಾಗಮಗಳನ್ನು ನಿಂದಿಸುವ ಇಲ್ಲವೇ ವಿರೋಧಿಸುವ ದೃಷ್ಟಿಯಿಂದಲ್ಲ.

ವೇದಾಗಮಗಳನ್ನು ನಿಂದಿಸುವುದೇ ಅವರ ಉದ್ದೇಶವಾಗಿದ್ದರೆ ಮೇಲೆ ಪ್ರಸ್ತಾಪಿಸಿದ ಅನೇಕ ವಚನಗಳಲ್ಲಿ ವೇದಾಗಮಗಳನ್ನು ಬಳಸಿಕೊಳ್ಳುತ್ತಿರಲಿಲ್ಲ. ತಮಗೆ ಆಗದ ಒಬ್ಬ ವೈರಿಯ ಮನೆಯ ಕಾಳುಗಳನ್ನು ಯಾರು ತಾನೆ ತೆಗೆದುಕೊಳ್ಳುವರು! ವೇದಾಗಮ ಶಾಸ್ತ್ರವು ಅವರಿಗೆ ವಿರೋಧಿಯಾಗಿದ್ದರೆ ಅಲ್ಲಿಯ ಉಕ್ತಿಗಳನ್ನು ಅವರೇಕೆ ಬಳಸಿಕೊಳ್ಳುತ್ತಿದ್ದರು! ಬಳಸಿಕೊಂಡಿರುವರೆಂದ ಮೇಲೆ ವೇದಾಗಮಗಳು ಅವರಿಗೆ ವಿರೋಧಿಯಲ್ಲವೆಂದು ಸ್ಪಷ್ಟವಾಗುತ್ತದೆ. ಇದಲ್ಲದೇ ಯಾವುದೇ ಒಂದು ವಚನದ ಹಿನ್ನೆಲೆ ಮುನ್ನಲೆಯನ್ನರಿಯದೆ ಅದು ಹೀಗೆ ಎಂದು ನಿರ್ಣಯಿಸುವುದು ಸಮಂಜಸವೆನಿಸುವುದಿಲ್ಲ.

ಹೊತ್ತಾರೆ ಎದ್ದು ಹೂವು ಪತ್ರೆ ಉದಕವ ತಂದು
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿಹೆನೆಂದು
ಸೊರಟೆಯ ಮೊರಟೆಯ ಹರಡಿ, ಕೈಕಾಲ ಮುಖವ ತೊಳೆದು
ವಿಭೂತಿಯ ಧರಿಸಿ, ರುದ್ರಾಕ್ಷಿಯ ತೊಟ್ಟು,
ತನು ಶುದ್ಧವ ಮಾಡಿ ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬಿರಿ
ಈ ಮೊದಲು ತಂದ ಪತ್ರೆ ಪುಷ್ಪವೆ ದೇವರೊ?
ಈ ಹರಡಿಕೊಂಡಿರುವ ಸೊರಟೆ ಮೊರಟೆಗಳೇ ದೇವರೋ?
(೧೦೭೦)
..............................................................

ಇತ್ಯಾದಿಯಾಗಿ ಬರೆದಿರುವ ವಚನವನ್ನು ನೋಡಿದಾಗ ಅದು ಲಿಂಗಾರ್ಚನ ವಿರೋಧಿಯಾದುದು ಎಂದೆನಿಸುತ್ತದೆ. ಇದನ್ನು ಅವಲೋಕಿಸಿ ಶರಣರು ಲಿಂಗಾರ್ಚನ ವಿರೋಧಿಗಳೆಂದು ತೀರ್ಮಾನಿಸಲು ಸಾಧ್ಯವೇ? ಇಲ್ಲಿ ದೇವರ ನೈಜಸ್ವರೂಪವನ್ನರಿಯದೆ ಕೇವಲ ಪೂಜೆಯಲ್ಲಿ ತೊಡಗಿಸಿಕೊಳ್ಳುವುದು ಉಚಿತವಲ್ಲ, ದೇವರ ವಾಸ್ತವಿಕ ಸ್ವರೂಪವನ್ನರಿತು ಪೂಜಿಸಬೇಕೆಂಬುದು ಶರಣರ ಈ ವಚನದ ಉದ್ದೇಶ. ಇದರಂತೆಯೇ ವೇದಾಗಮಗಳ ವಿರೋಧಿಸಿಯೆನಿಸುವ ಮೇಲಿನ ವಚನದ ಉದ್ದೇಶ. ಶರಣರ ದಾರಿಯನ್ನು ಹೀಯಾಳಿಸುವವರಿಗೆ ಉತ್ತರಿಸುವುದಾಗಿದೆಯೇ ವಿನಃ ನಿಂದಿಸುವ ಇಲ್ಲವೆ ಹೀಗಳೆವ ಉದ್ದೇಶವಲ್ಲ. ಈ ಉದ್ದೇಶವನ್ನರಿತು ವಚನಗಳ ತಾತ್ಪರ್ಯವನ್ನು ನಿರ್ಣಯಿಸಬೇಕು. ಶರಣತತ್ತ್ವ ಸಿದ್ಧಾಂತವನ್ನು ನಿರ್ಣಯಿಸಬೇಕು. ಹಿನ್ನೆಲೆ ಮುನ್ನಲೆಯನರಿಯದೆ ಬೇರೊಂದು ಉದ್ದೇಶದಿಂದ ಬರೆದ ವಚನವೊಂದನ್ನೆ ಸ್ಥೂಲ ದೃಷ್ಟಿಯಿಂದ ಮಾತ್ರ ಅವಲೋಕಿಸಿ, ತಾವು ತಿಳಿದ ಅರ್ಥವೇ ಶರಣರ ತತ್ತ್ವವೆಂದು ಸಾರುವುದು ಸಂಶೋಧಕ ದೃಷ್ಟಿಗೆ ಸರಿಬಾರದು. ಈ ಹಿನ್ನೆಲೆಯಲ್ಲಿ ಯಾವುದೋ ಒಂದು ವಚನದ ಆಧಾರದ ಮೇಲೆ ಹಾಗೊಂದು ವೇಳೆ ಶರಣರು ವೇದಾಗಮ ವಿರೋಧಿಗಳೆಂದು ಹೇಳಿದರೆ, ಮೇಲೆ ಬರೆದ ವಚನದ ಆಧಾರದ ಮೇಲೆ ಶರಣರು ಲಿಂಗಾರ್ಚನ ವಿರೋಧಿಗಳೆಂದು ಹೇಳುವ ಪ್ರಸಂಗವೂ ಬರಬಹುದೇನೊ! ಆಗ ನಮ್ಮಲ್ಲಿ ಅದಕ್ಕೆ ಉತ್ತರವಿಲ್ಲದಾಗಬಹುದು.

ಈ ಪ್ರಸಂಗದಲ್ಲಿ ಇನ್ನೊಂದು ಮಾತನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅಪ್ಪಣ್ಣನವರು ವೇದಾಗಮಗಳನ್ನು ಮತ್ತು ಅವುಗಳ ಉಕ್ತಿಗಳನ್ನು ತಮ್ಮ ವಚನಗಳಲ್ಲಿ ಹೇರಳವಾಗಿ

ಬಳಸಿಕೊಂಡಿರುವುದು ಸತ್ಯಸ್ಯ ಸತ್ಯ. ಆದರೆ ಅವುಗಳನ್ನು ತಮ್ಮ ಸ್ವಾನುಭವದ ಒರೆಗಲ್ಲಿನಿಂದ ಸಂಶೋಧಿಸಿ ಅವುಗಳನ್ನು ಒಪ್ಪಿಕೊಂಡಿರುವರು. "ಪುರಾಣಮಿತ್ಯೇವ ನ ಸಾಧು ಸರ್ವಂ ನ ಚಾಪಿ ಸರ್ವಂ ನವಮಿತ್ಯವದ್ಯಂ" (ಹಳೆಯದೆಂಬ ಒಂದೇ ಕಾರಣಕ್ಕೆ ಎಲ್ಲವೂ ಸ್ವೀಕಾರಾರ್ಹವಲ್ಲ ಮತ್ತು ಇತ್ತೀಚಿನವೆಂಬ ಕಾರಣಕ್ಕಾಗಿ ಎಲ್ಲವೂ ತಿರಸ್ಕಾರಾರ್ಹವಲ್ಲ) ಎಂಬುದು ಅವರ ದೃಷ್ಟಿ. ಒಂದೊಂದು ಪ್ರಸಂಗದಲ್ಲಿ ಪ್ರಾಚೀನ ವೇದಾಗಮಗಳ ಅಭಿಪ್ರಾಯಕ್ಕೆ ತಮ್ಮ ಅನುಭವದ ಮೂಲಕ ಒಂದು ವಿನೂತನ ಅರ್ಥವನ್ನು ಕಲ್ಪಿಸಿ ಅವುಗಳಿಗೆ ಹೊಸತನವನ್ನು ಕೊಡುವರು. ತನು-ಮನ-ಧನಗಳನ್ನು ಗುರು-ಲಿಂಗ-ಜಂಗಮರಿಗೆ ಸಮರ್ಪಿಸಿ ಭಕ್ತನಾಗಬೇಕೆಂಬುದು ಶಿವಾಗಮ ಸಿದ್ಧಾಂತ. ಈ ಸಿದ್ಧಾಂತವನ್ನು ಅಪ್ಪಣ್ಣನವರು ಒಂದು ವಿನೂತನ ದೃಷ್ಟಿಯಿಂದ ಅವಲೋಕಿಸುತ್ತಾರೆ.

ತನುವ ಕೊಟ್ಟು ಭಕ್ತರಾದೆವೆಂಬರು, ಮನವ ಕೊಟ್ಟು ಭಕ್ತರಾದೆವೆಂಬರು
ಧನವ ಕೊಟ್ಟು ಭಕ್ತರಾದೆವೆಂಬರು
ತನು ಮನ ಧನವನೆಂತು ಕೊಟ್ಟರಿ ಹೇಳಿರಣ್ಣಾ?
ನಿಮ್ಮ ಒಡವೆ ನಿಮ್ಮಲ್ಲಿ ಇದೆ
ಅದು ಹೇಗೆಂದರೆ ಬಲ್ಲವರು ನೀವು ಕೇಳಿ
ತನುವ ನೀವು ಕೊಟ್ಟರೆ ನೀವು ರೂಪಾಗಿ ಇರುವುದಕ್ಕೇನು?
ಮನವ ನೀವು ಕೊಟ್ಟರೆ ನಿಮಗೆ ನಡೆ ನುಡಿ ಚೈತನ್ಯನೇನು?
ಧನವ ನೀವು ಕೊಟ್ಟರೆ ಕ್ಷುತ್ತಿಂಗೆ ಭಕ್ಷ, ಸೀತಕ್ಕೆ ರಗಟೆ ಏನು?
ಅಂತಲ್ಲ ಕೇಳಿರಣ್ಣಾ
ತನುವ ಕೊಟ್ಟುದಾವುದೆಂದರೆ ಹುಸಿಮನವ ಕೊಟ್ಟುಗಾವುದೆಂದರೆ
ವ್ಯಾಕುಳವನೆಲ್ಲ ಅಳಿದು ನಿರಾಕುಳನಾಗಿ ನಿಂದ ಮನವೇ ಲಿಂಗವಾಯಿತ್ತು
ಧನವ ಕೊಟ್ಟಹೆನೆಂಬುದಾವುದೆಂದರೆ
ಇಂದಿಂಗೆ ನಾಳಿಂಗೆ ಎಂಬ ಸಂದೇಹದ ಭಾವಕ್ಕೆ ಭಯಕ್ಕೆ
ಭವವಳಿದುದೇ ಜಂಗಮವಾಯಿತ್ತು
ಇಂತಿದೀಗ ನಮ್ಮ ಮುನ್ನಿನ ಆದ್ಯರ ನಡೆ ನುಡಿ, ಮಾಟಕೂಟ
ಇದನರಿಯದೆ ಏನೊಂದು ಮಾಡಿದರೂ ನೀಡಿದರೂ ಕೊಟ್ಟರೂ ಕೊಂಡರೆಯೂ
ವಾಯಕ್ಕೆ ವಾಯ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಒಟ್ಟಿನಲ್ಲಿ ಹಡಪದ ಅಪ್ಪಣ್ಣನವರು ವೇದಾಗಮಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಮ್ಮ ವಚನಗಳಲ್ಲಿ ಬಳಸಿಕೊಳ್ಳುವ ಮೂಲಕ ತಾವು ವೇದಾಗಮ ವಿರೋಧಿಗಳಲ್ಲವೆಂಬುದನ್ನು ಸ್ಪಷ್ಟಪಡಿಸಿರುವರು. ಹಾಗೆಂದು ಎಲ್ಲವನ್ನು ಅಂಧಶ್ರದ್ಧೆಯಿಂದ ಒಪ್ಪಿಕೊಳ್ಳುವ ಜಾಯಮಾನವೂ ಅವರದಲ್ಲ. ತಮ್ಮ ಸ್ವಾನುಭವದ ಅಂತರ್ದೃಷ್ಟಿಯಿಂದ ಅವುಗಳನ್ನು ಸಂವೀಕ್ಷಿಸಿ, ಪರೀಕ್ಷಿಸಿ ನಂತರ ಅದನ್ನು ಅಂಗೀಕರಿಸುವ ಚಿಕಿತ್ಸಕ ಮನೋಭಾವ ಅವರದು. ಈ ಮನೋಭಾವವನ್ನು ಕಂಡು ಕೆಲವರು ಅವರನ್ನು ವೇದಾಗಮ ವಿರೋಧಿಗಳೆಂದು ಹೇಳಿದರೂ ಅದು ಸತ್ಯದಿಂದ ದೂರವಾದ ಮಾತು. ಇದಕ್ಕೆ ಅವರು ವೇದಾಗಮೋಕ್ತಿಗಳನ್ನು ಬಳಸಿಕೊಂಡು ಬರೆದಿರುವ ವಚನಗಳೇ ಜೀವಂತ ಸಾಕ್ಷಿ.

## ೪. ವೇದಾಗಮಗಳು ಮತ್ತು ಪ್ರಸಾದಿ ಭೋಗಣ್ಣ

-ಡಾ|| ಸಿ. ಶಿವಕುಮಾರಸ್ವಾಮಿ

ಶೈವಶಾಖೆಗಳಲ್ಲೊಂದಾದ ವೀರಶೈವವು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಅಥವಾ ಷಟ್‌ಸ್ಥಲ ಸಿದ್ಧಾಂತವೆಂದು ಪ್ರಸಿದ್ಧವಾಗಿದೆ. ವೇದ-ಉಪನಿಷತ್-ಪುರಾಣಗಳಲ್ಲಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಬೇರುಗಳಿದ್ದರೆ, ಶೈವಾಗಮೋತ್ತರ ಭಾಗದಲ್ಲಿ ಚಿಗುರಿ, ಕವಲೊಡೆದು ಕುಸುಮಿತವಾಗಿಧೆ. ಶ್ರೀಸಿದ್ಧಾಂತಶಿಖಾಮಣಿ, ಶ್ರೀಕರಭಾಷ್ಯ, ಬಸವಾದಿ ಶಿವಶರಣರ ವಚನಗಳಲ್ಲಿ ಪಕ್ವವಾದ ಫಲದಿಂದ ಸಮೃದ್ಧವಾಗಿದೆ. ಆ ಫಲಗಳನ್ನು ಸವಿಯುತ್ತಿರುವ ನಾವೆಲ್ಲರೂ ಧನ್ಯರೇ ಸರಿ.

ಬಸವಾದಿ ಶಿವಶರಣರ ವಚನಗಳಲ್ಲಿ ವೇದ, ಉಪನಿಷತ್, ಆಗಮ, ಪುರಾಣ ವಾಕ್ಯಗಳು ತುಂಬಿ ತುಳುಕುತ್ತಿರುವುದು ಸರ್ವವಿದಿತ. ಇದರಿಂದ ಶಿವಶರಣರಿಗೆ ವೇದಾಗಮೋಪನಿಷತ್ತುಗಳು ಮಾನ್ಯವಾಗಿದ್ದು, ಅವುಗಳ ಪ್ರಾಮಾಣ್ಯವನ್ನು ಅಂಗೀಕರಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಶಿವಶರಣರು ವೇದಾಗಮೋಪನಿಷತ್ತುಗಳ ವಾಕ್ಯಗಳನ್ನು ಉಲ್ಲೇಖ ಮಾಡುವ ಪೂರ್ವದಲ್ಲಿ ಅವುಗಳನ್ನು ತಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ, ಸ್ವೀಕಾರಾರ್ಹವಾದವುಗಳನ್ನು ಅತ್ಯಂತ ಗೌರವದಿಂದ ಉಲ್ಲೇಖಿಸಿದ್ದರೆ, ತಮಗೆ ಸರಿಕಾಣದ ವಿಷಯಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಶಿವಶರಣರ ವಚನಗಳಲ್ಲಿ ವೇದಾಗಮೋಪನಿಷತ್ತುಗಳ ಉಲ್ಲೇಖಗಳು ಎರಡು ಪ್ರಕಾರವಾಗಿರುವುದು ಕಂಡುಬರುತ್ತದೆ. ಮೊದಲನೆಯದಾಗಿ ವೇದಾಗಮೋಪನಿಷತ್ತುಗಳ ವಾಕ್ಯಗಳನ್ನು ಮೂಲರೂಪದಲ್ಲಿ (ಸಂಸ್ಕೃತದಲ್ಲಿ) ತಮ್ಮ ಅಭಿಪ್ರಾಯದ ಸಮರ್ಥನೆಗೆ ಬಳಸಿಕೊಂಡಿರುವುದು. ಎರಡನೆಯದಾಗಿ ವೇದಾಗಮಗಳ ಸಾರವನ್ನು ಕನ್ನಡ ಭಾಷೆಯಲ್ಲಿ ಹೇಳಿರುವುದು.

ಈ ಸಂಕ್ಷಿಪ್ತ ಪೀಠಿಕೆಯೊಂದಿಗೆ ವೇದಾಗಮೋಪನಿಷತ್ತುಗಳು ಶಿವಶರಣ ಪ್ರಸಾದಿ ಭೋಗಣ್ಣನ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಿವೆ ಎಂಬುದನ್ನು ಯಥಾಮತಿ ಪ್ರಸ್ತುತಪಡಿಸಲಾಗುವುದು.

ಪ್ರಸಾದಿ ಭೋಗಣ್ಣನ ಚರಿತ್ರೆಯ ವಿವರಗಳು ನಮಗೆ ದೊರಕುವುದಿಲ್ಲ. ಆತನ ೧೦೩ ವಚನಗಳು ಲಭ್ಯವಿದ್ದು, ಅವೆಲ್ಲವೂ "ಚೆನ್ನಬಸವಣ್ಣ ಪ್ರಿಯ ಭೋಗಮಲ್ಲಿಕಾರ್ಜುನ ಲಿಂಗ" ಎಂಬ ಅಂಕಿತದಲ್ಲಿವೆ. ವಚನಕಾರರು ತಮ್ಮನ್ನು ತಮ್ಮ ತಮ್ಮ ಕಾಯಕಗಳಿಂದಲೇ ಗುರುತಿಸಿಕೊಳ್ಳುತ್ತಿದ್ದುದರಿಂದ ಈ ವಚನಕಾರನ ಕಾಯಕ ಪ್ರಸಾದಿಗಳ ಸೇವೆ ಮಾಡುವುದೇ ಆಗಿರಬಹುದೆನಿಸುತ್ತದೆ. ಆದ್ದರಿಂದ ಈತನಿಗೆ "ಪ್ರಸಾದಿ ಭೋಗಣ್ಣ" ಎಂಬ ಹೆಸರು ಬಂದಿರಬೇಕೆನಿಸುತ್ತದೆ.

ಪ್ರಸಾದಿ ಭೋಗಣ್ಣನ ವಚನಗಳಲ್ಲಿ ಶೈವಾಗಮೋತ್ತರ ಭಾಗಗಳಲ್ಲಿ ನಿರೂಪಿತವಾಗಿರುವ ವೀರಶೈವಕ್ಕೆ ಸಂಬಂಧಿಸಿದ ಷಟ್‌ಸ್ಥಲ, ಗುರುಸ್ಥಲ, ಜಂಗಮಸ್ಥಲ, ಪಂಚಸೂತ್ರಘಟಿತ ಲಿಂಗದ ಲಕ್ಷಣ, ಶಿವದೀಕ್ಷೆ, ವೀರಶೈವದ ಲಕ್ಷಣ ಮುಂತಾದ ವಿಷಯಗಳು ನಿರೂಪಿತವಾಗಿವೆ. ಈ ವಿಷಯಗಳ ನಿರೂಪಣೆಯ ಸಂದರ್ಭದಲ್ಲಿ ಪ್ರಸಾದಿ ಭೋಗಣ್ಣನು ವೇದಾಗಮಾದಿಗಳಿಂದ ಎಷ್ಟರಮಟ್ಟಿಗೆ ಪ್ರಭಾವಿತನಾಗಿದ್ದಾನೆ ಎಂಬುದನ್ನು ಗುರುತಿಸುವ ಒಂದು ಪ್ರಯತ್ನ ಈ ಪ್ರಬಂಧದ ಉದ್ದೇಶ.

ಪ್ರಸಾದಿ ಭೋಗಣ್ಣನು ವಚನ ಸಂಖ್ಯೆ ೨೯ ಮತ್ತು ೮೭ರಲ್ಲಿ 'ಖಲ್ವಿದಂ ಬ್ರಹ್ಮ (ಛಾಂ. ೩.೧೪.೧) ಮತ್ತು "ಓಂ ಭರ್ಗೋ ದೇವಸ್ಯ ಧೀಮಹಿ' (ಋಗ್ವೇದ, ೩.೬೨.೧೦) ಎಂಬ ಎರಡು ವೇದೋಕ್ತಿಗಳನ್ನು ಯಥಾವತ್ತಾಗಿ ಪ್ರಯೋಗ ಮಾಡಿರುತ್ತಾನೆ. ಉಳಿದೆಡೆಗಳಲ್ಲಿ ವೇದಾಗಮಗಳ ಅಭಿಪ್ರಾಯಗಳನ್ನು ಕನ್ನಡದಲ್ಲಿ ಹೇಳಿರುವುದು ಆ ವಚನಕಾರನ ವೈಶಿಷ್ಟ್ಯವಾಗಿದೆ. "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ವೇದೋಕ್ತಿಯು ವಚನ ಸಂಖ್ಯೆ ೮೮ರಲ್ಲಿ "ಆ ವೇದ ಸರ್ವವು ಬ್ರಹ್ಮವೆಂದಲ್ಲಿ ವಸ್ತು ಎಲ್ಲಿ ಉಳಿಯಿತ್ತು?" ಎಂಬ ವಾಕ್ಯದಲ್ಲಿ ಕನ್ನಡದಲ್ಲಿದೆ. (ಈ ವಚನದಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವೇದೋಕ್ತಿಯನ್ನು ನಿರಾಕರಿಸುತ್ತಿದ್ದಾನೆ). ಹಾಗೆಯೇ ವಚನ ಸಂಖ್ಯೆ ೨,೬೯ ಮತ್ತು ೯೨ರಲ್ಲಿ 'ವಿಶ್ವತೋಮುಖವಾಗಿಹವು' ಮತ್ತು 'ವಿಶ್ವಮಯನಾಗಿ ವಿಶ್ವಚಕ್ಷುವಾಗಿ' ಎಂಬ ವಾಕ್ಯಗಳು ಋಗ್ವೇದದ "ವಿಶ್ವತಶ್ಚಕ್ಷುರತ ವಿಶ್ವತೋಮುಖೋ" (೧೦.೮೧.೩)ನೇ ಮಂತ್ರದ ಪ್ರಭಾವವಿದೆ. ಅದೇ ರೀತಿಯಾಗಿ ಋಗ್ವೇದ ಪುರುಷಸೂಕ್ತ ೧೦ನೇ ಮಂಡಲ ೯೦ನೇ ಸೂಕ್ತದ ಮಂತ್ರ

> ಬ್ರಾಹ್ಮಣೋऽಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ।
> ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋऽಜಾಯತ॥[೧]

ಎಂಬ ಮಂತ್ರದ ಪ್ರಭಾವವು ಪ್ರಸಾದಿ ಭೋಗಣ್ಣನ ಈ ವಚನದಲ್ಲಿ ಕನ್ನಡ ಭಾಷೆಯಲ್ಲಿದೆಯಷ್ಟೆ. ವಚನ ಈ ರೀತಿಯಾಗಿದೆ:

---

೧. ಋಗ್ವೇದ, (೧೦.೯೦.೧೨)

ಸದಾಶಿವ ವಸ್ತುವ ಭೇದವಂಶದಲ್ಲಿ ಆದ ಮಹಾ ಅಂಧಕಾರದಲ್ಲಿ
ಬಲಭದ್ರು ವೀರಭದ್ರನ ಸಂಬಂಧದಿಂದ ಆದ
ಉಭಯ ಯುಗಳದಿಂದ ಆದ ಜಾತಿ ಉದ್ಭವ ಲಕ್ಷಣ
ಜಿಹ್ವೆಯಲ್ಲಿ ವೇದ, ಭುಜದಲ್ಲಿ ಶಸ್ತ್ರ ಉದರದಲ್ಲಿ ವ್ಯವಹಾರ
ಜಂಘೆಯಲ್ಲಿ ಕೃಷಿ
ಇಂತೀ ಶೂದ್ರ ವೈಶ್ಯ ಕ್ಷತ್ರಿಯ ದ್ವಿಜ
..................................................................[೧(ಎ)]

ವೀರಶೈವದ ಲಕ್ಷಣ: ಪ್ರಸಾದಿ ಭೋಗಣ್ಣನ ಎರಡು ವಚನಗಳಲ್ಲಿ 'ವೀರಶೈವ' ಎಂಬ ಪದ ಪ್ರಯೋಗ ಕಂಡುಬರುತ್ತದೆ (ವ.ಸಂ. ೨೯, ೯೨). ಮತ್ತೊಂದು ವಚನದಲ್ಲಿ ವೀರಶೈವದ ಲಕ್ಷಣವು ಈ ರೀತಿಯಾಗಿದೆ:

ಕೈವಲ್ಯ ವೈಕುಂಠ ಮೋಕ್ಷಗಾಮಿನಿಗಳಪ್ಪ ತೆರನ ತಿಳಿವುದಕ್ಕೆ
ಶೈವ ವೈಷ್ಣವ ಅಧ್ಯಾತ್ಮ ತ್ರಿವಿಧ ಕರ್ಮಂಗಳಲ್ಲಿ
ಷಡ್ದರ್ಶನ ಸಂಪದವಾಯಿತ್ತು
ಈ ಭೇದ ವಿಭೇದವಾದಲ್ಲಿ ಶಕ್ತಿರೂಪು ವೈಷ್ಣವ
ಅಸ್ತಿಭೇದ ಶಿವಾಧಿಕ್ಯ ಉಭಯ ಚೇತನ ವಸ್ತುವಾಗಿ
ಘಟಬುಡಂಗಳಲ್ಲಿ ಚರಸ್ಥಾವರಂಗಳಲ್ಲಿ ಖಲ್ವಿದಂ ಬ್ರಹ್ಮ ವಸ್ತುಮೂರ್ತಿ
ಅಳಿವು ಉಳುಮೆಗೆ ತೆರಪಿಲ್ಲದ ಸಂಗ ವೀರಶೈವ
ವಿ ಎಂಬ ಯುಕ್ತಿ, ರ ಎಂಬ ರಜಸ್ಸು...... ಇತ್ಯಾದಿ[೧(ಬಿ)]

ಈ ವಚನದಲ್ಲಿ ಪ್ರಸಾದಿ ಭೋಗಣ್ಣನು 'ವೀರಶೈವ' ಶಬ್ದದಲ್ಲಿನ 'ವೀರ' ಶಬ್ದಕ್ಕೆ 'ವಿ' ಎಂದರೆ ಯುಕ್ತಿ, 'ರ' ಎಂದರೆ ರಜಸ್ಸು ಎಂದು ವಿವರಣೆಯನ್ನು ಕೊಟ್ಟಿರುತ್ತಾನೆ.

ವೀರಶೈವದ ಲಕ್ಷಣವು ಶೈವಾಗಮೋತ್ತರ ಭಾಗಗಳಲ್ಲಿ ನಿರೂಪಿತವಾಗಿರುವುದು ಸರ್ವವಿದಿತ. (ಚಂದ್ರಜ್ಞಾನಾಗಮ, ಕ್ರಿ.ಪಾ., ೧೦.೩೩-೩೪; ಸೂಕ್ಷ್ಮಾಗಮ, ಕ್ರಿ.ಪಾ, ೭.೨೯; ವಾತುಲಶುದ್ಧಾಗ್ಗಮ, ೧೦.೨೯-೩೨; ಪಾರಮೇಶ್ವರಾಗಮ, ೭.೩೯; ಶ್ರೀಸಿದ್ಧಾಂತಶಿಖಾಮಣಿ, ೫.೧೫-೧೭; ಕ್ರಿಯಾಸಾರ, ಭಾಗ-೧, ಪು. ೧೧; ವೀರಶೈವ ಧರ್ಮ ಶಿರೋಮಣಿ, ೧.೧೬). ಶೈವಾಗಮೋತ್ತರ ಭಾಗಗಳಲ್ಲಿ ವೀರಶೈವದ ಲಕ್ಷಣವನ್ನು ಕೊಡುವ ಪರಂಪರೆ ರೂಢಿಯಲ್ಲಿದ್ದುದು ಆ ಆಗಮಗಳಲ್ಲಿ ನಿರೂಪಿತವಾಗಿರುವ ಲಕ್ಷಣವನ್ನು ಗಮನಿಸಿದಾಗ ಸ್ಪಷ್ಟವಾಗುವ ಸಂಗತಿ. ಪ್ರಸಾದಿ ಭೋಗಣ್ಣನೂ ಸಹ ಶೈವಾಗಮಗಳ ಪರಂಪರೆಯನ್ನು ಅನುಲಕ್ಷಿಸಿ ವೀರಶೈವದ ಲಕ್ಷಣವನ್ನು ನೀಡಿರುವಂತೆ ಕಂಡುಬರುತ್ತದೆ.

---

೧(ಎ). ಪ್ರಸಾದಿಭೋಗಣ್ಣನ ವಚನ ಸಂಖ್ಯೆ, ೯೬ (ಸಮಗ್ರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧)

೧(ಬಿ). ಪ್ರಸಾದಿ ಭೋಗಣ್ಣನ ವಚನ ಸಂಖ್ಯೆ, ೨೯.

ಶಿವದೀಕ್ಷೆ: ವೀರಶೈವ ಧರ್ಮದ ವೈಶಿಷ್ಟ್ಯ ಶಿವದೀಕ್ಷೆಯಲ್ಲಡಗಿದೆ. ಶೈವಾಗಮೋತ್ತರ ಭಾಗಗಳಲ್ಲಿ ದೀಕ್ಷಾ ವಿಷಯವು ನಿರೂಪಿತವಾಗಿದೆ. ಶಿವಜ್ಞಾನಕ್ಕೆ ಶಿವದೀಕ್ಷೆಯೇ ಸೋಪಾನ. ಅಂಗನ ಜೀವಭಾವವಳಿದು ಶಿವಭಾವ ಸಮಾವೇಶಗೊಳ್ಳಲು ಶಿವದೀಕ್ಷೆ ಅತ್ಯಗತ್ಯ. ಆ ಕಾರಣ ಸದ್ಗುರುವು ಶಿಷ್ಯನಿಗೆ ಶಿವದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಸೂಕ್ಷ್ಮಾಗಮವು ದೀಕ್ಷಾ ಲಕ್ಷಣವನ್ನು ಹೀಗೆ ನಿರೂಪಿಸಿದೆ:

ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಮ್।
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ॥[1]

"ಯಾವ ಕ್ರಿಯೆಯಿಂದ ಶಿಷ್ಯನಿಗೆ ಲಿಂಗಸಂಬಂಧವಾಗಿ ಅವನ ಮಲತ್ರಯಗಳು ನಾಶವಾಗುತ್ತವೆಯೋ ಅದನ್ನು ದೀಕ್ಷಾ ಎಂದು ಕರೆಯಲಾಗಿದೆ."

ಈ ದೀಕ್ಷೆಯು ವೇಧಾದೀಕ್ಷೆ, ಮಂತ್ರದೀಕ್ಷೆ ಮತ್ತು ಕ್ರಿಯಾದೀಕ್ಷೆ ಎಂದು ಮೂರು ವಿಧವಾಗಿದೆ. ತ್ರಿವಿಧ ದೀಕ್ಷೆಗಳ ಸ್ವರೂಪವು ಕಾರಣಾಗಮದಲ್ಲಿ ಈ ರೀತಿಯಾಗಿದೆ:

ಹಸ್ತಮಸ್ತಕಸಂಯೋಗಾದ್ ದೃಷ್ಟೇರ್ವೇಧೇತಿ ಕೀರ್ತ್ಯತೇ।
ಗುರುಣೋದೀರಿತಾ ಕರ್ಣೇ ಸಾ ಹಿ ಮಂತ್ರಾತ್ಮಿಕಾ ಭವೇತ್॥
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್॥[2]

"ಕಾರುಣ್ಯನಿಧಿಯಾದ ಶ್ರೀಗುರುವು ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ ಆತನ ಮಸ್ತಕದ ಮೇಲೆ ಹಸ್ತವನ್ನಿಡುವುದು ವೇಧಾದೀಕ್ಷೆ. ಶ್ರೀ ಗುರುವು ಶಿಷ್ಯನ ಕಿವಿಯಲ್ಲಿ ಪಂಚಾಕ್ಷರೀ ಮಂತ್ರವನ್ನುಪದೇಶಿಸಿ, ಆತನ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾರ್ಪಡಿಸುವುದೇ ಮಂತ್ರದೀಕ್ಷೆ. ಷಡಧ್ವಶುದ್ಧಿಯಿಂದ ಸಂಸ್ಕಾರಗೊಂಡಿರುವ ಇಷ್ಟಲಿಂಗವನ್ನು ಶಿಷ್ಯನ ಹಸ್ತದಲ್ಲಿ ಸ್ಥಾಪಿಸುವುದು ಕ್ರಿಯಾದೀಕ್ಷೆ."

ಈ ತ್ರಿವಿಧ ದೀಕ್ಷಾ ಸಂಸ್ಕಾರದ ವಿಷಯವನ್ನು ಪ್ರಸಾದಿ ಭೋಗಣ್ಣ ಕೆಳಗಿನ ವಚನಗಳಲ್ಲಿ ನಿರೂಪಿಸಿದ್ದಾನೆ. ಈ ವಚನಗಳ ಮೇಲೆ ಪೂರ್ವೋಕ್ತ ಶೈವಾಗಮಗಳ ಪ್ರಭಾವವಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ:

ಆಚಾರ ಸದಾಚಾರ ವಿಚಾರ ಅವಿಚಾರ ಚತುರ್ವಿಧಕ್ಕೆ ಕರ್ತೃವಹಲ್ಲಿ
ಭೇದಮಾರ್ಗಂಗಳ ತಿಳಿದು ಪಂಚಸೂತ್ರ ಲಕ್ಷಣಂಗಳನರಿತು
ರವಿಶಶಿ ಉಭಯ ಸಮಾನಂಗಳ ಕಂಡು
ವರ್ತುಳ ಯೋನಿಪೀಠದಲ್ಲಿ ಗೋಳಕಾಕಾರವ ಸಂಬಂಧಿಸುವಲ್ಲಿ
ಅಷ್ಟಗಣನೇಮಂಗಳ ದೃಷ್ಟವ ಕಂಡು

---

೧. ಸೂಕ್ಷ್ಮಾಗಮ, ಕ್ರಿ.ಪಾ, ೮.೧೧

೨. ಕಾರಣಾಗಮ, ೧.೧೩

ರವಿಶಶಿ ಪವನ ಪಾವಕ ಆತ್ಮ ಮುಂತಾದ
ಪವಿತ್ರಂಗಳಲ್ಲಿ ಮಾಂಸಪಿಂಡತ್ರಯವ ಕಳೆದು
ಮಂತ್ರಜ್ಞಾನದಲ್ಲಿ ಸರ್ವೇಂದ್ರಿಯವ ಕಳೆದು ವೇದನೆ ವೇಧಿಸಿ
ಸರ್ವಾಂಗವ ಭೇದಿಸಿ, ಸ್ವಸ್ಥಾನದಲ್ಲಿ ಘಟಕ್ಕೆ ಪ್ರತಿಷ್ಠೆ
ಆತ್ಮಂಗೆ ಸ್ವಯಂಭುವೆಂಬುದು
ಶ್ರುತದಲ್ಲಿ ಹೇಳಿ, ದೃಷ್ಟದಲ್ಲಿ ತೋರಿ"
..............................................................

ಈ ವಚನದಲ್ಲಿ ನಿರೂಪಿತವಾಗಿರುವ "ಮಾಂಸಪಿಂಡತ್ರಯವ ಕಲೆದು ಮಂತ್ರಜ್ಞಾನದಲ್ಲಿ ಸರ್ವೇಂದ್ರಿಯವ ಕಳೆದು" ಎಂಬ ವಾಕ್ಯದಲ್ಲಿ ಬೋಧಿಸಲಾಗಿರುವ ಸಾರವಿಷ್ಟು "ಶ್ರೀಗುರುವು ದೀಕ್ಷಾಕಾಲದಲ್ಲಿ ತ್ರಿವಿಧ ದೀಕ್ಷಾಸಂಸ್ಕಾರದಿಂದ ಶಿಷ್ಯನ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರದಲ್ಲಿನ ಮಾಂಸಪಿಂಡತ್ವವನ್ನು ಹೋಗಲಾಡಿಸುತ್ತಾನೆ. ಶ್ರೀಗುರುವು ಉಪದೇಶಿಸಿದ ಪಂಚಾಕ್ಷರೀಮಂತ್ರೋಪದೇಶದ ಜ್ಞಾನದಿಂದ ಶಿಷ್ಯನಿಗೆ ಪಂಚೇಂದ್ರಿಯಗಳ ವೇದನೆ ನಿವಾರಣೆಯಾಗುತ್ತದೆ. ಅಂತಹ ಸಂದರ್ಭದಲ್ಲಿ ಪಂಚಸೂತ್ರ ಘಟಿತವಾದ ಇಷ್ಟಲಿಂಗವನ್ನು ಶಿಷ್ಯನ ಕರಕಮಲದಲ್ಲಿ ಸ್ಥಾಪಿಸಿ, ಅದನ್ನು ಸ್ವಯಂಭುವೆಂದು ಹೇಳಿ, ಆ ಇಷ್ಟಲಿಂಗವನ್ನು ಶಿಷ್ಯನಿಗೆ ತೋರಿಸಬೇಕು.

ಪ್ರಸಾದಿ ಭೋಗಣ್ಣನ ಈ ವಚನದಲ್ಲಿನ 'ಶ್ರುತದಲ್ಲಿ ಹೇಳಿ, ದೃಷ್ಟದಲ್ಲಿ ತೋರಿ' ಎಂಬ ಸಾಲು ಶೈವಾಗಮೋಕ್ತ ಕ್ರಿಯಾದೀಕ್ಷಾಂತರ್ಗತ ಆಯತ್ತ ಮತ್ತು ಸ್ವಾಯತ್ತ ಎಂಬ ದೀಕ್ಷಾ ಪ್ರಕಾರವಾಗಿವೆ. ಈ ಪ್ರಕಾರಗಳು ಕಾರಣಾಗಮದಲ್ಲಿ ಹೀಗೆ ನಿರೂಪಿತವಾಗಿವೆ.

ಇಷ್ಟಲಿಂಗಂ ಸಮಾದಾಯ ವಾಮಹಸ್ತೇऽಭಿಪೂಜ್ಯ ಚ।
ಸೌಮ್ಯೇತಲ್ಲಿಂಗಮೀಕ್ಷಸ್ವೇತೀಷ್ಟಲಿಂಗಂ ಪ್ರದರ್ಶಯೇತ್॥"

ಶೈವಾಗಮೋಕ್ತ ತ್ರಿವಿಧ ದೀಕ್ಷಾ ಸಂಸ್ಕಾರದ ವಿಷಯವು ಪ್ರಸಾದಿ ಭೋಗಣ್ಣನ ಮತ್ತೊಂದು ವಚನದಲ್ಲಿ ವಿಸ್ತೃತವಾಗಿ ಪುನರುಕ್ತವಾಗಿರುವುದನ್ನು ಈಗ ಗಮನಿಸೋಣ:

ಗೃಹಸ್ಥ ಧರ್ಮದ ಗುರುವಿನ ದೀಕ್ಷಾಚಾರ್ಯನ ಭೇದ
ಪಿಂಡೋತ್ಪತ್ಯ ಜಾತಿ ಗೋತ್ರ ಛಾಂದಸ ಭೇದ
ಸಲಕ್ಷಣ ನೀತಿ ಭಕ್ತಿ ಸಂಪೂರ್ಣ ಕಳೆಯನರಿತು
ಕುಚಿತ್ತ ಕುಹಕ ಕ್ಷುದ್ರ ಪಿಸುಣತ್ವ ಅಸಿಘಾತಕ ಪಾರದ್ವಾರ
ಇಂತಿವು ಮುಂತಾದವೆಲ್ಲವ ಸಂತೈಸಿ ಸೋದಿಸಿ
ಹದಿನೆಂಟನೆಯ ದೋಷಂಗಳ ವಿಭಾಗಿಸಿ ತೋರಿ
ಹದಿನೆಂಟು ಸೂತ್ರವಂ ಪ್ರಕರಣಂ ಮಾಡಿ

---

೪. ಪ್ರಸಾದಿ ಭೋಗಣ್ಣನ ವ.ಸಂ. ೯ (ಸಮಗ್ರ ವಚನ ಸಂಪುಟ, ೮)

೫. ಕಾರಣಾಗಮ, ಕ್ರಿ.ಪಾ, ೧.೭೯

ಜಾನು ಜಂಘೆ ಕಟಿ ನಾಭಿ ಹೃದಯಮಧ್ಯ
ಕಂಠ ಕರ್ಣ ಜಿಹ್ವೆ ನಾಸಿಕ ನಯನ
ಕಪಾಲ ಕರ ಮುಂತಾಗಿ ಪೂರ್ವಾಶ್ರಯಂಗಳಂ ಬಿಡಿಸ
ಮಾಂಸಪಿಂಡವರ ಕಳೆದು ಮಂತ್ರಪಿಂಡವ ಮಾಡುವಲ್ಲಿ
ಸ್ಥೂಲದ ವ್ಯವಹರಣೆ ಸೂಕ್ಷ್ಮದ ಪ್ರಕೃತಿ
ಕಾರಣದ ಪ್ರಮೇಯವಂ ಕಾಣಿಸಿಕೊಂಡು
ರಸ ಗಂಧ ರೂಪು ಶಬ್ದ ಸ್ಪರ್ಶ
ಪಂಚೇಂದ್ರಿಯಂಗಳಲ್ಲಿ ಸಂಶಯಮಂ ಪರಿಹರಿಸಿ
ಮನ ವಚನ ಕಾಯ ತ್ರಿಕರಣವಂ ಶುದ್ಧಾತ್ಮವಂ ಮಾಡಿ
ಈಶ್ವರಧ್ಯಾನದಿಂದ ಕರಕಮಲವಂ
ಕಪಾಲದ ಮೇಲೆ ಮೂರ್ತಿಗೊಳಿಸಿ
ಧ್ಯಾನಪ್ರಯೋಗವಂ ಕಲ್ಪಿಸಿ ಜ್ಞಾನಪ್ರಯೋಗಮಂ ವೇಧಿಸಿ
ಮೇಲೆ ಪ್ರಾಣಲಿಂಗ ಪ್ರತಿಷ್ಠೆಯ ಮಾಡುವಲ್ಲಿ
ಅಂಗಕ್ಕೆ ಆಚಾರ ಆತ್ಮಂಗೆ ಅರಿವು ಈ ಗುಣಸಂಭವಿಸಿದ ಮೇಲೆ
ಹಸ್ತಮಸ್ತಕದ ಸಂಯೋಗವ
ಇಷ್ಟತನುವಿಂಗೆ ಇಷ್ಟಲಿಂಗವ ಸಂಬಂಧಿಸಬೇಕು
ಇದು ಚತುರ್ವಿಧ ಮತದ ಆಚಾರ್ಯಸಂಗ, ಗುರುಸ್ಥಲದ ಭಿತ್ತಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ
ಗುರುದೀಕ್ಷಾಸೂತ್ರ[೬]

ಈ ವಚನದಲ್ಲಿನ ಮೊದಲನೆಯ ಸಾಲು "ಗೃಹಸ್ಥ ಧರ್ಮದ ಗುರುವಿನ ದೀಕ್ಷಾಚಾರ್ಯನ ಭೇದ" ಎಂಬ ಮಾತು ಚಂದ್ರಜ್ಞಾನಾಗಮದಲ್ಲಿನ "ಗುರುರ್ಗೃಹಸ್ಥ ಏವ ಸ್ಯಾನ್ನ ಕದಾಚಿದ್ಯತಿರ್ಗುರುಃ"[೭] ಎಂಬ ವಾಕ್ಯದ ಕನ್ನಡಾನುವಾದವಾಗಿದೆ. ಅಲ್ಲದೆ ಈ ಸಮಗ್ರ ವಚನವು ಕಾರಣಾಗಮ, ಕ್ರಿಯಾಪಾದ ಪಟಲ ೧; ಚಂದ್ರಜ್ಞಾನಾಗಮ, ಕ್ರಿಯಾಪಾದ, ಪಟಲ ೯ ಮತ್ತು ಸೂಕ್ಷ್ಮಾಗಮ, ಕ್ರಿಯಾಪಾದ, ಪಟಲ ೫ ರಿಂದ ಪ್ರಭಾವಿತವಾಗಿದೆ.

ಪಂಚಸೂತ್ರ ಘಟಿತಲಿಂಗ: ದೀಕ್ಷಾಕಾಲದಲ್ಲಿ ಶ್ರೀಗುರುವು ಶಿಷ್ಯನಿಗೆ ಅನುಗ್ರಹ ಮಾಡುವ ಇಷ್ಟಲಿಂಗವು ಪಂಚಸೂತ್ರಘಟಿತವಾಗಿರಬೇಕೆಂದು ಶೈವಾಗಮಗಳು ಸಾರಿವೆ. ಪಂಚಸೂತ್ರ ಘಟಿತಲಿಂಗದ ಲಕ್ಷಣವು ಮಕುಟಾಗಮದಲ್ಲಿ ಈ ರೀತಿಯಾಗಿದೆ:

---

೬. ಪ್ರಸಾದಿ ಭೋಗಣ್ಣನ ವ.ಸಂಖ್ಯೆ, ೩೪.

೭. ಚಂದ್ರಜ್ಞಾನಾಗಮ, ಕ್ರಿ.ಪಾ, ೨.೫೩

ಲಿಂಗವೃತ್ತಸಮಂ ಪೀಠಂ ದೀರ್ಘಂ ವಿಸ್ತಾರಮುನ್ನತಮ್।
ತದರ್ಧಂ ಗೋಮುಖಂ ಚೈವ ಪಂಚಸೂತ್ರಂ ಪ್ರಕೀರ್ತಿತಮ್॥[೮]

"ಲಿಂಗದ ಪೀಠ, ಉದ್ದ, ಅಗಲ ಮತ್ತು ಎತ್ತರ ಲಿಂಗದ ಸುತ್ತಳತೆಗೆ ಸಮನಾಗಿರಬೇಕು. ಮತ್ತು ಗೋಮುಖವು ಲಿಂಗದ ಸುತ್ತಳತೆಯ ಅರ್ಧದಷ್ಟಿರಬೇಕು. ಈ ಐದು ಲಕ್ಷಣಗಳಿಂದ ಕೂಡಿರುವ ಲಿಂಗವನ್ನು 'ಪಂಚಸೂತ್ರ ಲಿಂಗ'ವೆಂದು ಕರೆಯಲಾಗಿದೆ.

ಪ್ರಸಾದಿ ಭೋಗಣ್ಣನು ನಾಲ್ಕು ವಚನಗಳಲ್ಲಿ ಪಂಚಸೂತ್ರ ಲಿಂಗದ ವಿಷಯವನ್ನು ಪ್ರಸ್ತಾಪಿಸಿದ್ದಾನೆ:

ಆಚಾರ ಸದಾಚಾರ ವಿಚಾರ ಅವಿಚಾರ ಚತುರ್ವಿಧಕ್ಕೆ ಕರ್ತೃವಹಲ್ಲಿ
ಭೇದಮಾರ್ಗಂಗಳ ತಿಳಿದು ಪಂಚಸೂತ್ರಲಕ್ಷಣಂಗಳನರಿತು
ರವಿಶಶಿ ಉಭಯ ಸಮಾನಂಗಳ ಕಂಡು
ವರ್ತುಳ ಯೋನಿಪೀಠದಲ್ಲಿ ಗೋಳಕಾಕಾರವ ಸಂಬಂಧಿಸುವಲ್ಲಿ[೯]
..................................................................

ಈ ವಚನದಲ್ಲಿ ಪಂಚಸೂತ್ರಲಿಂಗದ ಪ್ರಸ್ತಾಪವಿದೆ. ಮತ್ತೊಂದು ವಚನದಲ್ಲಿ ಅದೇ ವಚನಕಾರನು ಪಂಚಸೂತ್ರಲಿಂಗದ ಪ್ರಸ್ತಾಪವನ್ನು ದೀರ್ಘವಾಗಿ ಮಾಡಿರುತ್ತಾನೆ. ಆ ವಚನ ಈ ರೀತಿಯಾಗಿದೆ:

ತ್ರಿವಿಧಲಿಂಗಕ್ಕೆ ಸೂತ್ರಭೇದ
ಸ್ಥಾವರಲಿಂಗ ಬಾಣಲಿಂಗ ಇಷ್ಟಲಿಂಗಕ್ಕೆ,
ಪಂಚಸೂತ್ರದ ತ್ರಿವಿಧಲಿಂಗಕ್ಕೆ ಲಕ್ಷಣಭೇದ
ಚಕ್ರದಂಡಕ್ಕೆ ಖಂಡಿಕಾದಂಡಕ್ಕೆ ಶಕ್ತಿಪೀಠ ಗೋಮುಖಕ್ಕೆ
ಪಂಚಾಗುಲದಲ್ಲಿ ಪ್ರಥಮಾಂಗುಲದ ರೇಖೆ ಮಧ್ಯದಲ್ಲಿ ಹೇಮ
ಪ್ರಥಮ ಅಂಗುಲ ಗತಿ ನಾಲ್ಕರಲ್ಲಿ ಏಕಾದಶ ಪ್ರಕಾರ ಪ್ರಯೋಗದಲ್ಲಿ
ಗುಣಿತದ ಸೂತ್ರ ಲೆಕ್ಕ ಪ್ರಯೋಗಿಸಿದರೆ ಚಕ್ರದಂಡಭೇದ
ಆ ಅರೆಪ್ರಯೋಗ ಸೂತ್ರ ಖಂಡಿಕಾದಂಡ
ಆ ಉಭಯಭೇದ ಸೂತ್ರ ಸಂಬಂಧ ಗೋಮುಖ
ಸೂತ್ರಾವಟ್ಟ ಪರಿವರ್ತನ ಪ್ರಯೋಗಸಂಬಂಧ
ವಿಸ್ತೀರ್ಣಕ್ಕೆ ದಿಗ್ವಳಯಕ್ಕೆ ಸರಳ ರೇಖೆ
ಶುದ್ಧಪೀಠಿಕಾವಳಯಕ್ಕೆ ಮೇಲೆ ಲಿಂಗ ಪ್ರಯೋಗ ಚಕ್ರ
ಖಂಡಿಕಾಶಕ್ತಿಪೀಠಕ್ಕೆ, ಲಿಂಗಪ್ರಮಾಣ ಲಕ್ಷಣಭೇದ

---

೮. ಮಕುಟಾಗಮ, ಕ್ರಿ.ಪಾ, ೪.೪೭

೯. ಪ್ರಸಾದಿ ಭೋಗಣ್ಣನ ವಚನ ಸಂಖ್ಯೆ. ೯

ಕುಬ್ಜ ದೀರ್ಘ ಹರಿವರಿಯಿಲ್ಲದೆ ಪ್ರಮಾಣ ಪಂಚಸೂತ್ರವಾಗಿ
ರವಿಶಶಿ ಪವನ ಪಾವಕ ಪವಿತ್ರಯೋಗಿ ರೇಖೆ
ಮುಂತಾದ ಲಕ್ಷಣಯುಕ್ತಿಯಲ್ಲಿ ಪ್ರತಿಷ್ಠೆ ಶೈವಲಿಂಗಭೇದ
ಆ ಪ್ರಮಾಣುವಿನಲ್ಲಿ ಸ್ಥೂಲಕ್ಕೆ ಸ್ಥೂಲ ಸೂಕ್ಷ್ಮಕ್ಕೆ ಸೂಕ್ಷ್ಮ
ಈ ಸೂತ್ರದಲ್ಲಿ ಬಾಣಲಿಂಗ ಇಷ್ಟಲಿಂಗದ ಲಕ್ಷಣಯುಕ್ತ
ಇಂತೀ ಭೇದ ಉತ್ತಮ ಕನಿಷ್ಠ ಮಧ್ಯಮವೆಂದು
ಸಂಕಲ್ಪಕ್ಕೊಳಗಹ ವೇದಾಂತ ಪ್ರಥಮ ಪ್ರತಿಷ್ಠೆ
ಆಚಾರ್ಯನ ಕರ್ಮಕ್ರೀ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವುದಕ್ಕೆ
ಆಚಾರ್ಯನಂಗ.[೧೦]

ಈ ವಚನದಲ್ಲಿ ಪ್ರಸಾದಿ ಭೋಗಣ್ಣನು ಕೇವಲ ಇಷ್ಟಲಿಂಗವು ಪಂಚಸೂತ್ರ ಘಟಿತವಾಗಿರಬೇಕೆಂದು ಹೇಳದೆ ಸ್ಥಾವರಲಿಂಗವೂ ಸಹ ಪಂಚಸೂತ್ರಾತ್ಮಕವಾಗಿರ ಬೇಕೆಂದು ಹೇಳುತ್ತಾನೆ. ಈ ವಚನದಲ್ಲಿ ಆರಂಭದಿಂದ "ಖಂಡಿಕಾಶಕ್ತಿ ಪೀಠಕ್ಕೆ ಲಿಂಗಪ್ರಮಾಣ ಲಕ್ಷಣಭೇದ" ಎನ್ನುವವರೆಗೆ ಪಂಚಸೂತ್ರಲಿಂಗದ ಲಕ್ಷಣವನ್ನು ಹೇಳುತ್ತಾನೆ. ಇಲ್ಲಿ ನಿರೂಪಿತವಾಗಿರುವ ಲಕ್ಷಣವು ಪೂರ್ವೋಕ್ತ ಮಕುಟಾಗಮದ ಲಕ್ಷಣದಿಂದ ಹಾಗೂ ನಮಗೆ ಲಭ್ಯವಿರುವ ಶೈವಾಗಮಗಳಿಂದ ಪ್ರಭಾವಿತವಾಗಿರುವಂತೆ ಮೇಲ್ನೋಟಕ್ಕೆ ಕಾಣುತ್ತದೆ.

ಇದೇ ವಚನದ "ಕುಬ್ಜ ದೀರ್ಘ ಹರಿವರಿಯಿಲ್ಲದೆ ಪ್ರಮಾಣ ಪಂಚಸೂತ್ರವಾಗಿ" ಎಂಬ ಸಾಲಿನ ಪ್ರಕಾರ ಲಿಂಗದ ಪ್ರಮಾಣವು ಹೆಚ್ಚು ಕಡಿಮೆಯಿಲ್ಲದ ಪಂಚಸೂತ್ರ ವಾಗಿರಬೇಕೆಂದು ಪ್ರಸಾದಿ ಭೋಗಣ್ಣ ಹೇಳಿರುವ ಮಾತಿನಲ್ಲಿ ಮಕುಟಾಗಮದ ಈ ಶ್ಲೋಕದ ಪ್ರಭಾವವು ಸ್ಪಷ್ಟವಾಗಿದೆ:

ಶಿವಾಧಿಕ್ಯೇ ಭವೇನ್ ಮೃತ್ಯುಃ ಶಕ್ತ್ಯಾಧಿಕ್ಯೇ ಧನಕ್ಷಯಃ।
ಶಿವಶಕ್ತಿಸಮಂ ಲಿಂಗಂ ಭುಕ್ತಿಮುಕ್ತಿಫಲಪ್ರದಮ್॥[೧೧]

"ಶಿವ (ಲಿಂಗ=ಗೋಳಕ) ದೊಡ್ಡದಾಗಿದ್ದರೆ ಸಾವು, ಶಕ್ತಿ (ಪೀಠ) ದೊಡ್ಡದಾಗಿದ್ದರೆ ಸಂಪತ್ತಿನ ನಾಶ, ಶಿವ ಮತ್ತು ಶಕ್ತಿ ಸಮನಾಗಿರುವ ಲಿಂಗವು ಭುಕ್ತಿ-ಮುಕ್ತಿಗಳನ್ನು ನೀಡುತ್ತದೆ."

ಪ್ರಸಾದಿ ಭೋಗಣ್ಣನು ತನ್ನ ಮತ್ತೊಂದು ವಚನದಲ್ಲಿ ಪಂಚಸೂತ್ರಲಿಂಗದ ಸ್ವರೂಪವನ್ನು ಷಟ್‌ಸ್ಥಲಗಳಿಗೆ ಅನ್ವಯಮಾಡಿ ಒಂದೊಂದು ಸ್ಥಲವು ಪಂಚಸೂತ್ರ ಲಿಂಗದ ಒಂದೊಂದು ರೂಪವಾಗಿರುವುದೆಂದು ವಿವರಿಸಿದ್ದಾನೆ. ಆ ವಚನ ಹೀಗಿದೆ:

---

೧೦. ಅದೇ. ವ. ಸಂಖ್ಯೆ ೪೨

೧೧. ಮಕುಟಾಗಮ, ಕ್ರಿ.ಪಾ, ೪.೪೭

ಭಕ್ತಸ್ಥಲ ವರ್ತುಲರೂಪಾಗಿಹುದು
ಮಾಹೇಶ್ವರಸ್ಥಲ ಖಂಡಿಕಾವರಣವಾಗಿಹುದು
ಪ್ರಸಾದಿಸ್ಥಲ ತ್ರಿರೇಖೆಯಾಗಿಹುದು
ಪ್ರಾಣಲಿಂಗಿಸ್ಥಲ ಶಕ್ತಿನಾಭಿಸ್ವರೂಪವಾಗಿಹುದು
ಶರಣಸ್ಥಲ ಪಂಚಸೂತ್ರ ಪ್ರಕಾರವ ಕೂಡಿಕೊಂಡು
ಪೀಠಿಕಾ ಸಂಬಂಧವಾಗಿ, ಗೋಳಕಾಕಾರಮೂರ್ತಿಯಾಗಿಹುದು
ಐಕ್ಯಸ್ಥಲ ದಿಗ್ವಳಯಂಗಳಲ್ಲದೆ ಭೇದನಾಮಶೂನ್ಯವಾಗಿ
ಇಂತೀ ಪಂಚಬ್ರಹ್ಮಮೂರ್ತಿ ನೀವಾಗಿ
ಲೀಲೆಗೆ ಉಮಾಪತಿಯಾಗಿ, ಲೀಲೆ ನಿಂದಲ್ಲಿ ಸ್ವಯಂಭುವಾಗಿ[೧೨]

..................................................

ಈ ವಚನದ ರೀತ್ಯಾ ಪಂಚಸೂತ್ರಲಿಂಗವು ಪರಶಿವನ ಪಂಚಬ್ರಹ್ಮಮೂರ್ತಿಯ ದ್ಯೋತಕವಾಗಿದೆಯೆಂದು ಪ್ರಸಾದಿ ಭೋಗಣ್ಣನು ಹೇಳಿದ್ದಾನೆ.

ಲಿಂಗೋದ್ಭವ ಐವತ್ತೆರಡು ಅಕ್ಷರಂಗಳಲ್ಲಿ
ವರ್ತುಳ ಗೋಮುಖ ಗೋಳಕಾಕಾರಕ್ಕೆ ಸಂಬಂಧಿಸುವಲ್ಲಿ
ಅಕಾರ ವರ್ತುಳಾಕಾರಕ್ಕೆ ಉಕಾರ ಗೋಮುಖಕ್ಕೆ
ಮಕಾರ ಗೋಳಕಾಕಾರಕ್ಕೆ
ಇಂತೀ ಆದಿ ಆಧಾರ ಆತ್ಮಬೀಜ ಓಂಕಾರದಿಂದ
ಉದ್ಭವವಾದ ಅಕ್ಷರಾತ್ಮಕ ವಸ್ತುವನರಿತು
ಬ್ರಹ್ಮ ವರ್ತುದಲ್ಲಿ ಅಡಗಿ, ವಿಷ್ಣು ಗೋಮುಖದಲ್ಲಿ ನಿಂದು
ರುದ್ರ ಗೋಳಕಾಕಾರಕ್ಕೆ ಸಂಬಂಧಿತನಾಗಿ
ಉತ್ಪತ್ಯ ಸ್ಥಿತಿಲಯಂಗಳ ಲಕ್ಷಿಸುತ್ತ ಜಗಹಿತಾರ್ಥವಾಗಿ
ಸ್ವಯಂಭು ಉಮಾಪತಿಯಾದೆ
ಚನ್ನಬಸವಣ್ಣನಪ್ರಿಯ ಭೋಗಮಲ್ಲಿಕಾರ್ಜುನಲಿಂಗವಾದೆಹೆನೆಂದು[೧೩]

ಎಂಬ ವಚನದಲ್ಲಿ ಪ್ರಸಾದಿ ಭೋಗಣ್ಣನು ಪಂಚಸೂತ್ರಲಿಂಗದ ಪ್ರಮುಖ ಆಕಾರಗಳಾದ ವರ್ತುಳ, ಗೋಮುಖ ಮತ್ತು ಗೋಳಕಾಕಾರಗಳು 'ಓಂ' ಅಕ್ಷರದಲ್ಲಿನ ಅಕಾರ, ಉಕಾರ, ಮಕಾರ ಹಾಗೂ ಬ್ರಹ್ಮ, ವಿಷ್ಣು ಮತ್ತು ರುದ್ರರಿಗೆ ಕ್ರಮವಾಗಿ ಸಂಬಂಧಿಸಿವೆಯೆಂದು ಹೇಳಿರುತ್ತಾನೆ. ಪಂಚಸೂತ್ರಾತ್ಮಕ ಲಿಂಗವು ಓಂಕಾರ ಹಾಗೂ ತ್ರಿಮೂರ್ತ್ಯಾತ್ಮಕವಾಗಿರುವುದರಿಂದ ಈ ವಚನದಿಂದ ಸ್ಪಷ್ಟವಾಗುತ್ತದೆ.

ಷಡಕ್ಷರ ಮಂತ್ರ: ವೀರಶೈವ ಅಷ್ಟಾವರಣಗಳ ಪೈಕಿ ಮಂತ್ರವು ಆರನೆಯ ಆವರಣ. 'ನಮಃ ಶಿವಾಯ' ಎಂಬುದು ಪಂಚಾಕ್ಷರ ಮಂತ್ರವಾದರೆ, ಅದೇ ಪ್ರಣವ

---

೧೨. ಪ್ರಸಾದಿ ಭೋಗಣ್ಣನ ವಚನ ಸಂಖ್ಯೆ ೬೫

೧೩. ಅದೇ, ವ.ಸಂ. ೭೫

ಸಹಿತವಾದಾಗ ಷಡಕ್ಷರ ಮಂತ್ರವಾಗುತ್ತದೆ. ಶೈವಾಗಮಗಳು ಷಡಕ್ಷರ ಮಂತ್ರವನ್ನು 'ಮಂತ್ರರಾಜ' ಎಂದು ಕರೆದಿವೆ.

> ಪಂಚಾಕ್ಷರೋ ಮಹಾಮಂತ್ರಃ ಪ್ರಣವೇನಯುತಃ ಶಿವೇ।
> ಷಡಕ್ಷರ ಇತಿ ಪ್ರೋಕ್ತೋ ಮಂತ್ರರಾಜಾಹ್ವಯಃ ಪರಃ॥[೧೪]
>
> ಪ್ರಣವಃ ಸರ್ವತತ್ತ್ವಾನಾಂ ಬೀಜಂ ಕಾರಣಕಾರಣಮ್।
> ತಸ್ಮಾದಯಂ ಮಹಾಮಂತ್ರಃ ಸರ್ವತಃ ಜಗತಃ ಪ್ರಭುಃ॥[೧೫]
>
> ಓಂಕಾರಃ ಸರ್ವಮಂತ್ರಾಣಾಂ ಮಂತ್ರರಾಜಃ ಪ್ರಕೀರ್ತಿತಮ್॥[೧೬]

ಸೂಕ್ಷ್ಮಾಗಮದ ಈ ಶ್ಲೋಕಗಳ ಪ್ರಭಾವವು ಪ್ರಸಾದಿ ಭೋಗಣ್ಣನ ಈ ವಚನದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ:

> ಈ ಪಂಚಾಕ್ಷರಿಯ ಪ್ರಣಮ
> ಇದು ಮೂಲದಿವ್ಯ ಮಂತ್ರ[೧೭]

ಮತ್ತೊಂದು ವಚನ

> ಓಂ ಎಂಬ ಓಂಕಾರ ಪೃಥ್ವೀತತ್ವದ ನಾಮಬೀಜ
> ನ ಎಂಬ ನಕಾರ ಅಪ್ಪು ತತ್ವದ ನಾಮಬೀಜ
> ಮ ಎಂಬ ಮಕಾರ ತೇಜತತ್ವ ನಾಮರೂಪ
> ಶಿ ಎಂಬ ಶಿಕಾರ ವಾಯುತತ್ವದ ನಾಮಬೀಜ
> ವಾ ಎಂಬ ವಾಕಾರ ಆಕಾಶತತ್ವದ ನಾಮಬೀಜ
> ಯ ಎಂಬ ಯಕಾರ ಆತ್ಮತತ್ವದ ನಾಮಬೀಜ
> ಇಂತೀ ಷಡಕ್ಷರ ನಾಮಭೇದ[೧೮]
> ......................................................

ಈ ವಚನವು ಸೂಕ್ಷ್ಮಾಗಮದ

> ಭೂಜಲಾಗ್ನಿಮರುದ್ವ್ಯೋಮ್ನಾಂ ಬೀಜಾನ್ಯೇತಾನಿಶೋಭನೇ।
> ಪ್ರಣವಂ ಸರ್ವತತ್ತ್ವಾನಾಂ ಬೀಜಂ ಕಾರಣಕಾರಣಮ್॥[೧೯]

---

೧೪. ಸೂಕ್ಷ್ಮಾಗಮ, ಕ್ರಿ.ಪಾ, ೪.೩೫

೧೫. ಅದೇ, ಕ್ರಿ.ಪಾ, ೪.೫೦

೧೬. ಅದೇ, ಕ್ರಿ.ಪಾ, ೪.೫೫

೧೭. ಪ್ರಸಾದಿ ಭೋಗಣ್ಣನ ವ.ಸಂ. ೫೬

೧೮. ಅದೇ, ವ.ಸಂ. ೨೪

೧೯. ಸೂಕ್ಷ್ಮಾಗಮ, ಕ್ರಿ.ಪಾ, ೪.೪೯-೫೦ ನೋಡಿ-ಚಂದ್ರಜ್ಞಾನಾಗಮ, ಕ್ರಿ.ಪಾ, ೭.೨೨, ೨೬,೩೦,೩೪,೩೮

ಎಂಬ ಶ್ಲೋಕದಿಂದ ಪ್ರಭಾವಿತವಾಗಿದೆ. ಈ ಶ್ಲೋಕದ ತಾತ್ಪರ್ಯವಿಷ್ಟು- "ಭೂಮಿ, ಜಲ, ಅಗ್ನಿ, ವಾಯು, ಆಕಾಶಗಳಿಗೆ ಯಕಾರಾದಿ ನಕಾರಾಂತ ಪಂಚಾಕ್ಷರಗಳು ಬೀಜವಾಗಿವೆ. ಎಲ್ಲ ಕಾರಣಗಳಿಗೆ ಕಾರಣವಾದ ಪ್ರಣವವು ಎಲ್ಲ ತತ್ತ್ವಗಳ ಬೀಜವಾಗಿದೆ."

ಓಂ ಎಂಬುದು ಬ್ರಹ್ಮಾಕ್ಷರ
ನ ಎಂಬುದು ನಾರಾಯಣ ಬೀಜ
ಮ ಎಂಬುದು ಮಹಾದೇವನ ಬೀಜಾಕ್ಷರ
ಇಂತೀ ತ್ರಿವಿಧ ಭೇದ ಕೂಡಿದಲ್ಲಿ ಈಶ್ವರತತ್ತ್ವ[20]
.............................................

ಇತ್ಯಾದಿಯಾದ ಪ್ರಸಾದಿ ಭೋಗಣ್ಣನ ವಚನವು ಸೂಕ್ಷ್ಮಾಗಮದ ಈ ಶ್ಲೋಕದ ಮೊದಲಿನ ಎರಡು ಪಾದಗಳ ಅನುವಾದದಂತಿದೆ. ಶ್ಲೋಕ ಈ ರೀತಿಯಾಗಿದೆ:

ಬ್ರಹ್ಮಾವಿಷ್ಣುಸ್ತಥಾರುದ್ರ ಈಶ್ವರಶ್ಚ ಸದಾಶಿವಃ।
ತಥಾ ಪರಶಿವಶ್ಚೈವ ಷಡ್‌ದೇವಾತ್ಮಾ ಷಡಕ್ಷರಃ॥[21]

"ಷಡಕ್ಷರ ಮಂತ್ರವು ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಮತ್ತು ಪರಶಿವ -ಈ ಆರು ದೇವತೆಗಳ ಸ್ವರೂಪವಾಗಿದೆ."

ಪ್ರಸಾದಿ ಭೋಗಣ್ಣನ ಈ ವಚನವೂ ಶೈವಾಗಮಗಳಿಂದ ಪ್ರಭಾವಿತವಾಗಿದೆ.

ನ ಎಂಬಕ್ಷರದ ಭೇದ ಜನನ ನಾಸ್ತಿಯಾದ ವಿವರ
ಮ ಎಂಬಕ್ಷರದ ಭೇದ ಮರಣ ನಾಸ್ತಿಯಾದ ವಿವಗ
ಶಿ ಎಂಬಕ್ಷರದ ಭೇದ ಸ್ವೀಕರಣೆ ನಾಸ್ತಿಯಾದ ವಿವರ
ವ ಎಂಬಕ್ಷರದ ಭೇದ ವಕಾರ ನಾಸ್ತಿಯಾಗಿ ಸಾಕಾರವಳಿದ ಭೇದ
ಯ ಎಂಬಕ್ಷರದ ಭೇದ ತತ್ತ್ವಮಸಿಯೆಂಬ ಭಿತ್ತಿಯ ಮೆಟ್ಟದೆ
ಉತ್ಪತ್ಯ ಸ್ಥಿತಿ ಲಯವೆಂಬ ತ್ರಿವಿಧವ ಮುಟ್ಟದೆ
ಅದು ನಿಶ್ಚಯವಾದಲ್ಲಿ ಪಂಚಾಕ್ಷರಿಯ ಭೇದ
ಇಂತೀ ಭೇದಂಗಳಲ್ಲಿ ಜಪಧ್ಯಾನವ ಧ್ಯಾನಿಸಿ
ಇಷ್ಟ ಕಾಮ್ಯ ಮೋಕ್ಷಗಳೆಂಬ ಮೂರಂಗುಲವನರಿವುದು
ಸದೃಷ್ಟ ತನ್ನಷ್ಟವೆಂಬ ಉಭಯದ ಅಂಗುಲವ ಕಂಡು
ಚತುರ್ವಿಧ ಫಲಪದಂಗಳಲ್ಲಿ ಭಾವಿಸಿ ಕಲ್ಪಿಸದಿಪ್ಪುದು ಜಪಧ್ಯಾನ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ[22]

---

೨೦. ಪ್ರಸಾದಿ ಭೋಗಣ್ಣನ, ವ.ಸಂ, ೨೫

೨೧. ಸೂಕ್ಷ್ಮಾಗಮ, ಕ್ರಿ.ಪಾ, ೪.೪೭

೨೨. ಪ್ರಸಾದಿ ಭೋಗಣ್ಣನ ವ.ಸಂ, ೪೯

ಜಂಗಮ: ವೀರಶೈವದಲ್ಲಿ ಜಂಗಮನಿಗೆ ವಿಶಿಷ್ಟವಾದ ಸ್ಥಾನವಿದೆ. ಸರ್ವಸಂಗ ಪರಿತ್ಯಾಗಿಯಾದ ಜಂಗಮ ತನ್ನ ಪೂರ್ವಾಶ್ರಮದ ಬಂಧುಗಳಾದ ತಂದೆ, ತಾಯಿ, ಸೋದರರ ಪಕ್ಷವನ್ನು ವಹಿಸಿಕೊಂಡು ವರ್ತಿಸುವವನನ್ನು ಪ್ರಸಾದಿ ಭೋಗಣ್ಣ ಕಟುವಾದ ಮಾತುಗಳಲ್ಲಿ ಹೀಗೆ ಟೀಕಿಸಿದ್ದಾನೆ:

ಪರುಷರಸ ಸೋಂಕಿನಲ್ಲಿ ಲೋಹಕ್ಕಿದಿರೆಡೆ ಉಂಟೆ?
ಸಿಂಧುವೊಳಕೊಂಡ ದ್ರವ್ಯಕ್ಕೆ ಋತುಕಾಲ ವೈಶಾಖಮಾಸಂಗಳಲ್ಲಿ
ಜಲವಿಂಗಲು ಮತ್ತೆ ಕಂಡಹೆವೆನಲುಂಟೆ?
ಸರ್ವಸಂಗಪರಿತ್ಯಾಗವ ಮಾಡಿದ ಯೋಗಿ
ತಂದೆ ತಾಯಿ ಸಹೋದರ ಬಂಧುಗಳೆಂದು
ಪಕ್ಷವ ಅಂಗೀಕರಿಸಿದಡೆ
ತ್ರಿಭಂಗಿಯ ಭುಂಜಿಸಿದವ
ಮರವೆಯ ಸುರಾಪಾನವ ಅಂಗೀಕರಿಸಿದವ: ಆತ ಲಿಂಗಾಂಗಿಯಲ್ಲ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಕ್ಕೆ ಸಲ್ಲ.[23]

ಜಂಗಮ ಸ್ವಯಜಂಗಮ, ಚರಜಂಗಮ ಮತ್ತು ಪರಜಂಗಮ ಎಂದು ತ್ರಿವಿಧವೆಂದು ಶೈವಾಗಮಗಳು ನಿರೂಪಿಸಿವೆ.[24] ಪ್ರಸಾದಿ ಭೋಗಣ್ಣನು ತನ್ನ ವಚನ ಸಂಖ್ಯೆ ೨೯ರಲ್ಲಿ 'ಇದು ಸ್ವಯ ಚರ ಪರದ ಸಮುದ್ರ' ಎಂದು ಹೇಳುವಲ್ಲಿ ಶೈವಾಗಮಗಳಿಂದ ಪ್ರಭಾವಿತನಾಗಿದ್ದಾನೆ. ಅಂತೆಯೇ ಶ್ರೀಸಿದ್ಧಾಂತಶಿಖಾಮಣಿಯ ಲಿಂಗಸ್ಥಲಾಂತರ್ಗತ ಚರಸ್ಥಲದಲ್ಲಿನ "ನ ಸಮ್ಮಾನೇಷು ಸಂಪ್ರೀತಿಂ ನಾವಮಾನೇಷು ಚ ವ್ಯಥಾಮ್।"[25] ಎಂಬ ಶ್ಲೋಕದ ಛಾಯೆಯು ಪ್ರಸಾದಿ ಭೋಗಣ್ಣನ ೭೨ನೇ ವಚನದ "ವಂದನೆ ನಿಂದನೆ ಒಳಗಪ್ಪನಕ್ಕ ಶರಣ" ಎಂಬ ಸಾಲಿನಲ್ಲಿ ಮೂಡಿಬಂದಿದೆ.

ಅಕ್ಷಮಾಲೆಯ ಲಕ್ಷಣ: ಪ್ರಸಾದಿ ಭೋಗಣ್ಣನು ಒಂದು ವಚನದಲ್ಲಿ ಅಕ್ಷಮಾಲೆಯ ಲಕ್ಷಣವನ್ನು ಹೀಗೆ ವಿವರಿಸಿದ್ದಾನೆ:

ಏಕಮುಖದಲ್ಲಿ ನಿರವಯ ಜಪ
ದ್ವಿಮುಖದಲ್ಲಿ ಶಕ್ತಿಸಂಪರ್ಕಯೋಗ
ತ್ರಿಮುಖದಲ್ಲಿ ತ್ರಿವಿಧಾತ್ಮಭೇದ
ಚತುರ್ಮುಖದಲ್ಲಿ ಚತುಷ್ಟಯ ಇಷ್ಟಾರ್ಥ ಮತ
ಪಂಚಮುಖದಲ್ಲಿ ಪಂಚಭೂತಿಕ ಪಂಚಬ್ರಹ್ಮಮೂರ್ತಿಗಳಪ್ಪ
ಸಂಚಿತದ ಭೇದ

---

೨೩. ಅದೇ, ವ.ಸಂ, ೫೫

೨೪. ಸೂಕ್ಷ್ಮಾಗಮ, ಕ್ರಿ.ಪಾ, ೮.೧೮

೨೫. ಶ್ರೀಸಿದ್ಧಾಂತಶಿಖಾಮಣಿ, ೧೫.೬೦

ಇಂತೀ ಅಕ್ಷಮಾಲೆಯ ಲಕ್ಷಣಭೇದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ ಲಿಂಗದಲ್ಲಿ[೨೬]

ಈ ವಚನವು ಚಂದ್ರಜ್ಞಾನಾಗಮದ ಈ ಶ್ಲೋಕಗಳ ಕನ್ನಡ ರೂಪಾಂತರದಂತಿದೆ:

ಏಕವಕ್ತ್ರಂ ತು ರುದ್ರಾಕ್ಷಂ ಪರತತ್ತ್ವಸ್ವರೂಪಕಮ್।
ತದ್ಧಾರಣಾತ್ ಪರೇ ತತ್ತ್ವೇ ಲೀಯತೇ ವಿಜಿತೇಂದ್ರಿಯಃ॥
ದ್ವಿವಕ್ತ್ರಂ ಚೈವ ರುದ್ರಾಕ್ಷಮರ್ಧನಾರೀಶ್ವರಾತ್ಮಕಮ್।
ಧಾರಣಾದರ್ಧನಾರೀಶಃ ಪ್ರಿಯತೇ ತಸ್ಯ ನಿತ್ಯಶಃ॥
ತ್ರಿವಕ್ತ್ರಮನಲಃ ಸಾಕ್ಷಾತ್ ಸ್ತ್ರೀಹತ್ಯಾಂ ದಹತಿ ಕ್ಷಣಾತ್।
ಚತುರ್ವಿಧಂ ತು ರುದ್ರಾಕ್ಷಂ ಬ್ರಹ್ಮರೂಪಮುದಾಹೃತಮ್।
ಪಂಚವಕ್ತ್ರಂ ತು ರುದ್ರಾಕ್ಷಂ ಪಂಚಬ್ರಹ್ಮಸ್ವರೂಪಕಮ್॥[೨೭]

ಇಷ್ಟಲಿಂಗ:

"ಇಷ್ಟಲಿಂಗಮವಿಶ್ವಸ್ಯ ಅನ್ಯಲಿಂಗಮುಪಾಸಯನ್।" ಎಂಬ ಆಗಮೋಕ್ತಿ ಮತ್ತು "ಪ್ರಾಣವದ್ಧಾರಣೀಯಂ ತತ್ ಪ್ರಾಣಲಿಂಗಮಿದಂ ತವ।"[೨೮] ಎಂಬ ಶ್ರೀಸಿದ್ಧಾಂತ ಶಿಖಾಮಣಿಯ ಪ್ರಭಾವವು ಪ್ರಸಾದಿ ಭೋಗಣ್ಣನ ಈ ವಚನದಲ್ಲಿ ಪ್ರತಿಬಿಂಬಿತವಾಗಿದೆ:

ಲಿಂಗವೇ ಪ್ರಾಣವಾದ ಮತ್ತೆ
ಬೇರೆ ನೆನೆಯಿಸಿಕೊಂಬುದು ಇನ್ನಾವುದಯ್ಯಾ?
ಇದಿರಿಟ್ಟು ಬಂದುದ ಮುನ್ನವೆ ಮುಟ್ಟಿ
ಅರ್ಪಿತ ಅವಧಾನಂಗಳಲ್ಲಿ ಸೋಂಕಿದ ಮತ್ತೆ
ಪುನರಪಿಯಾಗಿ ಸೋಂಕಿದಡೆ ನಿರ್ಮಾಲ್ಯ ಕಂಡಯ್ಯಾ
ಮೊನೆಗೂಡಿ ಹಾಯ್ವ ಕಣೆಯಂತೆ ಅರ್ಪಿತಾಂಗಸಂಗಭೇದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿದಲ್ಲಿ[೨೯]

ಲಿಂಗಾಂಗಸಂಯೋಗ: ವೀರಶೈವದ ಪ್ರಮುಖ ಗುರಿ ಜೀವಾತ್ಮನು ಪರಮಾತ್ಮನಾಗುವುದೇ ಆಗಿದೆ. ಅದನ್ನು ಲಿಂಗಾಂಗಸಂಯೋಗವೆಂದು ವೀರಶೈವ ಪರಿಭಾಷೆಯಲ್ಲಿ ಕರೆಯಲಾಗಿದೆ. ಈ ಲಿಂಗಾಂಗಸಂಯೋಗವನ್ನು ಪ್ರಸಾದಿ ಭೋಗಣ್ಣನು ಒಂದು ವಚನದಲ್ಲಿ ಹೀಗೆ ನಿರೂಪಿಸಿದ್ದಾನೆ:

ಅಂಗ ಮನ ಪ್ರಾಣಂಗಳೆಂಬಲ್ಲಿ ಘನಲಿಂಗವಿಪ್ಪೆಡೆ ಯಾವುದು?
ಪಂಕಕ್ಕೆ ಜಲ ಒಳಗೋ, ಹೊರಗೋ?

---

೨೬. ಪ್ರಸಾದಿ ಭೋಗಣ್ಣನ ವ.ಸಂಖ್ಯೆ, ೧೮

೨೭. ಚಂದ್ರಜ್ಞಾನಾಗಮ, ಕ್ರಿ.ಪಾ, ೭.೨೫-೨೯

೨೮. ಶ್ರೀಸಿದ್ಧಾಂತಶಿಖಾಮಣಿ, ೬.೨೫

೨೯. ಪ್ರಸಾದಿ ಭೋಗಣ್ಣನ ವ.ಸಂ. ೭೪

> ಅಂಗಕ್ಕೂ ಮನಸ್ಸಿಂಗೂ ಆತ್ಮಂಗೂ ಲಿಂಗವ ಹಿಂಗಿ
> ಅರಿವ ಠಾವಿನ್ನಾವುದು?
> ಬೀಜದೊಳಗಣ ವೃಕ್ಷ, ವೃಕ್ಷದೊಳಗಾದ ಬೀಜ
> ಈ ಉಭಯವ ಮೀರಿ ಬೆಳೆವ ಠಾವಿನ್ನಾವುದೊ?
> ಮೊನೆಗೂಡಿಯೆ ಗ್ರಹಿಸುವ ಅಲಗಿನ ತೆರದಂತೆ
> ಅದು ಲಿಂಗಾಂಗಸಂಯೋಗಸಂಬಂಧ
> ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ[೩೦]

ಈ ಲಿಂಗಾಂಗಸಂಯೋಗ ಸಂಬಂಧವನ್ನು ವರ್ಣಿಸುವ ಈ ವಚನದಲ್ಲಿನ 'ಬೀಜದೊಳಗಣ ವೃಕ್ಷ, ವೃಕ್ಷದೊಳಗಾದ ಬೀಜ'ವೆಂಬ ಸಾಲುಗಳು ಶ್ರೀಸಿದ್ಧಾಂತ ಶಿಖಾಮಣಿಯ "ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ"[೩೧] ಎಂಬ ಉಕ್ತಿಯ ಕನ್ನಡ ರೂಪಾಂತರವೇ ಆಗಿದೆ. ಇದೇ ಅಭಿಪ್ರಾಯವು ಮತ್ತೊಂದು ವಚನದಲ್ಲಿ ಈ ರೀತಿಯಾಗಿದೆ:

> ಬೀಜವ ಕಳೆದು ತರು ಬೆಳೆದಂತೆ
> ತರುವ ಕಳೆದು ಜೀವ ಆ ತರುವಿಂಗೆ ಕುರುಹಾದಂತೆ
> ಪರಮ ಜೀವನ ಕಳೆದು
> ಆ ಜೀವಕ್ಕೆ ತಾ ಪರಮನೆಂಬ ಪರಿಭ್ರಮಣವ ಕಳೆದು
> ಪರಶಕ್ತಿ ಸಮೇತವಾದಲ್ಲಿ
> ಮರದಲ್ಲಿ ಹುಟ್ಟಿದ ಕಿಚ್ಚು ಮರ ನಷ್ಟವಾಗಿ ತಾ ನಷ್ಟವಾದಂತೆ
> ಅರಿದ ಅರಿವು ಕುರುಹಿನಲ್ಲಿ ಪರಿಹರಿಸಿದ ಮತ್ತೆ
> ತೆರೆ ದರುಶನ ಉಭಯವಡಗಿತ್ತು
> ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿದಲ್ಲಿ[೩೨]

ಪೂರ್ವಾಚಾರ್ಯರ ನಾಮೋಲ್ಲೇಖ:

> ಶ್ರೀಪತಿ ಶಿವಲೆಂಕ ಪಂಡಿತಾರಾಧ್ಯ ಏಕಾಂತದರಾಮ
> ಇಂತೀ ಪ್ರಥಮದ ಆಚಾರ್ಯರು ಇಟ್ಟ ಮತಂಗಳಿಂದ
> ಗುರುಸ್ಥಲ ಲಿಂಗಸ್ಥಲ ಉಭಯಮಾರ್ಗ
> ಆಚಾರ್ಯಸ್ಥಲ ಷಡುಸ್ಥಲ ಒಳಗಾದ
> ..........................................................”

---

೩೦. ಪ್ರಸಾದಿ ಭೋಗಣ್ಣನ ವ.ಸಂ, ೧

೩೧. ಶ್ರೀಸಿದ್ಧಾಂತಶಿಖಾಮಣಿ, ೯.೧೧

೩೨. ಪ್ರಸಾದಿ ಭೋಗಣ್ಣನ ವ.ಸಂ. ೬೧

ಇತ್ಯಾದಿ ವಚನದಲ್ಲಿ ಪ್ರಸಾದಿ ಭೋಗಣ್ಣನು ಶ್ರೀಪತಿ, ಶಿವಲೆಂಕ, ಪಂಡಿತಾರಾಧ್ಯ ಏಕಾಂತದರಾಮ ಇವರ ಹೆಸರುಗಳನ್ನು ಉಲ್ಲೇಖಿಸಿ, ಅವರುಗಳನ್ನು 'ಪ್ರಥಮದ ಆಚಾರ್ಯರು' ಎಂದು ಗೌರವದಿಂದ ಸಂಬೋಧಿಸಿದ್ದಾನೆ. ಇವರುಗಳ ನಾಮೋಲ್ಲೇಖ ಮಾಡಿರುವುದನ್ನು ಗಮನಿಸಿದಾಗ 'ಶ್ರೀಕರಭಾಷ್ಯ' ಮುಂತಾದ ಗ್ರಂಥಗಳಿಂದಲೂ ಪ್ರಸಾದಿ ಭೋಗಣ್ಣನು ಪ್ರಭಾವಿತನಾಗಿದ್ದಾನೆಂದು ಹೇಳಬಹುದು.

**ಪರಶಿವನ ಪಂಚಮುಖಗಳ ನಾಮೋಲ್ಲೇಖ:**

ಪ್ರಸಾದಿ ಭೋಗಣ್ಣನು ಪರಶಿವನ ಪಂಚಮುಖಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಇವುಗಳ ನಾಮೋಲ್ಲೇಖವನ್ನು ತನ್ನ ಎರಡು ವಚನಗಳಲ್ಲಿ ಪ್ರಸ್ತಾಪಿಸಿದ್ದಾನೆ. ಈ ಪಂಚಮುಖಗಳ ಪ್ರಸ್ತಾಪವು ವೇದ-ಆಗಮಗಳಲ್ಲಿ ಬಂದಿದ್ದು, ಪ್ರಸಾದಿ ಭೋಗಣ್ಣನು ಅವುಗಳಿಂದ ಪ್ರಭಾವಿತನಾಗಿದ್ದಾನೆ. ಆ ವಚನಗಳು ಈ ರೀತಿಯಾಗಿವೆ:

೧. ಪವಳ ಪದ್ಮಾಕ್ಷಿ ಪುತ್ರಜೀವಿ ಮೌಕ್ತಿಕ ರುದ್ರಾಕ್ಷಿ
ಇವು ಮುಂತಾದ ಪವಣಿಗೆಯಲ್ಲಿ
ಸದ್ಯೋಜಾತಮುಖಕ್ಕೆ ಪವಳಮಾಲೆ
ವಾಮದೇವಮುಖಕ್ಕೆ ಪದ್ಮಮಾಲೆ
ಅಘೋರಮುಖಕ್ಕೆ ಪುತ್ರಿಕಮಾಲೆ
ತತ್ಪುರುಷಮುಖಕ್ಕೆ ಮೌಕ್ತಿಕ ಮಾಲೆ
ಈಶಾನಮುಖಕ್ಕೆ ರುದ್ರಾಕ್ಷಿ
..........................................ಇತ್ಯಾದಿ.[೩೪]

೨. ಸದ್ಯೋಜಾತಮುಖ ಚನ್ನಮಲ್ಲಿಕಾರ್ಜುನಲಿಂಗವಾಯಿತ್ತು.
ವಾಮದೇವಮುಖ ಭೋಗಮಲ್ಲಿಕಾರ್ಜುನಲಿಂಗವಾಯಿತ್ತು.
ಅಘೋರಮುಖ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವಾಯಿತ್ತು
ತತ್ಪುರುಷಮುಖ ಶಾಂತಮಲ್ಲಿಕಾರ್ಜುನಲಿಂಗವಾಯಿತ್ತು
ಈಶಾನಮುಖ ಇಂತೀ ಚತುರ್ವಿಧ ಆಚಾರ್ಯರಿಗೆ
ಗುರುಮೂರ್ತಿಯಾದಲ್ಲಿ...............ಇತ್ಯಾದಿ[೩೫]

ಏಕೋತ್ತರ ಶತಸ್ಥಲ ಶಬ್ದಪ್ರಯೋಗ: ಪ್ರಸಾದಿ ಭೋಗಣ್ಣನು ತನ್ನ ವಚನ ಸಂಖ್ಯೆ ೮ರಲ್ಲಿ 'ಏಕೋತ್ತರಶತಸ್ಥಲ'ವೆಂಬ ಪದ ಪ್ರಯೋಗ ಮಾಡಿದ್ದಾನೆ. 'ಏಕೋತ್ತರ ಶತಸ್ಥಲ' ಎಂಬ ಪದವು ವೀರಾಗಮದಲ್ಲಿ ಮೊದಲಿಗೆ ಕಂಡುಬರುತ್ತದೆ:

---

೩೩. ಪ್ರಸಾದಿ ಭೋಗಣ್ಣನ ವಚನ ಸಂಖ್ಯೆ, ೯೩

೩೪. ಅದೇ, ವ.ಸಂ. ೫೬

೩೫. ಅದೇ. ವ.ಸಂ. ೯೭.

ಏಕೋತ್ತರಶತಸ್ಥಾನಿ ಷಟ್‌ಸ್ಥಲಾಂಗತಾನ್ಯಪಿ।
ಗೃಹ್ಣಂತಿ ತತ್ತ್ವಭಾವೇನ ಗೃಹಾರಾಧನದೂಷಿತಾಃ॥[೩೬]

ಷಟ್‌ಸ್ಥಲ: ಪ್ರಸಾದಿ ಭೋಗಣ್ಣನು ಷಟ್‌ಸ್ಥಲಗಳನ್ನು ಕುರಿತು ವಚನ ಸಂಖ್ಯೆ ೩೦, ೫೦, ೬೩ ಮತ್ತು ೬೫ರಲ್ಲಿ ವಿವೇಚಿಸಿದ್ದಾನೆ. ಈ ನಾಲ್ಕು ವಚನಗಳಲ್ಲಿ ಷಟ್‌ಸ್ಥಲಗಳ ಲಕ್ಷಣದ ನಿರೂಪಣೆಯಿದೆ. ಈ ಲಕ್ಷಣವನ್ನು ಗಮನಿಸಿದಾಗ ಪ್ರಸಾದಿ ಭೋಗಣ್ಣನ ಷಟ್‌ಸ್ಥಲಗಳ ಲಕ್ಷಣ ನಿರೂಪಣೆಗೆ ಶೈವಾಗಮಗಳೇ ಆಧಾರವಾಗಿವೆ ಎಂದು ಸ್ಪಷ್ಟವಾಗುತ್ತದೆ.

ಈ ಎಲ್ಲ ಅಂಶಗಳಲ್ಲದೆ ವೇದ, ಆಗಮ, ಪುರಾಣ ಎಂಬ ಶಬ್ದಗಳನ್ನು ಬಹಳಷ್ಟು ವಚನಗಳಲ್ಲಿ ಪ್ರಸಾದಿ ಭೋಗಣ್ಣ ಪ್ರಯೋಗ ಮಾಡಿರುವುದಲ್ಲದೆ, ಒಂದು ವಚನದಲ್ಲಿ ನಾಲ್ಕು ವೇದಗಳ ನಾಮೋಲ್ಲೇಖದ ಜೊತೆಗೆ ಸ್ಕಂದಪುರಾಣಾಂತರ್ಗತ ಶಂಕರ ಸಂಹಿತೆಯ ಹೆಸರನ್ನೂ ಉಲ್ಲೇಖ ಮಾಡಿದ್ದಾನೆ. ಆ ವಚನ ಹೀಗಿದೆ:

ನಾನಾ ಶ್ರುತಿ ತತ್ತ್ವಂಗಳಲ್ಲಿ
ಸಾಮ ಅಥರ್ವಣ ಯಜುಸ್ಸು ಋಗ್ವೇದ ಮೊದಲಾದ
ಶಂಕರಸಂಹಿತೆ ಉಪೇಕ್ಷೆ
..........................................[೩೭]

ಒಟ್ಟಿನಲ್ಲಿ ಪ್ರಸಾದಿ ಭೋಗಣ್ಣನು ತನ್ನ ವಚನಗಳಲ್ಲಿ ವೇದ-ಆಗಮ-ಉಪನಿಷತ್ತುಗಳ ವಾಕ್ಯಗಳನ್ನು ಯಥಾವತ್ತಾಗಿ ಪ್ರಯೋಗ ಮಾಡದಿದ್ದರೂ, ಅವುಗಳಿಂದ ಪ್ರಭಾವಿತನಾಗಿ, ಅವುಗಳ ಸಾರವನ್ನು ಕನ್ನಡ ಭಾಷೆಯಲ್ಲಿ ಹೇಳಿರುವುದು ಪೂರ್ವೋಕ್ತ ಅಂಶಗಳಿಂದ ಸ್ಪಷ್ಟವಾಗುತ್ತದೆ. ಪ್ರಸಾದಿ ಭೋಗಣ್ಣನು ವೇದಾಗಮಗಳಿಂದ ಎಷ್ಟರಮಟ್ಟಿಗೆ ಪ್ರಭಾವಿತನಾಗಿದ್ದಾನೆ ಎಂಬುದನ್ನು ಗುರುತಿಸುವ ಒಂದು ಕಿರು ಪ್ರಯತ್ನ ಈ ಪ್ರಬಂಧದ ಉದ್ದೇಶವಾಗಿದೆ.

—

ಪ್ರಶ್ನೆ: ಭೋಗಣ್ಣ ಪ್ರಸಾದ ಕಾಯಕವನ್ನು ಮಾಡುತ್ತಿದ್ದ ಎಂದು ಆರಂಭದಲ್ಲಿ ಹೇಳಿದಿರಿ. ಪ್ರಸಾದದ ಬಗ್ಗೆ ತನ್ನ ವಚನಗಳಲ್ಲಿ ಏನಾದರೂ ಹೇಳಿದ್ದಾನೆಯೇ?

ವೇದಾಗಮಗಳ ಪ್ರಭಾವ ಅಲ್ಲದೇನೆ ದರ್ಶನದ ಪ್ರಭಾವ- ದ್ವೈತ, ಅದ್ವೈತ ದರ್ಶನಗಳ ಪ್ರಭಾವ ಇವನ ಮೇಲೆ ಆಗಿದೆಯೇ?

-ವಿದ್ವಾನ್ ಕೋ.ರಂ. ಬಸವರಾಜು

---

೩೬. ವೀರಾಗಮ, ೭.೫೪೫ (ಡಾ. ಜ.ಚ.ನಿ. ಸಂಪಾದಿತ)

೩೭. ಪ್ರಸಾದಿ ಭೋಗಣ್ಣನ ವಚನ ಸಂಖ್ಯೆ, ೫೪

ಉತ್ತರ: ಪ್ರಸಾದದ ಬಗ್ಗೆ ಪ್ರಸಾದಿ ಭೋಗಣ್ಣನವರು ಏನನ್ನೂ ಕೂಡ ಪ್ರಸ್ತಾಪ ಮಾಡುವುದಿಲ್ಲ. ನಾನು ಇರಬಹುದಾ ಎಂದು ಹೇಳಿದೆ. ಆ ಸಂಬಂಧಪಟ್ಟಂತೆ ಒಂದೂ ವಚನದಲ್ಲಿ ಹೇಳಿಲ್ಲ.

ವೇದಾಗಮಗಳ ಜೊತೆಗೆ ಪ್ರಸಾದಿ ಭೋಗಣ್ಣನ ವಚನಗಳ ಮೇಲೆ ದರ್ಶನಗಳ ಪ್ರಭಾವ ಆಗಿದೆ. ಷಡ್‌ದರ್ಶನ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. 'ತತ್ತ್ವಮಸಿ' 'ನೇತಿ' ಎಂಬ ಪ್ರಯೋಗವನ್ನು ಮಾಡುತ್ತಾನೆ.

ಪ್ರಶ್ನೆ: ಗೃಹಸ್ಥನಿಗೆ ಗೃಹಸ್ಥರೇ ಗುರುವಾಗಬೇಕು ಎಂಬ ಮಾತನ್ನು ಹೇಳಿದಿರಿ. ಈ ವಿಚಾರ ಆಗಮದ್ದು ಎಂದಿರಿ. ಈ ವಿಚಾರ ಸಿದ್ಧಾಂತ ಶಿಖಾಮಣಿಯಲ್ಲಿ ಎಲ್ಲಿಯೂ ಬರುವುದಿಲ್ಲ. ಒಂದು ಮಾತು ಸಿದ್ಧಾಂತಗಳನ್ನು ಅಲ್ಲಗಳೆಯಿತೇ ಹೇಗೆ? ಒಂದು ವೇಳೆ ಮೇಲಿನ ಮಾತನ್ನೂ ಒಪ್ಪುವುದಾದರೆ ಸಭಾರಿ ಜಂಗಮರು, ನಿರಾಭಾರಿ ಜಂಗಮರು ಎಂಬುದರಲ್ಲಿ ಉಳಿಯಿತೇನು ದಯಮಾಡಿ ತಿಳಿಸಿ.

ಉತ್ತರ: "ಗುರುರ್ಗೃಹಸ್ಥ ಏವ ಸ್ಯಾನ್ನ ಕದಾಚಿದ್ ಯತಿರ್ಗುರುಃ" ಎಂಬ ಮಾತು ಚಂದ್ರಜ್ಞಾನಾಗಮದಲ್ಲಿ ಬಂದಿದೆ. ಅವನು ಯತಿಯಾದ ಸಂದರ್ಭದಲ್ಲಿ ಅವನ ಗುರುತ್ವವಿಲ್ಲವಾಗುತ್ತದೆ. ಆಗಮಗಳ ಕಾಲದ ಅಭಿಪ್ರಾಯ. ಅನಂತರ ಕಾಲ ಬದಲಾಗಿ ಗುರುವಾದವನು ಸಂಸಾರಿಯಾದರೆ ಅವನು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಸರಿಯಾಗಿ ನಿರ್ವಹಣೆ ಮಾಡಲಾಗದೆಂದು ನೈಷ್ಠಿಕ ಬ್ರಹ್ಮಚಾರಿಯಾಗಿಯೇ ಉಳಿಯುವ ರೂಢಿ ಬಂದಿರಬೇಕು, ಎಂಬುದು ನನ್ನ ಅನಿಸಿಕೆ.

ಪ್ರಶ್ನೆ: ಗುರುವು ಇಷ್ಟಲಿಂಗವನ್ನು ಕೊಡ್ತಾರಲ್ಲ, ಅದು ಯಾವುದರ ಸಂಕೇತ?

ಉತ್ತರ: ಅದು ವಿಶ್ವದ ಸಂಕೇತ, ಹಾಗೂ ನಮ್ಮ ಆತ್ಮದ ಸಂಕೇತವೂ ಹೌದು.

ಪ್ರಶ್ನೆ: ಲಿಂಗವನ್ನು ಸ್ಥಾವರವೆಂದು ಪೂಜಿಸಬೇಕೋ? ಅಥವಾ ಆತ್ಮದ ಪ್ರತೀಕವೆಂದು ಪೂಜಿಸಬೇಕೋ?

ಉತ್ತರ: ಲಿಂಗವನ್ನು ಆತ್ಮದ ಪ್ರತೀಕವೆಂದು ಪೂಜಿಸಬೇಕು.

x x

# ೫. ನಿಜಾನಂದ ಪ್ರಸಾದಿ ಚಂದಿಮರಸರ ವಚನಗಳಲ್ಲಿ ವೇದಾಗಮ ಪ್ರಸಕ್ತಿ

-ಡಾ।। ಎಸ್.ಎಂ. ವೃಷಭೇಂದ್ರಸ್ವಾಮಿ

**ಪೀಠಿಕೆ**

ಶತಶತಮಾನಗಳ ಭಾರತೀಯ ಸಮಾಜದ ಕೇಂದ್ರಬಿಂದು "ರಾಷ್ಟ್ರೀಯತೆ"[೧] ಅಲ್ಲ, "ಸಂಸ್ಕೃತಿ ಪ್ರಿಯತೆ". ಪುರಾತನ ಭಾರತ ಛಪ್ಪನ್ನದೇಶಗಳಾಗಿ ಹರಿದು ಹಂಚಿಹೋಗಿದ್ದರೂ, ಆ ಎಲ್ಲ 'ನಾಡು'ಗಳಲ್ಲಿ ವಾಸಿಸುವ ಜನತೆಯ "ಸಂಸ್ಕೃತಿ" ಒಂದೇ ಆಗಿದ್ದಿತು. 'ಆ ಸೇತು... ಹಿಮಾಚಲ'ವೆಂಬುದು "ಸಂಸ್ಕೃತಿ" ದ್ಯೋತಕ. ಈ ಜನತೆಯ ನಡೆ-ನುಡಿ ರೂಪದ ಸಂಸ್ಕೃತಿಯ ಕೇಂದ್ರ ಬಿಂದು "ದೈವಪ್ರಜ್ಞೆ". ಪ್ರಾಚೀನ ಜಗತ್ತಿನ ಇತಿಹಾಸವನ್ನು ಗಮನಿಸಿದಾಗ, ಭಾರತೀಯ ಜನಾಂಗ ಮಾತ್ರ "ದೇವರು" ಎಂಬುದನ್ನು ಪ್ರಪ್ರಥಮವಾಗಿ ಕಂಡುಕೊಂಡಿರುವರು.

'ಧರ್ಮೋ-ಬ್ರಹ್ಮ-ರಸೋ ನಾಮ ಶಿವಂ ಸತ್ಯಂ ಚ ಸುಂದರಂ।
ಯಾ ತ್ರಿಧಾ ತತ್ವಮುಚ್ಯೇತಾ ಸಂಸ್ಕೃತಪ್ರತಿಭಾನವಃ।।

-ಡಾ।। ವಿ. ರಾಘವನ್

(ಧರ್ಮ-ಬ್ರಹ್ಮ-ರಸ ಹಾಗೂ ಸತ್ಯ-ಶಿವ-ಸುಂದರ-ಒಳಿತು-ಇರವು-ಚೆಲುವು-ಭಾರತೀಯ ಆರ್ಷೇಯ ತತ್ವಗಳು)

ಆದರೆ ಗ್ರೀಸ್, ರೋಮನ್, ಚೀನೀ, ಜಪಾನ್ ಮುಂತಾದ ಪುರಾತನ ಸಂಸ್ಕೃತಿಗಳು ಹಣ-ರಾಜ್ಯ-ಅಧಿಕಾರ-ಆಕ್ರಮಣವನ್ನೇ ಪ್ರತಿಪಾದಿಸಿವೆ. ಭಾರತೀಯ ಧಾರ್ಮಿಕ ಪ್ರಜ್ಞೆಯಲ್ಲಿ "ದೇವರಲ್ಲಿ ನಂಬಿಕೆ, ಈ ವಿಶ್ವ ದೇವರ ಸೃಷ್ಟಿ, ಜೀವಾತ್ಮಗಳೆಲ್ಲ ಆ ಪರಮಾತ್ಮನ ಕಿಡಿಗಳು, ಸಂಸಾರದಲ್ಲಿದ್ದು- ಸಾಧನೆ ಕೈಕೊಂಡು, ಪರಮಾತ್ಮನಲ್ಲಿ ಲೀನವಾಗುವುದೇ ಅಂತಿಮ ಗುರಿ" ಮುಂತಾದವು ಪ್ರಮುಖ ಅಂಶಗಳು. ಈ ಎಲ್ಲ ಚಿಂತನೆಗಳ ಸಂಗ್ರಹವೇ ವೇದ-ಆಗಮ-ಉಪನಿಷತ್-ಪುರಾಣಗಳು. ಇವೆಲ್ಲ

---

೧. ಇಲ್ಲಿ "ರಾಷ್ಟ್ರೀಯತೆ" ಎಂದರೆ ರಾಜನೈತಿಕ ಐಕ್ಯತೆ ಎಂದು ಗ್ರಹಿಸಬೇಕು. ನಿಜವಾಗಿ ಭಾರತದ್ದು ರಾಜನೈತಿಕ ಐಕ್ಯತೆಯ ದೃಷ್ಟಿಯ ರಾಷ್ಟ್ರೀಯತೆಯಲ್ಲ, ಆದರೆ ಸಾಂಸ್ಕೃತಿಕ ಐಕ್ಯತೆಯ ದೃಷ್ಟಿಯ ರಾಷ್ಟ್ರೀಯತೆ. (ಸಂ.)

ಶತಶತಮಾನಗಳ ಭಾರತೀಯ ಬುದ್ಧಿಜೀವಿಗಳ-ಆಧ್ಯಾತ್ಮವಾದಿಗಳ, ಅನುಭಾವಿಗಳ ಕೊಡುಗೆ. ಅವರೆಲ್ಲ ಚಿಂತನಶೀಲರು, ತರ್ಕಪ್ರವೀಣರು, ಸ್ವಾನುಭವಿಗಳು, ಜ್ಞಾನಿಗಳು ಆಗಿದ್ದರು. ಭಾರತೀಯ ಜನಾಂಗದ ಭಾವಕೋಶ, ಜ್ಞಾನಕೋಶ, ಆದರ್ಶಕೋಶ ಅತ್ಯಂತ ಗಮನಾರ್ಹವಾದುದು. ಭಾರತದಲ್ಲಿ ಯಾವುದೇ ವಿಚಾರ ಪ್ರಣಾಲಿ ಬಂದರೂ, ಅದಕ್ಕೆ ಈ ವೇದಾಗಮ ಜ್ಞಾನವೇ ಹಿನ್ನೆಲೆ. ವೇದಾಗಮ ಚಿಂತನೆಗಳನ್ನು ಬಿಟ್ಟು ಬೇರಿನ್ನಾವುದನ್ನೂ ನುಡಿಯಲಾರದು ಭಾರತೀಯ ಪ್ರತಿಭೆ. ಕ್ರಾಂತಿವಿಚಾರವಾದಿಗೂ ಈ ಪಾರಂಪರಿಕ ಜ್ಞಾನವೇ ತಳಹದಿ. ಬುದ್ಧ, ಶಂಕರ, ಬಸವ, ಅರವಿಂದ, ಕೃಷ್ಣಮೂರ್ತಿ ಈ ನುಡಿಗಟ್ಟಿನ ಹಿನ್ನೆಲೆಯಲ್ಲೇ ಅದೇ ಮಾತುಗಳಲ್ಲಿಯೇ ತಮ್ಮ ನೂತನ ವಿಚಾರಗಳನ್ನು ಮಂಡಿಸುತ್ತಾರೆ. ಇದು ಇಂದಿಗೂ ಅನಿವಾರ್ಯ ಪರಿಸ್ಥಿತಿ. ದೇವರು-ಧರ್ಮ-ಕರ್ಮ ಎನ್ನುವಾಗಲೆಲ್ಲ ವೇದಾಗಮಗಳೇ ನೆನಪಾಗುತ್ತದೆ. ಇವರ ವಿಚಾರ ಪ್ರವಾಹ, ನಿರಂತರ ಹರಿದು ಬಂದಿದೆ, ಪರಂಪರೆಯ ಚಿಂತನೆಯನ್ನು "ಗಮನಿಸಿ"-ಚರ್ಚಿಸಿ, "ತಮ್ಮ ಸ್ವಚಿಂತನೆಯ ತೆರೆಗಳನ್ನೆಬ್ಬಿಸಿ, ಜ್ಞಾನ ಪ್ರಪಂಚದ ವೈವಿಧ್ಯತೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವವರು. ವೇದ ಋಷಿಗಳ ಕಾಣ್ಕೆ-ಚಿಂತನೆಗಳನ್ನು ಮನ್ನಿಸಿ, ಪರಿಷ್ಕರಿಸಿ, ಉಪನಿಷತ್‌ಕಾರರು, "ಸ್ವಚಿಂತನೆ"ಗಳ 'ದರ್ಶನ'ವನ್ನು ಬಿಂಬಿಸಿರುವರು. ಈ ವೇದ-ಉಪನಿಷತ್ತುಗಳ ಸಿದ್ಧಾಂತಗಳನ್ನು, ಮತ್ತೆ ಪರಿಷ್ಕರಿಸಿ 'ಆಗಮ' ಅಥವಾ ತಂತ್ರಗಳನ್ನು ಕೊಡಮಾಡಿದರು. ಹದಿನೆಂಟು ಪುರಾಣಗಳು, ಅನೇಕಾನೇಕ ಶಾಸ್ತ್ರಗ್ರಂಥಗಳು ವ್ಯಾಖ್ಯೆ-ವ್ಯಾಖ್ಯಾನ-ವಿವರಣೆಗಳ ವಿಪುಲ ಧಾರ್ಮಿಕ ಸಾಹಿತ್ಯ ನಿರ್ಮಿಸಿದರು. ಮುಂದೆ ವಿವಿಧ ಮತಾಚಾರ್ಯರುಗಳು "ಷಟ್ ದರ್ಶನ" ಚಿಂತನೆಯನ್ನು ಬೆಳೆಯಿಸಿದರು. ನಂತರ ಬಂದ ಆಯಾ ಧರ್ಮಗುರುಗಳು ಧಾರ್ಮಿಕ ನಂಬಿಕೆ, ಆಚಾರ-ವಿಚಾರಗಳ ರೀತಿ-ನೀತಿಗಳನ್ನು ವೈವಿಧ್ಯಮಯವಾಗಿ ಪ್ರಚುರಪಡಿಸಿದರು. ಸಾವಿರ ಸಾವಿರ ವರ್ಷಗಳ ಈ "ವಿಚಾರ ಪ್ರಣಾಲಿ ಏಕಶಿಲಾ ರೂಪದ್ದು, ಸಂಮ್ಮಿಶ್ರ ಸ್ವರೂಪದ್ದು. ಪ್ರತ್ಯೇಕವೆಂಬಂತೆ ತೋರಿದರೂ, ಈ ಎಲ್ಲ ಚಿಂತನೆಗಳ ಪಾಕ ಒಂದೇ. ಪರಸ್ಪರ-ಪ್ರೇರಕ-ಪೂರಕ." ಪ್ರತಿಭಟನಾ ಸ್ವಭಾವದ ಅಂಶಗಳಿದ್ದರೂ-ಪರಂಪರೆಯ ಚಿಂತನೆಗಳ ಇತರ ಮಗ್ಗುಲುಗಳ ಪ್ರಸಕ್ತಿ ಇಲ್ಲಿದೆ. ಕಾರಣ, ಭಾರತೀಯ ಪಾರಂಪರಿಕ ಜ್ಞಾನವೆಲ್ಲ ಸಮ್ಮಿಶ್ರ ಸ್ವಭಾವದ್ದು. ಪೃಥಕ್-ಪ್ರತ್ಯೇಕವೆಂಬುದೇ ಇಲ್ಲ. ಒಟ್ಟಿನಲ್ಲಿ, ನಮ್ಮ ಆಧ್ಯಾತ್ಮಜ್ಞಾನ ನಮ್ಮ ಪರಂಪರೆ, ಪುರಾತನವಾದಂತೆ, ನಿತ್ಯನೂತನವೂ ಆಗಿದೆ.

## ವೀರಶೈವ ತತ್ತ್ವಜ್ಞಾನದ ಪರಂಪರೆ ಮತ್ತು ಪ್ರಗತಿ

ಶೈವಧರ್ಮ ಕ್ರಿಸ್ತಪೂರ್ವದಿಂದ, ಕ್ರಿಸ್ತೋತ್ತರದ ಇಂದಿನ ಕಾಲದವರೆಗೂ ಹಬ್ಬಿ ಪಸರಿಸಿ, ಹಸುರಾಗಿಯೇ ಉಳಿದು ಬಂದಿರುವ ಧರ್ಮ. ಸಹಸ್ರಾಧಿಕ ವರ್ಷಗಳ ಅವಧಿಯಲ್ಲಿ 'ವೀರಶೈವ' ಧರ್ಮ ಮತ್ತು ತತ್ತ್ವಜ್ಞಾನ ವಿಕಾಸವಾಗುತ್ತಾ ಬಂದಿದೆ. ಅದರ ದೂರದ ಬೇರುಗಳು, ವೇದ ಉಪನಿಷತ್ತುಗಳಲ್ಲಿವೆ. ವೀರಶೈವ ಧರ್ಮಚಿಂತನೆ ಹರಳುಗೊಂಡುದು ಆಗಮಗಳ ಕಾಲದಲ್ಲಿ. ಮುಖ್ಯವಾಗಿ, ಪ್ರಸಿದ್ಧವಾಗಿರುವ ೨೮

ಶಿವಾಗಮಗಳಲ್ಲಿ ಈ ವೀರಶೈವ ಧರ್ಮ-ತತ್ತ್ವಜ್ಞಾನ ವಿಕಾಸವಾಗಿರುವ ರೀತಿ, ಪಡೆದುಕೊಂಡ ಸ್ಥಿತ್ಯಂತರಗಳು, ಅವುಗಳಿಗೆ ಕಾರಣವಾದ "ಚಿಂತಕರು-ಆಚಾರ್ಯರು-ಶರಣರು-ಅನುಭಾವಿಗಳು" ಯಾರು ಯಾರೆಂಬ ಸಮಗ್ರ ಇತಿಹಾಸ ಇನ್ನೂ ರೂಪಿತವಾಗಬೇಕಾಗಿದೆ. ಅಲ್ಲದೆ, ವೀರಶೈವಧರ್ಮ ರೂಪಿಸಿದ ಸಮಾಜದ ವಿಕಾಸಶೀಲ ಚಿತ್ರ ಇನ್ನೂ ಮಸಕು- ಮಸಕಾಗಿದೆ. ಶೈವಾಚಾರ್ಯರು, ಪಂಚಾಚಾರ್ಯರು, ಬಸವಾದಿ ಪ್ರಮಥರು, ನೂರೊಂದು ವಿರಕ್ತರು, ಶಿವಯೋಗಿಗಳ ಪರಂಪರೆಯ (ಐತಿಹಾಸಿಕ ದಾಖಲೆಗಳ ಅಲಭ್ಯತೆ ಹಾಗೂ ಅಸಮರ್ಪಕತೆಯ ನಡುವೆಯೂ) ತರ್ಕಬದ್ಧವಾದ ಚರಿತ್ರೆಯ ರಚನೆಯ ಆವಶ್ಯಕತೆ ಇದೆ. ಈ ನಿಟ್ಟಿನಲ್ಲಿ ನಡೆದ ಪ್ರಯತ್ನಗಳು ಆಂಶಿಕವಾಗಿವೆ. ಪಾರ್ಶ್ವದೃಷ್ಟಿಯವಾಗಿವೆ. ಡಾ. ಆರ್.ಸಿ. ಹಿರೇಮಠ "ಮಹಾಯಾತ್ರೆ", ಹೊನ್ನಾಳಿಯ ಶ್ರೀಮಠ ಪ್ರಕಟಿಸಿದ "ವೀರಶೈವ ಧರ್ಮಚಿಂತನೆ" -ಗಮನಾರ್ಹ ಕೃತಿಗಳು, ತರ್ಕಾತೀತವಾದುವುಗಳಲ್ಲ. ಅಲ್ಲದೆ ವೀರಶೈವ ಅನುಸಂಧಾನ ಸಂಸ್ಥಾನ ಪ್ರಕಟಿಸಿರುವ "ಶಿವಾಗಮ"ಗಳು, ಶರಣ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು ಮುಖ್ಯವಾಗಿ ಡಾ. ತಿಪ್ಪೇರುದ್ರ ಸ್ವಾಮಿಯವರ ಕೃತಿಗಳ (ಉದಾ. ವೀರಶೈವ ದೀಪ್ತಿ, ವಚನಗಳಲ್ಲಿ ವೀರಶೈವಧರ್ಮ ಇ.ಇ.) ಡಾ. ಜಚನಿ, ಶ್ರೀ ಹರ್ಡೇಕರ ಮಂಜಪ್ಪ, ಡಾ. ನಂದೀಮಠ, ಪ್ರೊ. ಸಾಖರೆ, ಡಾ. ಮಲ್ಲೇದೇವರು, ಪೂಜ್ಯ ಮುಂಡರಗಿ ಜಗದ್ಗುರುಗಳು ಇ.ಇ. ಅನುಭಾವಿ ಪಂಡಿತರ ಕೊಡುಗೆಗಳ ಹಿನ್ನೆಲೆಯಲ್ಲಿ ಆಧುನಿಕ ತತ್ತ್ವಜ್ಞಾನದ ರೀತಿಯಲ್ಲಿ ಸಮಗ್ರ ವೀರಶೈವ ತತ್ತ್ವಜ್ಞಾನದ ಅಧಿಕೃತ ಇತಿಹಾಸ ರಚನೆಯಾಗಬೇಕಾಗಿದೆ. ಪ್ರಸ್ತುತ 'ವೇದಾಗಮಗಳ-ಶಿವಶರಣರು' ಎಂಬ ವಿಚಾರ ಸಂಕಿರಣ ಒಂದು ಪ್ರಗತಿಪರ ಹೆಜ್ಜೆಯಾಗಿದೆ. ವಚನ ವಾಙ್ಮಯದ ಪೃಥಕ್ಕರಣದ ಇಂದಿನ ದಿನಮಾನಗಳಲ್ಲಿ, ಅಲ್ಲಿನ ಮಹತ್ವದ ವಿಚಾರಗಳ ನೆಲೆ-ಬೆಲೆ ಸಂಶೋಧನೆಯ ಈ ವಿಚಾರ ಸಂಕಿರಣ ವಿಶೇಷ ಬೆಳಕು ಚೆಲ್ಲುವುದೆಂಬ ನಿರೀಕ್ಷೆ ಇದೆ. ಕೂಡಲ ಸಂಗಮದ ಗುರು-ವಿರಕ್ತ ಶ್ರೀಗಳ "ಸಮನ್ವಯ ಸಮಾವೇಶ"ದ ಹಿನ್ನೆಲೆಯಲ್ಲಿ ಇದೊಂದು ಅತ್ಯಗತ್ಯ ಪರಿಶ್ರಮ ಎನ್ನಲಡ್ಡಿಯಿಲ್ಲ.

ಇಂಥ ಶತಮಾನಗಳ ಪರಂಪರೆಯ ಧರ್ಮಚಿಂತನೆಯಲ್ಲಿ ಪ್ರಮುಖ ವಚನಕಾರರ "ಕೊಡುಗೆ"ಗಳ ಹಿನ್ನೆಲೆಯನ್ನು ಪರಿವೀಕ್ಷಿಸುವ ದಾರಿಯಲ್ಲಿ, ಚಂದಿಮರಸ ಎಂಬ ಅನುಭಾವಿ-ವಚನಕಾರನಲ್ಲಿ ಮೂಡಿಬಂದಿರುವ ವೇದಾಗಮ-ಉಪನಿಷತ್ ಮುಂತಾದ "ವೇದ ಪರಂಪರೆಯ ಜ್ಞಾನ ಕಿರಣ"ದ ಸ್ಫುರಣಗಳನ್ನು ಕಾಣಿಸುವ ವಿನೀತ ಪ್ರಯತ್ನ ಇದಾಗಿದೆ. ನನ್ನ ಪರಿಮಿತ ಜ್ಞಾನದ ಹಿನ್ನೆಲೆಯ ಅಭಾವದ ಎಚ್ಚರ ನನಗಿದೆ. ನಿಮ್ಮ 'ಸಹೃದಯ'ತೆಗೆ ಸ್ವಾಗತವಿದೆ. ನನ್ನ ಅಜ್ಞಾನ, ಅರಜ್ಞಾನವನ್ನು ಕ್ಷಮಿಸಿರಿ. ಆದರೆ, ಇಲ್ಲಿನ ಮೌಲಿಕ ವಿಚಾರಗಳಿಗೆ ಬೆಲೆ ಕೊಡಿ.

ಬಸವಪೂರ್ವ ಯುಗದ, ಜೇಡರ ದಾಸಿಮಯ್ಯ, ಕೆಂಭಾವಿ ಭೋಗಣ್ಣ, ನಿಜಗುಣನೆಂಬ ವಚನಕಾರ ಅನುಭಾವಿಗಳ ಪರಿಸರದಲ್ಲಿ ಕಾಣಸಿಗುವ ಶಿವಶರಣ

ಚಂದಿಮರಸ. ಹೆಚ್ಚಿನ ವಚನಕಾರರ ಲೌಕಿಕ ಇತಿಹಾಸ ಕಣ್ಮರೆಯಾದಂತೆ, ಚಂದಿಮರಸನ 'ಇತಿವೃತ್ತ'ವೂ ತೆರೆಯ ಹಿಂದೆ ಸರಿದಿದೆ. ತಮ್ಮ ಲೌಕಿಕದ 'ಬದುಕಿಗಿಂತ, ಪಾರಲೌಕಿಕ ಸಾಧನೆಯೇ ಮುಖ್ಯ'ವೆಂಬ ಚಿಂತನೆಯ ಅನುಭಾವಿಗಳ ದೃಷ್ಟಿಯೇ ಇದಕ್ಕೆ ಕಾರಣ. ಅವರ ವಚನಗಳಲ್ಲಿ ದೊರೆವ ಸೂಚನೆಗಳು, ಮುಂದಿನ ಪುರಾಣಕಾರರು ಉಳಿಸಿ-ಬೆಳೆಯಿಸಿಕೊಂಡು ಬಂದಿರುವ 'ಮಹಿಮಾ ವರ್ಣನೆ'ಗಳ ಹಿಂದಿರಬಹುದಾದ "ಸತ್ಯಸಂಗತಿ"ಗಳ ಆಧಾರದಿಂದ ಚಂದಿಮರಸನ ಜೀವನ ಕಥನ-ಆತನ ವಿಚಾರ ಮಂಥನಕ್ಕೆ ಹಿನ್ನೆಲೆಯಾಗಿ ಮಾತ್ರ -ಇಲ್ಲಿ ಪರಿಶೀಲನೆಗೆ ಎತ್ತಿಕೊಂಡಿದೆ. ಅದರ ಸಮಗ್ರ ಸಂಶೋಧನೆ ಇಲ್ಲಿ ನನಗೆ ಪ್ರಸ್ತುತವಲ್ಲ.

ಇಂದಿನ ರಾಯಚೂರು ಜಿಲ್ಲೆಯ ಕೆಂಭಾವಿ ಅನೇಕ ಪುರಾತನರ ಕೇಂದ್ರ, ಅನೇಕ ಧರ್ಮಗಳ ಕೇಂದ್ರವೂ ಆಗಿದ್ದಿತು. ಚಂದಿಮರಸ ಕೆಂಭಾವಿಯ ಅರಸನಾಗಿದ್ದನೆಂದೂ, ಕೆಂಭಾವಿ ಭೋಗಣ್ಣನೆಂಬ ಶರಣನನ್ನು ಊರು ಬಿಟ್ಟು ಕಳಿಸಿದ, ಪವಾಡ ಸದೃಶವಾದ, ಆತನ ಮರಳಿ ಬರುವಿಕೆಯ ಹಿನ್ನೆಲೆಯಲ್ಲಿ ಚಂದಿಮರಸನಲ್ಲಿ "ಧರ್ಮ ಪರಿವರ್ತನೆ" ಆಗಿ, ಕೃಷ್ಣಾ ತೀರದ "ಚಿಮ್ಮಲಗಿ (ಸೀಮುಲಗಿ) ಕ್ಷೇತ್ರದಲ್ಲಿದ್ದ "ನಿಜಗುಣ"ನೆಂಬ ಅನುಭಾವಿಯಿಂದ 'ದೀಕ್ಷೆ' ಪಡೆದು, ತ್ಯಾಗ ಜೀವನ ನಡೆಯಿಸಿದನೆಂಬುದು ಈಗ ತಿಳಿದುಬರುವ ಇತಿಹಾಸ. ಆತನ ಸಮಕಾಲೀನರ ಜೀವನ ಕಥನದಲ್ಲಿ ಹೆಚ್ಚಿನ ಸಂಗತಿಗಳೇನೂ ತಿಳಿದುಬರುತ್ತಿಲ್ಲ. ಆತನ ೧೬೦ ವಚನಗಳಲ್ಲಿ ಕೆಲವು ಸೂಚನೆಗಳಿವೆ. ಈತ ಬಸವಣ್ಣನವರ 'ಹಿರಿಯ ಸಮಕಾಲೀನ'ನಾಗಿರುವ ಸಾಧ್ಯತೆಗಳೇ ಹೆಚ್ಚು. ಈತನ ಕೆಲವು ವಚನಗಳು ಬಸವಣ್ಣ-ಅಕ್ಕಮಹಾದೇವಿಯರ ವಚನಗಳಂಥ ಭಾವ ಮತ್ತು ಅಭಿವ್ಯಕ್ತಿ ದೊರೆಯುವುದು, ಸಂಶಯಕ್ಕೆಡೆ ಮಾಡಿದೆ. ಅಲ್ಲದೆ,

'ದಾಸಯ್ಯನೆನಗೆ ಸಾಲೋಕ್ಯನಯ್ಯಾ
ಚೆನ್ನಯ್ಯನೆನಗೆ ಸಾಮೀಪ್ಯವಯ್ಯಾ
ಕಕ್ಕಯ್ಯನೆನಗೆ ಸಾರೂಪ್ಯನಯ್ಯಾ
ಮಾಚಯ್ಯನೆನಗೆ ಸಾಯುಜ್ಯನಯ್ಯಾ
..........................................
ಪುರಾತರೊಳಗಾಗಿ ಬಸವಣ್ಣನ ಡಿಂಗರಿಗೆ
ಚನ್ನಬಸವಣ್ಣನ ಹಳೆಯನೆಂದು
ತಮ್ಮೊಕ್ಕುದನಿಕ್ಕಿ ಸಲಹಿದರ ಕಾಣಾ
ಸಿಮ್ಮಲಿಗೆಯ ಚೆನ್ನರಾಮಾ'

(ವ. ೭೬, ಸಂಕೀರ್ಣ ವ.ಸಂ. ೨)

ಎಂಬ ವಚನ ಚಂದಿರಮರಸನದೇ ಎಂಬ ಸಂಶಯ ಮೂಡುತ್ತದೆ. ಅದೇ ರೀತಿ, ವಿರಕ್ತರನ್ನು ಛೇಡಿಸುವ ಕೆಲವು ವಚನಗಳು, 'ಪ್ರಕ್ಷಿಪ್ತ'ವಾಗಿರಬಹುದೆಂದು ತೋರುತ್ತದೆ. ಆದರ, ಚಂದಿಮರಸನ ವಚನಗಳಲ್ಲಿ - ವೇದ-ಆಗಮ-ಶಾಸ್ತ್ರ-ಪುರಾಣಗಳ ಹಿನ್ನೆಲೆಯಲ್ಲಿ

"ಸಮಗ್ರ ವೀರಶೈವ ತತ್ವಜ್ಞಾನ ಸಂಪೂರ್ಣ"ವಾಗಿ ಕಾಣಸಿಗುತ್ತಿರುವುದು ಅತ್ಯಾಶ್ಚರ್ಯಕರ ಸಂಗತಿಯಾಗಿದೆ. ಏಕೆಂದರೆ, ಬಸವಪೂರ್ವದ ಹಿರಿಯ ವಚನಕಾರರಲ್ಲಿ ಇಂಥ ಸಮಗ್ರ ದೃಷ್ಟಿ ಕಾಣುತ್ತಿಲ್ಲದಿರುವ ಹಿನ್ನೆಲೆಯಲ್ಲಿ ಚಂದಿಮರಸನ ವಚನಗಳನ್ನು ತೀಕ್ಷ್ಣವಾಗಿ ಪರಿಶೀಲಿಸಬೇಕಾಗಿದೆ. ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣನವರ "ಸಾಮೂಹಿಕ ಗೆಯ್ಮೆ"ಯ ಫಲವಾಗಿ ಮೂಡಿಬಂದಿದೆಯೆಂದು ನಂಬಿರುವವರಿಗೆ ಇದೊಂದು ಸವಾಲು ಆಗಿದೆ. ವೇದಾಗಮಗಳ ಚಿಂತನೆಯನ್ನು ಸಾರೋದ್ಧಾರವಾಗಿ ಬಳಸಿರುವ ಚಂದಿಮರಸನ ವಚನಗಳು ಆತ ಬೋಧಿಸುವ ತತ್ವಜ್ಞಾನದ ಪರಿಣತ ಸ್ಥಿತಿ, ಬಸವಾದಿಗಳಿಗೆ ಹಿನ್ನೆಲೆಯಾಗಿರಬೇಕೆಂಬುದೇ ಸತ್ಯವೆಂದು ತೋರುತ್ತದೆ. ಬಸವಪೂರ್ವದ ತಮಿಳು ಶೈವದ ಇತಿಹಾಸ, ಬಸವನ ಹಿರಿಯ ಸಮಕಾಲೀನರ ಸಮಗ್ರ ಚಿಂತನೆ, ಮುಖ್ಯವಾಗಿ ಕೊಂಡಗುಳಿ ಕೇಶಿರಾಜ, ಜೇಡರ ದಾಸಿಮಯ್ಯ, ಕೆಂಭಾವಿ ಭೋಗಯ್ಯ ಮುಂತಾದವರ ವಿಚಾರಗಳ ತೌಲನಿಕ ಅಧ್ಯಯನ ಇದನ್ನು ಸಾಬೀತುಗೊಳಿಸುತ್ತದೆ. ಪರಂಪರೆಯ ಶೈವಧರ್ಮದ ಶಾಖೆಗಳು ಕಾಳಾಮುಖ, ಕಾಪಾಲಿಕ ಇವುಗಳಲ್ಲಿ ವೀರಶೈವ ಧರ್ಮದ ಪ್ರಾರಂಭಿಕ ದೆಸೆಯನ್ನು ಬಸವಪೂರ್ವ ವಚನಕಾರರಲ್ಲಿ ಕಾಣುತ್ತೇವೆ.[೨] ಶಿವಶರಣರು ಶೈವಧರ್ಮದ ಮೌಲಿಕ ಅಂಶಗಳ "ಕೂಡಲ ಸಂಗಮ" ಮಾಡಿದರು.

ಚಂದಿಮರಸನ ಇತಿವೃತ್ತಕ್ಕೆ ಸಂಬಂಧಿಸಿದ, ಇನ್ನೆರಡು ಮುಖ್ಯ ಸಂಗತಿಗಳತ್ತ ಇಲ್ಲಿ ಗಮನಹರಿಸುವುದು ಸೂಕ್ತ.

೧. ಚಂದಿಮರಸನ 'ಗುರು'ವಾಗಿರಬಹುದಾದ "ವಚನಕಾರ ನಿಜಗುಣ"ನ ಹಿನ್ನೆಲೆ-ಮುನ್ನೆಲೆಗಳೇ ಖಚಿತವಾಗಿಲ್ಲ. ದೊರೆಯುವ ೧೬ ವಚನಗಳಲ್ಲಿ ವೀರಶೈವ ತತ್ವಜ್ಞಾನದ ಪರಿಣತಿ ಹಾಗೂ ವೇದಾಗಮ ವಿಚಾರ ಹಾಗೂ ಶ್ಲೋಕಗಳ ಸಾರೋದ್ಧಾರವಾದ ಬಳಕೆ ಆತನ "ಅನುಭಾವಿತ್ವ"ವನ್ನು ಸ್ಪಷ್ಟಗೊಳಿಸುತ್ತದೆ. ಅಕ್ಕಮಹಾದೇವಿ ಮುಂತಾದವರು "ನಿಜಗುಣನ ಯೋಗ" ಶಕ್ತಿಯನ್ನು ಸ್ಮರಿಸಿರುವರು.

೧. ಆನು ನೀನೆಂಬ ಸಂದೇಹ ಗಗನಕ್ಕೆ ಕೈಯಿಟ್ಟಂತೆ
ಕೈ ಗಗನವ ನುಂಗಿತ್ತೋ, ಕೈಯ ಗಗನ ನುಂಗಿತ್ತೊ ಎಂಬುವ
ನಿನ್ನ ನೀ ತಿಳಿದು, ತಿಳಿವಿನ ಕಣ್ಣಿಂದ ನೋಡಯ್ಯಾ
ನಿಜಗುಣನೆಂಬ ಆನಂದರತ್ನವ - ನುಂಗಿದ ರುಚಿಯನು
ಏನೆಂದು ಉಪಮಿಸುವೆ? (ವ. ೩, ಪು. ೪೧೭, II ಸಂಪುಟ)

ಅದೇ ರೀತಿ,

೨. ಸರ್ವಮಯ ಆತ್ಮನೆಂದಲ್ಲಿ
ರಕ್ಷಿಸಿ ಶಿಕ್ಷಿಸಿಹೆನೆಂಬುದೇನೋ?
'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬಲ್ಲಿ

೨. ವೀರಶೈವದ ಪ್ರಾರಂಭಿಕ ದೆಸೆಯನ್ನು ಶೈವಾಗಮಗಳಲ್ಲಿ ಕಾಣುತ್ತೇವೆ. ಕಾಪಾಲಿಕರೂ ಕಾಳಾಮುಖಿರೂ ಅದರಿಂದ ಪ್ರಭಾವಿತರಾಗಿದ್ದಾರೆ. (ಸಂ.)

ಬೇರೊಂದರಿತು, ಕುರಿತು, ಕಾಂಬುದೇನು?
ಇದಿರಿಗೆ ತಾನಿಲ್ಲ ತನಗೆ ಇದಿರಿಲ್ಲ ಎಂದಲ್ಲಿ
ಗಜಬಜೆಯ ಕುಜನವೇತಕ್ಕೆ?
ಬೇರಿಗೆ ನೀರನೆರೆದಲ್ಲಿ ಶಾಖೆಗೆ ಸಂದುಂಟೆ?
ಅಂಗ-ಪ್ರಾಣಲಿಂಗ ಒಂದೆಂದಲ್ಲಿ
ಅರ್ಪಿತಕ್ಕೆ ಹಿಂದು-ಮುಂದಿಲ್ಲ
ನಿಜಗುಣಶಿವಯೋಗಿಯ ಯೋಗಕ್ಕೆ ಮುನ್ನವೆ ಇಲ್ಲೆ.
(ವ. ೧೬, ಪು. ೪೧೭, II ಸಂಪುಟ)

೨. ಜಡ-ಅಜಡನೆಂಬುಭಯ ಕೂಟ ಉಳ್ಳನ್ನಕ್ಕ
ನಾನೆಂಬುದೇನು? ವಿಚಾರಕ್ಕೆ ನೀನೆಂಬುದೇನು?
ಗೆಲ್ಲ-ಸೋಲಕ್ಕೆ ಹೋರಿ ಬಳ್ಳಿದನಾದೆನೆಂಬಲ್ಲಿಯೆ
ಕಳ್ಳ ಕದ್ದ ಗಜವೆಲ್ಲಿ ಅಡಗಿ ಮಾರೂದು ಹೇಳಾ
ಬಲ್ಲವನಾದೆನೆಂಬಲ್ಲಿಯೆ ಉಳಿಯಿತು
ನಿಜಗುಣಯೋಗಿಯ ಯೋಗಕ್ಕೆ ಸಲ್ಲದ ಗುಣ
(ವ. ೮, ಪು. ೪೧೭, II ಸಂಪುಟ)

ಇಂಥ ಅರ್ಥಪೂರ್ಣ, ಭಾವಪೂರ್ಣ, ಚಿಂತನಪೂರ್ಣ ವಚನಗಳ ಕರ್ತೃವಾದ ಆ 'ನಿಜಗುಣ'ನ ಶಿಷ್ಯನಾದ "ಚಂದಿಮರಸ"ನಲ್ಲಿ -ಈ ಎಲ್ಲ ಸಾರ-ಸದ್ಗುಣಗಳು, ವಚನ ರಚನೆಯ ರೀತಿ ಬಿಂಬಿತವಾಗಿರುವುದು ಆಶ್ಚರ್ಯಪಡುವಂಥದೇನಲ್ಲ. ಬಸವಪೂರ್ವ(?) ದವನಾಗಿರಬಹುದಾದ ಈ 'ನಿಜಗುಣಯೋಗಿ'ಯೂ, "ವೀರಶೈವ ತತ್ತ್ವಚಿಂತನೆ, ಶಿವಯೋಗ, ಗುರು-ಲಿಂಗ-ಜಂಗಮ-ವಿಚಾರ"ಗಳ್ನು ಅರಿತ ಮುಂಚೂಣಿಗರಲ್ಲಿ ಗಣ್ಯನಲ್ಲವೆ? ಗುರುವಿನಂತೆ ಈ ಶಿಷ್ಯ, ಈ ನಿಜಾನಂದ ಪ್ರಸಾದಿ ಚಂದಿಮರಸ (ವ. ೧೫೬). ಈತ ಕೆಂಭಾವಿಯ ಅರಸನಾಗಿದ್ದನೆ? ಅರಸನಾಗಿದ್ದವನಿಗೆ ಇಂಥ ಧರ್ಮ, ತತ್ತ್ವ ಪರಿಣತಿ ದೊರೆತಿರುವುದಕ್ಕೆ ಇತರ ಕಾರಣಗಳಿರಬೇಕು. ಅಲ್ಲವೆ? ಸಂಶೋಧನೆ ಮಾಡಬೇಕಾದ ಸಂಗತಿ. ಇರಲಿ. ಏನೇ ಆದರೂ ಪರಂಪರೆಯಿಂದ ಉಳಿದುಬಂದಿರುವ ಚಂದಿಮರಸನ ವಚನಗಳು ಆತನ ಲೌಕಿಕ ಬದುಕಿಗಲ್ಲದಿದ್ದರೂ, ಆಧ್ಯಾತ್ಮಿಕ ನಿಲುಮೆಗೆ ಜ್ವಲಂತ ಸಾಕ್ಷಿಗಳು. ಅಲ್ಲಿನ 'ವೇದ-ಆಗಮ-ಪುರಾಣ-ಶಾಸ್ತ್ರ'ಗಳ ಪ್ರಸ್ತಾಪ ನಮಗೆ ಇಂದು ಚಿಂತನೀಯ ಸಂಗತಿ. ಇದರಿಂದ ಬಸವಪೂರ್ವದ ವೀರಶೈವದ 'ಗತಿ-ಸ್ಥಿತಿ' ಸಾಬೀತಾಗುತ್ತದೆ.

## ವೇದ... ವೀರಶೈವ ದರ್ಶನ

೧. "ವೇದ-ಉಪನಿಷತ್ತುಗಳೇ ವಿಶ್ವದ ಸಾಂಸ್ಕೃತಿಕ ಸಂಪತ್ತು. ವಿಶ್ವಜೀವನದ ಗಾಢ ರಹಸ್ಯವೇ ಈ ವೇದ-ಉಪನಿಷತ್ತುಗಳ ಮಾತುಗಳಲ್ಲಿ ಹೂತಿದೆ. ಇವು ವಿಶ್ವ ವಿಕಾಸದ ಮುಖಗಳು. ಮನುಕುಲ ಇಂದಿಗೂ ಸಾಧಿಸಲು ಬಯಸುವ ಆದರ್ಶ, ತಿಳಿಯ ಬಯಸುವ ವಿಜ್ಞಾನ, ಮಾಡಬಯಸುವ ಕರ್ತವ್ಯ, ಪಡೆಯ ಬಯಸುವ

ಫಲ. ಇವುಗಳನ್ನು ತಿಳಿಸುವುದೇ ವೇದ-ಉಪನಿಷತ್ತುಗಳ ಗುರಿ. ...ಇದರಿಂದ (ವಿಶ್ವದ) ನಾಗರಿಕತೆಗಳ ಈ ಭವ್ಯ ಸಂಸ್ಕೃತಿ ನಿರ್ಮಾಣವಾಗಿದೆ. ವೇದ ಎಂದರೆ ಸಂಹಿತಾ, ಬ್ರಾಹ್ಮಣ, ಆರಣ್ಯಕ ಹಾಗೂ ಉಪನಿಷತ್ತುಗಳು" (ಪಂ|| ಜಯತೀರ್ಥಾಚಾರ್ಯ ಮಳಗಿ- ವೀರಶೈವ ದರ್ಶನ, ಪು. ೧, ಕ.ವಿ.ವಿ ಪ್ರಕಟನೆ).

೨. ಡಾ|| ತಿಪ್ಪೇರುದ್ರಸ್ವಾಮಿಗಳು ತಮ್ಮ ವಚನಗಳಲ್ಲಿ ವೀರಶೈವಧರ್ಮ ಎನ್ನುವ ಗ್ರಂಥದಲ್ಲಿ (ಪು. ೧೯) 'ಉಪನಿಷತ್ತು'ಗಳನ್ನು 'ವೇದಾಂತ' ಎಂದು ಕರೆದರು. ಭಾರತೀಯ ಜೀವನದ ಎಲ್ಲ ರಂಗಗಳಲ್ಲಿ ಈ ವೇದಾಂತದ ಪ್ರಭಾವ ವ್ಯಾಪಿಸಿತು. ಕಾಲಕಾಲಕ್ಕೆ ಉಂಟಾದ ಧಾರ್ಮಿಕ ಜಾಗೃತಿಗಳು ವೇದಾಂತದ ಪ್ರಭಾವದಿಂದಲೇ ಪೋಷಿತವಾದವು. ೧೨ನೇ ಶತಮಾನದ ಶರಣರ ಕ್ರಾಂತಿಗೂ ಈ ಮಾತು ಅನ್ವಯಿಸುತ್ತದೆ... ಶರಣರು ವೇದಾಂತ ತತ್ವವನ್ನು ಎತ್ತಿಹಿಡಿದರು."

೩. ಈ ಉಪನಿಷತ್ತಿನ ವಿಚಾರಧಾರೆಯನ್ನು ಹೀರಿಕೊಂಡು ವೀರಶೈವ ಸಿದ್ಧಾಂತ, ಹರಿದಾಸ ಸಾಹಿತ್ಯ ಬೆಳೆದು ಮುಂದುವರಿಯಿತು. ಅರ್ಥರಹಿತ ಸಂಪ್ರದಾಯಗಳನ್ನು ಖಂಡಿಸಿ ಉಪನಿಷತ್ತುಗಳ ಹಲವು ಹತ್ತು ಮುಖತತ್ವಗಳನ್ನೂ ಶರಣರು ಎತ್ತಿಹಿಡಿದರು. ಹೃದಯಕ್ಕೆ ಹತ್ತಿರವಾಗುವ ಭಾಷೆಯಲ್ಲಿ, ಮನಕ್ಕೆ ಮುಟ್ಟುವ ಶೈಲಿಯಲ್ಲಿ ವಚನಗಳು ಜೀವನದ ಬಗ್ಗೆ ತಿಳಿಸಿದುವು. ಬದುಕಿಗೆ ಹೊಸ ಆಯಾಮ ನೀಡಿದುವು ಬದುಕಿನ ಧ್ಯೇಯ-ಧೋರಣೆಗಳೆಡೆಗೆ ಗಮನ ಸೆಳೆದವು... (ಪು. ೧)

....ವೇದ, ಉಪನಿಷತ್ತು ಸೂತ್ರ ಇತಿಹಾಸ, ಪುರಾಣಗಳಲ್ಲಿಯ ಹಲವು ತತ್ವಗಳನ್ನು ಸ್ವೀಕರಿಸಿ ತನ್ನಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ, ಮುಂದೆ ಬಂದ ಷಡ್‌ದರ್ಶನಗಳ ಪ್ರಭಾವಕ್ಕೂ ವೀರಶೈವ ಸಿದ್ಧಾಂತ ಒಳಪಟ್ಟಿತು... (ಪು. ೩)

....ಗೌತಮರ ನ್ಯಾಯಶಾಸ್ತ್ರ... ಅನೇಕ ತತ್ವ-ಸತ್ವಗಳನ್ನು ಮುಂದೆ ಬೆಳೆದ ಈ ವೀರಶೈವ ಸಿದ್ಧಾಂತ ಸ್ವೀಕರಿಸಿ, ತನ್ನ ವಿಚಾರಗಳನ್ನು ಪರಿಷ್ಕರಿಸಿ ಮಂಡಿಸಿತು (ಪು.೪) (ಪಂ|| ಜಯತೀರ್ಥಾಚಾರ್ಯ ಮಳಗಿ-ವೀರಶೈವ ದರ್ಶನ, ಕ.ವಿ.ವಿ. ಪ್ರಕಟನೆ, ಕ್ರಿ.ಶ. ೨೦೦೦)

ಇಂಥ ವೇದಾಗಮ ಉಪನಿಷತ್ತುಗಳ 'ಜೀವನ ದರ್ಶನ' ವೀರಶೈವ ಆಚಾರ್ಯರ, ಶಿವಶರಣರ ವಿಚಾರಧಾರೆಯನ್ನು ರೂಪಿಸಿದಂತೆ, ಅದರ ಪರಿಷ್ಕರಣವೂ ನಡೆಯಿತು. ಬಸವಾದಿಗಳೆಲ್ಲರ ವಚನಗಳಲ್ಲಿ ಈ ಸತ್ಯ ಗೋಚರವಾಗುತ್ತದೆ. ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಉರಿಲಿಂಗಪೆದ್ದಿ, ಹಡಪದ ಅಪ್ಪಣ್ಣ, ತೋಂಟದ ಸಿದ್ಧಲಿಂಗ, ಷಣ್ಮುಖಸ್ವಾಮಿ ಮುಂತಾದವರ ಸಾಲಿನಲ್ಲಿ ಇಲ್ಲಿನವರೆಗೆ ನಗಣ್ಯನಾಗಿದ್ದ ಚಂದಿಮರಸ, ಗಣ್ಯಮಾನ್ಯ ಸ್ಥಾನವನ್ನು ತನ್ನ ಹಕ್ಕಿನಿಂದ ಪಡೆಯುತ್ತಾನೆ. ಇತರ ಶರಣರು ಪ್ರಾಸ್ತಾವಿಕವಾಗಿ ಈ ವೇದಾಗಮ ಪ್ರಸ್ತಾಪಿಸಿದರೆ, ಶೈವ ಪರಂಪರೆಯಲ್ಲಿ ಬೆಳೆದು, ವೀರಶೈವ ಚಿಂತನ ಪರಂಪರೆಯನ್ನು ತನ್ನ ಗುರು 'ನಿಜಗುಣ'ನ ಬಳಿವಿಡಿದು, ನಡೆದು ಬಂದು, ತನ್ನ ಸ್ವವಿಚಾರಗಳನ್ನು ತನ್ನ ವಚನಗಳಲ್ಲಿ ಮಂಡಿಸಿರುವನು. ಈತನ ಬಹುಪಾಲು ವಚನಗಳಲ್ಲಿ

ವೇದಾಗಮಗಳ ಪ್ರಸ್ತಾಪ ಬರುತ್ತಿದೆ. ಆತನ ಪರಿಣತಿ ಹಾಗೂ ಪರಿಷ್ಕೃತಮತಿ ವ್ಯಕ್ತವಾಗುತ್ತದೆ.

೧. ಪಂಚವಿಂಶತಿ ತತ್ತ್ವಗಳ ವಿಚಾರವನ್ನು ವಿವರಿಸುವ ಈ ಕೆಳಗಿನ ವಚನದಲ್ಲಿ, ಚಂದಿಮರಸನ 'ಪರಿಷ್ಕೃತ ನಿಲವು' ವ್ಯಕ್ತವಾಗಿದೆ.

ಪೃಥ್ವಿ-ಅಪ್ಪು, ತೇಜ, ವಾಯು ಆಕಾಶವೆಂಬಿವು
ಪಂಚಮಹಾಭೂತಂಗಳು.... ಪಂಚಪ್ರಾಣಗಳು...
ಪಂಚಕರ್ಮೇಂದ್ರಿಯಗಳು.... ಪಂಚ ಜ್ಞಾನೇಂದ್ರಿಯಗಳು...
ಅಂತಃಕರಣ ಚತುಷ್ಟಯಂಗಳು,
.....ಕೂಡಿ ಚೇಷ್ಟಿಸುವಾತನೇ ಜೀವಾತ್ಮನು...
ಅದೆಂತೆಂದಡೆ,
'ಮನಶ್ಚತುರ್ವಿಂಶಕಂ ಚ ಜ್ಞಾತೃತ್ವಂ ಪಂಚವಿಂಶಕಂ...
...............................................
...............................................
ಇಂತೀ ಪಂಚವಿಂಶತಿ ತತ್ವಂಗಳುತ್ಪತ್ತಿಯು
ನಿಮ್ಮ ನೆನಹು ಮಾತ್ರದಿಂದಾದವಾಗಿ,
ಇವರ ಗುಣಧರ್ಮಗಳು ನಿಮಗಿಲ್ಲ ನೋಡಾ,
ಸಿಮ್ಮಲಿಗೆಯ ಚೆನ್ನರಾಮಾ. (ವ. ೧೦೧, ಪು. ೨೦೯)

ಈ ಪಂಚವಿಂಶತಿ ತತ್ತ್ವಗಳ ಜಿಜ್ಞಾಸೆಯೇ, ಎಲ್ಲ ದರ್ಶನದ ಕೇಂದ್ರ. ಈ ವಿಚಾರವನ್ನು ಚರ್ಚಿಸುವ ವೇದಾಂತ.

'ಕುಂಬಾರನು ಮಾಡಿದ ಕುಂಭ ಕುಂಬಾರನಲ್ಲ
ಬಡಗಿ ಮಾಡಿದ ವಸ್ತು ಬಡಗಿಯಲ್ಲ.....'

ಅದೇ ರೀತಿ ವಿಶ್ವಸೃಷ್ಟಿ ಮಾಡಿದ "ಪರಬ್ರಹ್ಮ" ವಿಶ್ವಕ್ಕತೀತನೆಂದು ನಿರೂಪಿಸುತ್ತದೆ. ಅದನ್ನು ಚಂದಿಮರಸ, "ಶರಣನ ನೆನಹು ಮಾತ್ರದಿಂದ ಆಯಿತೆಂದು" ಪ್ರತಿಪಾದಿಸುತ್ತಾನೆ, ಪರಿಷ್ಕರಿಸುತ್ತಾನೆ. ಮುಂದಿನ ವಚನದಲ್ಲಿ

'ಬಲುಹಾಗಿ ತತ್ವವಡಸಿದಾತ ಸತ್ತನೆ?....
ಇಂತಪ್ಪ ಸರ್ವದೃಷ್ಟವನೊಳಕೊಂಡು
ಪಂಚವಿಂಶತಿಯಾಗಿ ತೋರುವ ತೋರಿಕೆಯಲ್ಲಾ
ಹುಸಿಯೆಂದರಿದರಿವು ನಿಜತತ್ವ ನೀನೇ
ಸಿಮ್ಮುಲಿಗೆಯ ಚೆನ್ನರಾಮಾ (ವ. ೧೦೬, ಪು. ೨೨೧)

೨. ವಿಶ್ವಸೃಷ್ಟಿಯ ಬಗೆಗಿನ ವೇದಾಂತ ಚಿಂತನೆಯನ್ನು ಪ್ರಸ್ತಾಪಿಸುವ ಚಂದಿಮರಸ, "ಅರಿವು" ಕಣ್ತೆರೆದಾಗ ಹೊಳೆವ ವಿಶ್ವತತ್ತ್ವದ ಸತ್ಯವನ್ನು ತನ್ನ ಅನೇಕ ವಚನಗಳಲ್ಲಿ ಬಿಂಬಿಸಿರುವನು.

'ನಿತ್ಯಪರಿಪೂರ್ಣನೆಂದು ಪ್ರತ್ಯಕ್ಷ ಶ್ರುತಿ ಸಾರುತ್ತಿರಲು
ಮತ್ತೆ ಪರಿಭಾಷಿಸಲೇನುಂಟು ಹೇಳಾ?
ಕರೆದಡೆ ಬಂದಿತ್ತು, ಕಳೆದಡೆ ಹೋಯಿತ್ತು
ಎಂಬ ಕರ್ಮಕೌಟಿಲ್ಯದಲ್ಲಿ ಬಂದವನಲ್ಲ,
ಪ್ರತಿ ವ್ಯತಿರಿಕ್ತ ಗತಿ ಬಿಡದು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ಜಡರುಗಳಿಗೆಲ್ಲಿಯದೋ?
(ವ. ೮೪, ಪು. ೨೧೪)

ಮತ್ತೆ,

ನಿಜವಸ್ತುವೊಂದೆ। ಎರಡಾಗಬಲ್ಲುದೊಂದೆ,
ಬೇರೆ ತೋರಬಲ್ಲುದದೊಂದೆ। ತನ್ನ ಮರೆಯ ಬಲ್ಲುದದೊಂದೆ।
ಆ ಮರವೆಯ ಬಲ್ಲುದದೊಂದೆ
ತಾನಲ್ಲದನ್ಯವಿಲ್ಲೆಂದರಿದರಿವು ತಾನೇ। ಸಿಮ್ಮಲಿಗೆಯ ಚೆನ್ನರಾಮಾ।
(ವ. ೮೩, ಪು. ೨೧೩)

ಅದೇ ರೀತಿ,

'ತಾಮಸ ಸಂಬಂಧ ಕನಿಷ್ಠಂಗೆ ದಿಟದಂತೆ ತೋರುಗು
.........................................
......................................... ತಾನೇ ತಾನಾಗಿ
ನಿಜ ಸತ್ಯವಾಗಿರ್ದುದು, ಸಂದೇಹವಿಲ್ಲ
ಇದು ಸಚ್ಚಿದಾನಂದ ನಿತ್ಯಪರಿಪೂರ್ಣ ತೂರ್ಯಾತೀತವಪ್ಪ ತತ್ತ್ವ
ಇಂತುಟೆಂದು ತಿಳಿದ ತಿಳಿವು ನೀನೇ, ಸಿಮ್ಮಲಿಗೆಯ ಚನ್ನರಾಮಾ
(ವ. ೭೦, ಪು. ೨೦೯)

ಮತ್ತೊಂದು ವಚನ,

ಜೀವಂಗೆ ಸ್ವಪ್ನದಂತೆ ದಿಟ ತೋರಿ
ಜೀವನೊಡನೆ ಕೆಡುವ ಸಂಸಾರವ ಪರಮನೆಂದೇಕೆ ನುಡಿವೆಯೋ?
ಪರಮನಾದಡೆ ಪರಮನಲ್ಲ ಪರಮರಾಗಿಯಾದಡೂ ಎನಗೆ ಕಾಣಬಾರದು?
ದೋಷ ಪನ್ನಾರಿ(?) ವೇದಾನುಭವವಿದು ಪ್ರತಿ ಚಿನ್ಮಯವಾಗಿಹುದು
ಈ ನಿಷ್ಕಲ ಬಿಂಬ ದಿಟವಿದೆಂದು ತಿಳಿದ ತಿಳಿವು ನೀನೇ
ಸಿಮ್ಮಲಿಗೆಯ ಚೆನ್ನರಾಮಾ॥ (ವ. ೫೭, ಪು. ೨೦೫)

ಸಚ್ಚಿದಾನಂದ ನಿತ್ಯಪರಿಪೂರ್ಣ ತತ್ತ್ವ-ಆತ್ಮನು ತನ್ನ ಅರಿವಿನಿಂದಲೇ ಅರ್ಥಮಾಡಿಕೊಳ್ಳುವವನು. ಅದನ್ನು ನೀಡುವ "ತಿಳಿವು" ಆ ಪರಮಾತ್ಮನೇ ಎಂಬ ಶ್ರುತಿ ತತ್ತ್ವಗಳನ್ನು ಬಹುಮುಖವಾಗಿ ಪ್ರಸ್ತಾಪಿಸಿ, ಚರ್ಚಿಸಿರುವನು ಚಂದಿಮರಸ. 'ಜ್ಞಾನ' ಎಂದರೆ "ಅರಿವು-ತಿಳಿವು" ಎಂಬ ಸರಳ ಕನ್ನಡ ಮಾತುಗಳಲ್ಲಿ ಬಿಂಬಿಸಿರುವುದು ಗಮನಾರ್ಹ.

೩. ಜೀವಾತ್ಮ-ಪರಮಾತ್ಮ ಚಿಂತನೆಯ ವೇದಾಗಮ ಚಿಂತನೆಯನ್ನು ಚಂದಿಮರಸ ತನ್ನ ವಚನಗಳಲ್ಲಿ ವಿವರವಾಗಿ ಪ್ರಸ್ತಾಪಿಸುತ್ತಾನೆ. 'ಅಹಂ ಬ್ರಹ್ಮಾಸ್ಮಿ' ಎಂಬ ತತ್ತ್ವವನ್ನು ಪ್ರಸ್ತಾಪಿಸುತ್ತಾ,

'ತಾನೇ ದೇವನೆಂಬ, ತಾನೆಲ್ಲ ಬಲ್ಲೆನೆಂಬ
ತಾನೇ ಅಹಂಬ್ರಹ್ಮನೆಂಬ
ಏನುವನೂ ಸಲಿಸದಿಹನಯ್ಯಾ
ಏನುವಲ್ಲದ ಹುಸಿಯನೆ ನುಡಿವ[ನ]
ಜ್ಞಾನಿಯೆಂತೆಂಬೆ ಹೇಳಾ, ಸಿಮ್ಮಲಿಗೆಯ ಚೆನ್ನರಾಮಾ'
(ವ. ೬೯, ಪು. ೨೦೯)

ಕೇನೋಪನಿಷತ್ತಿನ ಈ ಹೇಳಿಕೆಯನ್ನು, ಚರ್ಚಿಸುವ ಚಂದಿಮರಸ, 'ಅಹಂ ಬ್ರಹ್ಮ' ತತ್ತ್ವವನ್ನು ಪ್ರತಿಪಾದಿಸುವ ಅಂಥವನು, ಜ್ಞಾನಿಯಲ್ಲ, ಅವನಿಂದೇನೂ ಪ್ರಯೋಜನವಿಲ್ಲವೆಂದು ನಿರೂಪಿಸುತ್ತಾನೆ.

'ಹುಸಿಯ ವ್ಯಾಧನು ನಿಜದಿಂದ ಕ್ಷತ್ರಿಯನೆಂದು ಬೋಧಿಸಲು
ಬೋಧೆ ದೊರಕೊಂಬುದಲ್ಲದೆ....
.........................................
ಜೀವ ಭೋಕ್ತೃ, ನಿಜ ಪರಮನೆಂದೆನ್ನದೆ
ಪರಮನೆ ಹುಸಿ, ಜೀವನೆ ದಿಟವೆಂದು ಬೋಧಿಸಲು
ಬೋಧೆ ದೊರಕೊಳ್ಳದು ನೋಡಾ!
ಜ್ಞಾತೃ-ಜ್ಞಾನ-ಜ್ಞೇಯಾದಿ ಜ್ಞಪ್ತಿ ಸುಖ ಪರಿಪೂರ್ಣನಲ್ಲ
ಕೋಯಮಾತ್ಮಾ ನಾನ್ಯತೋಸ್ತಿ, ಯಸ್ಮಿನ್ನೇಕಮೇವಾ-
ದ್ವಿತೀಯಂ ತತ್ತ್ವಮಸಿ ಎಂದುದು ವೇದ
ಸಿಮ್ಮಲಿಗೆಯ ಚೆನ್ನರಾಮಾ (ವ. ೧೫೪, ಪು. ೨೩೭)

ಪ್ರತ್ಯಕ್ಷ ವೇದದ ಶ್ಲೋಕವನ್ನೇ ಅಳವಡಿಸಿ, ಆ ತತ್ತ್ವವನ್ನು ಚರ್ಚಿಸಿರುವ ಚಂದಿಮರಸನ ನಿಲವನ್ನು ಗಮನಿಸಬೇಕು.

ಅದೇ ರೀತಿ,

ಚತುರ್ವಿಂಶತಿಯೇ ದೇಹ
ಪಂಚವಿಂಶಕನೇ ದೇಹಿ
ಷಡ್ವಿಂಶಕನೇ ಆತ್ಮಕನು
ಅರಿದಡೆ ಸಚ್ಚಿದಾನಂದಮಪ್ಪ ನಿಜವು ನೀನೆ
ಸಿಮ್ಮಲಿಗೆಯ ಚೆನ್ನರಾಮಾ (ವ. ೫೨, ಪು. ೨೦೪)

ಈ ಸೂತ್ರ ಮಂತ್ರರೂಪದ ಈ ವಚನದಲ್ಲಿ 'ದೇಹ-ದೇಹಿ-ಆತ್ಮ'ಗಳ ಸ್ವರೂಪವನ್ನು ವೇದೋಪನಿಷತ್ತಿನ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿರುವನು.

ಹೀಗೆ ವೈದಿಕ ವಾಙ್ಮಯ ಪರಂಪರೆಯ, ಕೋಹಂ, ಸೋಹಂ, ನಾಹಂ -ಹಾಗೂ 'ಜ್ಞಾನ-ಜ್ಞಾತೃ-ಜ್ಞೇಯ' ಮುಂತಾದುವುಗಳನ್ನು ಮತ್ತೆ ಮತ್ತೆ ತನ್ನ ವಚನಗಳಲ್ಲಿ ಪ್ರಸ್ತಾಪಿಸಿ,

'ವೇದವಾವುದು, ವೇದ್ಯವಾವುದು
ವೇದವೆಂಬುದು ಬರಿಯರಿವು' (ವ. ೧೩೨, ಪು. ೨೨೯)

ಎಂದೂ,

'ಶ್ರುತಿಯಿಂದ ತನ್ನನರಿದಾತ ಮತ್ತೆ
ಶ್ರುತಿಗೆ ಕಿಂಕರನಾಗಬೇಕೆ?
ಅರಿವಿನೊಳಗಡಗಿದಡೆ ಶ್ರುತಿಗತೀತನಹೆ' (ವ. ೭೩, ಪು. ೨೧೦)

ಎಂದು ನಿರ್ದೇಶಿಸುತ್ತಾನೆ.

'ಸರ್ವಂ ಬಲ್ವಿದಂ ಬ್ರಹ್ಮ' ಎಂದುದು ವೇದ
'ತ್ವಮೇನ ಬ್ರಹ್ಮ ನಾಽನ್ಯತೋಸ್ಮಿನ್' ಎಂದುದು ವೇದ
'ನಾ ಅನ್ಯತೋಸ್ಮಿನ್ ದೃಷ್ಟಾ' ಎಂದುದು ವೇದ
'ನಾ ಅನ್ಯತ್ ಕಿಂಚಿತ್ ವಿದ್ಯತೇ' ಎಂದುದು ವೇದ
'ನ ಕರ್ಮಣಾ ಲಿಪ್ಯತೇ' ಎಂದುದು ವೇದ।
ತನ್ನಿಂದನ್ಯವೇನೂ ಇಲ್ಲವೆಂದರಿದರಿವು
ಸಚ್ಚಿದಾನಂದ ಸ್ವರೂಪಮಪ್ಪ ನಿಜವು ನೀನೇ
ಸಿಮ್ಮಲಿಗೆಯ ಚೆನ್ನರಾಮಾ. (ವ. ೧೪೧, ಪು. ೨೩೨)

ಎಂಬ ವೇದದ ವಾದಗಳನ್ನು ಪ್ರಸ್ತಾಪಿಸಿ, ಪರಮಾತ್ಮನು ಅರಿವಿನ ಸ್ವರೂಪ. ಅದೇ ನಿಜ-ಅದೇ ಘನ ಎಂಬುದನ್ನು ನಿರೂಪಿಸಿರುವನು. ಚಂದಿಮರಸ ವೇದ-ವೇದಾಂತ ಚಿಂತನೆ ಹಾಗೂ ಪರಿಣತಿ ಅಷ್ಟೇ ಅಲ್ಲ ಅದರ ಪರಿಷ್ಕೃತಿಯನ್ನೂ ಮಾಡಿರುವನು. ಈ ಕಾರ್ಯ ಚನ್ನಬಸವಣ್ಣ, ಉರಿಲಿಂಗಪೆದ್ದಿ, ಪ್ರಭುದೇವ, ತೋಂಟದ ಸಿದ್ಧಲಿಂಗ, ಷಣ್ಮುಖಸ್ವಾಮಿ ಮುಂತಾದ ವಚನಕಾರರಲ್ಲಿಯೂ ಕಾಣಸಿಗುತ್ತದೆ.

೪(ಎ) ಛಾಂದೋಗ್ಯ (?) ಉಪನಿಷತ್ತಿನ ಶ್ಲೋಕವನ್ನು ಬಳಸಿಕೊಂಡು, ಚಂದಿಮರಸ ಜೀವ-ಜಗತ್ತಿನ ತೋರಿಕೆ-ಇರುವಿಕೆಯನ್ನು ವರ್ಣಿಸಿರುವನು. ಒಬ್ಬನೇ 'ಚಂದ್ರ', ಅನೇಕ ಘಟಗಳಲ್ಲಿ ಬೇರೆ ಬೇರೆಯಾಗಿ ತೋರಿದರೂ, ಮೂಲ ಒಬ್ಬನೇ... ಎಂಬ ಉಪಮಾನವನ್ನು ಉದ್ಧರಿಸಿದ ಈ ಶ್ಲೋಕ ಇಂತಿದೆ.

'ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ
ಏಕಥಾ ಬಹುಧಾಶ್ಚೈವ ದೃಶ್ಯತೇ ಜಲಚಂದ್ರವತ್'
(ವ. ೭೭, ಪು. ೨೧೧)

ಇದರ ವಿವರ ನೀಡಿರುವನು, ಮೇಲಿನ ವಚನದಲ್ಲಿ.

ಅದೇ ರೀತಿ, ವೇದಾಗಮ ಪರಂಪರೆಯ ಮುಕ್ತಿಸ್ವರೂಪವನ್ನು ಪ್ರತ್ಯಕ್ಷ ಶರಣರಲ್ಲಿ ಕಾಣುವ ವಿಚಾರವನ್ನು ಚಂದಿಮರಸ ಬಿಂಬಿಸುವ ರೀತಿ ಅತ್ಯಂತ ಮನೋಜ್ಞವಾಗಿದೆ. ಶರಣನ ಮಹಿಮೆಯನ್ನು ಇಲ್ಲಿ ಉಜ್ವಲಗೊಳಿಸಿರುವನು. ಈ ವಚನ-ಪ್ರಕ್ಷಿಪ್ತವಲ್ಲದಿದ್ದರೆ-ಅದೆಂಥ ಅರ್ಥಪೂರ್ಣ! ಸಮಕಾಲೀನ ಮಹಿಮಾನ್ವಿತ ಶರಣರೇ ಸರ್ವಸಾಧನೆಯ ಕೈವಲ್ಯ ಎಂಬುದನ್ನು ಈ ವಚನ ಬಿಂಬಿಸುತ್ತದೆ.

ದಾಸಯ್ಯನೆನಗೆ ಸಾಲೋಕ್ಯನಯ್ಯಾ!
ಚೆನ್ನಯ್ಯನೆನಗೆ ಸಾಮೀಪ್ಯನಯ್ಯಾ!
ಕಕ್ಕಯ್ಯನೆನಗೆ ಸಾರೂಪ್ಯನಯ್ಯಾ!!
ಮಾಚಯ್ಯನೆನಗೆ ಸಾಯುಜ್ಯನಯ್ಯಾ
ದಾಸಯ್ಯನೊಕ್ಕುದ ಕೊಂಡೆನು
ಚನ್ನಯ್ಯನ ಮಿಕ್ಕುದ ಕೊಂಡೆನು
ಕಕ್ಕಯ್ಯನುಂಡು ಮಿಕ್ಕುದ ಕಾದುಕೊಂಡೆನು
ಮಾಚಯ್ಯನ ಜ್ಞಾನ ಪ್ರಸಾದವಕೊಂಡೆನು.
ಪುರಾತನರೊಳಗಾಗಿ ಬಸವಣ್ಣನ ಡಿಂಗರಿಗ
ಚನ್ನಬಸವಣ್ಣನ ಹಳೆಯನೆಂದು
ತಮ್ಮೊಕ್ಕುದನಿಕ್ಕಿ ಸಲಹಿದರು ಕಾಣಾ
ಸಿಮ್ಮಲಿಗೆಯ ಚೆನ್ನರಾಮಾ (ವ. ೭೬, ಪು. ೨೧೧)

b) ಕಠೋಪನಿಷತ್ತಿನ "ಯಮ-ನಚೀಕೇತ" ಪ್ರಸಂಗದಲ್ಲಿ ಬಂದಿರುವ 'ಅಂಧೇನೈವ ನೀಯಮಾನಾ ಯಥಾಂಧಾಃ' ಎಂದುದು ವೇದ ಎಂಬ ಶ್ಲೋಕವನ್ನುದ್ಧರಿಸಿ, ಅದನ್ನು 'ಗುರುವಚನ'ವೆಂದು ಕರೆದಿರುವನು.

c) ಕಠೋಪನಿಷತ್ತಿನ ಪ್ರಸಿದ್ಧ ಶ್ಲೋಕ,

ಬ್ರಹ್ಮ ಬೀಜಂ ಜಗತ್ಸರ್ವಂ ಬ್ರಹ್ಮಣ್ಯೈವ ವಿವರ್ಧತೇ!!
ಬ್ರಹ್ಮಣ್ಯೇವ ಲಯಂ ಯಾತಿ, ಜಾತಿಭೇದಂ ಕಥಂ ಭವತ್!!

ಇದನ್ನು ಬಳಸಿಕೊಂಡು,

ಸಮುದ್ರದಿಂದಾದ ತೆರೆಗಳು, ಸಮುದ್ರದೊಳಗಡಗುತ್ತ
ಆ ಸಮುದ್ರದೊಳಗೇ ಇಹವು-ತೆರೆಗಳು ಬೇರೊಂದುದಕವೆ?
ನಿಮ್ಮಿಂದಲಾದ ಜಗವು, ನಿಮ್ಮಲ್ಲಿಯೆ ಇದ್ದು
ನಿಮ್ಮಲ್ಲಿಯೆ ಅಡಗುವುದು-ಬೇರೆ ಬೇರೆ ಕುಲವುಂಟೆ ಈ ಜಗಕ್ಕೆ
..................................
ಕುಲವೂ ಇಲ್ಲ, ಛಲವೂ ಇಲ್ಲ
ಮರೆಯ ನುಡಿಯನೊಪ್ಪುವನೆ
ಸಿಮ್ಮಲಿಗೆಯ ಚೆನ್ನರಾಮ, ಬಿಡು ಜಡನೇ (ವ. ೧೪೬, ಪು. ೨೩೪)

ಎಂದು ವರ್ಣನಾತ್ಮಕವಾಗಿ ಪ್ರಸ್ತಾಪ ಮಾಡಿರುವನು ಚಂದಿಮರಸ. ಹೀಗೆ, ವೇದಾಗಮ ಉಪನಿಷತ್‌ಗಳನ್ನು ಓತಪ್ರೋತವಾಗಿ ಬಳಸಿರುವ ವಚನಕಾರರು ವಿರಳ. ಈ "ಉದ್ಧರಣ"ಗಳು ವಚನದ ಅವಿಭಾಜ್ಯ ಅಂಗವಾಗಿರುವುದು ಗಮನಾರ್ಹ. ನಂತರ ಸೇರಿದವಾಗಿಲ್ಲ.

೫. ಪುರಾಣ-ಪರಂಪರೆಯ ಸ್ಮರಣೆಯೂ ಅನೇಕ ವಚನಗಳಲ್ಲಿ ಬಂದಿದೆ. ವ್ಯಾಸ, ವಾಲ್ಮೀಕಿ, ಶುಕ, ಕರ್ಣ (ನಿಜದಿಂದ ಕ್ಷತ್ರಿಯನೆಂದು ನಿಜವನರಿಯದ ಕರ್ಣನ ವ್ಯಾಧಭಾವ ಬಿಡದಂತೆ) ಮುಂತದವರೊಡನೆ, ಅನೇಕ ಪೌರಾಣಿಕ ಪ್ರಸಂಗಗಳನ್ನು ಉದಾಹರಣೆಯಾಗಿ ತನ್ನ ವಚನಗಳಲ್ಲಿ ಬಳಸಿರುವನು. ಅಲ್ಲದೆ, ವೇದೋಪನಿಷತ್ತಿನ ಚಿಂತನೆ-ಭಾವ-ಶೈಲಿ ಕರಗತವಾಗಿದ್ದಂತೆ ತೋರುತ್ತದೆ. ಅಷ್ಟಲ್ಲದೆ, ಚಂದಿಮರಸ, "ವೀರಶೈವ ಅಂಗ-ಲಿಂಗ ತತ್ವ, ಲಿಂಗಾಂಗ ಸಾಮರಸ್ಯ ತತ್ವವನ್ನೂ, ಶಿವಶರಣರ ಸಮಗ್ರ ವಿಷಯವನ್ನೂ ತಿಳಿದವನೆಂಬಂತೆ ತೋರುತ್ತದೆ. ಆತ ಗುರು-ಲಿಂಗ-ಜಂಗಮದ ರೀತಿ-ನೀತಿಗಳನ್ನು ಪರಿಪರಿಯಾಗಿ ವರ್ಣಿಸಿರುವನು. ಅಲ್ಲದೆ "ವಿರಕ್ತಿ-ವಿರಕ್ತ"ರನ್ನು ಬಹುವಾಗಿ ಟೀಕಿಸಿರುವನು. ಸಾಮಾನ್ಯ ಜನರಿಗೆ, ಸರಳ ನುಡಿಗಳಲ್ಲಿ ಅನುಭಾವದ ಬೋಧನೆಯನ್ನು ಮಾಡಿರುವನೂ, ತನ್ನ ಲೋಕ ಪರಿಜ್ಞಾನವನ್ನೂ ಇಲ್ಲಿ ಪ್ರದರ್ಶಿಸಿರುವನು. ಅವನ ಕೆಲವು ಸೂಕ್ತಿಗಳನ್ನು ಗಮನಿಸಿರಿ:

೧. ಲೋಕಕ್ಕೆ ಜ್ಞಾನಿ ಮರುಳು। ಜ್ಞಾನಿಗೆ ಲೋಕ ಮರುಳು (ವ. ೧೨೪)

೨. ಕನಸಿನಲ್ಲಿ ಹುಟ್ಟಿದ ಕಂದಂಗೆ। ನೆನಪಿನಲ್ಲಿ ಜಾತಕರ್ಮ ಮಾಡುವರೆ (ವ. ೩೧)

೩. ನೆನಪಿನ ವಾರಣಾಸಿಯಲ್ಲಿ ಕನಸಿನ ಕಟಕವ ಕಂಡಂತೆ (ವ. ೫೪)

೪. ಜೀವನೆ ಜಗ, ಜಗವೇ ಜೀವನಾದ (ವ. ೭೭)

೫. ಆದುದೆ ಜನನ, ಮಾದುದೆ ಮರಣ
ತೋರುವುದೆಲ್ಲವು ದಿವಸದ ವಿಸ್ತಾರ (ವ. ೧೧)

೬. ದೇಹ ಗುಣ ರಹಿತವಾದ ವಿರಕ್ತಿ
ಜ್ಞಾನಕ್ಕೆ ಇದೇ ಯುಕ್ತಿ
ಈ ಯುಕ್ತಿಯ ತಿಳಿದರದೇ ಮುಕ್ತಿ.

೭. ನೀತಿ ಕ್ರಮದಿಂದ ಬೋಧ್ಯದೀಪ್ತಿ ತಾನೆಂದು
ಅರಿದರಿವು ನೀನೇ (ವ. ೧೩)

ಹೀಗೆ, ಚಂದಿಮರಸನ ವಚನಗಳ ವಸ್ತು ಆತ್ಮ-ಪರಮಾತ್ಮ ವೇದಾಂತ ಹಾಗೂ ಗುರು ಲಿಂಗ ಜಂಗಮ ಚಿಂತನೆ. ಇದಕ್ಕೆ ಪ್ರೇರಕ-ಪೋಷಕ ಆತನ "ವೇದ ಪರಿಜ್ಞಾನ". ಇವುಗಳಿಂದ ಮಾಡಿದ 'ಅನುಭಾವ' ಚಂದಿಮರಸನೆಂಬ 'ನಿಜಾನಂದ ಪ್ರಸಾದಿ'ಯ ಕೊಡುಗೆ. ಆತನ ಅನೇಕ ವಚನಗಳಲ್ಲಿ ಪ್ರಸ್ತಾಪಿತವಾಗಿರುವ "ಸಚ್ಚಿದಾನಂದ

ನಿತ್ಯಪರಿಪೂರ್ಣತ್ವ"ವನ್ನು ಸಾಧಿಸಿದ ಶರಣನಾಗಿದ್ದಾನೆ. ಐತಿಹಾಸಿಕ ಮಾಹಿತಿಗಳ ಹುಡುಕಾಟ ಇನ್ನೂ ಆಗಬೇಕಾಗಿದೆ. ಇಲ್ಲಿನವರೆಗೆ ಪ್ರಸಿದ್ಧರಾದ ಶಿವಶರಣ ಪಂಚಕರನ್ನೇ ಮತ್ತೆ ಮತ್ತೆ ವೈಭವೀಕರಿಸಿ, ಅವರೇ "ಸರ್ವಶ್ರೇಷ್ಠ"ರೆಂಬ ಭಾವನೆ ಮೂಡಿಸಲಾಗಿದೆ. ಚಂದಿಮರಸನಂಥ ವಚನಕಾರ, ಹಿಂದಕ್ಕೆ ತಳ್ಳಲ್ಪಟ್ಟಿರುವನು. ಈ 'ಅಲಕ್ಷೆ' ಅಕ್ಷಮ್ಯ ಅಪರಾಧ. ಚಂದಿಮರಸನ 'ವಚನ'ಗಳ ಶಾಸ್ತ್ರೀಯ ಸಂಪಾದನೆ ಮತ್ತು ಅವುಗಳ ಆಂತರಂಗಿಕ ತಾತ್ವಿಕ ಮಹತ್ವವನ್ನು ಎತ್ತಿ ತೋರುವ ಒಂದು ವಿಶೇಷ ಪಿಎಚ್.ಡಿ. ಸಂಶೋಧನೆ ಆಗಬೇಕಾಗಿದೆ. ವೇದ-ವೇದಾಂತ ಚಿಂತನೆ ಹಾಗೂ ಶರಣ ಚಿಂತನೆಯ ಸಮನ್ವಯದ ಪ್ರತೀಕ ಈ ಚಂದಿಮರಸ. ಈ ಜೋಡು ಕುದುರೆ ಸವಾರರು ಯಾರು? -ಇಂದಿನ ಪ್ರಶ್ನೆ.

**ಮುಗಿಸುವ ಮುನ್ನ...**

ಭಾರತೀಯ ಧರ್ಮ ಸಂಸ್ಕೃತಿಯ ಚಿಂತನೆಯ ಪರಂಪರೆಯ ಇತಿಹಾಸದಲ್ಲಿ, ವಚನಕಾರರ ಕೊಡುಗೆಗಳು ಗಣ್ಯಮಾನ್ಯವಾದುವುಗಳಾಗಿವೆ. ಶರಣರು ವೇದಾಗಮಗಳ "ಕರ್ಮ" ಭಾಗವನ್ನು ಬಿಟ್ಟು, ಅದರ ಜ್ಞಾನ ಭಾಗಕ್ಕೆ ವಿಶೇಷ ಮನ್ನಣೆ ನೀಡಿ- ಅಲ್ಲಿನ "ವಿಚಾರ"ಗಳನ್ನು ಸಂಸ್ಕರಿಸಿ, ನೂತನ ವಿಚಾರಗಳನ್ನು ಮಂಡಿಸಿರುವರು. ವಚನಗಳ ಭಾಷೆ ದೇಶೀಯ ಕನ್ನಡ, ಆದರೆ ಅವುಗಳ "ಭಾವ-ಚಿಂತನೆ" ಭಾರತೀಯ ಪರಂಪರೆಯದು. ಕಾರಣ, ತಮ್ಮ ವಚನಗಳಲ್ಲಿ ಚಂದಿಮರಸನಂತೆ ವೇದಾಗಮ-ಉಪನಿಷತ್ತುಗಳ ಶ್ಲೋಕಗಳನ್ನು ಒಡ ಬೆರಸಿಕೊಂಡೇ ನುಡಿದಿದ್ದರೆ, ಅವುಗಳನ್ನು ಮುಂದಿನವರು ಸೇರಿಸಿರಬೇಕೆಂಬ ವಾದ ಜಟಕಾದ ಹಿಂದೆ ಕುದುರೆಯನ್ನು ಕಟ್ಟಿದರೆಂಬಂಥದು. ಭಾರತೀಯ ಆಧ್ಯಾತ್ಮ ಪರಂಪರೆಯ ಏಕಶಿಲಾರೂಪದ-ಆದರೂ ವೈವಿಧ್ಯಮಯವಾದ ಚಿಂತನೆಯನ್ನೂ, ಪರಿಭಾಷೆಯನ್ನೂ ತಮ್ಮ ವಚನಗಳಲ್ಲಿ ಅಂತರ್ಗತಗೊಳಿಸಿಕೊಂಡಿರುವರು. 'ವೇದಕ್ಕೆ ಒರೆಯ ಕಟ್ಟುವೆ, ಆಗಮದ ಮೂಗ ಕೊಯ್ವೆ' ಎಂಬ ಠೀವಿಯ ಮಾತನ್ನಾಡಿದರೂ, ವೇದಾಗಮಗಳ "ಜ್ಞಾನ ಕಾಂಡ"ವನ್ನು ಶರಣರು ನಿರಾಕರಿಸಿಲ್ಲವೆಂಬುದು ಅಧ್ಯಯನಶೀಲರಿಗೆ ಹೊಳೆವ ಸತ್ಯ. ಕ್ರಾಂತಿಕಾರಕ ಅನುಭಾವದ ಮಾತುಗಳನ್ನು, ಸ್ವಾನುಭವದಿಂದ ಕಂಡುಕೊಂಡುದೂ ನಿಜ. ವೈದಿಕ ಚಿಂತನೆಯನ್ನು-ಉಪನಿಷತ್ತುಗಳ ದಾರ್ಶನಿಕಾಂಶಗಳನ್ನು ಪರಿಷ್ಕರಿಸುವುದು ವಚನಕಾರರ ಕೊಡುಗೆ. ಈ 'ವಚನ'ಗಳೂ, ಕನ್ನಡ ಭಾಷೆಯ ಉಪನಿಷತ್ತುಗಳೇ ಎಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ. ವೇದಾಂತ ವಾಙ್ಮಯದ ಗಾಳಿ 'ಉತ್ತರದಿಂದ ದಕ್ಷಿಣಕ್ಕೆ ಚುಂಬಕ ಗಾಳಿಯಾಗಿ ಬೀಸಿದಂತೆ, ತಮಿಳು ಪುರಾತನರ, ಕನ್ನಡ ಶಿವಶರಣರ ಭಕ್ತಿಯ ಗಾಳಿ ದಕ್ಷಿಣದಿಂದ ಉತ್ತರಕ್ಕೂ-ಭಾರತದಾದ್ಯಂತ ಸಹ ಹಬ್ಬಿದೆ.'

ಪ್ರಶ್ನೆ: ಶೈವರ ಅಂಗವಾಗಿ ಮುಂದುವರೆದ ಭಾಗವಾಗಿ ವೀರಶೈವ ಬಂದಿದೆ ಎಂದಿರಿ. ಆದರೆ ಪಾರಮೇಶ್ವರಾಗಮ ಏನು ಹೇಳುತ್ತೆ ಅಂದರೆ ವೀರಶೈವದ ಅಂಗಗಳೇ ಇತರ ಶೈವಭೇದಗಳು ಎಂದು.

ಸಾಂಖ್ಯರ ೨೫ ತತ್ತ್ವಗಳನ್ನು ಚಂದಿಮರಸ ಒಪ್ಪಿದ್ದಾನೆ ಎಂದಿರಿ. ಆದರೆ ವೀರಶೈವರು ೩೬ ತತ್ತ್ವಗಳನ್ನು ಒಪ್ಪಿದ್ದಾರೆ. ಇದಕ್ಕೆ ನೀವು ಏನು ಹೇಳ್ತೀರಿ?

ಉತ್ತರ: ಇದು ನನಗೆ ತಿಳಿಯದಿರುವ ವಿಚಾರ. ಇದರ ಬಗ್ಗೆ ಶ್ರೀ ಜಗದ್ಗುರುಗಳು ಹೇಳುತ್ತಾರೆ.

[ವೀರಶೈವದ ಅಂಗಗಳೇ ಶೈವಭೇದಗಳೆಂದು ಪಾರಮೇಶ್ವರಾಗಮ ಹೇಳುತ್ತೆ ಎಂಬುದು ಎಲ್ಲಿಯೂ ಬಂದಿಲ್ಲ, ಆದರೆ ಶೈವಭೇದಗಳನ್ನು ಸೋಪಾನ ಕ್ರಮದಲ್ಲಿ ಪರಿಗಣಿಸಬೇಕು. ವೀರಶೈವದ ಹಂತವೇ ಶ್ರೇಷ್ಠ ಉನ್ನತ ಹಂತ ಎಂದು ಹೇಳಿರುವುದು ಗಮನಕ್ಕೆ ಬಂದಿದೆ.

ಚಂದಿಮರಸರು ಸಾಂಖ್ಯರನ್ನು ಅನುಸರಿಸಿ ಪುರುಷ(ಆತ್ಮ), ಪ್ರಕೃತಿ ಮುಂತಾಗಿ ೨೫ ತತ್ತ್ವಗಳನ್ನು ಸಾಂದರ್ಭಿಕವಾಗಿ ಉಲ್ಲೇಖ ಮಾಡಿದ್ದಾರೆ. ಅವರು ೨೫ ತತ್ತ್ವಗಳನ್ನೇ ಒಪ್ಪಿಕೊಂಡಿದ್ದಾರೆ ಎಂದು ಹೇಳುವಂತಿಲ್ಲ, ಎಲ್ಲಾ ಶೈವಪರಂಪರೆಗಳಲ್ಲಿ ೩೬ ತತ್ತ್ವಗಳನ್ನೇ ಒಪ್ಪಿದ್ದಾರೆ.

-ಡಾ|| ಎಂ. ಶಿವಕುಮಾರ ಸ್ವಾಮಿ]

ಪ್ರಶ್ನೆ: ವೀರಶೈವರ ಮುಕ್ತಿಯ ಕಲ್ಪನೆ ಐಕ್ಯಸ್ಥಿತಿಯನ್ನು ವೇದಾಗಮಗಳಿಂದಲೇ ತೆಗೆದುಕೊಂಡರೇ?

ಉತ್ತರ: ಶರಣರು ಸ್ವರ್ಗಕ್ಕೆ, ವೈಕುಂಠಕ್ಕೆ ಹೋಗುವ ದೃಷ್ಟಿಯನ್ನು ಬಿಟ್ಟು ನಿಜವಾಗಿ ಜೀವನವನ್ನು ಅನುಭವಿಸಬೇಕಾದ ಸ್ಥಿತಿಯನ್ನು ನಿರ್ಮಾಣ ಮಾಡಿದರು. ಶರಣಸ್ಥಿತಿ, ಐಕ್ಯಸ್ಥಿತಿ ಎನ್ನುವುದು ಇಲ್ಲೇ ಇದ್ದು ಬದುಕುವಂತಹ ಒಂದು ಸ್ಥಿತಿ ಎಂದು ಹೇಳಿದ್ದಾರೆ. ಅದು ಶರಣರ ಲೌಕಿಕವಾದ ಮುಕ್ತಿಯ ಅರ್ಥ. ಇಲ್ಲಿ ಅನುಭವಿಸುವ ಸಂಗತಿಗಳು ಬಹಳ ಇವೆ. ಜೀವನದಲ್ಲಿ ಬಳಸಿಕೊಳ್ಳಬೇಕಾದಂಥ ವೇದಾಂತ, ಸ್ವರ್ಗ, ಮರ್ತ್ಯ, ಪಾತಾಳಗಳ, ಕರ್ಮಸಿದ್ಧಾಂತಗಳ ಮೂಲಕವಾಗಿ ಬರುವಂತಹದು ಮುಕ್ತಿ ಎನ್ನುವ ಮಾತನ್ನು ಬಿಟ್ಟು most rational ಆಗಿರುವಂತಹ ತತ್ತ್ವವನ್ನು ಶರಣರು ಹೇಳಿದ್ದಾರೆ. ಅಂತಹ ಮುಕ್ತಿಯ ಸ್ಥಿತಿಯನ್ನು ಸೂಚಿಸಿದ್ದಾರೆ. ಸರ್ವಸಂಗ ಪರಿತ್ಯಾಗವನ್ನು ಇವತ್ತಿಗೂ ನಾವು ನೋಡುತ್ತೇವೆ. ಸಾಧನೆಯಿಂದ ಬರುವ ಸ್ಥಿತಿ ಇದು.

[ವೀರಶೈವರ ಮುಕ್ತಿ ಕಲ್ಪನೆ ಜೀವನು ಪರಮಾತ್ಮನಲ್ಲಿ ಸಮರಸವಾಗಿ ಒಂದಾಗುವುದು ಎಂಬುದು. ಇದು ಉಪನಿಷತ್ತುಗಳಲ್ಲೂ ಬಂದಿದೆ. "ಯಥಾನದ್ಯಃ ಸ್ಯಂದಮಾನಾಃ ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ। ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್॥" ಎಂಬ ಮುಂಡಕೋಪನಿಷತ್ತಿನ ಮಂತ್ರದಲ್ಲಿ, ನದಿಗಳು ಸಮುದ್ರದಲ್ಲಿ ತಮ್ಮ ನಾಮ-ರೂಪಗಳನ್ನು ಬಿಟ್ಟು ಹೇಗೆ ಒಂದಾಗುತ್ತವೆಯೋ ಹಾಗೆ ಜ್ಞಾನಿಯಾದ ಆತ್ಮನು ನಾಮ-ರೂಪಗಳಿಂದ ಮುಕ್ತನಾಗಿ ಪರಾತ್ಪರ ಪುರುಷನಲ್ಲಿ (ಪರಮಾತ್ಮನಲ್ಲಿ) ಬೆರೆಯುತ್ತಾನೆ ಎಂದು ಸಮರಸೈಕ್ಯದ ವರ್ಣನೆಯೇ ಬಂದಿದೆ. ಆಗಮಗಳಲ್ಲಿಯೂ ಇದೇ ಸಮರಸೈಕ್ಯ ಬಂದಿದೆ. "ಶಿವಜೀವೋಭಯಭ್ರಾಂತಿರಹಿತಶ್ಚೈಕ್ಯ ಉಚ್ಯತೇ" (ಶಿವ-ಜೀವ ಭೇದಭ್ರಾಂತಿ-ಯಿಲ್ಲದವನು ಐಕ್ಯ) ಎಂದು ಸೂಕ್ಷ್ಮಾಗಮ ಹೇಳಿದೆ. "ಗುರು-ದೀಕ್ಷಾ-ಪರಿಪ್ರಾಪ್ತ-ಶಿವಲಿಂಗಾಂಗಯೋಗತಃ। ದ್ವಿರೇಪಕೀಟನ್ಯಾಯೇನ ಶಿವೈಕ್ಯಂ ಪ್ರಾಪ್ತವಾನ್ ದ್ವಿಜಃ॥" ಎಂಬ ಮಕುಟಾಗಮದ ಶ್ಲೋಕದಲ್ಲಿ, ಕೀಟವು ದುಂಬಿಯನ್ನು ನೆನೆದು ನೆನೆದು ದುಂಬಿಯೇ ಆಗುವಂತೆ, ಜೀವನು ಶಿವನನ್ನು ನಿರಂತರವಾಗಿ ಧ್ಯಾನಿಸಿ ಶಿವನೇ ಆಗುತ್ತಾನೆ, ಎಂದು ಹೇಳುವ ಮೂಲಕ ಜೀವ-ಶಿವರ ಅದ್ವೈತವನ್ನು ಹೇಳಲಾಗಿದೆ. ಇದು ವೀರಶೈವರ ಮುಕ್ತಿಯ ಸ್ವರೂಪ.

–ಡಾ. ಎಂ. ಶಿವಕುಮಾರ ಸ್ವಾಮಿ]

 x x

## ೭. ವೇದಾಗಮಗಳು-ಸಕಲೇಶ ಮಾದರಸ ಮತ್ತು ಮಡಿವಾಳ ಮಾಚಿದೇವ

-ಡಾ|| ಕೆ.ವ್ಹಿ. ಜುಕ್ತಿಮಠ ಸ್ವಾಮೀಜಿ

ಶಿವಾಗಮಗಳು ವೀರಶೈವ ಧರ್ಮದ ಪ್ರಮಾಣ ಗ್ರಂಥರಾಶಿಗಳು. ಅಲ್ಲದೆ ಅವುಗಳೇ ಶೈವ ಧರ್ಮಕ್ಕೂ ಆಧಾರ ಗ್ರಂಥಗಳು.

"ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ಧಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಂ॥"[೧]

ವೀರಶೈವ ಧರ್ಮ ಸಿದ್ಧಾಂತಕ್ಕೆ ವೇದಾಗಮಗಳಲ್ಲಿ ಪ್ರಮಾಣಗಳುಂಟು. ಆದರಲ್ಲೂ ಈ ಸಿದ್ಧಾಂತವು ಆಗಮಗಳ ಉತ್ತರಭಾಗದಲ್ಲಿ ನಿರೂಪಿಸಲ್ಪಟ್ಟಿವೆ. ಅದರ ಸಾರ ಸತ್ವದ ಗ್ರಂಥವೇ ಶ್ರೀಸಿದ್ಧಾಂತಶಿಖಾಮಣಿ. ಈ ಶಿವಾಗಮಗಳು ಪ್ರಾಚೀನವಾದ ಆಕರಂಗಳೆಂಬುದರಲ್ಲಿ ಸಂಶಯವೇ ಇಲ್ಲ. ಆದುದರಿಂದಲೇ, ಆಗಮಗಳನ್ನು ನಿಗಮ (ವೇದ)ಗಳೊಂದಿಗೆ ಬೆಸೆಯಲಾಗಿದೆ. ಹಾಗಾಗಿ, 'ವೇದಾಗಮಗಳು' ಅಥವಾ 'ನಿಗಮಾಗಮಗಳು' ಎಂಬ ಜೋಡು ನುಡಿ ನಾಲಗೆಯ ಮೇಲೆ ನಲಿದಾಡುತ್ತಿದೆ.

ಶೈವ ಧರ್ಮವೆಂಬ ವೃಕ್ಷದ ಕವಲೊಡೆದ ಬೃಹತ್ ಟೊಂಗೆಯೇ ವೀರಶೈವ. ಅದರಲ್ಲಿ ಹಲವು ಶೈವ ಪ್ರಭೇದಗಳು ಉಂಟು. ಅದರಲ್ಲಿ ವೀರಶೈವ ಮಹೋನ್ನತವಾದುದು. ಪಾರಮೇಶ್ವರಾಗಮವು ಮೊದಲ ಬಾರಿಗೆ ವೀರಶೈವವನ್ನು ಹೀಗೆ ಕೊಂಡಾಡಿದೆ:

"ನ ವೀರಶೈವ ಸದೃಶ್ಯಂ ಮತಮಸ್ತಿ ಜಗತ್ರಯೇ।
ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಂ॥"[೨]

"ಸರ್ವೇಷಾಮಪಿ ಶೈವಾನಾಂ ವೀರಶೈವಂ ಮಹೋತ್ತಮಂ।
ಸುಲಭಾ ಸಾ ದೇವಪೂಜಾ ಸುಲಭಂ ಚ ಕ್ರಿಯಾವಹಂ॥"[೩]

---

೧. ಶ್ರೀ ಸಿದ್ಧಾಂತ ಶಿಖಾಮಣಿ ಪರಿಚ್ಛೇದ ೫; ಶ್ಲೋಕ ೧೪.

೨. ಪಾರಮೇಶ್ವರಾಗಮ : ಪ. ೧. ಶ್ಲೋ-೪೨.

೩. ಸುಪ್ರಭೇದಾಗಮ, ಪ್ರಕರಣ ೭.

ಈ ದೃಷ್ಟಿಯಿಂದ ಎರಡು ಧರ್ಮಕ್ಕೂ ಪರಶಿವನೇ ಆರಾಧ್ಯದೈವ. ಆದರೂ ಈ ಎರಡು ಧರ್ಮಗಳಲ್ಲಿ ಪ್ರಧಾನವಾದ ವ್ಯತ್ಯಾಸವನ್ನ ಕಾಣಬಹುದು. ವೀರಶೈವರು ತಮ್ಮ ದರ್ಶನದಲ್ಲಿ ಪ್ರಾಯೋಗಿಕ ಜೀವನದ ಜೊತೆಗೆ, ವೈಚಾರಿಕತೆಯ ಅಂಶವನ್ನೂ ಸಮ್ಮಿಲನಗೊಳಿಸಿದ್ದಾರೆ. ಶೈವರು ಸ್ಥಾವರಲಿಂಗ ಪೂಜೆಗೆ ಪ್ರಾಧಾನ್ಯತೆಯನ್ನು ಕೊಟ್ಟರೆ, ವೀರಶೈವರು ಇಷ್ಟಲಿಂಗ ಉಪಾಸನೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಹಾಗಾಗಿ, ತಮ್ಮ-ತಮ್ಮದೆ ಆದ ದಾರ್ಶನಿಕ ಸಿದ್ಧಾಂತವನ್ನು ರಚಿಸಿ ಮತಭೇದವನ್ನು ಪಡೆದುಕೊಂಡಿದ್ದಾರೆ.

ವೇದಗಳು ಈ ದೇಶದ ಹಿರಿಯ ದಾರ್ಶನಿಕ ವಾಙ್ಮಯ ಸಂಪತ್ತು. ಅದಕ್ಕಿಂತ ಪೂರ್ವದ ಗ್ರಂಥರಾಶಿಯನ್ನು ನಾವು ಪಡೆಯಲು ಸಾಧ್ಯವಿಲ್ಲ. ಈ ದೇಶಕ್ಕಷ್ಟೇ ಅಲ್ಲ ಜಾಗತಿಕ ದಾರ್ಶನಿಕ ಇತಿಹಾಸದಲ್ಲಿಯೂ ಅವುಗಳಿಗೆ ಪ್ರಥಮ ಪ್ರಾಶಸ್ತ್ಯವಿದೆ. ಹಾಗಾಗಿ ಈ ದೇಶದಲ್ಲಿ ಹುಟ್ಟಿಕೊಂಡ ಎಲ್ಲಾ ಧರ್ಮಗಳಿಗೂ ವೇದಗಳೇ ಆಶ್ರಯವೆಂದರೆ ತಪ್ಪಾಗಲಾರದು. ಅಷ್ಟೊಂದು ಪ್ರಭಾವಯುತವಾದ ಮುದ್ರೆಯನ್ನು ವೇದ-ಆಗಮ-ಉಪನಿಷತ್ತುಗಳು ದಾರ್ಶನಿಕ ಜಗತ್ತಿನಲ್ಲಿ ಪ್ರತಿಯೊಂದು ಧರ್ಮದ ಮೇಲೂ ಒತ್ತಿವೆ. ಈ ಮಾತನ್ನು ನಾವು ಬೇರೆ ಬೇರೆ ಕಾರಣ ಹಾಗೂ ಸಂದರ್ಭಕ್ಕೆ ತಕ್ಕಂತೆ ಅರ್ಥೈಸಬೇಕು. ಎಲ್ಲೋ ವೇದದ ಕೆಲವೊಂದು ಭಾಗವನ್ನು ಖಂಡಿಸುವ ಆಚಾರ್ಯರು, ವೇದದ ಪೂರ್ಣಭಾಗವನ್ನು ಅಲ್ಲಗಳೆದಿಲ್ಲ. ಹಾಗೇ ಅಲ್ಲಗಳೆಯಲು ಯಾರಿಂದಲೂ ಸಾಧ್ಯವಿಲ್ಲ. ಪ್ರಧಾನವಾಗಿ ಕರ್ಮಕಾಂಡ; ಯಜ್ಞ-ಯಾಗಾದಿ, ಬಲಿ ಸಮರ್ಪಣೆಯ ಭಾಗವು ಮತ್ತು ವರ್ಣಧರ್ಮವು ಬಹುತೇಕರಿಗೆ ನಿಷೇಧ ಕೇವಲ ವೀರಶೈವರಿಗಲ್ಲ. ಅದರಲ್ಲಿ ವೀರಶೈವರು ಪ್ರಧಾನವಾಗಿ ಒಪ್ಪಿಕೊಳ್ಳದೇ ಇರುವುದು ಗಮನಾರ್ಹ. ಹೀಗೆ ಅಲ್ಲಗಳೆಯುವುದರಿಂದ ಯಾವ ಬಾಧೆಯು ಇಲ್ಲ. ಉಪನಿಷತ್ ಕಾಲದಲ್ಲಿಯೂ ಸಹ ಹೀಗೆ ವೇದದ ಕರ್ಮಕಾಂಡವನ್ನು ಮತ್ತು ಆ ಹೆಸರಿನಲ್ಲಿ ನಡೆದ ಅಂಧಶ್ರದ್ಧೆಗಳನ್ನ ಅಲ್ಲಗಳೆದ ಅಂಶಗಳು ಉಂಟು. "ಅರ್ಥಹೀನ ಮತಾಚರಣೆಗಳ ಯಜ್ಞಗಳು, ಅವುಗಳ ಹದಿನೆಂಟು ಅಂಗಗಳೂ ದುರ್ಬಲ ದೋಣಿಗಳು. ಯಾರು ಕೇವಲ ಮೂರ್ಖತನದಿಂದ ಅಂತಹ ಯಜ್ಞಗಳೇ ಶ್ರೇಷ್ಠವೆಂದು ಕೊಂಡಾಡುವರೋ ಅವರು ಮತ್ತೆ ಹುಟ್ಟು-ಸಾವುಗಳ ಚಕ್ರಕ್ಕೆ ಸಿಲುಕುತ್ತಾರೆ" ಎಂದು ಹೇಳುವ ಮುಂಡಕೋಪನಿಷತ್ತು ವೇದಗಳಲ್ಲಿಯ ಕರ್ಮಕಾಂಡದ ಭಾಗವನ್ನು ಅಂದೇ ತಿರಸ್ಕರಿಸಿದೆ.[೪]

ಇದೊಂದೆ ಕಾರಣವನ್ನು ಇಟ್ಟುಕೊಂಡು ಇತ್ತೀಚಿನ ಕೆಲ ಜನರು ವೀರಶೈವ ಧರ್ಮವು ವೇದ ವಿರೋಧಿ ಧರ್ಮ ಎಂಬ ಹಣೆಪಟ್ಟಿಯನ್ನು ಕಟ್ಟುತ್ತಿದ್ದಾರೆ. ಹಾಗಾದರೆ ಉಪನಿಷತ್‌ಕಾರರಿಗೂ ವೇದ ವಿರೋಧಿಗಳೆಂದು ಕರೆಯಬೇಕಾಗಿತ್ತು. ಆದರೆ, ಯಾರೂ

---

೪. ಮುಂಡಕೋಪನಿಷತ್, ೨-೪; ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ, ಪು. ೯.

ಹಾಗೆ ಕರೆಯುತ್ತಿಲ್ಲ, ಇದು ಸಲ್ಲದ ಮಾತು. ವೀರಶೈವರು ವೇದಗಳನ್ನು ಪೂರ್ಣವಾಗಿ ಅಲ್ಲಗಳೆಯದೇ ಕೆಲಭಾಗವನ್ನು ಅದೂ, ವೇದದ ಸರಿಯಾದ ಅರ್ಥವನ್ನು ಗ್ರಹಿಸದೇ ಹಾಗೆಯೇ ಆಚರಿಸಿದ ಪುರೋಹಿತಶಾಹಿ ವರ್ಗದ ತಪ್ಪು ಗ್ರಹಿಕೆಯನ್ನು ಅಲ್ಲಗಳೆದ ಮಾತ್ರಕ್ಕೆ ವೇದ ವಿರೋಧಿ ಎನ್ನುವ ಮಾತು ಎಷ್ಟು ಸತ್ಯ? ನೀವೇ ವಿಚಾರಿಸಿರಿ.

ವೇದಾಗಮಗಳಲ್ಲಿ ಉದ್ಧೃತವಾದ ಸಿದ್ಧಾಂತವನ್ನು (ಅಂಶವನ್ನು) ಶಿವಶರಣರು ನೇರವಾಗಿ ಹೇಳದಿದ್ದರೂ ವಚನಗಳಲ್ಲಿ ವೇದ-ಆಗಮ-ಉಪನಿಷತ್ತುಗಳ-ಪುರಾಣಗಳ ವಾಕ್ಯಗಳನ್ನು ಉಲ್ಲೇಖಿಸಿ ಸಮರ್ಥಿಸಿಕೊಂಡ ಉದಾಹರಣೆಗಳು ಸಾಕಷ್ಟಿವೆ. ಅದರಲ್ಲಿ ಒಂದನ್ನ ಗಮನಿಸೋಣ. ನೋಡಿ "ಶ್ರೀ ಗುರುಸ್ವಾಮಿ ಕರುಣಿಸಿ ಕೊಟ್ಟ ಪ್ರಾಣಲಿಂಗವು" ಎಂದು ಆರಂಭವಾಗುವ ಉರಿಲಿಂಗಪೆದ್ದಿಗಳ ವಚನವನ್ನು.[೫]

ಅದರಲ್ಲಿ ಉರಿಲಿಂಗಪೆದ್ದಿಗಳು ನಾಲ್ಕು ವೇದಗಳ, ಆಗಮ, ಪುರಾಣೇತಿಹಾಸಗಳ ಉದಾಹರಣೆಗಳನ್ನು ಕೊಟ್ಟು ತಮ್ಮ ವಚನದಲ್ಲಿ ಪ್ರಾಚೀನ ಸಾಹಿತ್ಯದಲ್ಲಿಯ ಅನುಭವವನ್ನು ಆಕರವನ್ನಾಗಿ ಮಾಡಿಕೊಂಡಿದ್ದಾರೆ. ತಮ್ಮ ಶಿವಾನುಭವದ ಸಿರಿವಂತಿಕೆಯನ್ನ ಅದರಿಂದ ಸಶಾಸ್ತ್ರೀಯವಾಗಿ ಅಭಿವೃದ್ಧಿಗೊಳಿಸಿದ್ದಾರೆ. ಅಷ್ಟೇ ಅಲ್ಲ, ವಚನಕಾರರ ವೀರಶೈವಕ್ಕೂ ಹಾಗೂ ವೇದೋಪನಿಷತ್ತಿನ ಪ್ರಾಚೀನ ಕಾಲದ ವೀರಶೈವಕ್ಕೂ ಇರುವ ಸಂಬಂಧವನ್ನು ಎತ್ತಿ ತೋರಿಸಿದ್ದಾರೆ. ಕೆಲವು ಬಾರಿ ಅವುಗಳನ್ನು ಖಂಡನೆಗೊಳಪಡಿಸಿದರೂ ಸಹ, ಅದು ವೇದ-ಆಗಮಾದಿಗಳ ಹೆಸರನ್ನ ಹೇಳುತ್ತಾ ತಮ್ಮ ಉಪಜೀವನವನ್ನು ಸಾಗಿಸುತ್ತಿದ್ದ ಸೋಮಾರಿಗಳ ಗುಂಪನ್ನು ಖಂಡಿಸಿದ್ದಾರೆ. ಮತ್ತು ಕೆಲವು ಬಾರಿ ಸಂಸ್ಕೃತ ಉಕ್ತಿಗಳನ್ನು ಇಟ್ಟುಕೊಂಡು ಸಮರ್ಥಿಸಿದ ಪರಿಯು ಅವುಗಳನ್ನು ಓದಿದಾಗ ನಮಗೆ ಕಂಡು ಬರುತ್ತದೆ. ಹಲವು ವಚನಗಳು ವೇದಾಗಮಗಳ ಭಾಷಾಂತರದಂತೆ ಕಂಡುಬರುತ್ತವೆ. ವೇದ ಉಪನಿಷತ್ತುಗಳಲ್ಲಿ ಏಕದೇವತಾವಾದ ಮತ್ತು ಪರಮಾತ್ಮನ ಸರ್ವವ್ಯಾಪಕತ್ವ ಕಂಡುಬರುತ್ತವೆ. ಜಗತ್ತಿಗೆಲ್ಲ ಒಬ್ಬನೇ ದೈವ ಮತ್ತು ಆತನೇ ಎಲ್ಲಲ್ಲಿಯೂ ವ್ಯಾಪಿಸಿದ್ದಾನೆ ಎಂಬುದನ್ನು ಹಲವು ಕಡೆ ನಾವು ಸಾಕ್ಷಿಯೊಂದಿಗೆ ಕಾಣಬಹುದು:

೧ ಏಕೋ ದೇವಃ ಸರ್ವಭೂತೇಷು ಗೂಢಃ, ಸರ್ವವ್ಯಾಪೀ ಸರ್ವಭೂತಾಂ-ತರಾತ್ಮಾ, ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ.

೨. ಏಕಂ ಸದ್ ವಿಪ್ರಾಃ ಬಹುಧಾ ವದಂತಿ ಅಗ್ನಿಂ ಯಮಂ ಮಾತರಿಶ್ವಾನಮಾಹುಃ.

೩. ಏಕ ದೇವೋ ರುದ್ರೋ ನ ದ್ವಿತೀಯಃ

೪. ಅಣೋರಣೀಯಾನ್ ಮಹತೋ ಮಹೀಯಾನ್.

---

೫. ಸ.ವ.ಸಂ : ವ.ಸಂ. ೧೫೫೩.

೫. ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ಸ ಭೂಮಿಂ ವಿಶ್ವತೋ
ವೃತ್ವಾ ಅತ್ಯತಿಷ್ಠದ್ದಶಾಂಗುಲಂ.

ಈ ವಾಣಿಗಳಿಗೆ ವಚನಕಾರರ ಹೋಲಿಕೆಯ ವಚನಗಳನ್ನೂ ನಾವು ಕಾಣಬಹುದು.

೧. ಇಬ್ಬರು ಮೂವರು ದೇವರೆಂದು ತಬ್ಬಿಬ್ಬುಗೊಂಡು ನುಡಿಯಬೇಡ,
ಒಬ್ಬನೇ ದೇವ ಕಾಣಿರಣ್ಣಾ
'ಶಿವ ಏಕೋ ದೇವ' ಎಂದು ಸಾರುತ್ತಿದೆ ಶ್ರುತಿಪುರಾಣಂಗಳು.
ಇದು ಕಾರಣ ಶಿವನಲ್ಲದೆ ದೈವವಿಲ್ಲೆಂದರಿದ....[೬]

೨-೩. ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ
ದೇವನೊಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿನೋಡಾ!
ಕೂಡಲಸಂಗಮದೇವನೊಬ್ಬನೇ
ಅಲ್ಲದೇ ಇಬ್ಬರಿಲ್ಲವೆಂದಿತ್ತು ವೇದವು.[೭]

೪. ಅಣುವಿಂಗೆ ಅಣು ಮಹತ್ತಿಂತೆ ಮಹತ್ತಾಗಿ ಎಣಿಸಬಾರದ ಬಹುಳಬ್ರಹ್ಮಕ್ಕೆ
ಎಣೆಯಾವುದು ಹೇಳಾ?....[೮]

೫. ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ
ಸಕಲ ವಿಸ್ತಾರದ ರೂಹು ನೀನೇ ದೇವಾ
ವಿಶ್ವತೋಚಕ್ಷು ನೀನೇ ದೇವಾ
ವಿಶ್ವತೋಮುಖ ನೀನೇ ದೇವಾ
ವಿಶ್ವತೋಪಾದ ನೀನೇ ದೇವಾ
ಕೂಡಲಸಂಗಮದೇವಾ.[೯]

೬. ವನವೆಲ್ಲ ನೀನೇ, ವನದೊಳಗಣ ದೇವತರುವೆಲ್ಲಾ ನೀನೇ,
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೇ
ಚೆನ್ನಮಲ್ಲಿಕಾರ್ಜುನಾ,
ಸರ್ವಭರಿತನಾಗಿ ಎನಗೇಕೆ ಮುಖದೋರೆ?[೧೦]

ಇನ್ನೂ ಕೆಲವು ವಚನಗಳಲ್ಲಿ ವೇದಾಗಮಗಳ ವಿಷಯವು ಅರ್ಥರೂಪದಲ್ಲಿ ಕಂಡುಬರುತ್ತವೆ.

---

೬. ಸ.ವ.ಸಂ. ೧೧ : ವ.ಸಂ. ೧೬೫.

೭. ಅದೇ, ೧ : ವ.ಸಂ. ೫೪೬.

೮. ಅದೇ, ೧೧ : ವ.ಸಂ. ೩೭೧.

೯. ಅದೇ, ೧ : ವ.ಸಂ. ೫೩೩.

೧೦. ಅದೇ, ೫ : ವ.ಸಂ. ೩೦೦.

ಹನ್ನೆರಡನೆಯ ಶತಮಾನದ ಶರಣರು ವೀರಶೈವ ಸಂಸ್ಕೃತಿಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಈ ಕೆಲಕ್ಕೆ ಪ್ರತಿಯೊಬ್ಬ ವೀರಶೈವ ಧರ್ಮೀಯನೂ ಚಿರಋಣಿಯಾಗಿರಬೇಕು. ಈ ಮೇಲೆ ತಿಳಿಸಿದ ಕಾರಣಕ್ಕಾಗಿ ಶರಣರು ಸಹ ವೇದದ ಕೆಲಭಾಗವನ್ನು ತೀವ್ರವಾಗಿ ಆಕ್ಷೇಪಣೆಗೊಳಪಡಿಸಿರುವುದು ಸತ್ಯ. ಅದರ ಜೊತೆ ಜೊತೆಗೆ ವೇದ-ಆಗಮ ಪ್ರಾಮಾಣ್ಯವನ್ನೂ ಮಾನ್ಯ ಮಾಡಿದ ಉದಾಹರಣೆಗಳನ್ನು ಈ ಮೇಲೆ ಸಾಕಷ್ಟು ನೋಡಿದ್ದೇವೆ. ಪರಶಿವನ ಸ್ವರೂಪವನ್ನು ಅದರ ಉಪಾಸನೆಯ ಕ್ರಮದಲ್ಲಿ ಪಾಲಿಸಬಹುದಾದ ಆಚರಣೆ ವಿವರಿಸಿದ ಪರಿಯನ್ನು ನೋಡಿದರೆ ನಮಗೆ ಮನವರಿಕೆಯಾಗುವುದು.

## ಸಕಳೇಶ ಮಾದರಸ

ಸಕಳೇಶ ಮಾದರಸ ಒಬ್ಬ ಪರಮ ಶಿವಭಕ್ತ. ಸಂಗೀತ ವಾದ್ಯವನ್ನು ನುಡಿಸುವ ಕಾಯಕವನ್ನು ಪಾಲಿಸುತ್ತಿದ್ದ. ಶಿವನಿಗೆ ಸಂಗೀತ ಸೇವೆಯನ್ನು ಮಾಡುತ್ತ ನಿತ್ಯವು ಜಂಗಮರ ದಾಸೋಹವನ್ನು ಮಾಡುವುದರ ಮುಖಾಂತರ ಶಿವಭಕ್ತಿಯನ್ನು ಸಾಧಿಸಿದ್ದ. ಆತ ಲಿಂಗಾಂಗಿಯ ನಿಜವಾದ ಪಥವನ್ನು ಹೀಗೆ ತನ್ನ ವಚನದಲ್ಲಿ ತಿಳಿಸಿದ್ದಾನೆ.

೧. "ಅಂಗದ ಗುಣವಳಿದು ಲಿಂಗಾಂಗಿಯಾದ ನಿಜಶರಣನು,
ಜಗದ ತಕ್ಕರಾದ ಜಂಗುಳಿಗಳ ಬಾಗಿಲುಗಳಿಗೆ ಹೋಗನು ನೋಡ,
ಹೋದಡೆ ಗುರುವಾಕ್ಯವಿಡಿದು ಹೋಗಿ,
'ಲಿಂಗಾರ್ಪಿತ ಭಿಕ್ಷಾ' ಎಂದು ಭಿಕ್ಷವ ಬೇಡಿ,
ಲಿಂಗಾಣತಿಯಿಂದ ಬಂದ ಭಿಕ್ಷವ,
ಲಿಂಗ ನೆನಹಿನಿಂದ ಲಿಂಗ ನೈವೇದ್ಯವಾಗಿ ಕೈಕೊಂಡು,
ಬಂದ ಬಂದ ಸ್ಥಳವನರಿದು, ಲಿಂಗಾರ್ಪಿತವ ಮಾಡಬೇಕು.
ಅದೆಂತೆಂದಡೆ:
*ರಾಜಾನ್ನಂ ನರಕಶ್ಚೈವ ಸೂತಕಾನ್ನಂ ತಥೈವ ಚ*
*ಮೃತಾನ್ನಂ ವರ್ಜಯೇದ್ ಜ್ಞಾನೀ ಭಕ್ತಾನ್ನಂ ಭುಂಜತೇ ಸದಾ॥"*
ಇತೆಂದುದಾಗಿ, ಲಿಂಗಾಂಗಿಗೆ, ಲಿಂಗಾಭಿಮಾನಿಗೆ, ಲಿಂಗಪ್ರಾಣಿಗೆ
ಇದೇ ಪಥವಯ್ಯಾ, ಸಕಳೇಶ್ವರದೇವಾ ನಿಮ್ಮಾಣೆ"[೧೧]

ಲಿಂಗಾಂಗಿಯಾದ ಸಾಧಕನು, ಅಂಗದ ಗುಣಗಳೆಲ್ಲವು ಅಳಿದು ಲಿಂಗವೆಂಬ ಭಾವನೆ ಮೂಡಿಯಾದ ಮೇಲೆ, ಆತನನ್ನು ನಿಜವಾದ ಶರಣನೆಂದು ಕರೆಯುವುದು ವಾಡಿಕೆ. ಜಗತ್ತಿನಲ್ಲಿರುವ ತಕ್ಕರ (ಭಕ್ತರಲ್ಲದವರ) ಮನೆ ಬಾಗಿಲಿಗೆ ಹೋಗಲೇಬಾರದು. ಅಂತಹ ನಿಷೇಧಿತ ಭಿಕ್ಷೆಯನ್ನು ಈ ಮೇಲಿನ ವಚನದಲ್ಲಿ ಕಾಣುವ ಸಂಸ್ಕೃತೋಕ್ತಿಯಲ್ಲಿ

---

೧೧. ಅದೇ, ೯: ವ.ಸಂ. ೩೭೨.

ಕಾಣಿಸಿದ ಅರ್ಥವನ್ನು ಕಂಡಾಗ ನಮಗೆ ಸ್ಪಷ್ಟವಾಗುವುದು. ರಾಜಾನ್ನವೆಂಬುದು ನರಕವಾದುದು, ಜೊತೆಗೆ ಸೂತಕಾನ್ನವು ಸಹ. ಅಲ್ಲದೆ, ಇದರೊಂದಿಗೆ ಶ್ರಾದ್ಧದಲ್ಲಿ ಮಾಡಿದ ಅನ್ನವನ್ನು ಜ್ಞಾನಿಯಾದವನು ಸ್ವೀಕರಿಸಬಾರದು. ಒಂದು ವೇಳೆ ಅವನು ಸ್ವೀಕರಿಸಬೇಕೆಂಬ ಇಚ್ಛೆಯಾದ ಅನ್ನವೆಂದರೆ ಕೇವಲ 'ಭಕ್ತಾನ್ನ' ಮಾತ್ರ ಎಂದು ಹೇಳಿದ್ದಾರೆ. ಭಕ್ತನ ಮನೆಯ ಅನ್ನಕ್ಕೆ ಮಾತ್ರ ಪ್ರಾಶಸ್ತ್ಯವಿದೆ. ಇದು ನಿಜವಾದ ಪಥ. ಇದು ಲಿಂಗಪ್ರಾಣಿಗೆ ಹಾಗೂ ಲಿಂಗಾಂಗಿಗೆ ಇರುವ ನಿಯಮ ಎಂದು ಮಾದರಸ ಹೇಳುತ್ತಾನೆ.

ಈ ಶ್ಲೋಕದ ಅರ್ಥವನ್ನೇ ಹೋಲುವಂತಹ ಶ್ಲೋಕವನ್ನು ನಾವು ಮನುಸ್ಮೃತಿಯಲ್ಲಿ ಕಾಣುತ್ತೇವೆ. ಈ ಶ್ಲೋಕವನ್ನು ಬಸವಣ್ಣನವರು ತಮ್ಮ ವಚನದಲ್ಲಿ[೧೨] ಉಪಯೋಗಿಸಿದ್ದಾರೆ.

"ಶೂದ್ರಾನ್ನಂ ಸೂತಕಸ್ಯಾನ್ನಂ ನೈವೇದ್ಯಂ ಶ್ರಾದ್ಧಮೇವಚ।
ಪತಿತಾನ್ನಂ ಸಮೂಹಾನ್ನಂ ರಾಜಾನ್ನಂ ಚೈವ ವರ್ಜಯೇತ್॥"

ಲಿಂಗಪ್ರಾಣಿ ಕೇವಲ ಲಿಂಗ, ಜಂಗಮರ ಪ್ರಸಾದವಲ್ಲದೆ ಬೇರೆ ಯಾವುದೇ ಭೂತ ದ್ರವ್ಯಗಳನ್ನು ಮುಟ್ಟಬಾರದು. ಆ ದ್ರವ್ಯವು ಶುದ್ಧವಾದಾಗ ಲಿಂಗಕ್ಕೆ ಅರ್ಪಿತವಲ್ಲದೆ, ಲಿಂಗ ಕಾಯಕದಿಂದ ಬಂದ ಪ್ರಸಾದ (ದ್ರವ್ಯ) ಮಾತ್ರ ಸ್ವೀಕರಿಸಲು ವೀರಶೈವರು ಒಪ್ಪಿಕೊಂಡಿದ್ದಾರೆ. ಲಿಂಗ ಕಾಯಕವನ್ನು ನಡೆಸಿಕೊಂಡು ಬಂದ ಸಾಧಕನಿಗೆ ಭಕ್ತನೆಂದು ಕರೆಯುವುದು. ಹಾಗಾಗಿ ಕಾಯಕಕ್ಕೆ ಹೆಚ್ಚು ಮಹತ್ವವನ್ನು ಶಿವಶರಣರು ಕೊಟ್ಟಿದ್ದಾರೆ.

೨. ಅಷ್ಟಮದಂಗಳೆಂಬ ಆನೆಯ ಮೆಟ್ಟಿ, ಅವಿನಾಶವೆಂಬ ಕಥೆಯ ತೊಟ್ಟು,
ಅನಾಹತವೆಂಬ ಕರ್ಪರವಂ ಕೊಂಡು
ಅಕಾಯಕಲ್ಪಿತವೆಂಬ ಯೋಗದಂಡಮಂ ಪಿಡಿದು,
ಕಾಯಕಲ್ಪಿತ ಜೀವನೋಪಾಯವನತಿಗಳೆದು,
ಮಾಯಾಪ್ರಪಂಚು ನಾಸ್ತಿಯಾಗಿ,
ಶಿವಧ್ಯಾನ ಕಾರಣ ಸದಾಚಾರವೆಡೆಗೊಂಡು,
ಸಮ್ಯಕ್‌ಜ್ಞಾನವೆಂಬ ಶಿವಪುರಮಂ ಪೊಕ್ಕು,
ಸಮತೆಯೆಂಬ ಒಗರವನೆತ್ತುತ್ತ, ಅಜ್ಞಾನವೆಂಬ ನಾಯಹೊಡೆವುತ್ತ
ಉಪಪಾತಕಕೋಟೀನಾಂ ಬ್ರಹ್ಮಹತ್ಯಾಶತಾನಿ ಚ।
ದಹ್ಯಂತೇಽ ಶೇಷಪಾಪಾನಿ ಶಿವಭಕ್ತಸ್ಯ ದರ್ಶನಾತ್॥
ಎಂಬುದಾಗಿ, ಸಕಲ ಜೀವಂಗಳ ಕರ್ಮಕ್ಷಯವ ಮಾಡಲೆಂದು ಸುಳಿವನಯ್ಯ
ಮಹಂತ ಸಕಳೇಶ್ವರದೇವಾ, ನಿಮ್ಮ ಶರಣ.[೧೩]

---

೧೨. ಅದೇ, ೧ : ವ.ಸಂ. ೧೩೪೪.

೧೩. ಅದೇ, ೯ : ವ.ಸಂ. ೩೮೩.

ಸಕಳೇಶ ಮಾದರಸ ಶಿವಭಕ್ತನ ಮಹತ್ವವನ್ನು ಈ ಮೇಲಿನ ವಚನದಲ್ಲಿ ಸ್ಪಷ್ಟಪಡಿಸುತ್ತಾನೆ. ಸದಾಚಾರ ಸಂಪನ್ನ ಶಿವಭಕ್ತನಾಗಬೇಕಾದರೆ, ಅಷ್ಟಮದಂಗಳನ್ನು ಮೆಟ್ಟಿ ನಿಲ್ಲಬೇಕು, ಅವಿನಾಶಿಯಾದ ಶಿವತತ್ವದ ಮಹತ್ವವನ್ನು ಹೊದ್ದುಕೊಂಡಿರಬೇಕು, ಮಾಯಾ ಪ್ರಪಂಚದ ಗುಣಗಳಿಂದ ದೂರಾಗಿ, ಒಳ್ಳೆಯ ಜ್ಞಾನದ ಲೋಕದಲ್ಲಿ ಬೆರೆತ ಮೇಲೆ ಆತ ಶಿವಭಕ್ತನೆನಿಸಬಲ್ಲ. ಶಿವಭಕ್ತನ ಸಾಮರ್ಥ್ಯ ಎಷ್ಟು ಎನ್ನುವದನ್ನು ಈ ಮೇಲಿನ ವಚನದ ಮಧ್ಯದಲ್ಲಿ ಕಂಡುಬಂದ ಸಂಸ್ಕೃತ ಶ್ಲೋಕದ ಅರ್ಥವನ್ನು ಗ್ರಹಿಸಿದಾಗ ಕಂಡುಬರುವುದು.

ಕೇವಲ ಒಬ್ಬ ಶಿವಭಕ್ತನ ದರ್ಶನದಿಂದ ಕೋಟಿಗಟ್ಟಲೇ ಮಾಡಿದ ಉಪಪಾತಕಗಳಾಗಲಿ, ನೂರಾರು ಬ್ರಹ್ಮಹತ್ಯಾ ದೋಷಗಳಾಗಲಿ ದಹಿಸಿಹೋಗುವುದು. ಇದರಿಂದ, ಒಬ್ಬ ಶಿವಭಕ್ತ ಎಂತಹ ಸಾಮರ್ಥ್ಯವನ್ನು ಪಡೆದುಕೊಂಡಿದ್ದಾನೆಂಬುದು ಮತ್ತು ಎಲ್ಲರ ಕರ್ಮವನ್ನು ಕಳೆಯುವುದಕ್ಕೆ ಶರಣ ಸಂಚಾರ ಗೈಯುತ್ತಿರಬೇಕು, ಗೈಯುತ್ತಿದ್ದಾನೆ ಎಂದು ಹೇಳುವನು.

೩. "ಋಗ್ವೇದ ಕಾಣವಯ್ಯಾ, ಸದ್ಯೋಜಾತವನು.
ಯಜುರ್ವೇದ ಕಾಣವಯ್ಯಾ, ವಾಮದೇವನನು.
ಸಾಮವೇದ ಕಾಣವಯ್ಯಾ, ತತ್ಪುರುಷನನು.
ಅಥರ್ವಣವೇದ ಕಾಣವಯ್ಯಾ, ಅಘೋರನಾಥನನು.
*ಅತೀತಃ ಪಥಿಭಾನಂ(?) ತವ ಚ ಮಹಿಮಾ ವಾಙ್ಮನಸಯೋ-*
*ರತದ್ವ್ಯಾವೃತ್ತ್ಯೇಯಂ ಚಕಿತಮಭಿದತ್ತೇ ಶ್ರುತಿರಪಿ।*
*ಸ ಕಸ್ಯ ಸ್ತೋತವ್ಯಃ ಕತಿವಿಧಗುಣಃ ಕಸ್ಯ ವಿಷಯಃ॥*
*ಪದೇ ತ್ವರ್ವಾಚೀನೇ ಪತತಿ ನ ಮನಃ ಕಸ್ಯ ವಚಃ॥*
ಎಂಬುದಾಗಿ, ಚತುರ್ಮುಖ ಬ್ರಹ್ಮಂಗೆ
ಅಗಮ್ಯ ದೇವನಾದನೆಂದು, ಅನಂತವೇದ ಕಾಣಲಾರವು,
ಈಶಾನ್ಯ ಸಕಳೇಶ್ವರದೇವನ"[೧೪]

ದೇವನ ಸ್ವರೂಪವನ್ನು ಮಾತಿನಿಂದ, ಮನಸ್ಸಿನಿಂದಲೂ ಗುರುತಿಸಲು ಸಾಧ್ಯವಿಲ್ಲ. ಹಾಗಾಗಿ ವಾಙ್ಮನಕ್ಕಗೋಚರ ಎಂದು ಶ್ರುತಿಗಳು ಹಾಡಿವೆ. ಕೇವಲ ವೇದವನ್ನು ಓದಿದರೆ ಸಾಲದು. ಗಿಳಿಪಾಠದ ಮುಖಾಂತರ ನಾವು ಭಗವಂತನ ಸಾನಿಧ್ಯವನ್ನು ಅನುಭವಿಸಲು ಸಾಧ್ಯವಿಲ್ಲ. ಈ ಮೇಲಿನ ವಚನದಲ್ಲಿ ಶಿವಮಹಿಮಾದ ಒಂದು ಸ್ತೋತ್ರವನ್ನು ಸೇರಿಸಿರುವುದು ಕಂಡುಬರುವುದು. ಅಯ್ಯಾ ಭಗವಂತನೆ ನಿನ್ನ ಮಹಿಮೆಯು ವಾಕ್ ಮತ್ತು ಮನಸ್ಸಿನ ಮಾರ್ಗವನ್ನು ಮೀರಿ ನಿಂತಿದೆ. ಅದನ್ನು ತಿಳಿಯಲರಿಯದೆ

---

೧೪. ಅದೇ, ೯ : ವ.ಸಂ. ೩೯೬.

ಶ್ರುತಿಯೂ ಸಹ ಚಕಿತನಾಗಿ ಸುಮ್ಮನಿದೆ. ದೇವರನ್ನು ಯಾರು ಹೊಗಳಬೇಕು? ಎಷ್ಟು ವಿಧ ಗುಣವುಳ್ಳವನು? ದೇವರು ಯಾವುದಕ್ಕೆ ವಿಷಯವಾಗಿದ್ದಾನೆ? ಆತನು ಯಾರ ವಾಕ್ ಮತ್ತು ಮನಸ್ಸಿನಲ್ಲಿ ಕೇಂದ್ರಿಕೃತವಾಗುವುದಿಲ್ಲ. ಸರ್ವಾಂತರ್ಯಾಮಿಯಾದ ಅಪರಿಮಿತನಾದ ಭಗವಂತನನ್ನು ಇಷ್ಟೇ ಇದ್ದಾನೆ ಎಂದು ಹೇಳಲು ಅಸಾಧ್ಯವೆಂಬುವುದು ಈ ವಚನದ ಅರ್ಥ. ಅದಕ್ಕೆ ಶಿವಮಹಿಮಾದ ಒಂದು ಶ್ಲೋಕವನ್ನು ಸಾಕ್ಷಿಯಾಗಿ ಇಲ್ಲಿ ಬಳಸಿದ್ದಾರೆ.

೪. ಕಾಯದ ಕಳವಳದಲ್ಲಿ ಹುಟ್ಟಿ, ಸಂಸಾರವನೆ ತೊರೆದು
ಲಿಂಗಮುಖವರಿಯದವರೆಲ್ಲಾ ಅಂತಿರಲಿ, ಅಂತಿರಲಿ.
ಬ್ರಹ್ಮೋಪದೇಶವನೆ ಕೊರಳಲ್ಲಿರಿಸಿಕೊಂಡು,
ವಿಷಯಾದಿಗಳ ಕೊಂಡಾತನಂತಿರಲಿ, ಅಂತಿರಲಿ.
ಪಂಚಮಹಾವೇದ ಶಾಸ್ತ್ರವನೋದಿ,
ಲಿಂಗವುಂಟು ಇಲ್ಲಯೆಂಬ ಶ್ವಾನದಂತಿರಲಿ, ಅಂತಿರಲಿ.
ತನುವ ಹೊತ್ತು ತೊಳಲಿ ಬಳಲುವ
ಕಾಲವಂಚಕ ಯೋಗಿಗಳೆಲ್ಲಾ ಅಂತಿರಲಿ, ಅಂತಿರಲಿ.
ಪಂಚಮಹಾಶೈವರು ಭ್ರಷ್ಟರಾಗಿ ಹೋದರು.
ಎಂತು ಲಿಂಗವಂತಂತೆ ಸರಿಯೆಂಬೆ?
ಅದ್ವೈತಿಗಳೆಲ್ಲಾ ಲಿಂಗಾರಾಧನೆ ಹುಸಿಯೆಂದು,
ಬುದ್ಧಿ ತಪ್ಪಿ, ಗಮನಗೆಟ್ಟು ಹೋದರು.
*ಅದೃಶ್ಯಭಾವನಾ ನಾಸ್ತಿ ದೃಶ್ಯಮೇವ ವಿನಶ್ಯತಿ।*
*ತದಬ್ರಹ್ಮ ನಿರಾಕಾರಂ ತತ್ಸಂ ಧ್ಯಾಯಂತಿ ಯೋಗಿನಃ॥*
ಎಂದುದಾಗಿ, ಬ್ರಾಹ್ಮಣನೆಂದಡೆ
ಬ್ರಹ್ಮನ ಶಿರವ ದಂಡವ ಕೊಂಡರು.
ಬ್ರಹ್ಮವಾದಿಗಳು ಲಿಂಗಕ್ಕೆ ದೂರವಾಗಿ ಹೋದರು.
ಅಹಮಿಲ್ಲದ ಕಾರಣ, ಸಕಳೇಶ್ವರದೇವಯ್ಯಾ
ನಿಮ್ಮ ಶರಣರು ಜಗವಂದ್ಯರಾದರು.[೧೫]

ಈ ಮೇಲಿನ ವಚನದಲ್ಲಿ ಮಾದರಸನು ಲಿಂಗಾರಾಧನೆಯನ್ನು ಹುಸಿಯೆಂದು ಹೇಳಿ ಇಷ್ಟಲಿಂಗಾರ್ಚನೆಯಿಂದ ದೂರದ ವಿಚಾರವನ್ನು ಬೋಧಿಸುವ ಕೇವಲಾದ್ವೈತಿಗಳನ್ನೆ ಬ್ರಹ್ಮವಾದಿಗಳೆಂದು ಕರೆಯುವನು. ಅದುವೇ ವೀರಶೈವರಿಗೂ ಮತ್ತು ಅದ್ವೈತಿಗಳಿಗೂ ಇರುವ ಮುಖ್ಯ ವ್ಯತ್ಯಾಸ. ನಿರಾಕಾರ ಮತ್ತು ನಿರ್ಗುಣ ವಸ್ತುವಿನ ಧ್ಯಾನವನ್ನು ಮಾಡಲು ಸಾಕಾರ ವಸ್ತುವಿನ ಅವಶ್ಯಕತೆ ಇಲ್ಲವೆಂದು ತಿಳಿಸಿದ್ದಾರೆ.

---

೧೫. ಅದೇ, ೯ : ವ.ಸಂ. ೪೧೪.

ಅದೃಶ್ಯ ಭಾವನೆಯಿಲ್ಲದೆ ದೃಶ್ಯವು ನಷ್ಟವಾಗುತ್ತದೆ. ಆ ಪರಬ್ರಹ್ಮನೇ ನಿರಾಕಾರಿಯಾಗಿದ್ದು, ಅದರ ತತ್ವವನ್ನು ಯೋಗಿಗಳು ಧ್ಯಾನಿಸುವರು ಎನ್ನುವ ಶಾಸ್ತ್ರದ ವಾಕ್ಯವನ್ನು ಇಲ್ಲಿ ನೆನಪಿಸಿದ್ದಾರೆ. ಅಹಂ ಎಂಬುದು ನಾಶವಾಗದ ಹೊರತು ದೇವರ (ಬ್ರಹ್ಮನ) ಸಾಕ್ಷಾತ್ಕಾರವಾಗಲಾರದು. ಅಹಂ ನಿರಸನವಾದಾಗ ಮಾತ್ರ ಶರಣರು (ನಿಜೈಕ್ಯನು) ಜಗತ್ತಿನಲ್ಲಿ ವಂದ್ಯರಾಗಿ ಪೂಜಿಸಲ್ಪಡುತ್ತಾರೆ ಎಂದು ಹೇಳಿದ್ದಾರೆ.

೫. ಲಲಾಟದೊಳಗಣ ಅಕ್ಷಿಯು ಬೆಳ್ಪು ವಿಭೂತಿ
ಚರ್ಮದೊಳಗಣ ಕೆಂಪು ಕಿಸುಕಾಶಾಂಬರ.
ವ್ಯಾಕುಳವಿಲ್ಲದುದೆ ಲಾಕುಳ, ಮಹಾದೇವರ ನೆನೆವುದೇ ಆಧಾರ.
**ನಿರ್ಮೋಹತ್ವಂ ಚ ಕೌಪೀನಂ ನಿಸ್ಸಂಗಿತ್ವಂ ಚ ಮೇಖಳಂ।**
**ಶಾಂತಿ ಯಜ್ಞೋಪವೀತಂ ಚ ಮುನೇರಾಭರಣಂ*ದಯಾಪರೇ॥**
**ಪಂಚೇಂದ್ರಿಯವೀಣಾ ದಂಡಂ ಪಂಚಮುದ್ರಾ ಪ್ರಕೀರ್ತಿತಾ।**
**ಮಹಾಲಿಂಗಂ ಧ್ಯಾನಾಧಾರಂ ಶಿವಯೋಗಿ ಸುಲಕ್ಷಣಂ।**
(ಎಂಬುದಾಗಿ), ತುರುಬಿನ ತಪಸಿಯ ಪೆರರೆತ್ತ ಬಲ್ಲರು?
ಸಕಳೇಶ್ವರದೇವಾ, ನೀನೆ ಬಲ್ಲೆ.[೧೬]

* ಪಾಠಾಂತರ = **ಭಕ್ತಸ್ಯ ಆಭರಣಂ**

ಸಕಳೇಶ ಮಾದರಸ ಈ ಮೇಲಿನ ವಚನದಲ್ಲಿ ಶಿವಭಕ್ತನಿಗೆ ಆಭರಣ ಯಾವುದು? ಅಥವಾ ಮುನಿಗೆ ಆಭರಣ ಯಾವುದು ಎಂಬುದನ್ನು ಸ್ಪಷ್ಟಪಡಿಸುವಲ್ಲಿ ಸಂಸ್ಕೃತದ ಉಕ್ತಿಯನ್ನು ಉಲ್ಲೇಖಿಸಿದ್ದಾರೆ.

ಮಮಕಾರ ಮೋಹರಹಿತವೆಂಬ ಕೌಪಿನ, ನಿಸ್ಸಂಗತ್ವವೇ ಮೇಲುಹೊದಿಕೆ, ಶಾಂತಿಯೇ ಯಜ್ಞೋಪವೀತ, ದಯಾಗುಣವೇ ಮುನಿಗೆ ಆಭರಣ ಅಥವಾ ಭಕ್ತನಿಗೆ ಆಭರಣ. ಶಿವಯೋಗಿಗೆ ಇನ್ನು ಕೆಲವು ಗುಣ ಇರಬೇಕೆಂದು ಇಲ್ಲಿ ತಿಳಿಸಿದ್ದಾರೆ. ಪಂಚೇಂದ್ರಿಯಗಳೇ ವೀಣೆ ಇದ್ದಹಾಗೆ, ಪಂಚಮುದ್ರೆಗಳೇ ದಂಡ, ಮಹಾಲಿಂಗವೇ ಧ್ಯಾನದ ವಸ್ತು, ಧ್ಯಾನವಸ್ತುವಿಲ್ಲದೆ ಶಿವಯೋಗಿ ಇರಬಾರದು. ಇದುವೇ ಶಿವಯೋಗಿಯ ಲಕ್ಷಣ. ಇಂತಹ ಶಿವಯೋಗಿಯ ಸ್ವರೂಪವನ್ನು ನೀನೆ ಬಲ್ಲೆ ಭಗವಂತನೆ ಎಂದು ದೇವರಿಗೆ ಮಾದರಸ ಪ್ರಾರ್ಥಿಸುತ್ತಾನೆ. ಮುಂದುವರೆದು ಮತ್ತೊಂದು ವಚನದಲ್ಲಿ ಹೀಗೆ ಹಾಡಿದ್ದಾರೆ.

೬. ಲೆಂಕನಾಗಲಿ, ಕಿಂಕರನಾಗಲಿ, ಶರಣನಾಗಲಿ, ಸಂಯಮಿತನಾಗಲಿ,
ದರುಶನ ಪರುಶನವುಳ್ಳವರಾದಡಾಗಲಿ,

---

೧೬. ಅದೇ, ೯ : ವ.ಸಂ. ೪೭೨.

**ದುಃಶ್ಶೀಲಃ ಶೀಲಯುಕ್ತೋ ವಾ ಯೋ ವಾ ಕೋಪ್ಯಸ್ಯ ಲಕ್ಷಣಂ।**
**ಭೂತಿಶಾಸನಸಂಯುಕ್ತಃ ಸಃ ಪೂಜ್ಯೋ ರಾಜಪುತ್ರವತ್॥**
ಎಂಬುದಾಗಿ, ಸಕಳೇಶ್ವರದೇವ,
ಆರ ಮನದಲ್ಲಿ ಹೊದ್ದಿಹನೆಂದರಿಯಬಾರದು.[೧೭]

ಸೇವಕನೆ ಆಗಲಿ, ದಾಸನೇ ಆಗಲಿ, ಶಿವಭಕ್ತನಾಗಲಿ, ಶರಣನಾಗಲಿ, ದರ್ಶನ ಪಡೆದುಕೊಂಡರಾಗಲಿ, ಸುಶೀಲನೆ ಆಗಲಿ, ದುಶ್ಶೀಲನೆ ಆಗಲಿ, ಅವನ ಲಕ್ಷಣ ಯಾವುದೇ ಇರಲಿ ವಿಭೂತಿ-ರುದ್ರಾಕ್ಷದಿಂದ ಕೂಡಿಕೊಂಡಿದ್ದರೆ ಅವನು ರಾಜಪುತ್ರನಂತೆ ಪೂಜಿಸಲ್ಪಡುತ್ತಾನೆ ಎಂಬ ಮಾತನ್ನು ಹೇಳುವಾಗ ವಿಭೂತಿ ಹಾಗೂ ರುದ್ರಾಕ್ಷ ಧಾರಣೆಯ ಮಹತ್ವವನ್ನು ತಿಳಿಸಿದ್ದಾರೆ. ರಾಜನ ಪುತ್ರನಿಗೆ ಹೇಗೆ ಮತ್ತು ಎಷ್ಟು ಮಹತ್ವ ಇರುವುದೋ ಹಾಗೆಯೇ ವೀರಶೈವನಾದ ಸಾಧಕನ ಇರುವಿಕೆಯಲ್ಲಿ ಕ್ಷಾರದ ಹಾಗೂ ರುದ್ರಾಕ್ಷದ ಮಹತ್ವವನ್ನು ತಿಳಿದು ಧಾರಣೆ ಮಾಡಿಕೊಳ್ಳಬೇಕೆಂಬುದನ್ನು ಹೇಳುತ್ತಾರೆ.

## ಮಡಿವಾಳ ಮಾಚಿದೇವರು

೧೨ನೇ ಶತಮಾನದ ಬಸವಕಲ್ಯಾಣದಲ್ಲಿ ಆಗಿಹೋದ ಶಿವಶರಣರ ಗುಂಪಿನಲ್ಲಿ ಮಡಿವಾಳ ಮಾಚಿದೇವರೂ ಒಬ್ಬರು. ಶಿವಶರಣರ ಗುಂಪಿನಲ್ಲಿ ಇವರು ಹಿರಿಯರೆಂಬ ಅಭಿಪ್ರಾಯವು ಕೇಳಿಬರುತ್ತವೆ. ಇವರು ಶಿವ-ಶರಣರ ಬಟ್ಟೆಯನ್ನು ಒಗೆದು ಮಡಿ ಮಾಡುವ ಕಾಯಕವನ್ನು ಆಯ್ಕೆ ಮಾಡಿಕೊಂಡಿದ್ದರು. ಕೇವಲ ಶರಣರ ಬಟ್ಟೆಯ ಕೊಳೆಯನ್ನಷ್ಟೇ ಅಲ್ಲ, ಮನದಲ್ಲಿರುವ ಮಲಿನವನ್ನೂ ತೊಳೆಯುವುದರಲ್ಲಿ ನಿರತರಾಗಿದ್ದರು. ಹಲವು ಪ್ರಸಂಗದಲ್ಲಿ ಬಸವಾದಿಗಳಿಗೆ ಮಾರ್ಗದರ್ಶನ ಮಾಡಿದ ಉದಾಹರಣೆಗಳು ಉಂಟು.

ಮಾಚಿದೇವರು ಸುಪ್ರಸಿದ್ಧ ವಚನಕಾರರು. ಶೂನ್ಯಸಂಪಾದನೆಯಲ್ಲಿ ಮಾಚಿದೇವರ ಸಂಪಾದನೆ ಎಂಬ ಪ್ರಕರಣವು ಇದೆ. ಕಲ್ಯಾಣದಲ್ಲಿ 'ಮಾಚಿದೇವರ ಹೊಂಡ' ಎಂಬ ಸ್ಥಳ ಇಂದಿಗೂ ಕಾಣಲು ಸಾಧ್ಯ. ಬಹುಶಃ ಅದು ಶರಣರ ಬಟ್ಟೆಯನ್ನು ಮಡಿ ಮಾಡಲು ಮಾಚಿದೇವರು ಬಳಸುತ್ತಿದ್ದ ಜಾಗೆ ಎಂದು ಗುರುತಿಸಿದ್ದಾರೆ. ಬಿಜ್ಜಳನ ಸೈನ್ಯ ಶಿವಶರಣರನ್ನು ಬೆನ್ನಟ್ಟಿದಾಗ, ಅವರನ್ನು ರಕ್ಷಿಸಿದವರಲ್ಲಿ ಅಗ್ರಗಣ್ಯ ವೀರಘಂಟು ಮಡಿವಾಳ ಮಾಚಿದೇವ. ಶರಣರನ್ನು ಸಂರಕ್ಷಿಸಿದ ಪುರುಷ ಎಂತಲೂ ಕರೆಯುತ್ತಾರೆ.

ಮಡಿವಾಳ ಮಾಚಿದೇವರು ತಮ್ಮ ಕೆಲವೇ ಕೆಲವು ವಚನಗಳಲ್ಲಿ ಸಂಸ್ಕೃತ ಶ್ಲೋಕಗಳ ಬಳಸಿದ ಉದಾಹರಣೆಗಳನ್ನು ಕಾಣುತ್ತೇವೆ. ತತ್‌ಪೂರ್ವದಲ್ಲಿ ಮಾಚಿದೇವರು ವೀರಮಾಹೇಶ್ವರ ಎಂಬ ಪದವನ್ನು ತಮ್ಮ ವಚನದಲ್ಲಿ ಬಳಸಿದ್ದನ್ನ

---

೧೭. ಅದೇ, ೯ : ವ.ಸಂ. ೪೭೫.

ನಾವು ಕಾಣಬಹುದು. ಏಕೆಂದರೆ, ಬಹಳ ಜನ ಜ್ಞಾನಿಗಳು ವೀರಮಾಹೇಶ್ವರ ಮತ್ತು ವೀರಶೈವ ಎಂಬ ಪದಗಳು ಬಸವಾದಿ ಪ್ರಮಥರಿಗೆ ಸಂಬಂಧವಿಲ್ಲ, ಅವರು ಭೋದಿಸಿದ ಧರ್ಮ 'ಲಿಂಗಾಯತ' ಎಂದು ಹೇಳಿಕೊಂಡು ತಿರುಗುತ್ತಾರೆ. ಅಷ್ಟೇ ಅಲ್ಲ ಸಮಾಜದ ದಾರಿಯನ್ನು ತಪ್ಪಿಸುತ್ತಿದ್ದಾರೆ.

೧. ನಾವು ಸದ್ವೀರ ಮಾಹೇಶ್ವರರೆಂದು ಹೇಳುವ ಅಣ್ಣಗಳಿರಾ
ನಿಮ್ಮ ವೀರಮಾಹೇಶ್ವರತ್ವದ ಕುರುಹ ಹೇಳಿರಣ್ಣ,
ಅರಿಯದಿರ್ದಡೆ ಸದ್ವೀರ ಮಾಹೇಶ್ವರತ್ವದ ಕುರುಹ ಕೇಳಿರಣ್ಣ,
ಪಂಚಮಹಾಪಾತಕಂಗಳ ಬೆರಸದೆ,
ಪೂರ್ವವಳಿದು ಪುನರ್ಜಾತರಾದ ಸದ್ಭಕ್ತರಲ್ಲಿ
ಪಂಚಸೂತಕಂಗಳ ಕಲ್ಪಿಸದೆ,
ಪಂಚಚಾರಂಗಳ ಭೇದಿಸಿ, ಅನಾಚಾರಂಗಳ ಸಂಹರಿಸಿ,
ತನ್ನ ನಿಜ ಚಿತ್ಕಳೆಗಳ ತೋರಿಸಿ,
ಅವರ ಗೃಹವ ಪೊಕ್ಕು, ಪಾದದೋಕ ಪ್ರಸಾದವ
ಕೊಟ್ಟು ಕೊಳಬಲ್ಲಾತನೆ ಸದ್ವೀರ ಮಾಹೇಶ್ವರ ನೋಡಾ.
ಕಲಿದೇವರದೇವಾ.[೧೮]

ಈ ವಚನದಲ್ಲಿ ವೀರಮಾಹೇಶ್ವರನ ನಿಜಲಕ್ಷಣವನ್ನ ಸುಂದರವಾಗಿ ಸೆರೆಹಿಡಿದಿದ್ದಾರೆ. ಮೊದಲಿಗೆ, ಪಂಚಮಹಾಪಾತಕಗಳಿಂದ ಮುಕ್ತನಾಗಿರಬೇಕು. ಎರಡನೆಯದಾಗಿ, ಪಂಚಸೂತಕಗಳನ್ನ ನಡೆಸಿಕೊಂಡು ಬರಬಾರದು. ಮೂರನೆಯದಾಗಿ, ಪಂಚಾಚಾರಗಳಲ್ಲಿ ನಡೆದು, ಅನಾಚಾರಗಳನ್ನು ನಿಲ್ಲಿಸಿರಬೇಕು. ಕೊನೆಯದಾಗಿ ತನ್ನ ನಿಜ ಚಿತ್ಕಳೆಯನ್ನು ತೋರಿಸಿ ಭಕ್ತರ ಗೃಹಕ್ಕೆ ಹೋಗಿ ಪಾದೋದಕ ಪ್ರಸಾದವ ಕೊಡುವ ಕಾಯಕದಲ್ಲಿ ನಿರತನಾಗಿರುವ ಸಾಧಕನೇ ವೀರಮಾಹೇಶ್ವರ ಅಯ್ಯಾ ಎಂದು ಸಾರಿದ್ದಾನೆ.

೨. ತನು ನಷ್ಟ, ಮನನಷ್ಟ, ನೆನಹುನಷ್ಟ, ಭಾವನಷ್ಟ, ಜ್ಞಾನನಷ್ಟ
ಇಂತು ಪಂಚನಷ್ಟದೊಳಗೆ ನಾ ನಷ್ಟವಾದೆನು.
ಆ ನಷ್ಟದೊಳಗೆ ನೀನು ನಷ್ಟವಾದೆ.
ಕಲಿದೇವರದೇವನೆಂಬ ನುಡಿ,
ನಿಶ್ಶಬ್ದಂ ಬ್ರಹ್ಮ ಮುಚ್ಯತೇ.[೧೯]

ಪರಶಿವನ ಜ್ಞಾನವಾದಾಗ ಅಥವಾ ಅನುಭಾವವಾದಾಗ ಅಥವಾ ಲಿಂಗಾಂಗ ಸಾಮರಸ್ಯವಾದಾಗ ಈ ಪಂಚವಿಧ ನಷ್ಟಗಳು ಸಾಧಿಸುತ್ತವೆ. ತನುನಷ್ಟವೆಂದರೆ ಇಲ್ಲಿ

---

೧೮. ಅದೇ, ೮ : ವ.ಸಂ. ೬೪೬.

೧೯. ಅದೇ, ೮ : ವ.ಸಂ. ೬೧೭.

ತನು (ದೇಹ) ಹಾಳಾಗುವುದೆಂದರ್ಥವಲ್ಲ, ತನುವಿನಲ್ಲಿರುವ ದುರ್ಗುಣಗಳು ಹಾಳಾಗುವುದು. ತನುವೇ ಹಾಳಾದರೆ ಜ್ಞಾನ ಹೇಗೆ ಲಭಿಸುವುದು? ಹಾಗಾಗಿ ತನುವಿನಲ್ಲಿ ಅಡಗಿರುವ ದುಷ್ಟಗುಣಗಳ ನಿವೃತ್ತಿ (ನಷ್ಟ). ವ್ಯಕ್ತಿ ತಾನು ಏನನ್ನ ಮಾಡಲು ಮನಸ್ಸು ಮಾಡದೆ, ಶಿವನ ಇಚ್ಛೆಯಂತೆ ನಡೆದುಕೊಳ್ಳುವುದು, ಇದರಿಂದ ಅವನ ಸ್ವಾತಂತ್ರ್ಯತೆ ಉಳಿಯುವುದಿಲ್ಲ, ಇದುವೆ ಮನನಷ್ಟ. ನಾನು ನಾಳೆಗಾಗಿ ಅದನ್ನ ಮಾಡಬೇಕು, ನನ್ನ ಸಂಸಾರಕ್ಕಾಗಿ, ಸ್ನೇಹಿತರಿಗಾಗಿ ಇದನ್ನ ಮಾಡಬೇಕು ಎಂಬ ನೆನಹನ್ನ ಕಳೆದುಕೊಳ್ಳುವುದೇ ನೆನಹುನಷ್ಟ. ನಾನು ಭಗವಂತನಿಂದ ಭಿನ್ನವೆಂಬ ಭಾವನೆಯನ್ನು ಕಳೆದುಕೊಳ್ಳುವುದೇ ಭಾವನಷ್ಟ. ಜೀವಿಯು ತಾನು ಪರಶಿವನಿಂದ ಭಿನ್ನ ಎನ್ನುವುದಾಗಲಿ, ಅಲ್ಲದೆ, ತಾನು ಪರಶಿವನೊಂದಿಗೆ ಬೆರೆತಿರುವೆನೆಂದಾಗಲಿ ಮರೆಯುವುದೇ ಜ್ಞಾನನಷ್ಟ.

ಇಂತಹ ನಷ್ಟಗಳಲ್ಲಿ ನಾನು-ನೀನು ಎಂಬ ಅಂಶಗಳೇ ಇರುವುದಿಲ್ಲ. ಪರಶಿವನ ನುಡಿ ಹೇಗಿದೆ ಎಂದರೆ, ಶ್ರುತಿಯಲ್ಲಿ ಹೇಳಿದ ಹಾಗೆ 'ನಿಶ್ಶಬ್ದಂ ಬ್ರಹ್ಮ ಮುಚ್ಯತೇ'. ಬ್ರಹ್ಮ ಅಥವಾ ಪರಶಿವ ಹೇಗೆಂದರೆ ಮಾತಿನಲ್ಲಿ ಹೇಳಲು ಸಾಧ್ಯವಿಲ್ಲದ ಸ್ಥಿತಿ. ಅದನ್ನೇ ಅನುಭಾವಿಗಳು ಅವರ್ಣನೀಯ ಅಥವಾ ಅನಿರ್ವಚನೀಯ ಎಂದು ಕರೆಯುವುದು ನಮಗೆ ತಿಳಿದಿರುವ ವಿಷಯ.

೩. ದೇಶಾಂತರಿ ದೇಶಾಂತರಿಯೆಂದು ನುಡಿವ ಹುಸಿಭ್ರಷ್ಟರನೇನೆಂಬೆನಯ್ಯಾ
**ಏಕಮೂರ್ತಿಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ**
ಎಂಬುದನರಿಯದೆ, ದೇಶಾಂತರಿಯೆಂದರೆ ಆರು ಮೆಚ್ಚುವರಯ್ಯ?
ಸುಮ್ಮನಿರಿ ಭೋ, ಬರುಕಾಯರುಗಳಿರಾ.
ದೇಶಾಂತರಿಯಾದರೆ ಮೂರು ಲೋಕದ ಕರ್ತನಂತೆ ಶಾಂತನಾಗಿರಬೇಕು.
ಜಲದಂತೆ ಶೈತ್ಯವ ತಾಳಿರಬೇಕು.
ಸೂರ್ಯನಂತೆ ಸರ್ವರಲ್ಲಿ ಪ್ರಭೆ ಸೂಸುತ್ತಿರಬೇಕು
ಪೃಥ್ವಿಯಂತೆ ಸರ್ವ ಭಾರವ ತಾಳಿರಬೇಕು.
ಹೀಂಗಾದಡೆ ಮಹಂತಿವ ಕೂಡಲದೇವರೆಂಬೆನಯ್ಯ.
ಹಿಂಗಲ್ಲದೆ ತ್ರಿವಿಧಮಲಗಳ ಭುಂಜಿಸುತ್ತ,
ಗುರುಲಿಂಗಜಂಗಮಕ್ಕೆ ತನುಮನಧನ ಸವೆಯದೆ,
ತಾವೇ ದೇವರೆಂದು ತಮ್ಮ ಉದರವ ಹೊರೆವ ಶ್ವಾನ ಸೂಕರನಂತೆ,
ಪ್ರಪಂಚನ ಗರ್ವಿಗಳ, ದೇಶಾಂತರ, ಮಹಂತರೆನಬಹುದೇನಯ್ಯ?
ಎನಲಾಗದು ಕಾಣಾ, ಕಲಿದೇವರದೇವ[೨೧]

ಈ ಮೇಲಿನ ವಚನದಲ್ಲಿ ಮಾಚಿದೇವರು ಚಂದ್ರಜ್ಞಾನಾಗಮದ ಅರ್ಧಶ್ಲೋಕವನ್ನು ಉಪಯೋಗಿಸಿಕೊಂಡಿದ್ದಾರೆ. ನೋಡಿ ಪೂರ್ಣ ಶ್ಲೋಕವನ್ನು.

---

೨೧. ಅದೇ, ೮ : ವ.ಸಂ. ೬೩೭.

"ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ।
ತದೇವಂಗುಣಕಂ ಗ್ರಾಹ್ಯಂ ಗುರುಜಂಗಮಯೋರಪಿ॥"[೨೧]

ಪರಶಿವನೆಂಬ ಒಂದೇ ಮೂರ್ತಿಯ ಮೂರು ಭಾಗಗಳೇ ಗುರು, ಲಿಂಗ ಮತ್ತು ಜಂಗಮ. ಈ ಮೂರು ತತ್ವಗಳು ಪರಶಿವನಿಂದ ಭಿನ್ನವಲ್ಲವೆಂಬ ಅಂಶ ಆಗಮಗಳಲ್ಲಿ ಇದೆ. ಅದನ್ನೇ ಇಲ್ಲಿ ಮಾಚಿದೇವರು ಈ ಮೇಲಿನ ಶ್ಲೋಕದಲ್ಲಿ ಉದಾಹರಿಸಿದ್ದಾರೆ. ಪರಶಿವ ದೇಶಾಂತರಿಯಾಗಿ ಹೇಗೆ ಶಾಂತನಾಗಿದ್ದಾನೆಯೋ ಮತ್ತು ಮೂರು ಲೋಕಗಳಲ್ಲಿ ಸಂಚಾರಗೈಯುತ್ತಿರುತ್ತಾನೆಯೋ, ಅಲ್ಲದೆ, ನೀರಿನಲ್ಲಿರುವ ತಂಪಿನ ಗುಣದಂತಿರಬೇಕು, ಸೂರ್ಯನಲ್ಲಿ ಸೂಸುವ ಪ್ರಭೆಯಂತಿರಬೇಕು. ಪೃಥ್ವಿಯಲ್ಲಿ ಇರುವ ತಾಳ್ಮೆಯ ಗುಣವನ್ನು ಹೊಂದಿರಬೇಕು. ಹೀಗಿಲ್ಲದೆ, ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನವನ್ನು ಅರ್ಪಿಸದೆ, ತ್ರಿವಿಧಮಲವನ್ನು ಅನುಭೋಗಿಸುತ್ತಿರುವ ವ್ಯಕ್ತಿಗಳು ತಾವೇ ದೇವರೆಂಬ ಅಹಂಕಾರದಿಂದ ತಿರುಗುತ್ತಿರುವ ವ್ಯಕ್ತಿಗಳನ್ನು ಮಹಂತರು ಎಂದು ಕರೆಯಬಹುದೆ? ಕರೆಯಲಾಗದು. ಇಲ್ಲಿ ಗುರು-ಲಿಂಗ-ಜಂಗಮ ತತ್ವವನ್ನು ಸಾರುವಲ್ಲಿ ಮತ್ತು ಸಮರ್ಥಿಸುವಲ್ಲಿ ಆಗಮದ ಸಾಕ್ಷಿಯನ್ನು ಉಪಯೋಗಿಸಿಕೊಂಡಿದ್ದಾರೆ.

೪. ಧರಿಸಿ ಭೋ, ಧರಿಸಿ ಭೋ ಮರ್ತ್ಯರರೆಲ್ಲರು,
ಮರೆಯದೆ ಶ್ರೀ ಮಹಾಭಸಿತವ
ಲೆಕ್ಕವಿಲ್ಲದ ತೀರ್ಥಂಗಳ ಮಿಂದ ಫಲಕಿಂದದು
ಕೋಟಿಮಡಿ ಮಿಗೆ ವೆಗ್ಗಳ
ಲೆಕ್ಕವಿಲ್ಲದ ಯಜ್ಞಂಗಳ ಮಾಡಿದ ಫಲಕಿಂದದು
ಕೋಟಿಮಡಿ ಮಿಗೆ ವೆಗ್ಗಳ
ಅದೆಂತೆಂದಡೆ ಭೀಮಾಗಮದಲ್ಲಿ,
ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಂ।
ತತ್ಫಲಂ ಕೋಟಿಗುಣಿತಂ ಭಸ್ಮಸ್ನಾನಂ ನ ಸಂಶಯಃ॥
ಇಂತೆಂದುದಾಗಿ,
ಧರಿಸಿ ಭೋ ಧರಿಸಿ ಭೋ ಮರ್ತ್ಯರೆಲ್ಲರು,
ಮರೆಯದೆ ಶ್ರೀ ಮಹಾಭಸಿತವ
ನಮ್ಮ ಕಲಿದೇವರ ನಿಜ ಚರಣವ ಕಾಣ್ಬುದಕ್ಕೆ
ಶ್ರೀ ಮಹಾಭಸಿತವೆ ವಶ್ಯ ಕಾಣಿಭೋ.[೨೨]

ಭಸಿತ ಧಾರಣೆ ಮಾಡುವ ಕ್ರಮದಲ್ಲಿ ಆಗಮಗಳಲ್ಲಿ ಮೂರು ಪ್ರಕಾರಗಳನ್ನು ತಿಳಿಸಿರುವರು. (೧) ಭಸ್ಮ ಸ್ನಾನ. (೨) ಭಸ್ಮೋದ್ಧೂಲನ ಮತ್ತು (೩) ಭಸ್ಮ ತ್ರಿಪುಂಡ್ರ.

---

೨೧. ಚಂದ್ರಜ್ಞಾನಾಗಮ, ಕ್ರಿ.ಪಾ., ೫.೧೫.

೨೨. ಅದೇ, ೮ : ವ.ಸಂ. ೮೩೯.

ಈ ಕ್ರಮವನ್ನ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿಯೂ ಉಲ್ಲೇಖ ಮಾಡಲಾಗಿದೆ. ಅಭಿಮಂತ್ರಿತವಾದ ಜಲವನ್ನು ಬೆರಸಿ ಭಸಿತವನ್ನು ಲೇಪನ ಮಾಡಿಕೊಳ್ಳುವುದನ್ನು ಭಸ್ಮಸ್ನಾನ ಎಂದು ಕರೆಯುವರು. ಈ ಮೇಲಿನ ವಚನದಲ್ಲಿ ಮಾಚಿದೇವರು ಸಿರಿಯಿಂದ ಯುಕ್ತವಾದ ಮಹಾ ಭಸಿತವನ್ನು ಮರ್ತ್ಯಲೋಕಜರೆಲ್ಲರು ಧರಿಸಿರಿ ಎಂದು ಹೇಳುತ್ತಾ ಅದರ ಮಹತ್ವ ಎಷ್ಟಿದೆ ಎಂಬುದನ್ನು ತಿಳಿಸುವರು. ಲೆಕ್ಕವಿಲ್ಲದಷ್ಟು ತೀರ್ಥದಲ್ಲಿ ಮಿಂದರೂ ಮತ್ತು ಲೆಕ್ಕವಿದ್ದಷ್ಟು ಯಜ್ಞಗಳ ಮಾಡಿದ ಫಲಕ್ಕಿಂತಲೂ ಕೋಟಿಪಟ್ಟು ಹೆಚ್ಚು ಫಲವನ್ನು ನಾವು ಭಸಿತ ಧರಿಸುವದರಲ್ಲಿ ಪಡೆಯಬಹುದು. ನೋಡಿ ಭೀಮಾಗಮದ ಈ ಶ್ಲೋಕವನ್ನು ಸರ್ವತೀರ್ಥಗಳ ದರ್ಶನದಿಂದ ಯಾವ ಪುಣ್ಯ ದೊರೆಯುವುದೋ, ಸರ್ವಯಜ್ಞಗಳಿಂದ ಯಾವ ಫಲ ದೊರೆಯುತ್ತದೆಯೋ ಅದೆಲ್ಲದರ ಕೋಟಿಗುಣಿತವಾದ ಫಲವು ಕೇವಲ ಭಸಿತ ಸ್ನಾನದಿಂದ ಸಾಧ್ಯ. ಇದರಲ್ಲಿ ಸಂಶಯಪಡುವ ಅವಶ್ಯಕತೆ ಇಲ್ಲ. ಭಸ್ಮ ಸ್ನಾನದಿಂದ ಸಮಸ್ತ ಪಾಪ ಸಮೂಹವನ್ನ ನಾಶಗೊಳಿಸಲು ಸಾಧ್ಯವಿದೆ ಎಂತಲೂ ಚಂದ್ರಜ್ಞಾನಾಗಮದಲ್ಲಿ[23] ತಿಳಿಸಿದ್ದಾರೆ.

೫. ವಿಭೂತಿಯನಿಟ್ಟು, ರುದ್ರಾಕ್ಷಿಯಂ ಧರಿಸಿ,
ಪಂಚಾಕ್ಷರಿಯಂ ಜಪಿಸಿ, ಕೃತಾರ್ಥರಾದೆವೆಂಬ
ಪಂಚಮಹಾಪಾತಕರು ನೀವು ಕೇಳಿರೊ
ಅದೆಂತೆಂದಡೆ; ವಿಭೂತಿಯನುಟ್ಟು ವಿಶ್ವಾಸವಿಲ್ಲವಾಗಿ.
ರುದ್ರಾಕ್ಷಿಯ ಧರಿಸಿ ರುದ್ರಗಣಂಗಳನರಿಯರಾಗಿ,
ಪಂಚಾಕ್ಷರಿಯ ಜಪಿಸಿ ಪಂಚಮಹಾಪಾತಕವ ಬಿಡರಾಗಿ.
ಅವಾವೆಂದಡೆ ಹುಸಿಕೊಲೆ ಕಳವು ಪಾರದ್ವಾರ
ತಾಮಸ ಭಕ್ತಸಂಗ, ಇಂತವ ಬಿಡದನ್ನಕ್ಕರ
ಶಿವಭಕ್ತವೆನಿಸಿಕೊಳಬಾರದು ನೋಡಾ.
ಅದೆಂತೆಂದಡೆ:
ಸರ್ವಾಚಾರಪರಿಭ್ರಷ್ಟಃ ಶಿವಾಚಾರಸ್ಯ ಮೇಲನಂ।
ಶಿವಾಚಾರಪರಿಭ್ರಷ್ಟೋ ನರಕೇ ಕಾಲಮಕ್ಷಯಂ॥
ಎಂದುದಾಗಿ
ಕಸಗೊಂಡ ಭೂಮಿಯಲ್ಲಿ ಸಸಿಪಲ್ಲವಿಸುವುದೆ?
ಹುಸಿಯಿದ್ದಲ್ಲಿ ಶಿವಭಕ್ತಿ ನೆಲೆಗೊಂಬುದೆ?...[24]

ಸಾಂಪ್ರದಾಯಿಕ ಹಿಂದೂಗಳು ಒಪ್ಪಿಕೊಂಡ ಭ್ರೂಣಹತ್ಯೆ, ಬ್ರಹ್ಮಹತ್ಯೆ ಮುಂತಾದವುಗಳನ್ನು ಪಂಚಪಾತಕಗಳೆಂದು ಪರಿಗಣಿಸಿದರೆ ಷಟ್‌ಸ್ಥಲಜ್ಞಾನಮೂರ್ತಿ

---

೨೩. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೩೭.

೨೪. ಸ.ವ.ಸಂ., ೮ : ವ.ಸಂ. ೭೩೬.

ಯಾದ ಚೆನ್ನಬಸವಣ್ಣನವರು ಭವಿ ಮಾಡಿದ ಅಡಿಗೆ ಉಣ್ಣುವುದು, ಪರಧನ, ಪರಸತಿ ಬಯಸುವುದು, ಜಂಗಮನಿಂದೆ, ಗುರುವಾಜ್ಞೆ ಮೀರುವುದು, ಶಿವನಿಂದೆ ಮಾಡುವ ಈ ಐದು ಕೃತ್ಯಗಳನ್ನ ಪಂಚಮಹಾಪಾತಕ ಎಂದಿದ್ದಾರೆ. ಹೀಗೆ ಪಂಚಪಾತಕಗಳನ್ನು ಮಾಡಿ ನಾನು ವಿಭೂತಿ ಧರಿಸಿದ್ದೇನೆ, ರುದ್ರಾಕ್ಷಿಯನ್ನ ಧರಿಸಿದ್ದೇನೆ, ಪಂಚಾಕ್ಷರ ಮಂತ್ರವನ್ನು ಜಪಿಸುತ್ತಿದ್ದೇನೆ. ಹಾಗಾಗಿ ನಾನು ಕೃತಾರ್ಥ ಎನ್ನುವ ಭವಿಗಳೇ ಕೇಳಿರೋ ವಿಭೂತಿಯನ್ನು ಧರಿಸಿದರೂ, ಪಂಚಾಕ್ಷರಿಯನ್ನು ಜಪಿಸಿದರು ನಿಮಗೆ ವಿಶ್ವಾಸವಿಲ್ಲ. ಪಂಚಮಹಾಪಾತಕಗಳನ್ನು ಬಿಡದೆ ಇರುವ ಅಂತ ಭಕ್ತರು ಶಿವಭಕ್ತರೆನಿಸಿಕೊಳ್ಳರು. ಎಂತೆಂದರೆ, ಸರ್ವಾಚಾರರಹಿತನಾದರೂ ಶಿವಾಚಾರದಿಂದ ಕೂಡಿರಲೇಬೇಕು. ಶಿವಾಚಾರರಹಿತನಾಗಿರುವ ಭಕ್ತನಿಗೆ ಚಿರಕಾಲ ನರಕವಾಸ ಉಂಟಾಗುತ್ತದೆ. ಕೇವಲ ಡಾಂಭಿಕವಾಗಿ ಆಚರಿಸುವ ಕ್ರಿಯೆಯನ್ನು, ಶ್ರದ್ಧೆಯಿಲ್ಲದೆ ನಡೆಸುವ ಕಾರ್ಯವನ್ನು ತಾಮಸರ ಸಂಗವನ್ನು ಎಲ್ಲವನ್ನು ಸ್ಪಷ್ಟವಾಗಿ ವಿರೋಧಿಸಿ ಶಿವಾಚಾರ ಮಹತ್ವವನ್ನು ಈ ವಚನದಲ್ಲಿ ಮಾಚಿದೇವರು ಎತ್ತಿ ಹಿಡಿದಿದ್ದಾರೆ.

**ಸಮಾರೋಪ:** ವೀರಶೈವ ಶಿವಶರಣರ ಮೇಲೆ ಪ್ರಾಚೀನ ದಾರ್ಶನಿಕ ಸಂಪತ್ತಾದ ವೇದ-ಆಗಮ-ಉಪನಿಷತ್ತುಗಳು-ಪುರಾಣ ಮುಂತಾದ ಶಾಸ್ತ್ರಗಳ ಪ್ರಭಾವ ಇರುವುದು ನಿಚ್ಚಳವಾಗಿ ಕಂಡುಬರುತ್ತದೆ. ಹೀಗಾಗಿ ಶಿವಶರಣರನ್ನ ವೀರಶೈವರ ಪ್ರಾಚೀನ ಸಂಪತ್ತಾದ ಆಗಮಗಳ ಉತ್ತರಾಧಿಕಾರಿಗಳೆಂದರೂ ತಪ್ಪಾಗಲಾರದು. ಹಾಗೆ ಹೇಳುವುದರಿಂದ ಶಿವಶರಣರ ಘನತೆಗೆ ಯಾವ ಧಕ್ಕೆಯೂ ಬರಲಾರದು. ಆದರಿಂದ ಅವರ ಜ್ಞಾನಪ್ರಭೆ ಎಷ್ಟಿತ್ತು ಎನ್ನುವುದು ಗೊತ್ತಾಗುತ್ತದೆ. ಅಲ್ಲದೆ ಅವೆಲ್ಲದರ ಅಧ್ಯಯನ ಅವರು ಮಾಡಿದ್ದರು ಎಂಬುದೇ ನಮ್ಮ ಹೆಮ್ಮೆ ತರುವಂತಹದು. ಹೀಗೆಂದಾಗ ಅವರಲ್ಲಿ ಯಾವುದೇ ಹೊಸತನ ಮತ್ತು ಪ್ರಾಯೋಗಿಕತೆ ಇಲ್ಲವೆಂದಲ್ಲ. ಆಗಮಗಳ ಧ್ವನಿಯೊಂದಿಗೆ ತಮ್ಮ ಧ್ವನಿಯನ್ನು ಕೂಡಿಸಿ ಕನ್ನಡ ಭಾಷೆಯಲ್ಲಿ ಕನ್ನಡಿಸಿದ್ದಾರೆ. ಅವು ಕನ್ನಡದಲ್ಲಿವೆ ಎಂದರೂ ಸರಳವಾಗಿ ಹಾಗೂ ಸುಲಭವಾಗಿ ಅರ್ಥೈಸಲು ಅಸಾಧ್ಯ. ಅವುಗಳನ್ನ ಅರ್ಥೈಸಲು ಗಟ್ಟಿಯಾದ ಎದೆಗಾರಿಗೆ ಬೇಕು.

ಈ ಮೇಲೆ ನಾವು ಸಕಲೇಶ ಮಾದರಸ ಮತ್ತು ಮಡಿವಾಳ ಮಾಚಿದೇವರ ವಚನಗಳಲ್ಲಿ ಮೂಡಿದ ಸಂಸ್ಕೃತೋಕ್ತಿಗಳ ಪ್ರಭಾವವನ್ನ ಗುರುತಿಸಿದ್ದೇವೆ. ಸಿದ್ಧಾಂತ ಗ್ರಂಥಗಳ ಪ್ರಭಾವವನ್ನ ಮನಗಂಡಿದ್ದೇವೆ. ಇದರಿಂದ ನಮಗೆ ತಿಳಿದುಬರುವದೇನಂದರೆ ಕಾಲ ಯಾವುದಾದರೇನು ಭಾಷೆ ಯಾವುದಾದರೇನು ಜ್ಞಾನಿಗಳು ಒಂದೇ ರೀತಿಯಲ್ಲಿ ಆಲೋಚಿಸಿ ಸ್ವೀಕರಿಸಬೇಕಾಗಿರುವುದು ಧರ್ಮ. ಈ ಧರ್ಮ ಪರಿಪಾಲಕರೆ ವೀರಶೈವ ಶಿವಶರಣರು.

ೱ ೱ

# ೭. ವೇದಾಗಮಗಳು ಮತ್ತು ಹಾವಿನಹಾಳ ಕಲ್ಲಯ್ಯ

-ಡಾ|| ಬಿ.ಆರ್. ಹಿರೇಮಠ

ಹಾವಿನಹಾಳ ಕಲ್ಲಯ್ಯ ಹನ್ನೆರಡನೆಯ ಶತಮಾನದ ಶಿವಶರಣ ಮತ್ತು ವಚನಕಾರ. ಈತ ಕಲ್ಯಾಣಕ್ರಾಂತಿಯ ತರುವಾಯವೂ ಬದುಕಿದ್ದ. ಶಿವಯೋಗಿ ಸಿದ್ಧರಾಮೇಶ್ವರನ ನಿಕಟವರ್ತಿಯಾಗಿ, ಶಿಷ್ಯನಾಗಿ, ಅನುಯಾಯಿಯಾಗಿ ಸೊನ್ನಲಾಪುರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ. ಸೊನ್ನಲಾಪುರದ ಸಿದ್ಧರಾಮೇಶ್ವರ ಕೆರೆಯ ಆವರಣದಲ್ಲಿ ಹಾವಿನಹಾಳ ಕಲ್ಲಯ್ಯನ ಲಿಂಗೈಕ್ಯ ಸಮಾಧಿ ಈಗಲೂ ಇರುವುದು ಇದನ್ನು ದೃಢೀಕರಿಸುತ್ತದೆ. ಇದಲ್ಲದೆ ರಾಘವಾಂಕನ 'ಸಿದ್ಧರಾಮ ಚರಿತೆ'ಯಲ್ಲಿ ಸಿದ್ಧರಾಮೇಶ್ವರನು ಕೆರೆಯ ಮಧ್ಯದಲ್ಲಿ 'ಶಿವಯೋಗ ಸಮಾಧಿ' ಹೋಗುವ ಸಂದರ್ಭದಲ್ಲಿ ಹಾವಿನಹಾಳ ಕಲ್ಲಯ್ಯನನ್ನು ಹತ್ತಿರ ಕರೆದು ತನ್ನ 'ಲಿಂಗೈಕ್ಯ' ವಿಚಾರ ತಿಳಿಸಿದುದು ದಾಖಲಾಗಿದೆ. ಈ ಎಲ್ಲ ಅಂಶಗಳು ಹಾವಿನಹಾಳ ಕಲ್ಲಯ್ಯನ ಬದುಕಿದ ಉತ್ತರಾರ್ಧದ ಕಾರ್ಯಕ್ಷೇತ್ರ ಸೊನ್ನಲಾಪುರವಾಗಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತವೆ.

ಹಾವಿನಹಾಳ ವಿಜಾಪುರ ಜಿಲ್ಲೆಯ ಒಂದು ಸಣ್ಣ ಗ್ರಾಮ. ವಚನಕಾರ ಕಲ್ಲಯ್ಯ ಈ ಗ್ರಾಮದವ. ಈ ಊರಿನ ಕಲ್ಲೇಶ್ವರ ಈತನ ಆರಾಧ್ಯದೈವ. ಅಕ್ಕಸಾಲಿಗ ವೃತ್ತಿಯ ಶಿವಯ್ಯ (ಶಿವನೋಜ) ಈತನ ತಂದೆ, ಸೋಮವ್ವೆ ತಾಯಿ, ಆಚಾರ್ಯ ಪರಂಪರೆಯ ರೇವಣಸಿದ್ಧೇಶ್ವರರು ತಮ್ಮ ಮಗ ರುದ್ರಮುನಿಯೊಂದಿಗೆ ಕಲ್ಲಯ್ಯನನ್ನು ಭೆಟ್ಟಿಯಾಗಲು ಹಾವಿನಹಾಳ ಗ್ರಾಮಕ್ಕೆ ಆಗಮಿಸಿದ್ದರು. ಆ ಸಂದರ್ಭದಲ್ಲಿ ರುದ್ರಮುನಿಯಿಂದ ಹಾವಿನಹಾಳ ಕಲ್ಲಯ್ಯನಿಗೆ ಶಿವದೀಕ್ಷೆ, ಶಿವಜ್ಞಾನ ಬೋಧನೆ ನೆರವೇರಿಸಿದರು. ಅಂದಿನಿಂದ ರುದ್ರಮುನಿ ಹಾವಿನಹಾಳ ಕಲ್ಲಯ್ಯನಿಗೆ ಗುರುಗಳಾದರು. ಆಮೇಲೆ ಕಲ್ಲಯ್ಯ ಶಿವಾನುಭಾವ ಶಾಸ್ತ್ರದ ಶ್ರದ್ಧಾವಂತ ಅಭ್ಯಾಸಿಯಾದ. ವೇದ, ಆಗಮ, ಉಪನಿಷತ್ತು, ಪುರಾಣ, ಕಾವ್ಯ ಹಾಗೂ ಶಾಸ್ತ್ರ ಗ್ರಂಥಗಳನ್ನು ಆಳವಾಗಿ ನಿರಂತರವಾಗಿ ಅಧ್ಯಯನ ಮಾಡಿ ಅಪಾರಜ್ಞಾನ ಗಳಿಸಿದ. ಇದರೊಂದಿಗೆ ಶರಣ ಸಂಗ, ಆದ್ಯರ ವಚನಗಳ ಪಠನ ಕಾರ್ಯವನ್ನೂ ನಡೆಸಿದ. ತನ್ನ ವಿಶಾಲವಾದ ಅಧ್ಯಯನ ಹಾಗೂ ಅಪಾರ ಜ್ಞಾನಗಳ ಬಲದಿಂದ ಅಲ್ಲಲ್ಲಿ ಎದುರಾದ ಲೋಕಾಯತ, ಬೌದ್ಧ, ವೈದಿಕ, ಚಾರ್ವಾಕರನ್ನು

ವಾದಗಳಲ್ಲಿ ಸಾಧಾರವಾಗಿ ಸೋಲಿಸಿದ. ಇದರೊಂದಿಗೆ ಅವರ ಚಳುವಳಿಕೆಯನ್ನೂ ತಿದ್ದಿದ. ಸೊನ್ನಲಿಗೆಯಲ್ಲಿ ಶಿವಯೋಗಿ ಸಿದ್ಧರಾಮ, ಕೇದಾರಗುರು ಮತ್ತು ಸಿದ್ಧರಾಮೇಶ್ವರರ ಸೋದರ ಬೊಮ್ಮಯ್ಯರ ಗಾಢ ಸಂಪರ್ಕದಿಂದ 'ಶಿವಾನುಭವ'ವನ್ನೂ ಸಂಪಾದಿಸಿದ. ಹೀಗೆ ಕಲ್ಲಯ್ಯ ಹಾವಿನಹಾಳದಲ್ಲಿ ಆಚಾರ್ಯ ಪರಂಪರೆಯ ರುದ್ರಮುನಿ ಮತ್ತು ಸೊನ್ನಲಿಗೆಯಲ್ಲಿ ಸಿದ್ಧ-ಶರಣ ಪರಂಪರೆಯ ಶಿವಯೋಗಿ ಸಿದ್ಧರಾಮೇಶ್ವರ ಸಾನಿಧ್ಯ-ಸಂಪರ್ಕ-ಶಿಷ್ಯತ್ವದಲ್ಲಿ ತನ್ನ ವ್ಯಕ್ತಿತ್ವವನ್ನು ರೂಢಿಸಿಕೊಂಡ. ಹಾವಿನಹಾಳ ಕಲ್ಲಯ್ಯನಿಗೆ ಶಿವಯೋಗಿ ಸಿದ್ಧರಾಮೇಶ್ವರರೂ ಗುರುವಾಗಿದ್ದರು. ಒಟ್ಟಿನಲ್ಲಿ ಹಾವಿನಹಾಳ ಕಲ್ಲಯ್ಯನದು ಆಚಾರ್ಯ ಪರಂಪರೆ ಮತ್ತು ಸಿದ್ಧ-ಶರಣ ಪರಂಪರೆಗಳಿಂದ ಕೂಡಿದ ಸಮನ್ವಯ-ಸಂಗಮ ವ್ಯಕ್ತಿತ್ವವಾಗಿದ್ದಿತು. ಹಾವಿನಹಾಳ ಕಲ್ಲಯ್ಯ ಆರಂಭದಲ್ಲಿ ವೇದ, ಆಗಮ, ಉಪನಿಷತ್ತು, ಪುರಾಣ, ಕಾವ್ಯ ಮತ್ತು ವಿವಿಧ ಶಾಸ್ತ್ರಗಳನ್ನೂ ಆಮೇಲೆ ವಚನಗಳನ್ನೂ ಅಧ್ಯಯನ ಮಾಡಿರುವುದು ಅವನ ಚರಿತ್ರೆಯ ವಿವರಗಳಿಂದ ವಿದಿತವಾಗುತ್ತದೆ. ಆದುದರಿಂದ ಹಾವಿನಹಾಳ ಕಲ್ಲಯ್ಯನ ವಚನಗಳಲ್ಲಿ ವೇದಾಗಮಗಳ ಶ್ಲೋಕಗಳು ಹೊಸಹೊಕ್ಕಾಗಿರುವುದು ತೀರ ಸಹಜವೆನಿಸುತ್ತದೆ. ಇದು ಈ ವಚನಕಾರನ "ಸಮನ್ವಯ" ಧೋರಣೆಯನ್ನು ಎತ್ತಿತೋರಿಸುತ್ತದೆ. ಆಚಾರ್ಯ ಪರಂಪರೆ ಮತ್ತು ಶರಣ ಪರಂಪರೆಗಳ ಸಮನ್ವಯತೆಯನ್ನು ಹಾವಿನಹಾಳ ಕಲ್ಲಯ್ಯನ ವಚನಗಳಲ್ಲಿ ದಟ್ಟವಾಗಿ ಗುರುತಿಸಬಹುದಾಗಿದೆ. ಹನ್ನೆರಡನೆಯ ಶತಮಾನದ ಈ 'ಸಮನ್ವಯತೆ'ಯ ವಚನಕಾರರಲ್ಲಿ ಹಾವಿನಹಾಳ ಕಲ್ಲಯ್ಯ ಪ್ರಮುಖವಾಗಿ ಕಂಡುಬರುತ್ತಾನೆ.

ಹರಿಹರನ "ಹಾವಿನಹಾಳ ಕಲ್ಲಯ್ಯನ ರಗಳೆ"ಯಲ್ಲಿ ಈತನ ವೇದಜ್ಞಾನದ ಗಾಢತೆಯನ್ನು ಪ್ರಕಟಪಡಿಸುವ-ದೃಢೀಕರಿಸುವ ಪ್ರಸಂಗವೊಂದು ದಾಖಲಾಗಿದ್ದು, ಅದರ ವಿವರಗಳು ಹೀಗಿರುತ್ತವೆ:

ಹಾವಿನಹಾಳ ಕಲ್ಲಯ್ಯನ ಮಗಳು ಕಲ್ಲವ್ವೆ ಲಿಂಗಾರ್ಚನೆಗಾಗಿ ನೀರು ತರಲು ನದಿಗೆ ಹೋಗುತ್ತಾಳೆ. ಕೊಡದಲ್ಲಿ ನದಿಯ ನೀರು ತುಂಬಿಕೊಂಡು ಮರಳಿ ಮನೆಗೆ ಬರುವ ದಾರಿಯಲ್ಲಿ ಬ್ರಾಹ್ಮಣ ಸೋಮಯಾಜಿ ಆಕೆಯನ್ನು ಮುಟ್ಟುತ್ತಾನೆ. ಇದರಿಂದ ಕುಪಿತಗೊಂಡ ಕಲ್ಲವ್ವೆ "ಮೈಲಿಗೆ, ಮೈಲಿಗೆ"ಯೆಂದು ಗಟ್ಟಿಯಾಗಿ ಕೂಗಿ, ತಲೆಯ ಮೇಲಿನ ಕೊಡವನ್ನು ನೆಲಕ್ಕೆ ಅಪ್ಪಳಿಸುತ್ತಾಳೆ. ಇದನ್ನು ಕಂಡು-ಕೇಳಿದ ಸೋಮಯಾಜಿ ಕೂಡಲೇ ಸಿಟ್ಟಿಗೇಳುತ್ತಾನೆ. ತಡಮಾಡದೆ ಬ್ರಾಹ್ಮಣರೊಂದಿಗೆ ಕಲ್ಲವ್ವೆಯ ವಿರುದ್ಧ ದೂರು ನೀಡಲು ಕಲ್ಲಯ್ಯನಲ್ಲಿಗೆ ಧಾವಿಸುತ್ತಾನೆ. ದಾರಿಯ ಮಧ್ಯದಲ್ಲಿ ಜರುಗಿದ ಘಟನೆಯನ್ನು ವಿವರಿಸಿ, ಬ್ರಾಹ್ಮಣ ಮುಟ್ಟಿದರೆ ಮೈಲಿಗೆಯೇ? ಬ್ರಾಹ್ಮಣ, ಕುಲದಲ್ಲಿ ಅತ್ಯಂತ ಶ್ರೇಷ್ಠನಾದವ. ಆದುದರಿಂದ ನಾನು ಕಲ್ಲವ್ವೆಯನ್ನು ತಾಕಿದುದರಿಂದ ಅದು

ಹೇಗೆ ಮೈಲಿಗೆ ಆಗುತ್ತದೆ! ನಿಮ್ಮ ಮಗಳು ಹೀಗೆ ಮಾಡಿದ್ದು ಸರಿಯೇ? ಎಂದು ಕಲ್ಲಯ್ಯನನ್ನು ಪ್ರಶ್ನಿಸುತ್ತಾನೆ. ಇದಕ್ಕೆ ಕಲ್ಲಯ್ಯ ಪ್ರತ್ಯುತ್ತರ ನೀಡಿ ತನ್ನ ಮಗಳು ಮಾಡಿದ್ದು ಸರಿಯೆಂದು ಖಡಾಖಂಡಿತವಾಗಿ ಹೇಳುತ್ತಾನೆ. ಇದಲ್ಲದೆ ಶಿವಭಕ್ತರ ಮನೆಯ ನಾಯಿಯೂ ಕರ್ಮಠರನ್ನು ಮುಟ್ಟಲಾರದೆಂದು ಸ್ಪಷ್ಟವಾದ-ಕಠೋರವಾದ ನುಡಿಗಳಲ್ಲಿ ತಿಳಿಯಪಡಿಸುತ್ತಾನೆ. ಆಗ ಆ ಬ್ರಾಹ್ಮಣನು ನಾವು ನಾಯಿಗಿಂತ ಕೀಳೇ? ನಾವು ವೇದ ಪಠನ ಮಾಡುವವರು. ಆದ್ದರಿಂದ ನಾವೇ ಶ್ರೇಷ್ಠರು, ಕುಲಜರು" ಎಂದು ಪ್ರತಿಪಾದಿಸುತ್ತಾರೆ. "ಕಲ್ಲಯ್ಯ, ನೀನು ನಿನ್ನ ನಾಯಿಯಿಂದ ವೇದಪಠಿಸಿದರೆ ಮಾತ್ರ ನಾವು ಕೀಳರೆಂದು ಭಾವಿಸುತ್ತೇವೆ" ಎಂದು ಆ ಬ್ರಾಹ್ಮಣರು ಮರು ಸವಾಲು ಎಸೆಯುತ್ತಾರೆ. ಬ್ರಾಹ್ಮಣರ ಸವಾಲಿನ ಈ ಮಾತನ್ನು ಆಲಿಸಿದ ಕಲ್ಲಯ್ಯ "ನನ್ನ ನಾಯಿಯಿಂದ ವೇದ ಪಠನ ಮಾಡಿಸುತ್ತೇನೆ" ಎಂದು ಆಶ್ವಾಸನೆ ನೀಡಿ, "ಗಂಭೀರನಾದ" (ಕಪ್ಪು ಬಣ್ಣ) ಎಂಬ ತನ್ನ ನಾಯಿಯನ್ನು ಹತ್ತಿರ ಕರೆದು "ಪ್ರತಿದಿನ ಲಿಂಗೋಚ್ಛಿಷ್ಟವನ್ನು ಸವಿಯುವ 'ಗಂಭೀರನಾದ'ನೇ ಈಗ ನೀನು ವೇದವನ್ನು ಉಚ್ಚರಿಸಲು ಸಿದ್ಧವಾಗು" ಎಂದು ಆಜ್ಞಾಪಿಸುತ್ತಾನೆ. "ಈಗ ಈ ನಾಯಿ ಯಾವ ವೇದವನ್ನು ಓದಬೇಕು? ನೀವೇ ಹೇಳಿರಿ" ಎಂದು ಬ್ರಾಹ್ಮಣರನ್ನು ಕೇಳುತ್ತಾನೆ. ಅದಕ್ಕೆ ಆ ಬ್ರಾಹ್ಮಣರು "ಯಜುರ್ವೇದ" ಓದಿಸೆಂದು ಹೇಳುತ್ತಾರೆ. ತಕ್ಷಣ ಬ್ರಾಹ್ಮಣರ ಈ ಮಾತನ್ನು ಆಲಿಸಿದ ಕಲ್ಲಯ್ಯನ ಈ ನಾಯಿ ಒಂದೆರಡುಕ್ಷಣ ಸ್ತಬ್ಧವಾಗಿ, ಗಂಭೀರವಾಗಿ ನಿಂತು ಸುಸ್ವರದಿಂದ ವೇದಪಠನ ಮಾಡುತ್ತದೆ. ಅಲ್ಲಿ ನೆರೆದಿದ್ದ ಸಮಸ್ತ ಜನ ಆಶ್ಚರ್ಯಗೊಳ್ಳುತ್ತಾರೆ. ಇದಕ್ಕಾಗಿ ಹಾವಿನಹಾಳ ಕಲ್ಲಯ್ಯನನ್ನು ಹೊಗಳುತ್ತಾರೆ. ಕಥೆ ಸಾಂಕೇತಿಕವಾಗಿದ್ದರೂ ಕಲ್ಲಯ್ಯನ ವೇದಾಧ್ಯಯನದ ಮಹತಿಯನ್ನು ಸೂಚಿಸುತ್ತದೆ. ಹೀಗೆ ಹಾವಿನಹಾಳ ಕಲ್ಲಯ್ಯನ "ವೇದಜ್ಞಾನ" ಅನುಪಮವೂ ಅಪಾರವೂ ಆದುದಾಗಿದ್ದಿತು. ಈ ರೀತಿಯಾಗಿ ಕಲ್ಲಯ್ಯ ವೇದಪರಿಸರದಲ್ಲಿ ಬೆಳೆದು ಬಂದವನಾಗಿದ್ದ. ಜ್ಞಾನೇಶ್ವರ ಕೋಣನಿಂದ ವೇದ ಓದಿಸಿದ ಕಥೆ ಜನಜನಿತವಾಗಿರುವುದನ್ನು ಇಲ್ಲಿ ಗಮನಿಸಬೇಕು. "ಪರಕಾಯ ಪ್ರವೇಶ" ಸಿದ್ಧಿಯನ್ನು ಪಡೆದಿದ್ದ ಹಾವಿನಹಾಳ ಕಲ್ಲಯ್ಯನಿಂದ ಈ ಕಾರ್ಯ ನೆರವೇರಿರುವುದು ತೀರ ಸಹಜವೆನಿಸುತ್ತದೆ.

ಹಾವಿನಹಾಳ ಕಲ್ಲಯ್ಯ ವೇದಾಗಮಜ್ಞಾನಿ, ಶಿವಾನುಭವಿ, ಶಾಸ್ತ್ರಕೋವಿದ, ವಾದವಿಶಾರದ ಆಗಿದ್ದಂತೆ ಶಿವಶರಣ-ವಚನಕಾರನೂ ಎನಿಸಿದ್ದ. ಈತ ರಚಿಸಿರುವ ೧೦೪ ವಚನಗಳು ಸಧ್ಯ ಲಭ್ಯವಿರುತ್ತದೆ. "ಮಹಾಲಿಂಗ ಕಲ್ಲೇಶ್ವರ" ಈತನ ವಚನಗಳ ಅಂಕಿತ. ತನ್ನ ಊರಿನ ಆರಾಧ್ಯದೇವ ಕಲ್ಲೇಶ್ವರನನ್ನೇ ತನ್ನ ವಚನಗಳಿಗೆ ಅಂಕಿತವನ್ನಾಗಿ ಮಾಡಿಕೊಂಡಿದ್ದಾನೆ. ಇದು ಕಲ್ಲಯ್ಯನ ಪೂರ್ವಾಶ್ರಮದ ಹೆಗ್ಗುರುತು. ಈ ವಚನಗಳಲ್ಲಿ

೨೧ ಪೂರ್ಣ ಶ್ಲೋಕಗಳೂ ೧೧ ಅರ್ಧಶ್ಲೋಕಗಳೂ ಬಳಕೆಯಾಗಿರುತ್ತವೆ. ವೇದ, ಆಗಮ, ಉಪನಿಷತ್ತು, ಪುರಾಣ, ಕಾವ್ಯಗಳಿಂದ ಆಯ್ದುಕೊಂಡ ಈ ಸಂಸ್ಕೃತ ಶ್ಲೋಕಗಳನ್ನು ಗರ್ಭೀಕರಿಸಿಕೊಂಡಿರುವ ಈ ಎಲ್ಲ ವಚನಗಳು ಅದ್ವೈತಾನಂದದ ವಚನಗಳು, ಅನುಭಾವಜ್ಞಾನ ಸಾರಾಮೃತ ಸಂಪಾದನಾ ಸ್ತೋತ್ರ, ಅಷ್ಟಾವರಣದ ವಚನಗಳು, ಆಚರಣೆಯ ಸಂಬಂಧದ ವಚನಗಳು, ಏಕೋತ್ತರ ಶತಸ್ಥಲ, ಏಕೋತ್ತರ ಶತಸ್ಥಲ ಸಾರಾಮೃತ, ಗಣಭಾಷಿತ ರತ್ನಮಾಲೆ, ಚಿತ್ಕ್ರಿಯಾ ಸಂಗ್ರಹ, ಚಿದ್ಭಸ್ಮ ಮಣಿಮಂತ್ರ ಮಹಾತ್ಮೆಯ ಸ್ಥಲದ ವಚನ, ಚಿದೈಶ್ವರ್ಯ ಚಿದಾಭರಣ, ಜ್ಞಾನ ಷಟ್‌ಸ್ಥಲಸಾರ, ಪರಮಮೂಲಜ್ಞಾನ ಷಟ್‌ಸ್ಥಲ, ಪ್ರಸಾದಿ ಸ್ಥಲದ ವಚನಗಳು, ಬಸವಸ್ತೋತ್ರದ ವಚನಗಳು, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಭಕ್ತಾನಂದ ಸುಧಾರ್ಣವ, ಮಿಶ್ರಸ್ತೋತ್ರಕ್ಕೆ ವಚನಗಳು, ಮೋಕ್ಷದರ್ಶನ ಸಂಗ್ರಹ, ಲಿಂಗಚಿದಮೃತ ಬೋಧೆ, ಲಿಂಗಲೀಲಾ ವಿಲಾಸ ಚಾರಿತ್ರ, ಲಿಂಗಸ್ತೋತ್ರದ ವಚನಗಳು, ವಚನಸಾರ, ವಚನಾಮೃತಸಾರ, ವಚನೈಕೋತ್ತರ ಶತಸ್ಥಲ, ವಿರತಾಚರಣೆಯ ಶರಣ ಸಂಬಂಧದ ವಚನಗಳು, ವಿಶೇಷಾನುಭವ ಷಟ್‌ಸ್ಥಲ, ವೀರಶೈವ ಚಿಂತಾಮಣಿ, ಶರಣ ಚಾರಿತ್ರದ ವಚನಗಳು, ಶರಣ ಮುಖಮಂಡನ, ಶರಣ ಸ್ತೋತ್ರದ ವಚನಗಳು, ಶಿವಯೋಗ ಚಿಂತಾಮಣಿ, ಶೀಲಸಂಪಾದನೆ, ಷಟ್‌ಸ್ಥಲ ಸ್ತೋತ್ರದ ವಚನಗಳು, ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು, ಷಟ್‌ಪ್ರಕಾರ ಸಂಗ್ರಹ, ಸಂಬಂಧಾಚರಣೆಯ ವಚನಗಳು, ಸಕಲಪುರಾತನರ ವಚನಗಳು, ಸುಖಸಂಪಾದನೆಯ ವಚನಗಳು ಎಂಬ ಆಕರಗಳಲ್ಲಿ ದೊರಕುತ್ತವೆ. ಹೀಗಾಗಿ ಅಪಾರವಾದ ವೇದಾಗಮಜ್ಞಾನ ಪಡೆದುಕೊಂಡಿದ್ದ ಹಾವಿನಹಾಳ ಕಲ್ಲಯ್ಯನೇ ವೇದಾಗಮಗಳ ಈ ಶ್ಲೋಕಗಳನ್ನು ತನ್ನ ವಚನಗಳಿಗೆ ಉಪಯೋಗಿಸಿಕೊಂಡಿದ್ದಾನೆಂಬುದು ದೃಢಪಡುತ್ತದೆ.

ಶರಣರು "ಅನುಭಾವ ಪ್ರಮಾಣ"ವನ್ನು ಒಪ್ಪಿಕೊಂಡಿದ್ದಾರೆಂಬುದು ನಿಜ. ಆದರೆ ಅಂದಿನ ಸಮಾಜ, ಕೇವಲ ಈ "ಅನುಭಾವ ಪ್ರಮಾಣ"ವನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಆದುದರಿಂದ ವಚನಕಾರರು ತಾವು ರಚಿಸಿದ ವಚನಗಳ "ಅನುಭಾವ ಪ್ರಮಾಣ"ಕ್ಕೆ 'ವೇದಾಗಮ ಶಾಸ್ತ್ರಪ್ರಮಾಣ'ಗಳನ್ನು ಒದಗಿಸಿ, ತಮ್ಮ ವಿಚಾರ-ಆಶಯಗಳಿಗೆ ಅಧಿಕೃತತೆ, ದೃಢೀಕರಣ ತಂದುಕೊಡುವುದು ಅನಿವಾರ್ಯ ಅಗತ್ಯವೂ ಆಗಿದ್ದಿತು. ಹೀಗಾಗಿ ಹಾವಿನಹಾಳ ಕಲ್ಲಯ್ಯ "ಅನುಭಾವ ಪ್ರಮಾಣ"ದ ತನ್ನ ವಚನಗಳಿಗೆ ವೇದ, ಆಗಮ, ಉಪನಿಷತ್ತು, ಕಾವ್ಯ, ಪುರಾಣ ಕೃತಿಗಳ ಶಾಸ್ತ್ರ ಪ್ರಮಾಣವನ್ನು ಹೇಳಿ, ತನ್ನ ಅಭಿವ್ಯಕ್ತಿಗೆ ಅಧಿಕೃತತೆ, ಅನನ್ಯತೆ ಸಂಪ್ರಾಪ್ತವಾಗುವಂತೆ ಮಾಡಿದ್ದಾನೆ. ಈ ವಚನಗಳಲ್ಲಿ ಬಳಕೆಯಾದ ಸಂಸ್ಕೃತ ಶ್ಲೋಕಗಳು ಶಿವಶರಣರ ಅಭಿವ್ಯಕ್ತಿಗೆ,

ಅಭಿಪ್ರಾಯಗಳಿಗೆ ಪೋಷಕ ಆಕರ ಸಾಮಗ್ರಿಯಾಗಿಯೂ ಪರಿಣಮಿಸಿರುತ್ತದೆ. ಪೋಷಕ ಆಕರ ಸಾಮಗ್ರಿಯೆಂದರೆ ಪ್ರಚಲಿತವಾಗಿರುವ, ತಾನು ಹೇಳುವ ಸಂಗತಿಗಳಿಗೆ, ವಿಷಯಗಳಿಗೆ, ವಿಚಾರಗಳಿಗೆ ಸಮಾನಾಂಶ ಹೊಂದಿದ ಆಧಾರಗಳನ್ನು ಒದಗಿಸಿ, ಅದನ್ನು ಪುಷ್ಟೀಕರಿಸುವುದು. ಹಾವಿನಹಾಳ ಕಲ್ಲಯ್ಯ ಇಲ್ಲಿ ತನ್ನ ವಚನಗಳ ಅಭಿವ್ಯಕ್ತಿಗೆ, ವಿಚಾರಗಳಿಗೆ ಸಮಾನವಾದ ಅಂಶಗಳು ವೇದಾಗಮಗಳಲ್ಲಿರುವುದನ್ನು ಅಧಿಕೃತವಾಗಿ ದೃಢೀಕರಿಸಿದ್ದಾನೆ. ಅಂದರೆ ತನ್ನ ವಚನಗಳಲ್ಲಿ ನಿರೂಪಿತವಾಗಿರುವ ವಿಚಾರ, ವಿಷಯಗಳು ಮೂಲತಃ ವೇದಾಗಮಗಳಲ್ಲಿ ಪ್ರಸ್ತಾಪವಾಗಿರುವುದನ್ನು ಈತ ಸಂಸ್ಕೃತ ಶ್ಲೋಕಗಳ ಬಳಕೆಯ ಮೂಲಕ ಸ್ಪಷ್ಟಪಡಿಸಿದ್ದಾನೆ, ಅಧಿಕೃತವಾಗಿ ದಾಖಲೆಗೊಳಿಸಿದ್ದಾನೆ. ಈ ರೀತಿಯಾಗಿ ಹಾವಿನಹಾಳ ಕಲ್ಲಯ್ಯನ ವಚನಗಳಲ್ಲಿ "ಅನುಭಾವ ಪ್ರಮಾಣ" ಮತ್ತು "ವೇದಾಗಮ ಶಾಸ್ತ್ರಪ್ರಮಾಣ" ಎಂಬ ಉಭಯ ಪ್ರಮಾಣಗಳು 'ಸಮನ್ವಯ'ದ ಸಂಕೇತವಾಗಿ ಸೇರಿಕೊಂಡಿದ್ದು, "ಸಮನ್ವಯತೆಯ ಮಹಾಸಂದೇಶ"ವನ್ನು ಸಾರುತ್ತಿವೆ. ವ್ಯಕ್ತಿ, ಸಮಾಜ, ಧರ್ಮ, ಸಿದ್ಧಾಂತ, ಸಾಹಿತ್ಯ, ಆಚರಣೆ ಮೊದಲಾದ ಕ್ಷೇತ್ರಗಳಲ್ಲಿ ಸಮನ್ವಯತೆಯನ್ನು ಸಾಧಿಸುವುದೇ ವಚನಕಾರರ ಪರಮ ಧ್ಯೇಯವಾಗಿದ್ದಿತು. ವಚನಕಾರರು 'ಸಮನ್ವಯತೆ'ಯನ್ನು ಬದುಕಿದರು, ಬಾಳಿದರು, ಬರೆದರು. ಇದು ವಚನಕಾರ ಹಾವಿನಹಾಳ ಕಲ್ಲಯ್ಯನಿಗೆ ಅಕ್ಷರಶಃ ಅನ್ವಯಿಸುತ್ತದೆ. ಈ ವಚನಕಾರನಂತೆ ೧೨ನೆಯ ಶತಮಾನದ ಅಧಿಕ ಸಂಖ್ಯೆಯ ವಚನಕಾರರ ವಚನಗಳಲ್ಲಿಯೂ ಈ "ಉಭಯ ಪ್ರಮಾಣ"ಗಳ ಸಮನ್ವಯತೆಯನ್ನು ಕಾಣುತ್ತೇವೆ. ಇದು ಅಂದಿನ ಅನಿವಾರ್ಯ ಅಗತ್ಯವಾಗಿದ್ದಿತು. ಯಾಕೆಂದರೆ 'ಶ್ರುತಿಪ್ರಮಾಣ', 'ಶಾಸ್ತ್ರಪ್ರಮಾಣ'ಗಳಿಲ್ಲದೆ ಯಾವುದನ್ನೂ ಎಂಥದನ್ನೂ ಸ್ವೀಕರಿಸುವ, ಒಪ್ಪಿಕೊಳ್ಳುವ, ಅನುಸರಿಸುವ ಕಾಲ ಅದಾಗಿರಲಿಲ್ಲವೆಂಬುದನ್ನು ಮರೆಯಬಾರದು.

ಹಾವಿನಹಾಲ ಕಲ್ಲಯ್ಯನ ವಚನಗಳಲ್ಲಿ ಉಕ್ತವಾದ, ಆಗಮಾಚಾರವಿಲ್ಲೆಂದು ಭಕ್ತರನಲ್ಲೆಂಬ ಭ್ರಮಿತರು ನೀವು ಕೇಳಿರೆ (ವ.ಸಂ. ೧೭), ಮುಕ್ಕಳಿಸಿದ ನೀರ ಮಜ್ಜನಕ್ಕೆರೆವುದಿದಾವಾಗಮಾಚಾರ (ವ.ಸಂ. ೧೭), ಉಪನಿಷದ್ವಾಕ್ಯವೆನಬಹುದಲ್ಲದೆ ಆ ಪರಬ್ರಹ್ಮವೆನಬಾರದು (ವ.ಸಂ. ೨೫), ಸಮತೆ ಸಮಾಧಾನವೆಂಬುದು ಯೋಗದಾಗು (ವ.ಸಂ. ೨೫), ಸಮತೆ ನೆಲೆಗೊಂಡು ಸಮಾಧಾನ ಸಹಜವಾದುದೆ ಮುಕ್ತಿಕ್ಷೇತ್ರ (ವ.ಸಂ. ೨೫), ಉರವೆ ಕುರುಕ್ಷೇತ್ರ, ಶಿರವೆ ಪರ್ವತ, ಲಲಾಟವೆ ಕೇದಾರ, ಭ್ರೂ ನಾಸಿಕದ ಮಧ್ಯವೆ ವಾರಣಾಸಿ ನೋಡಾ, ಹೃದಯವೆ ಪ್ರಮಾಣ, ಸರ್ವಾಂಗದೆ ಸಕಲ ತೀರ್ಥ (ವ.ಸಂ. ೨೬), ಶ್ರುತಿ ಬಾಹ್ಯರಾಗಿರಿ, ಶಿವಭಕ್ತಿಯಿಲ್ಲದೆ ಹೋದಿರಿ (ವ.ಸಂ. ೩೨), ವೇದಾದಿ ವಿದ್ಯಂಗಳ ಬಲ್ಲ ಲೌಕಿಕ ವಿದ್ವಾಂಸರು (ವ.ಸಂ.

೪೦), ಶಿವ ತನ್ನ ನಿಜರೂಪವನು ಸದ್ಭಕ್ತರಿಗಲ್ಲದೆ ತೋರನೆಂಬುದು ವೇದ, ಆ ಸದ್ಭಕ್ತನೆ ಬ್ರಾಹ್ಮಣ, ಆ ಸದ್ಭಕ್ತನೆ ಸತ್ಕುಲಜ, ಆ ಸದ್ಭಕ್ತನೆ ಎನಗಿಂದಧಿಕನೆಂದು ಶ್ರೀರುದ್ರವೇದ ಬೊಬ್ಬಿಡುತ್ತಿದೆ (ವ.ಸಂ. ೯೩), ನಿಮ್ಮ ಮನದೊಳಗೆ ಯಜುರ್ವೇದ ಶ್ರುತಿಯ ವಿಚಾರಿಸಿ ನೋಡಿರಣ್ಣ (ವ.ಸಂ. ೯೩), ವೇದವೆ ತತ್ವವಾದಡೆ ಮಾದಾರನ ಮನೆಯಲುಂಡನೊಬ್ಬ, ಶಾಸ್ತ್ರವೆ ತತ್ವವಾದ ' ಶಿವರಾತ್ರಿಯನೊಬ್ಬ, ಆಗಮ ವಿಧಿಯಲಿ ಮಂತ್ರಮೂರುತಿ (ವ.ಸಂ. ೧೦೧), ವೇದಾಗಮಂಗಳಿಗಳವಲ್ಲ (ವ.ಸಂ. ೭೮) -ಈ ಉಕ್ತಿಗಳು ಈತನ ವೇದಾಗಮ ಪರಿಜ್ಞಾನವನ್ನು ಪ್ರಚುರಪಡಿಸುತ್ತವೆ.

ಈ ವಚನಕಾರನು ತನ್ನ ವಚನಗಳಲ್ಲಿ ಹೇಳಿದ ವಿಷಯಗಳಿಗೆ ಆಧಾರವಾಗಿ ತಾನು ಯಾವ ಮೂಲಗಳಿಂದ ಶ್ಲೋಕಗಳನ್ನು ಆಯ್ದುಕೊಂಡಿದ್ದೇನೆಂಬುದನ್ನು ಆಕರ ಕೃತಿಗಳ ಉಲ್ಲೇಖದ ಮೂಲಕ ಸ್ಪಷ್ಟವಾಗಿ ತಿಳಿಯಪಡಿಸಿದ್ದಾನೆ. ಆಕರಗಳನ್ನು ಸೂಚಿಸುವ ಇಂಥ ಉದಾಹರಣೆಗಳು ಹೀಗಿರುತ್ತವೆ:

ವಚನ ಸಂಖ್ಯೆ : ೧೧
ಪ್ರದೀಪಿಕೆ

> ಭಕ್ತೋಽಭಕ್ತಸ್ಯ ಸಂಯೋಗಾನ್ನ ಭುಂಜೇಯಾದಾತ್ಮವಾನ್ ಸಃ।
> ತಥಾಪಿ ಭುಂಜನಾದ್ದೇವಿ ಪ್ರಸಾದತ್ರಯನಾಶನಂ॥

ವಚನ ಸಂಖ್ಯೆ : ೪೦
ಆದಿತ್ಯಪುರಾಣೇ

> ಪೂಜಕಾ ಬಹವಸ್ಸಂತಿ ಭಕ್ತಾಃಶತಸಹಸ್ರಶಃ।
> ತತ್ರ ಪ್ರಸಾದಪಾತ್ರಸ್ತು ದ್ವೌ ತ್ರಯೋ ಚತುಃ ಪಂಚ ವಾ॥

ವಚನ ಸಂಖ್ಯೆ : ೫೨
ಸ್ವಚ್ಛಂದಲಲಿತಭೈರವಿ

> ಲಿಂಗಾರ್ಪಿತಪ್ರಸಾದಂ ಚ ನ ದದ್ಯಾತ್ ಜಂಗಮಾದಿಷು।
> ಜಂಗಮಸ್ಯ ಪ್ರಸಾದಂ ಚ ನ ದದ್ಯಾಲ್ಲಿಂಗಮೂರ್ತಿಷು॥
>
> ಜಂಗಮಸ್ಯ ಪ್ರಸಾದಂ ಚ ಸ್ವೇಷ್ಟಲಿಂಗೇ ನ ಚಾರ್ಪಯೇತ್।
> ಪ್ರಮಾದಾದರ್ಪಯದ್ದೇವಿ ಪ್ರಸಾದೋ ನಿಃಫಲೋ ಭವೇತ್॥

ವಚನ ಸಂಖ್ಯೆ : ೯೩
ಶೈವಪುರಾಣೇ

> ಯಥಾ ಪಂಕೇ ಸರೋಜಂ ಚ ಯಥಾ ಕಾಷ್ಠೇ ಹುತಾಶನಃ।
> ಸುಪ್ರತಿಷ್ಠಿತಲಿಂಗೇ ತು ನ ಯಥಾ ಪೂರ್ವಭಾವನಾ॥

ವಚನ ಸಂಖ್ಯೆ : ೯೩
ಲೈಂಗೇ (ಲಿಂಗಪುರಾಣ)

ಶಿವದೀಕ್ಷಾಭಿಜಾತಸ್ಯ ಪೂರ್ವಜಾತಿಂ ನ ಚಿಂತಯೇತ್।
ಯಥಾ ಸುವರ್ಣಃ ಪಾಷಾಣೇ ಭಕ್ತಶ್ಚಂಡಾಲವಂಶಜಃ॥

ವಚನ ಸಂಖ್ಯೆ ; ೧೦೦
ಬ್ರಹ್ಮಾಂಡಪುರಾಣೇ

ನೈವೇದ್ಯಂ ಪುರತೋಽನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ।
ರಸಾನ್ಭಕ್ತಸ್ಯ ಜಿಹ್ವಾಗ್ರೇ ದದಾತಿ ಕಮಲೋದ್ಭವಃ॥

ವಚನ ಸಂಖ್ಯೆ : ೧೩೦
ವಾತುಲೇ (ವಾತುಲಾಗಮ)

ಯಾವನ್ನಿರ್ವಹತೇ ಯಸ್ತು ಯಾವಜ್ಜೀವಂ ಪ್ರತಿಜ್ಞಯಾ।
ಮನುಷ್ಯಚರ್ಮಣಾ ಬದ್ಧಃ ಸ ರುದ್ರೋ ನಾತ್ರ ಸಂಶಯಃ॥

ಶಿವಶರಣ ಹಾವಿನಹಾಳ ಕಲ್ಲಯ್ಯ ತನ್ನ ವಚನಗಳಲ್ಲಿ ಕೆಲವು ಸಲ ವೇದ, ಆಗಮ, ಉಪನಿಷತ್ತು, ಪುರಾಣ, ಕಾವ್ಯ ಮೊದಲಾದವುಗಳಲ್ಲಿಯ ಶ್ಲೋಕಗಳ ಅರ್ಧ ಭಾಗವನ್ನು ತನ್ನ ವಿಚಾರಗಳ ಪುಷ್ಟಿಗಾಗಿ ಬಳಸಿಕೊಂಡಿದ್ದಾನೆ. ಹೀಗೆ ಪ್ರಾಚೀನ ಪ್ರಮಾಣ ಗ್ರಂಥಗಳ ಶ್ಲೋಕಗಳನ್ನು ಭಾಗಶಃ ಬಳಸಿಕೊಂಡು ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿಕೊಳ್ಳುವುದು ಅಂದಿನ ಕಾಲದ ರೀತಿಯಾಗಿದ್ದಿತು. ಇಂಥ ಸಮರ್ಥನಪರ ವಿಚಾರಗಳನ್ನು ಮಾತ್ರ ಅಂದಿನ ಸಮಾಜ ಮನ್ನಿಸುತ್ತಿದ್ದಿತು. ಹಾವಿನಹಾಳ ಕಲ್ಲಯ್ಯ ತನ್ನ ಅಭಿಪ್ರಾಯ ಸಮರ್ಥನೆಗಾಗಿ ವಚನಗಳಲ್ಲಿ ಬಳಸಿಕೊಂಡ ಅರ್ಧಶ್ಲೋಕಗಳನ್ನು ಇಲ್ಲಿ ಪರಿಶೀಲಿಸಬಹುದು:

ವಚನ ಸಂಖ್ಯೆ : ೧೮

'ಲಿಂಗೇ ಜಾತಂ ಲಿಂಗೇ ಬೀಜಂ'

ವಚನ ಸಂಖ್ಯೆ : ೧೯

'ಪ್ರಣವೋ ಹಿ ಪರಬ್ರಹ್ಮ ಪ್ರಣವೋ ಹಿ ಪರಂ ಪದಂ'

ವಚನ ಸಂಖ್ಯೆ : ೧೯

'ಏಕಮೂರ್ತಿಸ್ತ್ರಿಧಾ ಭೇದೋ ಗುರುರ್ಲಿಂಗಂ ತು ಜಂಗಮಃ'

ವಚನ ಸಂಖ್ಯೆ : ೩೨

'ಏಕಮೇವ ರುದ್ರ ನ ದ್ವಿತೀಯ' (ಶ್ವೇತಾಶ್ವತರೋಪನಿಷತು)
'ಅಪಿ ವಾಯಶ್ಚಂಡಾಲೋ'
'ಘ್ರಾತಂ ಜಿಘ್ರಂತಿ'

ವಚನ ಸಂಖ್ಯೆ : ೬೬

"ನಿರ್ಮಲಸ್ಯ ತು ನಿರ್ಮಾಲ್ಯಂ ಮಲದೇಹೀ ನ ಧಾರಯೇತ್'

ವಚನ ಸಂಖ್ಯೆ : ೭೬

'ಜ್ಞಾನಹೀನಾಃ ಕ್ರಿಯಾಃ ಸರ್ವಾ ನಿಷ್ಫಲಾಃ'

ವಚನ ಸಂಖ್ಯೆ : ೭೯

'ಸಂಸರ್ಗತೋ ದೋಷಗುಣಾ ಭವಂತಿ'

ವಚನ ಸಂಖ್ಯೆ : ೯೩

'ಓಂ ಸಂ ಪತತ್ರೈರ್ದ್ಯಾವಾಭೂಮೀ ಜನಯನ್ ದೇವ ಏಕಃ'
(ಶ್ವೇತಾಶ್ವತರೋಪನಿಷತ್)

ಈ ವಚನಕಾರ ತನ್ನ ವಚನಗಳ ಆಶಯ-ಅಭಿವ್ಯಕ್ತಿ-ವಿಚಾರಗಳ ಸಮರ್ಥನೆಗಾಗಿ ಆಯಾ ವಚನಗಳ ಮಧ್ಯದಲ್ಲಿ ಬಳಸಿಕೊಂಡ ವೇದಾಗಮ ಮೊದಲಾದ ಪ್ರಮಾಣ ಗ್ರಂಥಗಳ ಶ್ಲೋಕಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ವಚನ ಸಂಖ್ಯೆ : ೦೮

ಶ್ವಪಚೋऽಪಿ ವಿಪ್ರಸಮೋ ಜಾತಿಭೇದಂ ನ ಕಾರಯೇತ್।
ಅಜಹತ್ಯೋಪದೇಶೀನಾಂ ವರ್ಣಾನಾಂ ಬ್ರಾಹ್ಮಣೋ ಗುರುಃ॥

ವಚನ ಸಂಖ್ಯೆ : ೧೮

ಆದಿಮಧ್ಯಾಂತಶೂನ್ಯಂ ಚ ವ್ಯೋಮಾವ್ಯೋಮವಿವರ್ಜಿತಂ।
ಧ್ಯಾನಜ್ಞಾನದ್ವಯಾದೂರ್ಧ್ವಂ ಶೂನ್ಯಲಿಂಗಮಿತಿ ಸ್ಮೃತಂ॥

ವಚನ ಸಂಖ್ಯೆ : ೪೬

ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ।
ವೇದಾಧ್ಯಾಯೀ ಭವೇದ್ವಿಪ್ರಃ ಬ್ರಹ್ಮ ಚರತೀತಿ ಬ್ರಾಹ್ಮಣಃ॥
(ವಸಿಷ್ಠ ಪುರಾಣ)

ವಚನ ಸಂಖ್ಯೆ : ೪೬

ವರ್ಣೇನ ಜಾಯತೇ ಶೂದ್ರಃ ಸ್ತ್ರೀಶೂದ್ರಾಶ್ಚ ಕಾರಣಾತ್।
ಉತ್ಪತ್ತಿಶೂದ್ರಪುತ್ರಶ್ಚ ವಿಪ್ರಶೂದ್ರಂ ನ ಭುಂಜಯೇತ್॥

(ವಸಿಷ್ಠ ಪುರಾಣ)

ವಚನ ಸಂಖ್ಯೆ : ೫೪

ಸರ್ವವೇದೇಷು ಶಾಸ್ತ್ರೇಷು ಸರ್ವಯಜ್ಞೇಷು ದೀಕ್ಷಿತಃ।
ಮಹಾಪಾತಕಕೋಟಿಘ್ನಃ ಶ್ವಪಚೋ ಲಿಂಗಪೂಜಕಃ॥
ತತ್ಸಂಭಾಷಣೋ ಮುಕ್ತಿಃ ಗಣಮುಖ್ಯಂ ಸುಖಂ ಭವೇತ್॥

ವಚನ ಸಂಖ್ಯೆ : ೫೯

ದೀಕ್ಷಾಮೂರ್ತಿರ್ಗುರುರ್ಲಿಂಗಂ ಪೂಜಾಮೂರ್ತಿಃ ಪರಃ ಶಿವಃ।
ದೀಕ್ಷಾಂ ಪೂಜಾಂ ಚ ಶಿಕ್ಷಾಂ ಚ ಸರ್ವಕರ್ತಾ ಚ ಜಂಗಮಃ॥

(ವೀ[illegible]ಗಮ)

ವಚನ ಸಂಖ್ಯೆ : ೬೩

ವರ್ಣಾತೀತಂ ಮನೋತೀತಂ ಭಾವಾತೀತಂ ಚ ತತ್ಪರಂ।
ಜ್ಞಾನಾತೀತಂ ನಿರಂಜನ್ಯಂ ತತ್ಕಲಾ ಸೂಕ್ಷ್ಮಭಾವತಃ॥

(ಶಾಕಟಿಯಾಗಮ)

ವಚನ ಸಂಖ್ಯೆ : ೬೮

ನ ಮುಕ್ತಿಶ್ಚ ನ ಧರ್ಮಶ್ಚ ನ ಪುಣ್ಯಂ ಚ ನ ಪಾಪಕಂ।
ನ ಕರ್ಮ ಚ ನ ಜನ್ಮಾ ಚ ಗುರೋರ್ಭಾವನಿರೀಕ್ಷಣಾತ್॥

(ಶಿವಾದ್ವೈತ)

ವಚನ ಸಂಖ್ಯೆ : ೭೪

ಸಪ್ತಧಾತುಸಮಂಪಿಂಡಂ ಸಮಯೋನಿಸಮುದ್ಭವಂ।
ಆತ್ಮಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ॥

ವಚನ ಸಂಖ್ಯೆ : ೭೭

ರೂಪಂ ಸಮರ್ಪಯೇಲ್ಲಿಂಗೇ ರುಚಿಮಪ್ಯರ್ಪಯೇತ್ತಥಾ।
ಉಭಯಾರ್ಪಣವಿಹೀನಶ್ಚ ಪ್ರಸಾದೋ ನಿಷ್ಫಲೋ ಭವೇತ್॥

ವಚನ ಸಂಖ್ಯೆ : ೮೮

ಅಸಮರ್ಪ್ಯ ಪದಾರ್ಥಂ ಶಂಭೋ ಭುಂಕ್ತೇ ಉದಕಂ ಪಾತಿ ಚ।
ಸ್ವಮಾಂಸಮಸ್ಥಿ ಮೂತ್ರಂ ಚ ಭುಂಕ್ತೇ ಖಾದತಿ ಪಾತಿ ಚ॥

ವಚನ ಸಂಖ್ಯೆ : ೯೩

ಯಾತೇ ರುದ್ರ ಶಿವ ತನೂರಘೋರಾ ಪಾಪಕಾಶಿನಿ।
ತಯಾನಸ್ತನು ವಾ ಶಂತಮಯಾ ಗಿರೀಶಂತಾಭೀಚಾಕಶೀತಿ॥

ವಚನ ಸಂಖ್ಯೆ : ೯೫

ಸ ಲಿಂಗೀ ಪ್ರಾಣಮುಕ್ತಶ್ಚ ಮನೋಮುಕ್ತಶ್ಚ ಜಂಗಮಃ।
ಪ್ರಸಾದೀ ಕಾಯಮುಕ್ತಶ್ಚ ತ್ರಿವಿಧಸ್ತತ್ವನಿರ್ಣಯಃ॥

ಆಕರಗಳನ್ನು ಗುರುತಿಸದ ಇಲ್ಲಿಯ ಶ್ಲೋಕಗಳಿಗೆ ಮೂಲ ಆಕರಗಳನ್ನು ಗುರುತಿಸುವ ಅಗತ್ಯವಿದೆ. ಮೇಲಿನ ವಸ್ತುನಿಷ್ಠವಾದ, ಸಾಧಾರವಾದ ಈ ವಿವೇಚನೆಯಿಂದ ಹನ್ನೆರಡನೆಯ ಶತಮಾನದ ವಚನಕಾರ ಹಾವಿನಹಾಲ ಕಲ್ಲಯ್ಯ ತಾನು ರಚಿಸಿದ ವಚನಗಳಲ್ಲಿ ನಿರೂಪಿಸಿದ ವಿಷಯ-ವಿಚಾರಗಳಿಗೆ ವೇದ, ಆಗಮ, ಪುರಾಣ, ಉಪನಿಷತ್ತು, ಕಾವ್ಯ ಮೊದಲಾದ ಪ್ರಮಾಣ ಕೃತಿಗಳ ಆಧಾರವಿದೆಯೆಂಬುದು ಖಚಿತವಾಗುತ್ತದೆ. ವೇದಾಗಮಗಳಿಗೂ ವಚನಕಾರರಿಗೂ ಲಿಂಗಾಂಗ ಸಾಮರಸ್ಯದಂಥ ಅನ್ಯೋನ್ಯ ಸಂಬಂಧವಿದ್ದಿತೆಂಬುದು ಇದರಿಂದ ಸಾಬೀತಾಗುತ್ತದೆ. ಇದಲ್ಲದೆ ಶಿವಶರಣ ಮತ್ತು ವಚನಕಾರ ಹಾವಿನಹಾಳ ಕಲ್ಲಯ್ಯ 'ಆಚಾರ್ಯ ಪರಂಪರೆ' - 'ಶರಣ ಪರಂಪರೆ', 'ಅನುಭಾವ ಪ್ರಮಾಣ' ಹಾಗೂ 'ವೇದಾಗಮ ಪುರಾಣ'ಗಳ 'ಸಮನ್ವಯಕಾರ'ನೆಂಬುದು ಗೊತ್ತಾಗುತ್ತದೆ.

ೱ ೱ

## ನಮ್ಮ ಲೇಖಕರು

**ಡಾ|| ಎಂ. ಶಿವಕುಮಾರ ಸ್ವಾಮಿ**
ನಂ. ೮೮, ೪ನೇ ಅಡ್ಡರಸ್ತೆ ಡಯಾಗನಲ್ ರಸ್ತೆ, ೮ನೇ ಮುಖ್ಯರಸ್ತೆ,
ಆರ್.ಪಿ.ಸಿ. ಬಡಾವಣೆ, ವಿಜಯನಗರ ೨ನೇ ಹಂತ, ಬೆಂಗಳೂರು-೪೦

**ಡಾ|| ಸಿ.ಯು. ಉಮಾದೇವಿ**
'ನಾವೀನ್ಯ', ೩೬೫/ಸಿ, ೫ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ,
ವಿಜಯನಗರ ೨ನೇ ಹಂತ, ಬೆಂಗಳೂರು-೪೦

**ಡಾ|| ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**
ಹಿರೇಮಠ, ಹಿಪ್ಪರಗಿ, ಜಮಖಂಡಿ ತಾ||, ಬಾಗಲಕೋಟೆ ಜಿ||

**ಡಾ|| ಸಿ. ಶಿವಕುಮಾರಸ್ವಾಮಿ**
ನಂ. ೬, ಪಿ.ಎಫ್. ಲೇಔಟ್, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-೪೦

**ಡಾ|| ಎಸ್.ಎಂ. ವೃಷಭೇಂದ್ರಸ್ವಾಮಿ**
'ಶಿವಪ್ರಸಾದ', ೮ನೇ ಅಡ್ಡರಸ್ತೆ, ಕಲ್ಯಾಣನಗರ, ಧಾರವಾಡ-೦೭

**ಷ|| ಬ್ರ|| ಶ್ರೀ ಡಾ|| ಕೊಟ್ಟೂರೇಶ್ವರ ಶಿವಾಚಾರ್ಯ ಸ್ವಾಮೀಜಿ**
ಜುಕ್ತಿಮಠ, ಸೂಡಿ
ಡಿ-೨೨, ಸ್ಟಾಫ್ ಕ್ವಾರ್ಟರ್ಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೦೩

**ಡಾ|| ಬಿ.ಆರ್. ಹಿರೇಮಠ**
ಪ್ರಾಧ್ಯಾಪಕರು, ಡಾ|| ಆರ್.ಸಿ. ಹಿರೇಮಠ,
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೦೩

ጰ ጰ

## [illegible]

[illegible]
[illegible]
[illegible]

[illegible]
[illegible]
[illegible]

[illegible]
[illegible]

[illegible]
[illegible]

[illegible]
[illegible]

[illegible]
[illegible]
[illegible]

[illegible]
[illegible]
[illegible]

[illegible]

## ವೀ[illegible] ಅನುಸಂಧಾನ ಸಂಸ್ಥಾನದ ಪ್ರಕಟಣೆಗಳು

[illegible]೮ ಮಕುಟಾಗಮ[illegible]

[illegible]ಪಾದಕರು : ಡಾ. ಸಿ. ಶಿವಕುಮಾರಸ್ವಾಮಿ

[illegible]೮ ಸಿದ್ಧಾಂತ ಶಿ[illegible]ಣಿ ವಿಚಾರ ದೀಪ್ತಿ

[illegible]ದಕರು : ಡಾ. ಎಂ. ಶಿವಕುಮಾರಸ್ವಾಮಿ

೧೯೯೯ ಕಾರಣಾಗಮ[illegible]

[illegible]ದಕರು : ಡಾ. ಮಲ್ಲಿಕಾರ್ಜುನ ಪರಡ್ಡಿ

೧೯೯೯ ಶೈವಾಗಮಗಳ[illegible]ರಶೈವ

ಸ[illegible]ದಕರು : ಡಾ. ಎಂ. ಶಿವಕುಮಾರ ಸ್ವಾಮಿ

೨೦೦೦ ಪಾರಮೇಶ್ವರಾ[illegible]

ಅ[illegible]ದಕರು : ಡಾ. ಎಂ. ಶಿವಕುಮಾರ ಸ್ವಾಮಿ

೨೦೦೧ ಸೂಕ್ಷ್ಮಾಗಮ[illegible]

ಅ[illegible]ಸಕರು : ಷಣ್ಮುಖಯ್ಯ ಅಕ್ಕೂರಮಠ

೨೦೦೧ ಚಂದ್ರಜ್ಞಾನಾಗ[illegible]ಚಾರರಶ್ಮಿ

ಸ[illegible]ಕರು : ಡಾ. ಎಂ. ಶಿವಕುಮಾರ ಸ್ವಾಮಿ

೨೦೦೨ ಸೂಕ್ಷ್ಮಾಗಮ[illegible]ರಪ್ರಭೆ

[illegible]ದಕರು : ಡಾ. ಎಂ. ಶಿವಕುಮಾರ ಸ್ವಾಮಿ

೨೦[illegible] ಚಂದ್ರಜ್ಞಾ[illegible]

[illegible]ಪಾದಕರು : ಡಾ. ಎಂ. ಶಿವಕುಮಾರ ಸ್ವಾಮಿ